ವಿಶ್ವವಾಣಿ
ವಿಶ್ವಾಸವೇ ವಿಶ್ವ



ಬಸವ ಜಯಂತಿ ಶುಭಾಶಯಗಳು
ಸಮಾನತೆಯ ತತ್ವ ಸಾರಿದ ಭಕ್ತಿಭಂಡಾರಿ, ಸಾಮಾಜಿಕ ಕ್ರಾಂತಿಯ ಹರಿಕಾರ, ವಚನಗಳ ಮೂಲಕ ಬದುಕಿಗೆ ದಾರಿ ತೋರಿದ ಮಹಾನ್ ಮಾನವತಾವಾದಿ ಜಗಜ್ಯೋತಿ ಬಸವಣ್ಣನವರ ತತ್ವ, ಆದರ್ಶ, ಸಂದೇಶಗಳು ನಮ್ಮೆಲ್ಲರ ಜೀವನಕ್ಕೂ ಪ್ರೇರಣೆ. ಸರ್ವರಿಗೂ ಬಸವ ಜಯಂತಿಯ ಶುಭಾಶಯಗಳು.

ನಾಡಿನ ಸಮಸ್ತ ಜನತೆಗೆ ಅಕ್ಷಯ ತೃತೀಯ ದಿನದ ಶುಭಾಶಯಗಳು

ಸೊಂಪಾದ ಪುಟಗಳು



ಅಲೆದಾಡುವ ಗರ್ಭಕೋಶ ಮತ್ತು ಮಾನಸಿಕ ಅನಾಥರು

ಹಿಂದಿರುಗಿ ನೋಡಿದಾಗ
ಡಾ. ನಾ.ಸೋಮೇಶ್ವರ 6

ದಾಳಿ, ನಮ್ಮ ಬೆಡ್ ರೂಮ್‌ನಲ್ಲೂ ಆಗಬಹುದು!

ಲೋಕಮತ
ಲೋಕೇಶ್ ಕಾಯರ್ಗ 7

ದಾರಿದೀಪೋಕ್ತಿ

ನಿಮ್ಮ ಸಿಟ್ಟನ್ನು ವ್ಯಕ್ತಪಡಿಸುವ ಬದಲು ಅದನ್ನು ವಿವರಿಸುವುದನ್ನು, ವಿಶ್ಲೇಷಿಸುವುದನ್ನು ರೂಢಿಸಿಕೊಂಡರೆ, ವಾದ ಮಾಡುವ ಬದಲು ಪರಿಹಾರ ಕಂಡು ಹಿಡಿಯುವ ಮಾರ್ಗ ತನ್ನಷ್ಟಕ್ಕೆ ತೆರೆದುಕೊಳ್ಳುತ್ತದೆ. ನಿಮ್ಮ ಸಿಟ್ಟು ನಿಮಗೆ ಅರ್ಥವಾಗುವಂತಿರಬೇಕು.

ವಕ್ರತುಂಡೋಕ್ತಿ

ನಿಸರ್ಗದಲ್ಲಿ ಏಳು ಬಣ್ಣಗಳಿವೆ ಅಂತಾರೆ. ಆದರೆ ಸೀರೆ ಮತ್ತು ನೇಲ್ ಪಾಲಿಶ್ ಅಂಗಡಿಗೆ ಹೋದಾಗ ಹಾಗೆ ಅನಿಸುವುದಿಲ್ಲ.

ಪ್ರಧಾನಿ ಮೋದಿ ನೇತೃತ್ವದ ಉನ್ನತ ಮಟ್ಟದ ಸಭೆಯಲ್ಲಿ ನಿರ್ಧಾರ
ಇಂದು ಕೇಂದ್ರ ಸಚಿವ ಸಂಪುಟ ಸಭೆ, ಮಹತ್ವದ ತೀರ್ಮಾನ ನಿರೀಕ್ಷೆ

ಸೇನೆಗೆ ಕಾರ್ಯಾಚರಣೆ ಸ್ವಾತಂತ್ರ್ಯ

ದೆಹಲಿ: ಕಾಶ್ಮೀರದ ಪಹಲ್ಗಾಮ್ ದಾಳಿಯ ಬಳಿಕ ಪಾಕಿಸ್ತಾನದ ವಿರುದ್ಧ ನಿರ್ಣಾಯಕ ಕ್ರಮ ತೆಗೆದುಕೊಳ್ಳಲು ಒತ್ತಡ ಹೆಚ್ಚುತ್ತಿರುವ ನಡುವೆ ಪ್ರಧಾನಿ ನರೇಂದ್ರ ಮೋದಿ ಮಂಗಳವಾರ ಸೇನಾಪಡೆಯ ಮೂರು ವಿಭಾಗಗಳ ಮುಖ್ಯಸ್ಥರ ಜತೆ ಚರ್ಚೆ ನಡೆಸಿದ್ದಾರೆ. ರಕ್ಷಣಾ ಸಚಿವ ರಾಜನಾಥ್ ಸಿಂಗ್, ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್, ರಕ್ಷಣಾ ಸಿಬ್ಬಂದಿ ಮುಖ್ಯಸ್ಥ ಜನರಲ್ ಅನಿಲ್ ಚೌಹಾಣ್ ಭಾಗವಹಿಸಿದ್ದ ಈ ಸಭೆಯಲ್ಲಿ ಯಾವುದೇ ಕ್ಷಣದಲ್ಲಿ ಯಾವುದೇ ರೀತಿಯ ಪ್ರತಿಕ್ರಿಯೆ ನಿರ್ಧರಿಸಲು ಸಶಸ್ತ್ರ ಪಡೆಗಳಿಗೆ ಸಂಪೂರ್ಣ ಕಾರ್ಯಾಚರಣೆ ನೀಡಲು ನಿರ್ಧರಿಸಲಾಗಿದೆ ಎನ್ನಲಾಗಿದೆ.

ಪಾಕ್ ಮೇಲೆ ಹಲವು ನಿರ್ಬಂಧಗಳನ್ನು ವಿಧಿಸಿದ ಬಳಿಕ ಮುಂದಿನ ಕಾರ್ಯತಂತ್ರಕ್ಕಾಗಿ ನಡೆದ ಸಭೆಯಲ್ಲಿ ಭಯೋತ್ಪಾದನೆಗೆ ನಿರ್ಣಾಯಕ ಹೊಡೆತ ನೀಡುವುದು ರಾಷ್ಟ್ರೀಯ ಸಂಕಲ್ಪ ಎಂದು ಮೋದಿ ಮತ್ತೊಮ್ಮೆ ಪುನರುಚ್ಚರಿಸಿದರು ಎನ್ನಲಾಗಿದೆ. ಸಶಸ್ತ್ರ ಪಡೆಗಳ ವೃತ್ತಿಪರ ಸಾಮರ್ಥ್ಯಗಳಲ್ಲಿ ಸಂಪೂರ್ಣ ನಂಬಿಕೆ ಮತ್ತು ವಿಶ್ವಾಸ ವ್ಯಕ್ತಪಡಿಸಿದ ಪ್ರಧಾನಿ, 'ಪಹಲ್ಗಾಮ್ ದಾಳಿಗೆ ಭಾರತದ ಪ್ರತಿಕ್ರಿಯೆಯ ವಿಧಾನ, ಗುರಿಗಳು ಮತ್ತು ಸಮಯವನ್ನು ನಿರ್ಧರಿಸಲು ಸಶಸ್ತ್ರ ಪಡೆಗಳಿಗೆ ಸಂಪೂರ್ಣ ಕಾರ್ಯಾಚರಣೆ ಸ್ವಾತಂತ್ರ್ಯ ಇದೆ' ಎಂದು ತಿಳಿಸಿದರೆನ್ನಲಾಗಿದೆ. ಇದಕ್ಕೂ ಮುನ್ನ, ಕೇಂದ್ರ ಗೃಹ ಕಾರ್ಯದರ್ಶಿ ಗೋವಿಂದ್ ಮೋಹನ್ ಅಧ್ಯಕ್ಷತೆಯಲ್ಲಿ ನಡೆದ ಉನ್ನತ ಮಟ್ಟದ ಸಭೆಯಲ್ಲಿ ಮೂರೂ ಅರೆಸೈನಿಕ ಪಡೆಗಳ ಮುಖ್ಯಸ್ಥರು ಮತ್ತು ಇತರ ಎರಡು ಭದ್ರತಾ ಸಂಸ್ಥೆಗಳ ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು.

5ನೇ ದಿನವೂ ಅಪ್ರಚೋದಿತ ದಾಳಿ: ಜಮ್ಮು -ಕಾಶ್ಮೀರದ ಗಡಿ ನಿಯಂತ್ರಣ ರೇಖೆ ಬಳಿ ಪಾಕಿ ಸ್ತಾನ ಪಡೆಗಳು ಸತತ ಐದನೇ ರಾತ್ರಿ ಕದನ ವಿರಾಮವನ್ನು ಉಲ್ಲಂಘಿಸಿದ್ದು, ಜಮ್ಮು ಜಿಲ್ಲೆಯ ಅಖ್ನೂರ್ ಸೆಕ್ಟರ್ ವರೆಗೆ ಅಪ್ರಚೋದಿತ ಗುಂಡಿನ ದಾಳಿ ನಡೆಸಿವೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಏಪ್ರಿಲ್ 28–29 ರ ರಾತ್ರಿ, ಪಾಕಿಸ್ತಾನ ಸೇನೆಯು ಕುಪ್ವಾರಾ ಮತ್ತು ಬಾರಾಮುಲ್ಲಾ ಜಿಲ್ಲೆಗಳ ಎದುರಿನ ಪ್ರದೇಶಗಳಲ್ಲಿ ಮತ್ತು ಅಖ್ನೂರ್ ಸೆಕ್ಟರ್‌ನಲ್ಲಿ ನಿಯಂತ್ರಣ ರೇಖೆಯ ಉದ್ದಕ್ಕೂ ಅಪ್ರಚೋದಿತ ಸಣ್ಣ ಶಸ್ತ್ರಾಸ್ತ್ರ ಗುಂಡಿನ ದಾಳಿ ನಡೆಸಿತು. ಭಾರತೀಯ ಸೇನೆಯು ಇದಕ್ಕೆ ತಕ್ಕ ಪ್ರತಿಕ್ರಿಯೆ ನೀಡಿದೆ ಎಂದು ಎಂದು ರಕ್ಷಣಾ ವಕ್ತಾರರು ತಿಳಿಸಿದ್ದಾರೆ. →4

ಸಂಪುಟ ಕುತೂಹಲ

ಇದೇ ವೇಳೆ ಭಯೋತ್ಪಾದಕ ದಾಳಿಯ ನಂತರ ಮೊದಲ ಬಾರಿಗೆ ಬುಧವಾರ ಕೇಂದ್ರ ಸಚಿವ ಸಂಪುಟ ಸಭೆ ನಡೆಯಲಿದ್ದು, ಪಹಲ್ಗಾಮ್ ಘಟನೆ ಹಿನ್ನೆಲೆಯಲ್ಲಿ ಕೆಲವು ಮಹತ್ವದ ನಿರ್ಣಯ ತೆಗೆದುಕೊಳ್ಳುವ ಸಾಧ್ಯತೆ ಇದೆ. ಪ್ರಧಾನಿ ಅಧ್ಯಕ್ಷತೆಯಲ್ಲಿ ಬೆಳಿಗ್ಗೆ 11 ಗಂಟೆಗೆ ಸಭೆ ಕರೆಯಲಾಗಿದೆ. ಕಳೆದ ವಾರ ಕೇಂದ್ರ ಸಚಿವ ಸಂಪುಟದ ಸಭೆ ನಡೆದಿರಲಿಲ್ಲ. ಏಪ್ರಿಲ್ 23 ರಂದು ಭದ್ರತೆ ಕುರಿತ ಸಂಪುಟ ಸಮಿತಿ ಸಭೆ ನಡೆಸಿ ಭಯೋತ್ಪಾದಕ ದಾಳಿಯನ್ನು ಖಂಡಿಸಲಾಗಿತ್ತು.

ಸಂಯಮಕ್ಕೆ ಚೀನಾ ಸಲಹೆ

ಪಹಲ್ಗಾಮ್ ಘಟನೆಗೆ ಮೊದಲ ಬಾರಿಗೆ ಪ್ರತಿಕ್ರಿಯಿಸಿರುವ ಚೀನಾ, ಭಾರತ ಮತ್ತು ಪಾಕಿಸ್ತಾನ ನಡುವಿನ ಉದ್ವಿಗ್ನ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸುತ್ತಿರುವುದಾಗಿ ಚೀನಾ ಹೇಳಿದೆ. ಪಾಕಿಸ್ತಾನದ ವಿದೇಶಾಂಗ ಸಚಿವ ಮೊಹಮ್ಮದ್ ಇಶಾಕ್ ದಾರ್ ಅವರಿಗೆ ದೂರವಾಣಿ ಕರೆ ಮಾಡಿ ಮಾತನಾಡಿರುವ ಚೀನಾದ ವಿದೇಶಾಂಗ ಸಚಿವ ವಾಂಗ್‌ಯಿ, ಈ ಸಂದಿಗ್ಧ ಪರಿಸ್ಥಿತಿಯಲ್ಲಿ ಉಭಯ ದೇಶಗಳು ಸಂಯಮದಿಂದ ವರ್ತಿಸಬೇಕು ಎಂದು ಸಲಹೆ ನೀಡಿದ್ದಾರೆ. ಈ ನಿಟ್ಟಿನಲ್ಲಿ ಎರಡೂ ದೇಶಗಳಿಗೆ ಅಗತ್ಯ ನೆರವನ್ನು ನೀಡಲು ಚೀನಾ ಸಿದ್ಧವಿದೆ ಎಂದು ವಾಂಗ್‌ಯಿ ಹೇಳಿದ್ದಾರೆ.

ಕಾಶ್ಮೀರದ 48 ಪ್ರವಾಸಿ ತಾಣಗಳು ಬಂದ್

ಶ್ರೀನಗರ: ಜಮ್ಮು ಮತ್ತು ಕಾಶ್ಮೀರ ಸರಕಾರ ಭದ್ರತಾ ದಷ್ಟಿಯಿಂದ 48 ಪ್ರವಾಸಿ ತಾಣಗಳನ್ನು ಬಂದ್ ಮಾಡಿದೆ.
26 ಜನ ಅಮಾಯಕರ ಪ್ರಾಣವನ್ನು ಬಲಿತೆಗೆದುಕೊಂಡ ಭಯೋತ್ಪಾದಕ ದಾಳಿಯ ನಂತರ ಭದ್ರತಾ ಪಡೆಗಳು ರಾಜ್ಯದಲ್ಲಿ ಭಯೋತ್ಪಾದನೆ ನಿಗ್ರಹ ಕಾರ್ಯಾಚರಣೆಯನ್ನು ತೀವ್ರಗೊಳಿಸಿವೆ. ಈ ಹಿನ್ನೆಲೆಯಲ್ಲಿ ರಾಜ್ಯದ ಸುಮಾರು 87 ಪ್ರವಾಸಿ ತಾಣಗಳಲ್ಲಿ 48 ತಾಣಗಳನ್ನು ತಾತ್ಕಾಲಿಕವಾಗಿ ಬಂದ್ ಮಾಡಲಾಗಿದೆ. ಸ್ಥಳೀಯರಿಗೆ ಪ್ರಮುಖ ಆದಾಯದ ಮೂಲವಾದ ಕಾಶ್ಮೀರದ ಪ್ರವಾಸೋದ್ಯಮದ ಬಗ್ಗೆ ಅನಿಶ್ಚಿತತೆಯ ಮಧ್ಯೆ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಅಲ್ಲದೆ ಪ್ರವಾಸಿಗರಿಗೆ ತೆರೆದಿರುವ ಇತರ ಪ್ರವಾಸಿ ತಾಣಗಳಲ್ಲಿ ಬಿಗಿ ಭದ್ರತೆ ಏರ್ಪಡಿಸಲಾಗಿದೆ. ದಾಳಿ ಬಳಿಕ ನಗರ ಶ್ರೀನಗರ ವಿಮಾನ ನಿಲ್ದಾಣದಲ್ಲಿ ಪ್ರಯಾಣಿಕರ ದಟ್ಟಣೆ ಗಮನಾರ್ಹವಾಗಿ ಕುಸಿದಿದೆ.

ಶಾಸಕರ ಅಮಾನತು ರಾಜ್ಯಪಾಲರ ಪತ್ರ

ಸಸ್ಪೆಂಡ್ ಮರು ಪರಿಶೀಲನೆಗೆ ಸಲಹೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

18 ಬಿಜೆಪಿ ಶಾಸಕರ ಅಮಾನತು ಹಿಂಪಡೆಯಲು ಸೂಚನೆ ನೀಡಬೇಕೆಂದು ರಾಜ್ಯಪಾಲರಿಗೆ ಮನವಿ ಸಲ್ಲಿಸಿದ ಬೆನ್ನಲ್ಲೇ, ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಥ್ ಅವರು , ಪ್ರಕರಣವನ್ನು ಪರಿಶೀಲಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಸ್ಪೀಕರ್ ಯು.ಟಿ. ಖಾದರ್ ಹಾಗೂ ಕಾನೂನು ಸಚಿವ ಎಚ್.ಕೆ. ಪಾಟೀಲರಿಗೆ ಪತ್ರ ಬರೆದಿದ್ದಾರೆ.

ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ನೇತೃತ್ವದಲ್ಲಿ ಮಂಗಳವಾರ ರಾಜ್ಯಪಾಲರನ್ನು ಭೇಟಿಯಾದ ಬಿಜೆಪಿ ನಿಯೋಗ ಅಮಾನತು ಹಿಂಪಡೆಯಲು ಕ್ರಮವಹಿಸಬೇಕು ಎಂದು ರಾಜ್ಯಪಾಲರಿಗೆ ಮನವಿ ಸಲ್ಲಿಸಿದ್ದರು. ಮನವಿ ಸಲ್ಲಿಸಿದ 24 ಗಂಟೆ ಕಳೆಯುವುದರೊಳಗೆ ರಾಜ್ಯಪಾಲರು ಸಿಎಂ ಹಾಗೂ ಸ್ಪೀಕರ್‌ಗೆ ಪತ್ರ ಬರೆದಿದ್ದಾರೆ. →4

ಸ್ಪೀಕರ್ ಅಧಿಕಾರದ ಪ್ರಶ್ನೆ

ರಾಜ್ಯಪಾಲರ ಈ ಪತ್ರದ ಮೂಲಕ ಮತ್ತೊಮ್ಮೆ 'ಅಧಿಕಾರ'ದ ಚರ್ಚೆ ಮುನ್ನಲೆಗೆ ಬಂದಿದೆ. ಸಂವಿಧಾನದಲ್ಲಿ ಸದನದೊಳಗಿನ ಘಟನೆ ಅಥವಾ ತೀರ್ಮಾನಗಳಿಗೆ ಗಳಿಗೆ ವಿಧಾನಸಭಾಧ್ಯಕ್ಷರಿಗೆ ಪರಮಾಧಿಕಾರವಿದೆ. ಸದನದ ಸುಗಮ ಕಾರ್ಯಕಲಾಪ, ನಿಯಮಗಳ ಪಾಲನೆ ಜತೆಗೆ ನಿರ್ದೇಶನ ಅಥವಾ ರೂಲಿಂಗ್ ಸ್ಪೀಕರ್ ಪರಾಮಾಧಿಕಾರವಾಗಿದ್ದು, ಇದಕ್ಕೆ ರಾಜ್ಯಪಾಲರು ಹಸ್ತಕ್ಷೇಪ ಮಾಡಬಹುದೇ ಎನ್ನುವ ಪ್ರಶ್ನೆಯಿದೆ. ಇತ್ತೀಚಿಗೆ ಸುಪ್ರೀಂ ಕೋರ್ಟ್ ನೀಡಿರುವ 'ಸರಕಾರದ ಕೆಲಸದಲ್ಲಿ ರಾಜ್ಯಪಾಲರು ಹಸ್ತಕ್ಷೇಪ ಮಾಡುವಂತಿಲ್ಲ' ಎಂದು ತೀರ್ಪ ನ್ನು ಮುಂದಿಟ್ಟುಕೊಂಡು ರಾಜ್ಯಪಾಲರಿಗೆ ಪ್ರತ್ಯುತ್ತರಿಸುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ.

ಮೇ 21ರವರೆಗೆ ಡಿಜಿ ಅವಧಿ ವಿಸ್ತರಣೆ

ಬೆಂಗಳೂರು: ರಾಜ್ಯ ಪೊಲೀಸ್ ಮಹಾ ನಿರ್ದೇಶಕ ಅಲೋಕ್ ಮೋಹನ್ ಅವರ ಸೇವಾ ಅವಧಿಯನ್ನು ಮೇ 21ರವರೆಗೆ ವಿಸ್ತರಣೆ ಮಾಡಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ಮಂಗಳವಾರ ನಡೆದ ಸಭೆಯಲ್ಲಿ ಈ ತೀರ್ಮಾನಕ್ಕೆ ಬರಲಾಗಿದೆ. 2023ರ ಮೇ 20ರಂದು ಡಿಜಿ–ಐಜಿಪಿಯಾಗಿ ನೇಮಕವಾಗಿದ್ದ ಅಲೋಕ್ ಮೋಹನ್ ಏ.30ರಂದು ನಿವೃತ್ತಿಯಾಗಬೇಕಿತ್ತು. ಆರು ತಿಂಗಳ ಅವಧಿಗೆ ಸೇವಾವಧಿ ವಿಸ್ತರಣೆ ಮಾಡಲು ಅವಕಾಶವಿದ್ದರೂ, ಇದೀಗ 22 ದಿನಗಳ ಕಾಲ ಸೇವಾವಧಿಯನ್ನು ರಾಜ್ಯ ಸರಕಾರ ವಿಸ್ತರಣೆ ಮಾಡಲು ತೀರ್ಮಾನಿಸಿದೆ.

ಬೆಳಗಾವಿ ಘಟನೆ ಇಬ್ಬರ ಅಮಾನತು

ಬೆಂಗಳೂರು: ಬೆಳಗಾವಿಯ ಕಾಂಗ್ರೆಸ್ ಪ್ರತಿಭಟನಾ ಸಮಾವೇಶದಲ್ಲಿ ನಡೆದ ಕಪ್ಪು ಪಟ್ಟಿ ಪ್ರದರ್ಶನ ಪ್ರಕರಣದಲ್ಲಿ ಇಬ್ಬರು ಪೇದೆಗಳನ್ನು ಅಮಾನತು ಮಾಡುವ ಮೂಲಕ ಸ್ಥಳೀಯ ಪೊಲೀಸ್ ಇಲಾಖೆ ಡ್ಯಾಮೇಜ್ ಕಂಟ್ರೋಲ್‌ಗೆ ಮುಂದಾಗಿದೆ. ಕಾಂಗ್ರೆಸ್ ಪ್ರತಿಭಟನಾ ಸಮಾವೇಶದಲ್ಲಿ ಸಿಎಂ ಸಿದ್ದರಾಮಯ್ಯ ಅವರಿಗೆ ಬಿಜೆಪಿ ಮಹಿಳಾ ಕಾರ್ಯಕರ್ತೆಯರು ಕಪ್ಪು ಬಾವುಟ ಪ್ರದರ್ಶನ ಮಾಡಿದ್ದರು. ಇದರಿಂದ ಸಿಡಿಮಿಡಿಗೊಂಡ ಸಿಎಂ ಹೆಚ್ಚುವರಿ ಎಸ್‌ಪಿಗೆ ಕೈ ಎತ್ತಿದ ಘಟನೆಯೂ ನಡೆದಿತ್ತು.



ಕರ್ನಾಟಕ ವೀರಶೈವ–ಲಿಂಗಾಯತ ಅಭಿವೃದ್ಧಿ ನಿಗಮ ನಿಯಮಿತ
ನಾಡಿನ ಸಮಸ್ತ ಜನತೆಗೆ
ಸಾಂಸ್ಕೃತಿಕ ನಾಯಕ
ವಿಶ್ವಗುರು ಬಸವಣ್ಣನವರ
ಜಯಂತಿಯ ಶುಭಾಶಯಗಳು
ದಿನಾಂಕ: 30.04.2025, ಬುಧವಾರ

"ಇವನಾರವ, ಇವನಾರವ, ಇವನಾರವನೆಂದೆನಿಸದಿರಯ್ಯಾ
ಇವ ನಮ್ಮವ, ಇವ ನಮ್ಮವ, ಇವ ನಮ್ಮವನೆಂದಿನಸಯ್ಯಾ
ಕೂಡಲ ಸಂಗಮದೇವಯ್ಯಾ, ನಿಮ್ಮ ಮನೆಯ ಮಗನೆಂದಿನಸಯ್ಯಾ"

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಡಿ. ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು

ನಿಗಮದ ಯೋಜನೆಗಳು

ಜೀವಜಲ ಯೋಜನೆ
ಸಣ್ಣ ಹಾಗೂ ಅತಿ ಸಣ್ಣ ರೈತರಿಗೆ ಕೊಳವೆಬಾವಿ ಕೊರೆಯಲು ರೂ.3.75 ಲಕ್ಷದಿಂದ ರೂ.4.75 ಲಕ್ಷದವರೆಗೆ ಸಾಲ ಮತ್ತು ಸಹಾಯಧನ

ಕಾಯಕಕಿರಣ ಯೋಜನೆ
ಸ್ವಯಂ ಉದ್ಯೋಗ ಕೈಗೊಳ್ಳಲು ರೂ. 1.00 ಲಕ್ಷದಿಂದ ರೂ.2.00 ಲಕ್ಷದವರೆಗಿನ ಘಟಕ ವೆಚ್ಚದ ಶೇ.20 ರಷ್ಟು ಸಹಾಯಧನ ಹಾಗೂ ಉಳಿಕೆ ಶೇ.80ರಷ್ಟು ವಾರ್ಷಿಕ ಶೇ.4ರ ಬಡ್ಡಿದರದಲ್ಲಿ ಸಾಲ

ಬಸವ ಬೆಳಗು ಯೋಜನೆ
ವೃತ್ತಿಪರ ಕೋರ್ಸ್‌ಗಳ ವಿದ್ಯಾರ್ಥಿಗಳಿಗೆ ವಾರ್ಷಿಕ ರೂ. 1.00 ಲಕ್ಷಗಳ ಮಿತಿಯಲ್ಲಿ ಗರಿಷ್ಠ ರೂ.5.00 ಲಕ್ಷಗಳವರೆಗೆ ವಾರ್ಷಿಕ ಶೇ.2ರ ಬಡ್ಡಿದರದಲ್ಲಿ ಸಾಲ

ವಿದೇಶ ವಿದ್ಯಾವಿಕಾಸ ಯೋಜನೆ
ವಿದೇಶದಲ್ಲಿ ಉನ್ನತ ವ್ಯಾಸಂಗಕ್ಕೆ ಗರಿಷ್ಠ ರೂ.25.00 ಲಕ್ಷಗಳಂತೆ 3 ವರ್ಷಗಳ ಅವಧಿಗೆ ಗರಿಷ್ಠ ರೂ.50.00 ಲಕ್ಷಗಳವರೆಗೆ ಶೂನ್ಯ ಬಡ್ಡಿದರದಲ್ಲಿ ಸಾಲ

ವಿಭೂತಿ ನಿರ್ಮಾಣ ಘಟಕ
ರೂ.4.00 ಲಕ್ಷಗಳವರೆಗಿನ ಘಟಕ ವೆಚ್ಚದಲ್ಲಿ ರೂ.40,000/– ಸಹಾಯಧನ ಹಾಗೂ ರೂ.3.60 ಲಕ್ಷ ವಾರ್ಷಿಕ ಶೇ.3ರ ಬಡ್ಡಿದರದಲ್ಲಿ ಸಾಲ

ಭೋಜನಾಲಯ ಕೇಂದ್ರ
ಹೋಟೆಲ್ ಉದ್ದಿಮೆಗೆ ರೂ.5.00 ಲಕ್ಷಗಳ ಘಟಕ ವೆಚ್ಚ ರೂ.40,000/– ಸಹಾಯಧನ ಹಾಗೂ ಉಳಿಕೆ ಶೇ.4ರ ಬಡ್ಡಿದರದಲ್ಲಿ ಸಾಲ

ಸ್ವಾವಲಂಬಿ ಸಾರಥಿ ಯೋಜನೆ
ನಾಲ್ಕು ಚಕ್ರಗಳ ವಾಹನವನ್ನು ಖರೀದಿಸಲು ರಾಷ್ಟ್ರೀಕೃತ ಬ್ಯಾಂಕ್ / ಗ್ರಾಮೀಣ ಬ್ಯಾಂಕ್‌ಗಳು / ಹಣಕಾಸು ಸಂಸ್ಥೆಗಳು ಮಂಜೂರು ಮಾಡಿದ ಸಾಲಕ್ಕೆ ಶೇ.50ರಷ್ಟು ಅಥವಾ ಗರಿಷ್ಠ ರೂ.3.00 ಲಕ್ಷಗಳವರೆಗೆ ಸಹಾಯಧನ



ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರಾದ ಶ್ರೀ ಶಿವರಾಜ್ ತಂಗಡಗಿ ರವರು ಮತ್ತು ಮಾನ್ಯ ಅಧ್ಯಕ್ಷರು, ಕರ್ನಾಟಕ ವೀರಶೈವ–ಲಿಂಗಾಯತ ಅಭಿವೃದ್ಧಿ ನಿಗಮ ನಿಯಮಿತ ಶ್ರೀ ವಿಜಯಾನಂದ ಎಸ್. ಕಾಶಪ್ಪನವರ್ ರವರು ಕಚೇರಿಯ ಉದ್ಘಾಟನೆಯ ಸಂದರ್ಭದಲ್ಲಿ

ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯರವರೊಂದಿಗೆ ಶ್ರೀ ವಿಜಯಾನಂದ ಎಸ್. ಕಾಶಪ್ಪನವರ್, ಮಾನ್ಯ ಅಧ್ಯಕ್ಷರು, ಕರ್ನಾಟಕ ವೀರಶೈವ–ಲಿಂಗಾಯತ ಅಭಿವೃದ್ಧಿ ನಿಗಮ ನಿಯಮಿತ ರವರು ನಿಗಮದ ಅಭಿವೃದ್ಧಿ ಕುರಿತು ಚರ್ಚಿಸುತ್ತಿರುವುದು.

ಸ್ವ ಸಹಾಯ ಸಂಘಗಳಿಗೆ ಉತ್ತೇಜನ
ವೀರಶೈವ–ಲಿಂಗಾಯತ ಸಮುದಾಯದ ಸ್ವ ಸಹಾಯ ಸಂಘದವರು ಕೈಗೊಳ್ಳುವ ಆರ್ಥಿಕ ಚಟುವಟಿಕೆಗಳಿಗೆ ಈ ಯೋಜನೆಯಡಿ ರಿಯಾಯಿತಿ ಬಡ್ಡಿದರದಲ್ಲಿ ಸಾಲ ಹಾಗೂ ಸಹಾಯಧನವನ್ನು ನೀಡಲಾಗುವುದು.

ಆಹಾರವಾಹಿನಿ
2025–26 ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿದಂತೆ ಈ ಯೋಜನೆ ಮುಖೇನ ವಿದ್ಯುತ್ ಚಾಲಿತ ನಾಲ್ಕು ಚಕ್ರಗಳ ವಾಹನ ಖರೀದಿಸಿ, ಆಹಾರ ಕಿಯೋಸ್ಕ್ (Kiosk) ಪ್ರಾರಂಭಿಸಲು ಪ್ರತಿ ಫಲಾನುಭವಿಗೆ ಗರಿಷ್ಠ ರೂ. 3.00 ಲಕ್ಷ ಸಹಾಯಧನವನ್ನು ಒದಗಿಸಲಾಗುವುದು.

ಕರ್ನಾಟಕ ವೀರಶೈವ–ಲಿಂಗಾಯತ ಅಭಿವೃದ್ಧಿ ನಿಗಮ ನಿಯಮಿತ,
5ನೇ ಮಹಡಿ, ವಿಶ್ವೇಶ್ವರಯ್ಯ ಚಿಕ್ಕ ಗೋಪುರ, ಡಾ. ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು–560 001. ದೂರವಾಣಿ: 080–22865522,
ಮೊಬೈಲ್: 9900012351, ಇ–ಮೇಲ್: mdkvldcl@karnataka.gov.in,
ವೆಬ್‌ಸೈಟ್: https://kvldcl.karnataka.gov.in

"ಎಲ್ಲಾ ಮಾನವರು ಸ್ವತಂತ್ರರಾಗಿಯೇ ಜನಿಸಿದ್ದಾರೆ, ಘನತೆ ಹಾಗೂ ಹಕ್ಕುಗಳಲ್ಲಿ ಸಮಾನರಾಗಿದ್ದಾರೆ. ವಿವೇಕ ಮತ್ತು ಅಂತಕರಣಗಳನ್ನು ಪಡೆದವರಾದ್ದರಿಂದ ಅವರು ಪರಸ್ಪರ ಸಹೋದರ ಭಾವದಿಂದ ವರ್ತಿಸಬೇಕು" –ಇದು ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.

ಸಂಜಯ್ ಬಿ. ಶೆಟ್ಟೆಣ್ಣವರ್, ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿಗಳು,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ಹಡಗಲಿ ಅರುಣ್‌ಕುಮಾರ್, ಕೆ.ಜಿ.ಎಸ್. (ಹಿ.ಶ್ರೇಣಿ)
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ವೀರಶೈವ–ಲಿಂಗಾಯತ ಅಭಿವೃದ್ಧಿ ನಿಗಮ ನಿಯಮಿತ

ಸಮಾಚಾರ ಸಣ್ಣದಲ್ಲ

ಟಿಪ್ಪರ್ ಡಿಕ್ಕಿ: ಪೌರ ಕಾರ್ಮಿಕ ಮಹಿಳೆ ಸಾವು

ಬೆಂಗಳೂರು: ಟಿಪ್ಪರ್ ಲಾರಿ ಡಿಕ್ಕಿಯಾದ ಪರಿಣಾಮ ಬಯೋಮೆಟ್ರಿಕ್ ಹಾಜರಾತಿ ನೀಡಲು ತೆರಳುತ್ತಿದ್ದ ಪೌರ ಕಾರ್ಮಿಕ ಮಹಿಳೆ ಸಾವನ್ನಪ್ಪಿರುವ ಘಟನೆ ನಡೆದಿದೆ. ವೆಸ್ಟ್ ಆಫ್ ಕಾರ್ಡ್ ರಸ್ತೆಯ ಶಿವನಗರ ಮೇಲ್ಸೇತುವೆಯ ಕೆಳಗೆ ಅಪಘಾತ ಸಂಭವಿಸಿದ್ದು, ಶ್ರೀರಾಂಪುರದ ನಿವಾಸಿ ಸರೋಜಮ್ಮ (51) ಸಾವನ್ನಪ್ಪಿದವರು.

ಮಂಗಳವಾರ ಬೆಳಗ್ಗೆ 6:30ಕ್ಕೆ ಕೆಲಸಕ್ಕೆ ಹಾಜರಾಗಲು ತೆರಳುತ್ತಿದ್ದ ಸರೋಜಮ್ಮ ಬಯೋಮೆಟ್ರಿಕ್ ಹಾಜರಾತಿ ನೀಡಲು ವಾರ್ಡ್ ಆಫೀಸ್ ಕಡೆ ನಡೆದುಕೊಂಡು ಹೋಗುತ್ತಿದ್ದರು. ಈ ವೇಳೆ ರಸ್ತೆ ಸಿಗ್ನಲ್ ದಾಟುವಾಗ ಟಿಪ್ಪರ್ ಲಾರಿ ಡಿಕ್ಕಿಯಾಗಿದೆ. ಪರಿಣಾಮ ಆಕೆ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಅಪಘಾತದ ಬಳಿಕ ಟಿಪ್ಪರ್ ಸ್ಥಳದಲ್ಲೇ ಬಿಟ್ಟು ಚಾಲಕ ಪರಾರಿಯಾಗಿದ್ದಾನೆ. ಘಟನಾ ಸ್ಥಳಕ್ಕೆ ವಿಜಯನಗರ ಸಂಚಾರ ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ರೆಡ್ ಸಿಗ್ನಲ್ ಇದ್ದಿದ್ದರಿಂದ ಮಹಿಳೆ ರಸ್ತೆ ದಾಟುತ್ತಿದ್ದರು. ತಕ್ಷಣ ಗ್ರೀನ್ ಸಿಗ್ನಲ್ ಬದಲಾಗಿದ್ದರಿಂದ ಟಿಪ್ಪರ್ ಚಾಲಕ ಮಹಿಳೆಯನ್ನು ಗಮನಿಸದೆ ಮುಂದೆ ಸಾಗಿದ್ದಾನೆ. ಇದರಿಂದ ಟಿಪ್ಪರ್‌ನ ಮುಂದಿನ ಚಕ್ರ ಹರಿದು ಮಹಿಳೆ ಸಾವನ್ನಪ್ಪಿದ್ದಾರೆ.

ಅಸಭ್ಯ ವರ್ತನೆ: ಇಬ್ಬರ ಬಂಧನ

ಬೆಂಗಳೂರು: ತಾಯಿಯೊಂದಿಗೆ ಆಟೋದಲ್ಲಿ ತೆರಳುತ್ತಿದ್ದ ಅಪ್ರಾಪ್ತೆಯರನ್ನು ಚುಡಾಯಿಸಿದ್ದ ಇಬ್ಬರು ಆರೋಪಿಗಳನ್ನು ಕುಮಾರಸ್ವಾಮಿ ಲೇಔಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ. ಬನಶಂಕರಿ ನಿವಾಸಿಗಳಾದ ಮುಬಾರಕ್ ಮತ್ತು ಹಫೀಫ್ ಬಂಧಿತ ಆರೋಪಿಗಳು. ಬಾಲಕಿಯರ ತಾಯಿ ನೀಡಿದ್ದ ದೂರಿನನ್ವಯ ಪ್ರಕರಣ ದಾಖಲಿಸಿಕೊಂಡಿದ್ದ ಕುಮಾರಸ್ವಾಮಿ ಲೇಔಟ್ ಪೊಲೀಸರು ಆರೋಪಿಗಳನ್ನು ಬಂಧಿಸಿದ್ದಾರೆ. ದೂರುದಾರ ಮಹಿಳೆ ಏಪ್ರಿಲ್ 23ರಂದು ತನ್ನ ಇಬ್ಬರು ಮಕ್ಕಳೊಂದಿಗೆ ಆಟೋದಲ್ಲಿ ಸಾಗುತ್ತಿದ್ದಾಗ ಸಾರಕ್ಕಿ ಮಾರುಕಟ್ಟೆ ಬಳಿ ಸ್ಕೂಟರ್‌ನಲ್ಲಿ ಬಂದ ಆರೋಪಿಗಳು ಅಡ್ಡಗಟ್ಟಿದ್ದರು. ಇಬ್ಬರು ಬಾಲಕಿಯರನ್ನು ಚುಡಾಯಿಸಿದ್ದಲ್ಲದೆ ಅಸಭ್ಯವಾಗಿ ಮಾತನಾಡಲಾರಂಭಿಸಿದ್ದರು. ಆರೋಪಿಗಳನ್ನು ಪ್ರಶ್ನಿಸಿದ ಆಟೋ ಚಾಲಕನನ್ನು ಅವಾಚ್ಯವಾಗಿ ನಿಂದಿಸಿದ್ದರು. ಬಳಿಕ ದೂರುದಾರ ಮಹಿಳೆ ಆರೋಪಿಗಳನ್ನು ಪ್ರಶ್ನಿಸಿದಾಗ ಆಕೆಯನ್ನೂ ಅವಾಚ್ಯವಾಗಿ ನಿಂದಿಸುತ್ತಾ, ಅಸಭ್ಯವಾಗಿ ವರ್ತಿಸಿದ್ದರು. ನಂತರ ಜೀವ ಬೆದರಿಕೆ ಹಾಕಿ ಸ್ಥಳದಿಂದ ತೆರಳಿದ್ದರು ಎಂದು ದೂರಿನಲ್ಲಿ ಸಂತ್ರಸ್ತೆಯರ ತಾಯಿ ಉಲ್ಲೇಖಿಸಿದ್ದರು ಎಂದು ವರದಿಯಾಗಿದೆ. ಆರೋಪಿಗಳ ವರ್ತನೆಯಿಂದ ನೊಂದ ಮಹಿಳೆ ಕುಮಾರಸ್ವಾಮಿ ಲೇಔಟ್ ಠಾಣೆಗೆ ದೂರು ನೀಡಿದ್ದರು. ಎಫ್‌ಐಆರ್ ದಾಖಲಿಸಿಕೊಂಡಿದ್ದ ಪೊಲೀಸರು ಇಬ್ಬರೂ ಆರೋಪಿಗಳನ್ನು ಪತ್ತೆಹಚ್ಚಿ ಹೆಡೆಮುರಿಕಟ್ಟಿದ್ದಾರೆ.

ಸಹೋದರಿ ಹೆಸರಿಗೆ ಆಸ್ತಿ ಬರೆದಿದ್ದಕ್ಕೆ ಪತ್ನಿ, ಮಗಳ ಆಕ್ಷೇಪ

ಆಸ್ತಿಗಾಗಿ ಓಂ ಪ್ರಕಾಶ್ ಕೊಲೆ

ಬೆಂಗಳೂರು: ಕರ್ನಾಟಕವೇ ಬೆಚ್ಚಿ ಬೀಳಿಸಿರುವ ನಿವೃತ್ತ ಪೊಲೀಸ್ ಮಹಾನಿರ್ದೇಶಕ ಓಂ ಪ್ರಕಾಶ್ ಅವರ ಬರ್ಬರ ಹತ್ಯೆಗೆ ಆಸ್ತಿ ವಿಚಾರವೇ ಕಾರಣ ಎಂಬುದು ಸಿಸಿಬಿ ತನಿಖೆಯಿಂದ ತಿಳಿದುಬಂದಿದೆ.

ಹತ್ಯೆ ಪ್ರಕರಣ ಸಂಬಂಧ ಸಿಸಿಬಿ ಕಸ್ಟಡಿಯಲ್ಲಿರುವ ಓಂ ಪ್ರಕಾಶ್ ಅವರ ಪತ್ನಿ ಪಲ್ಲವಿ ಅವರನ್ನು ವಿಚಾರಣೆ ನಡೆಸಲಾಗಿದ್ದು, ಆಸ್ತಿಗಾಗಿ ಕೊಲೆ ಮಾಡಲಾಗಿದೆ ಎಂದು ಹೇಳಿಕೆ ನೀಡಿದ್ದಾರೆ. ಕೃತ್ಯದ ಸ್ಥಳದಲ್ಲಿ ಪತ್ತೆಯಾದ ಚಾಕು, ಖಾರದಪುಡಿ ಹಾಗೂ ಘಟನೆ ವೇಳೆ ಮನೆಯಲ್ಲಿ ಯಾರ್‍ಯಾರು ಇದ್ದರು ಎಂಬ ಪ್ರಶ್ನೆಗಳನ್ನು ಕೇಳಿ, ಹೇಳಿಕೆಗಳನ್ನು ದಾಖಲಿಸಿಕೊಳ್ಳಲಾಗಿದೆ. ಅಲ್ಲದೇ 8-10 ಬಾರಿ ಇರಿದು ಹತ್ಯೆ ಮಾಡಿರುವ ಬಗ್ಗೆ ಆರೋಪಿ ಸರಿಯಾದ ಮಾಹಿತಿ ನೀಡುತ್ತಿಲ್ಲ. ಕೌಟುಂಬಿಕ ಸಮಸ್ಯೆಯಿಂದಾಗಿ ಕೃತ್ಯವೆಸಗಿರುವುದಾಗಿಯೂ ತಿಳಿಸಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಕೃತ್ಯದಲ್ಲಿ ಓಂ ಪ್ರಕಾಶ್ ಪುತ್ರಿ ಕೃತಿ ಭಾಗಿಯಾಗಿರುವ ಬಗ್ಗೆ ಪೊಲೀಸರು ಶಂಕೆ ವ್ಯಕ್ತಪಡಿಸಿದ್ದಾರೆ. ಪುತ್ರಿಯ ಬಗ್ಗೆಯೂ ಸರಿಯಾದ ಮಾಹಿತಿ ನೀಡುತ್ತಿಲ್ಲ. ಹಾಗಾಗಿ ಕೃತಿ ಅವರ ವಿಚಾರಣೆಗೆ ಸಿಸಿಬಿ ಪೊಲೀಸರು ಸಿದ್ಧತೆ ನಡೆಸಿದ್ದು, ಸದ್ಯದಲ್ಲೇ ನೋಟಿಸ್ ಜಾರಿ ಮಾಡಲಿದ್ದಾರೆ.

ಆಸ್ತಿ ವಿಚಾರ ಸಂಬಂಧ ಪತಿ ಓಂ ಪ್ರಕಾಶ್ ಅವರಿಗೆ ಸಂದರ್ಭದಲ್ಲಿ ಓಂ ಪ್ರಕಾಶ್ ಕಣ್ಣಿಗೆ ಖಾರದ ಪುಡಿಯನ್ನು ಎರಚಲಾಗಿದೆ. ಬಳಿಕ ಅಡುಗೆ ಎಣ್ಣೆಯನ್ನು ಸುರಿಯಲಾಗಿದೆ. ನಂತರದಲ್ಲಿ ಕೈ ಕಾಲು ಕಟ್ಟಿ ಹಾಕಿ ಅಡುಗೆ ಮನೆಯಲ್ಲಿದ್ದ ಚಾಕುವಿನಿಂದ ಇರಿಯಲಾಗಿದೆ. ತೀವ್ರ ರಕ್ತಸ್ರಾವದಿಂದ ಓಂ ಪ್ರಕಾಶ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಎಂಬುದಾಗಿ ಪಲ್ಲವಿ ವಿಚಾರಣೆ ವೇಳೆ ಸಿಸಿಬಿ ಪೊಲೀಸರ ಮುಂದೆ ಬಾಯ್ಬಿಟ್ಟಿದ್ದಾರೆ .

ಆಸ್ತಿ ಹಾಗೂ ಕೌಟುಂಬಿಕ ಕಲಹವೇ ಈ ಭೀಕರ ಹತ್ಯೆಯ ಹಿಂದೆ ಇದೆ ಎಂಬುವುದು ಪೊಲೀಸರ ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದ್ದು, ಅಷ್ಟಕ್ಕೂ ಓಂ ಪ್ರಕಾಶ್ ಅವರು ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿಯಲ್ಲಿ ಖರೀದಿಸಿದ್ದ ಕೋಟ್ಯಂತರ ಬೆಲೆ ಬಾಳುವ ಭೂಮಿಯೂ ಈ ಹತ್ಯೆಗೆ ಒಂದು ಕಾರಣ ಎಂಬ ಅಂಶ ಬೆಳಕಿಗೆ ಬಂದಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಸಿಬಿ ಪೊಲೀಸರು ಮತ್ತೊಮ್ಮೆ ಓಂ ಪ್ರಕಾಶ್ ಅವರ ಮಗ ಮತ್ತು ಕುಟುಂಬಸ್ಥರ ಹೇಳಿಕೆಗಳನ್ನು ದಾಖಲಿಸಿಕೊಂಡಿದ್ದಾರೆ ಎಂಬುದು ತಿಳಿದು ಬಂದಿದೆ.

ಏನಿದು ಆಸ್ತಿ ಜಗಳ?

ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿಯಲ್ಲಿ ಓಂ ಪ್ರಕಾಶ್ ಅವರು ಜಮೀನು ಖರೀದಿ ಮಾಡಿದ್ದರು. ಈ ಕೋಟ್ಯಂತರ ಮೌಲ್ಯದ ಆಸ್ತಿಯನ್ನು ಸಹೋದರಿಯರ ಹೆಸರಿನಲ್ಲಿ ನೋಂದಾಯಿಸಿದ್ದರು ಎಂದು ಹೇಳಲಾಗಿದೆ. ಆದರೆ ಇದಕ್ಕೆ ಓಂ ಪ್ರಕಾಶ್ ಪತ್ನಿ ಪಲ್ಲವಿ ಆಕ್ಷೇಪ ಎತ್ತಿದ್ದರು. ಈ ಜಗಳವೂ ವಿಕೋಪಕ್ಕೆ ಹೋಗಿತ್ತು. ಇದು ಹತ್ಯೆಗೆ ಕಾರಣವೇ ಎಂಬ ಬಗ್ಗೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಓಂ ಪ್ರಕಾಶ್ ಹಾಗೂ ಪತ್ನಿಯ ನಡುವೆ ವಿವಿಧ ಕಾರಣಗಳಿಂದಾಗಿ ಪದೇ ಪದೇ ಕಲಹ ನಡೆಯುತ್ತಿತ್ತು. ಓಂ ಪ್ರಕಾಶ್ ಅವರು ಪಿಸ್ತೂಲ್ ತಂದು ನನ್ನನ್ನು ಹಾಗೂ ಮಗಳನ್ನು ಶೂಟ್ ಮಾಡುವುದಾಗಿ ಬೆದರಿಕೆ ಹಾಕುತ್ತಿದ್ದಾರೆ ಎಂದು ಅವರ ಪತ್ನಿ ಈ ಹಿಂದೆ ಆರೋಪ ಮಾಡಿದ್ದರು.

ಕೂಲಿ ಕಾರ್ಮಿಕನಿಗೆ ಇರಿದು ಕೊಂದ ಸಹೋದ್ಯೋಗಿ

ಬೆಂಗಳೂರು: ಹೊರ ರಾಜ್ಯದ ಕಟ್ಟಡ ಕೂಲಿ ಕಾರ್ಮಿಕನೊಬ್ಬ ಕ್ಷುಲ್ಲಕ ವಿಚಾರಕ್ಕೆ ತನ್ನ ಸಹೋದ್ಯೋಗಿಯ ಎದೆ ಮತ್ತು ಪಕ್ಕೆಲುಬುಗೆ ಚಾಕುವಿನಿಂದ ಇರಿದು ಕೊಲೆ ಮಾಡಿರುವ ಘಟನೆ ಕಾಡುಗೋಡಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಕೊಲೆಯಾದ ವ್ಯಕ್ತಿಯನ್ನು ಜಾರ್ಖಂಡ್ ಮೂಲದ ಪವನ್ (55) ಎಂದು ಗುರುತಿಸಲಾಗಿದೆ. ಅದೇ ರಾಜ್ಯದ ಆರೋಪಿ ಗಣೇಶ್ ಧಾರ್ ಎಂಬಾತನನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ. ಈ ಇಬ್ಬರು ಜಾರ್ಖಂಡ್ ರಾಜ್ಯದ ಒಂದೇ ಊರಿನವರು. ಇಬ್ಬರು ಕಾಡುಗೋಡಿ ಸಮೀಪದ ಸೀಗೇಹಳ್ಳಿಯಲ್ಲಿ ಕಿಯಾ ಹೋಮ್ಸ್ ಅಪಾರ್ಟ್ಮೆಂಟ್ ನಿರ್ಮಾಣ ಕಾಮಗಾರಿಯಲ್ಲಿ ಕೂಲಿ ಕಾರ್ಮಿಕರಾಗಿದ್ದರು. ಸೋಮವಾರ ಇಬ್ಬರಿಗೂ ವಾರದ ರಜೆ ಇದ್ದ ಪರಿಣಾಮ ಹೊರ ಹೋಗಿ ಮದ್ಯ ಸೇವನೆ ಮಾಡಿ ಬಂದು ಸಂಜೆ 4 ಗಂಟೆ ಸುಮಾರಿಗೆ ಲೇಬರ್ ಶೆಡ್‌ನಲ್ಲಿ ವಿರಮಿಸುತ್ತ ಮೊಬೈಲ್‌ನಲ್ಲಿ ಸಿನಿಮಾ ನೋಡುತ್ತಿದ್ದರು. ಈ ಸಂದರ್ಭದಲ್ಲಿ ಕ್ಷುಲ್ಲಕ ವಿಚಾರಕ್ಕೆ ಇಬ್ಬರ ನಡುವೆ ಗಲಾಟೆಯಾಗಿ ಪವನ್ ಗಣೇಶ್ ಧಾರ್ ಕೆನ್ನೆಗೆ ಬಾರಿಸಿದ್ದ ಇದರಿಂದ ಕೋಪಗೊಂಡ ಗಣೇಶ್ ಚಾಕು ತಂದು ಪವನ್ ಎದೆ ಮತ್ತು ಪಕ್ಕೆಲುಬಿಗೆ ಚುಚ್ಚಿ ಪರಾರಿಯಾಗಿದ್ದ. ರಕ್ತದ ಮಡುವಿನಲ್ಲಿ ಬಿದ್ದಿದ್ದ ಪವನ್‌ನನ್ನು ಅಲ್ಲಿದ್ದ ಕಾರ್ಮಿಕರು ಸಮೀಪದ ಖಾಸಗಿ ಆಸ್ಪತ್ರೆಗೆ ದಾಖಲಿಸಿದರೂ ಚಿಕಿತ್ಸೆ ಫಲಕಾರಿಯಾಗದೆ ಆತ ಮೃತಪಟ್ಟಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ. ಘಟನೆ ಕುರಿತಂತೆ ಕಟ್ಟಡ ನಿರ್ಮಾಣ ಕಾಮಗಾರಿಯ ಸೂಪರ್‌ವೈಸರ್ ನೀಡಿರುವ ದೂರಿನ ಆಧಾರದ ಮೇಲೆ ಪ್ರಕರಣ ದಾಖಲಿಸಿಕೊಂಡಿರುವ ಕಾಡುಗೋಡಿ ಪೊಲೀಸರು ಗಣೇಶ್ ಧಾರ್‌ನನ್ನು ವಶಕ್ಕೆ ಪಡೆದು ಮುಂದಿನ ಕ್ರಮ ಜರುಗಿಸಿದ್ದಾರೆ. ಕೊಲೆಗೆ ನಿಖರವಾದ ಕಾರಣ ಇನ್ನೂ ತಿಳಿದುಬಂದಿಲ್ಲ, ಈ ಬಗ್ಗೆ ಕಾಡುಗೋಡಿ ಠಾಣೆ ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ಕಾಲೇಜಿಗೆ ಬಾಂಬ್ ಹುಸಿ ಬೆದರಿಕೆ

ಬೆಂಗಳೂರು: ಪ್ರತಿಷ್ಠಿತ ಆಚಾರ್ಯ ಕಾಲೇಜಿನಲ್ಲಿ ಬಾಂಬ್ ಇಟ್ಟಿರುವುದಾಗಿ ಬೆದರಿಕೆ ಸಂದೇಶ ಬಂದಿರುವುದು ಆತಂಕಕ್ಕೆ ಕಾರಣವಾಗಿದೆ.

ಅಪರಿಚಿತ ವ್ಯಕ್ತಿ ಇ-ಮೇಲ್ ಮೂಲಕ ಬೆದರಿಕೆ ಸಂದೇಶ ಕಳುಹಿಸಿದ್ದಾನೆ. ಜತೆಗೆ, ಕಾಲೇಜು ಪ್ರಾಂಶುಪಾಲರನ್ನು ಕತ್ತರಿಸಿ ಫ್ರಿಡ್ಜ್‌ನಲ್ಲಿಡುವುದಾಗಿ ಬೆದರಿಕೆ ಹಾಕಿದ್ದಾನೆ. ಆಚಾರ್ಯ ಕಾಲೇಜಿನ ಅಧಿಕೃತ ಇ-ಮೇಲ್ ಪರಿಶೀಲನೆ ವೇಳೆ ಬೆದರಿಕೆ ಸಂದೇಶ ಗಮನಕ್ಕೆ ಬಂದಿದೆ. ಕಾಲೇಜಿನ ಆಡಳಿತ ಮಂಡಳಿ ಸೋಲದೇವನಹಳ್ಳಿ ಠಾಣೆಗೆ ದೂರು ನೀಡಿದೆ. ಘಟನೆ ಸಂಬಂಧ ಎನ್‌ಸಿಆರ್ ದಾಖಲಿಸಿಕೊಂಡಿರುವ ಸೋಲದೇವನಹಳ್ಳಿ ಪೊಲೀಸರು ನಂತರ ನ್ಯಾಯಾಲಯದ ಅನುಮತಿ ಪಡೆದು ಎಫ್‌ಐಆರ್ ದಾಖಲಿಸಿದ್ದಾರೆ.

ಹಲವು ಬಾರಿ ಬಾಂಬ್ ಬೆದರಿಕೆ: ಬೆಂಗಳೂರು ವಾರಾಣಸಿ ಇಂಡಿಗೋ ವಿಮಾನದಲ್ಲಿ ಬಾಂಬ್ ಇದೆ ಎಂಬ ಹುಸಿ ಬೆದರಿಕೆ ಬಂದ ಎರಡೇ ದಿನಗಳಲ್ಲಿ ಕಾಲೇಜಿಗೆ ಬೆದರಿಕೆ ಬಂದಿದೆ. ವಾರಣಾಸಿಯಿಂದ ಬೆಂಗಳೂರಿಗೆ ಆಗಮಿಸುತ್ತಿದ್ದ ಇಂಡಿಗೋ ವಿಮಾನದಲ್ಲಿ ಬಾಂಬ್ ಇದೆ ಎಂದು ಸುಳ್ಳು ಮಾಹಿತಿ ನೀಡಿದ್ದಕ್ಕಾಗಿ ಕೆನಡಾದ ಪ್ರಜೆಯೊಬ್ಬರನ್ನು ಬಂಧಿಸಲಾಗಿತ್ತು. ಕಳೆದ ಶನಿವಾರ ರಾತ್ರಿ ಈ ಘಟನೆ ನಡೆದಿದ್ದು, ಕೆನಡಾದ ಪ್ರಜೆ ನಿಶಾಂತ್ ಯೋಹಾಂತನ್ ಎಂಬವರು ಇದ್ದಕ್ಕಿದ್ದಂತೆ ತಮ್ಮ ಬ್ಯಾಗ್ ಒಳಗೆ ಬಾಂಬ್ ಇದೆ ಎಂದು ಕೂಗಿದ್ದರು. ಬೆಂಗಳೂರಿಗೆ ತೆರಳುತ್ತಿದ್ದ ಇಂಡಿಗೋ ವಿಮಾನ ವಾರಣಾಸಿಯ ಲಾಲ್ ಬಹದ್ದೂರ್ ಶಾಸ್ತ್ರಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ರನ್ವೇಯಲ್ಲಿದ್ದಾಗ ಆತಂಕ ಅವರು ಹಾಗೆ ಕೂಗಿಕೊಂಡಿದ್ದರಿಂದ ಆತಂಕದ ಸನ್ನಿವೇಶ ಸೃಷ್ಟಿಯಾಗಿತ್ತು. ನಂತರ ವಿಮಾನವನ್ನು ತುರ್ತು ಲ್ಯಾಂಡಿಂಗ್ ಮಾಡಿಸಿ ಪ್ರಯಾಣಿಕರ ಲಗೇಜ್‌ಗಳ ಜತೆಗೆ ವಿಮಾನವನ್ನು ಸಂಪೂರ್ಣವಾಗಿ ಪರಿಶೀಲಿಸಲಾಗಿತ್ತು. ನಂತರ ಅದು ಹುಸಿ ಬೆದರಿಕೆ ಎಂದು ದೃಢಪಟ್ಟರೂ, ಅದರಿಂದಾಗಿ ಕಾರ್ಯಾಚರಣೆಗೆ ಅಡಚಣೆಯಾಗಿತ್ತು.

ಪ್ರಜ್ವಲ್‌ಗೆ ವಕೀಲರಿಲ್ಲ, ಉಚಿತ ಕಾನೂನು ಸೇವೆ

ಬೆಂಗಳೂರು: ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅತ್ಯಾಚಾರ ಪ್ರಕರಣ ಸಂಬಂಧ ಕೋರ್ಟ್‌ನಲ್ಲಿ ಟ್ರಯಲ್ ಪ್ರಾರಂಭ ಮಾಡಲು ನನ್ನ ಬಳಿ ವಕೀಲರು ಇಲ್ಲ ಎಂದು ಪ್ರಜ್ವಲ್ ರೇವಣ್ಣ ಕೋರ್ಟ್‌ಗೆ ತಿಳಿಸಿದ ಬಳಿಕ ನ್ಯಾಯಾಲಯವೇ ಉಚಿತ ಕಾನೂನು ಸೇವೆ ಒದಗಿಸಿದೆ.



ಪ್ರಜ್ವಲ್ ಪರ ವಾದಿಸಲು ಉಚಿತ ಕಾನೂನು ನೆರವಿನ ಅಡಿ ವಕೀಲರನ್ನು ಕೋರ್ಟ್ ನೇಮಕ ಮಾಡಿದೆ. ತಮ್ಮ ಪರ ವಾದ ಮಂಡಿಸಲು ವಕೀಲರನ್ನು ನೇಮಿಸಿಕೊಳ್ಳದ ಪ್ರಜ್ವಲ್‌ಗೆ ಸಾಕಷ್ಟು ಸಮಯ ನೀಡಿದರೂ ವಕೀಲ ನಿಯೋಜಿಸಿಕೊಳ್ಳಲಿಲ್ಲ. ಮಂಗಳವಾರ ವಿಚಾರಣೆ ಪ್ರಾರಂಭ ಆದಾಗ ಇನ್ನೂ ವಕೀಲರು ಸಿಕ್ಕಿಲ್ಲ ಎಂದು ಕೋರ್ಟ್‌ಗೆ ತಿಳಿಸಿದರು. ಅಲ್ಲದೇ ವಕೀಲರ ನೇಮಕಕ್ಕೆ ಸಮಯ ನೀಡುವಂತೆ ಪ್ರಜ್ವಲ್ ಮನವಿ ಮಾಡಿದರು. ಆದರೆ ಪ್ರಜ್ವಲ್ ಮನವಿಯನ್ನು ಕೋರ್ಟ್ ತಿರಸ್ಕರಿಸಿದೆ.

ಸೋಮವಾರ ಕೂಡ ನ್ಯಾಯಾಲಯ ವಕೀಲರ ನೇಮಕಕ್ಕೆ ಕೊನೆಯ ಅವಕಾಶ ನೀಡಿತ್ತು. ಕೋರ್ಟ್ ನೀಡಿದ್ದ ಅವಕಾಶ ಬಳಸಿಕೊಳ್ಳದ ಹಿನ್ನಲೆ ಉಚಿತ ಕಾನೂನು ಸೇವೆ ಅಡಿ ವಕೀಲರನ್ನ ನಿಯೋಜನೆ ಮಾಡಿದೆ. ಆರ್.ಎಸ್. ಜಯಶ್ರೀ, ಪ್ರಜ್ವಲ್ ಪರ ವಾದಕ್ಕೆ ನಿಯೋಜನೆಗೊಂಡಿದ್ದಾರೆ. ಮೇ.2 ರಂದು ಟ್ರಯಲ್ ಆರಂಭವಾಗಲಿದ್ದು, 2 ತಿಂಗಳಲ್ಲಿ ಮುಗಿಸುವುದಾಗಿ ಕೋರ್ಟ್ ಸೂಚಿಸಿದೆ.

ಚಿನ್ನದುಂಗುರ ದೋಚಿದ ನಕಲಿ ನಾಗಾಸಾಧು

ಬೆಂಗಳೂರು: ನಕಲಿ ನಾಗಸಾಧುವೊಬ್ಬ ಕಾರು ಚಾಲಕನಿಂದ 10 ಗ್ರಾಂ ಚಿನ್ನದ ಉಂಗುರ ಪಡೆದು ವಂಚಿಸಿದ ಘಟನೆ ಬೆಂಗಳೂರಿನಲ್ಲಿ ನಡೆದಿದೆ.

ಏಪ್ರಿಲ್ 19ರಂದು ನಗರದ ಪ್ಯಾಲೇಸ್ ರಸ್ತೆಯಲ್ಲಿರುವ ಖಾಸಗಿ ಹೋಟೆಲ್ ಮುಂಭಾದಲ್ಲಿ ಈ ಘಟನೆ ನಡೆದಿದ್ದು, ವಂಚನೆಗೊಳಗಾದ ವೆಂಕಟಕೃಷ್ಣಯ್ಯ ಎಂಬುವವರು ನೀಡಿರುವ ದೂರಿನನ್ವಯ ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಪರಾಧ ಸುದ್ದಿಗಳು

ಏಪ್ರಿಲ್ 19ರಂದು ಮಾಲೀಕರನ್ನು ಡ್ರಾಪ್ ಮಾಡಿ ರಸ್ತೆ ಬದಿಯಲ್ಲಿ ಕಾರು ಪಾರ್ಕ್ ಮಾಡಿ ಕುಳಿತಿದ್ದ ವೆಂಕಟಕೃಷ್ಣಯ್ಯರ ಬಳಿ ನಾಗಾಸಾಧು ಸೋಗಿನಲ್ಲಿ ಬಂದಿದ್ದ ಆರೋಪಿ, ನನಗೆ ಆಯಾಸವಾಗಿದೆ, ಐದು ನಿಮಿಷ ಕಾರಿನಲ್ಲಿ ವಿಶ್ರಾಂತಿ ಪಡೆಯುತ್ತೇನೆ ಎಂದು ಕೇಳಿದ್ದ. ಆಯಾಸವಾಗಿರಬಹುದೆಂದು ಭಾವಿಸಿದ್ದ ವೆಂಕಟಕೃಷ್ಣಯ್ಯ, ಆತನಿಗೆ ವಿಶ್ರಾಂತಿ ಪಡೆಯಲು ಅವಕಾಶ ನೀಡಿದ್ದರು. ಈ ಸಂದರ್ಭದಲ್ಲಿ ನಿಮ್ಮ ಮನೆಯಲ್ಲಿ ಎಷ್ಟು ಜನರಿದ್ದಾರೆ ಅಂತ ವಿಚಾರಿಸಿದ್ದ ಆರೋಪಿ, ನನಗೆ 5 ರುದ್ರಾಕ್ಷಿ ಮಣಿ ನೀಡಿ, ಒಂದನ್ನು ವಾಪಸ್ ಪಡೆದಿದ್ದ. ಬಳಿಕ ಅದನ್ನು ಪೇಪರ್‌ನಲ್ಲಿ ಮಡಚಿ ತೆರೆದಾಗ ರುದ್ರಾಕ್ಷಿ ಮಣಿ ಬದಲು ಅದು ಹೂವಾಗಿ ಮಾರ್ಪಟ್ಟಿತ್ತು. ಇದು ನಿನಗೆ ಶುಭ ಸೂಚಕ ಅಂತ ಹೇಳಿದ ಆರೋಪಿ, ನನ್ನ ಕೈಯಲ್ಲಿದ್ದ 10 ಗ್ರಾಂ ತೂಕದ ಚಿನ್ನದ ಉಂಗುರ ಪಡೆದುಕೊಂಡಿದ್ದ. ಬಳಿಕ ಮಹಾಕಾಲೇಶ್ವರನ ವಿಭೂತಿ ಎಂದು ತಾನೂ ಹಣೆಗೆ ಬಳಿದುಕೊಂಡು, ನನ್ನ ಹಣೆಗೂ ಬಳಿದಿದ್ದ. ಬಳಿಕ ಇಲ್ಲಿಂದ ಹಿಂದಿರುಗಿ ನೋಡದೇ ಹೋಗು, ಇಲ್ಲದಿದ್ದರೆ ನಿನಗೆ ಕೆಡುಕಾಗುತ್ತದೆ ಎಂದು ಹೆದರಿಸಿದ್ದ.

ಆತನ ಮಾತು ನಂಬಿ ಮಂಕು ಬಂದಂತಾಗಿ ನಾನು ನನಗೆ ಅರಿವಾಗದಂತೆ ಕಾರಿನಲ್ಲಿ ಸ್ಥಳದಿಂದ ತೆರಳಿದ್ದೆ. ಬಳಿಕ ಮನೆಯವರಿಗೆ ವಿಚಾರ ತಿಳಿಸಿದ ನಂತರ ಹೈಗ್ರೌಂಡ್ಸ್ ಪೊಲೀಸ್ ಠಾಣೆಗೆ ದೂರು ನೀಡಿರುವುದಾಗಿ ಮೋಸಕ್ಕೊಳಗಾದ ವೆಂಕಟಕೃಷ್ಣಯ್ಯ ಹೇಳಿದ್ದಾರೆ. ವಂಚನೆಗೊಳಗಾದ ವೆಂಕಟಕೃಷ್ಣಯ್ಯ ನೀಡಿದ ದೂರಿನನ್ವಯ ಪ್ರಕರಣ ದಾಖಲಿಸಿಕೊಳ್ಳಲಾಗಿದ್ದು, ತನಿಖೆ ಆರಂಭಿಸಿರುವುದಾಗಿ ಹೈಗ್ರೌಂಡ್ಸ್ ಪೊಲೀಸರು ತಿಳಿಸಿದ್ದಾರೆ.

ಬನ್ನಂಜೆ ರಾಜನಿಗೆ 15 ದಿನ ಪೆರೋಲ್ ಮಂಜೂರು

ಬೆಂಗಳೂರು: ಉದ್ಯಮಿಯೊಬ್ಬರ ಕೊಲೆ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆಗೆ ಗುರಿಯಾಗಿರುವ ಭೂಗತ ಪಾತಕಿ ಬನ್ನಂಜೆ ರಾಜನಿಗೆ ತನ್ನ ತಂದೆ ಉಡುಪಿಯ ಸುಂದರ ಶೆಟ್ಟಿಗಾರ್ ನಿಧನರಾದ ಹಿನ್ನೆಲೆಯಲ್ಲಿ ಅಂತ್ಯಕ್ರಿಯೆ ಮತ್ತು ಆ ನಂತರದ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಹೈಕೋರ್ಟ್ ಷರತ್ತುಗಳನ್ನು ವಿಧಿಸಿ 15 ದಿನಗಳ ಪೆರೋಲ್ ಮಂಜೂರು ಮಾಡಿತು.

ಬನ್ನಂಜೆ ರಾಜನನ್ನು ಪೆರೋಲ್ ಮೇಲೆ ಬಿಡುಗಡೆ ಮಾಡುವಂತೆ ಕೋರಿದ್ದ ಅವರ ತಂದೆ 86 ವರ್ಷದ ಬಾಪುತೋಟ ಮಲ್ಪೆಯ ಸುಂದರ ಶೆಟ್ಟಿಗಾರ್ ಅವರು ನಿಧನರಾದ ಹಿನ್ನೆಲೆಯಲ್ಲಿ ಅರ್ಜಿದಾರರ ಕೋರಿಕೆಯಂತೆ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ನ್ಯಾಯಪೀಠ ಈ ಆದೇಶ ನೀಡಿದೆ. ಬನ್ನಂಜೆ ರಾಜ ಬಿಡುಗಡೆಯಾಗುವ ದಿನಕ್ಕೆ ಅನ್ವಯಿಸಿ ಕಠಿಣ ಷರತ್ತುಗಳನ್ನು ವಿಧಿಸಿ ಪೆರೋಲ್ ಮಂಜೂರು ಮಾಡಲಾಗಿದೆ. ನಾಲ್ವರು ಪೊಲೀಸರು ಮತ್ತು ವಾಹನ ಒಳಗೊಂಡ ಎಸ್ಕಾರ್ಟ್ ಕಲ್ಪಿಸಲಾಗಿದ್ದು, ಅದಕ್ಕೆ ತಗುಲುವ ವೆಚ್ಚವನ್ನು ಬನ್ನಂಜೆ ರಾಜನೇ ಪಾವತಿಸಬೇಕು ಎಂದು ಪೀಠ ಆದೇಶದಲ್ಲಿ ತಿಳಿಸಿದೆ. ವಿಚಾರಣೆ ವೇಳೆ ರಾಜ್ಯ ಸರಕಾರ ಪ್ರತಿನಿಧಿಸಿದ್ದ ವಕೀಲ ರಾಹುಲ್ ಕಾರ್ಯಪ್ಪ, ಕೋಕಾ ಮತ್ತು ಶಸ್ತ್ರಾಸ್ತ್ರ ಕಾಯಿದೆ ಅಡಿ ದಾಖಲಾಗಿರುವ ಪ್ರಕರಣಗಳೂ ಸೇರಿ ಬನ್ನಂಜೆ ರಾಜನ ವಿರುದ್ಧ 23 ಪ್ರಕರಣಗಳು ಬಾಕಿ ಇವೆ. ಹಲವು ಪ್ರಕರಣಗಳಲ್ಲಿ ಬನ್ನಂಜೆ ರಾಜ ದೋಷಿ ಎಂದು ಸಾಬೀತಾಗಿದ್ದು, ಉದ್ಯಮಿ ಕೊಲೆ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆ ಅನುಭವಿಸುತ್ತಿದ್ದಾನೆ. ನಾಲ್ವರು ಎಸ್ಕಾರ್ಟ್ ಪೊಲೀಸ್ ಮತ್ತು ವಾಹನಕ್ಕೆ ವೆಚ್ಚ ಪಾವತಿಸಲು ಆದೇಶಿಸಬೇಕು ಎಂದು ಕೋರಿದರು.

ಎಸ್ಕಾರ್ಟ್‌ಗೆ ಹಣ ಪಾವತಿಸಬೇಕು

ಬನ್ನಂಜೆ ರಾಜ ಪರ ವಕೀಲರು, 24 ತಾಸಿಗೆ ಮೂವರು ಪೊಲೀಸರನ್ನು ಕರ್ತವ್ಯಕ್ಕೆ ನಿಯೋಜಿಸುತ್ತಾರೆ. ಇದು ನಮ್ಮ ಮಿತಿಗಿಂತ ಹೆಚ್ಚಿನ ವೆಚ್ಚವಾಗುತ್ತದೆ. ಇದಕ್ಕೆ 50 ಸಾವಿರ ಅಥವಾ ಒಂದು ಲಕ್ಷ ರು. ಪಾವತಿಸಲಾಗುವುದು. ಬನ್ನಂಜೆ ರಾಜ ಅವರು 15 ಪ್ರಕರಣಗಳಲ್ಲಿ ಖುಲಾಸೆಯಾಗಿದ್ದಾರೆ ಎಂದು ಪೀಠಕ್ಕೆ ವಿವರಿಸಿದರು. ಇದಕ್ಕೆ ಪೀಠ, ಸರಕಾರದ ನಿಯಮದ ಪ್ರಕಾರ ಎಸ್ಕಾರ್ಟ್‌ಗೆ ಹಣ ಪಾವತಿಸಲೇಬೇಕು. ನಿಮ್ಮ ಇತಿಹಾಸವೇ ಹಾಗಿದೆ. ಏನೂ ಮಾಡಲಾಗದು ಎಂದು ಮೌಖಿಕವಾಗಿ ಅಭಿಪ್ರಾಯಪಟ್ಟಿತು.

INDEGENE LIMITED

(formerly Indegene Private Limited)

CIN No. U73100KA1998PLC102040

Regd Office: Aspen Block G4, 3rd Floor, Manyata Embassy Business Park, Outer Ring Road, Nagawara, Bengaluru - 560 045

EXTRACT OF UNAUDITED CONSOLIDATED FINANCIAL RESULTS FOR THE QUARTER AND YEAR ENDED 31 MARCH 2025

(All amounts in ₹ millions, except per share data)

Sl. No.	Particulars	Quarter ended 31 March 2025	Year ended 31 March 2025	Quarter ended 31 March 2024
		Unaudited	Audited	Audited
1	Revenue from operations	7,556	28,393	6,730
2	Net profit for the period/ year (before tax and exceptional items)	1,493	5,393	1,311
3	Net profit for the period/ year before tax (after exceptional items)	1,493	5,393	1,335
4	Net profit for the period/ year after tax (after exceptional items)	1,176	4,067	948
5	Total comprehensive income for the period/ year	1,202	4,323	966
6	Equity share capital (Face value of ₹ 2 each)	479	479	444
7	Other equity		25,677	
8	Earnings per share (EPS) for the period/ year (face value of ₹ 2 each) (Not annualised for interim periods)			
	(a) Basic EPS	4.91	17.15	4.27
	(b) Diluted EPS	4.88	17.02	4.24

Notes:

1. The above results have been reviewed by the Audit Committee and approved by the Board of Directors at its meeting held on 28 April 2025. The figures for the quarter ended 31 March 2025, are the balancing figures between audited figures in respect of full financial year and published unaudited year to date figures upto the end of the third quarter of the current financial year, which were subject to limited review.
2. The above Consolidated Financial Results of the Group have been prepared in accordance with Indian Accounting Standards ("Ind AS") 34-Interim Financial Reporting, recognition and measurement principles of Indian Accounting Standards ("Ind AS") prescribed under Section 133 of the Companies Act, 2013, as amended, read with the relevant rules issued thereunder and in terms of Regulation 33 of the SEBI (Listing Obligations and Disclosure Requirements) Regulations, 2015.
3. During the year ended 31 March 2025, the Company has completed Initial Public Offer (IPO) of 40,766,550 equity shares of face value of ₹2 each at an issue price of ₹452 per share, comprising fresh issue of 16,833,818 shares aggregating to ₹7,600 and offer for sale of 23,932,732 shares by selling shareholders aggregating to ₹10,818. The Equity shares of the Company were listed on National Stock Exchange of India Limited (NSE) and BSE Limited (BSE) on 13 May 2024.
4. The Board of Directors, in its meeting on 28 April 2025, have proposed a final dividend of ₹2 per equity share for the financial year ended 31 March 2025. The proposal is subject to the approval of shareholders at the ensuing Annual General Meeting and if approved would result in a cash outflow of approximately ₹480.
5. Standalone Information:

(All amounts in ₹ millions, except per share data)

Sl. No.	Particulars	Quarter ended 31 March 2025	Year ended 31 March 2025	Quarter ended 31 March 2024
		Unaudited	Audited	Unaudited
1	Revenue from operations	2,667	10,936	2,725
2	Profit before tax	664	2,385	604
3	Net profit for the period/ year	542	1,813	489
4	Other comprehensive loss	(24)	(13)	(3)
5	Total comprehensive income for the period/ year	518	1,800	486

6. The above is an extract of the detailed format of Quarterly Financial Results filed with the Stock Exchanges under Regulation 33 of the SEBI (Listing and Other Disclosure Requirements) Regulations, 2015. The detailed format of consolidated and standalone results of the Company are available on the National Stock Exchange of India Limited (URL: www.nseindia.com), the BSE Limited website (URL: www.bseindia.com) and on the Company's website (URL: www.indegene.com/investor-relations). The same can be accessed by scanning the QR code provided below.

For and on behalf of the Board of Directors
INDEGENE LIMITED
(formerly INDEGENE PRIVATE LIMITED)

Bengaluru
28 April 2025

Manish Gupta
Chief Executive Officer and Executive Director

Adfactors 37/25

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ಫಾರ್ಮ್ ನಂ. ಎನ್‌ಸಿಎಲ್‌ಟಿ-3ಎ
ಪಿಟಿಷನ್ ವಿವರಗಳ ಜಾಹೀರಾತು
[ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿ ನಿಯಮಗಳು, 2016 ರ ನಿಯಮ 35 ನೋಡಿ]
ಈ ಕೆಳಗಿನ ಕಂಪನಿಗಳ ವಿಲೀನೀಕರಣದ ಯೋಜನೆಯ ವಿಷಯದಲ್ಲಿ
ಹ್ಯಾಪಿಯೆಸ್ಟ್ ಮೈಂಡ್ಸ್ ಎಡುಟೆಕ್ ಪ್ರೈವೇಟ್ ಲಿಮಿಟೆಡ್
(ಈ ಮೊದಲು ಮ್ಯಾಕ್‌ಮಿಲನ್ ಲರ್ನಿಂಗ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು)
(ಈ ಮೊದಲು ಇಂಟೆಲಸ್ ಸಾಫ್ಟ್‌ವೇರ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು)
(ಅರ್ಜಿದಾರ ಕಂಪನಿ ನಂ.1/ ವರ್ಗಾವಣೆದಾರ ಕಂಪನಿ)
ಇದನ್ನು
ಹ್ಯಾಪಿಯೆಸ್ಟ್ ಮೈಂಡ್ಸ್ ಟೆಕ್ನಾಲಜೀಸ್ ಲಿಮಿಟೆಡ್
(ಅರ್ಜಿದಾರ ಕಂಪನಿ ನಂ.2/ ವರ್ಗಾಯಿತ ಕಂಪನಿ)
ಜೊತೆಗೆ
ಮತ್ತು
ಅವರವರಿಗೆ ಸಂಬಂಧಪಟ್ಟ ಷೇರುದಾರರು ಮತ್ತು ಸಾಲಗಾರರ ವಿಲೀನೀಕರಣ.
ಕಂಪನಿ ಪಿಟಿಷನ್ ಉಲ್ಲೇಖ (ಸಿಎಎ) ಸಂ.15/ಬಿಬಿ/2025
ಮತ್ತು
ಕಂಪನಿಯ ಅರ್ಜಿ (ಸಿಎಎ) ಸಂ.48/ಬಿಬಿ/2024 ಸಂಬಂಧವಾಗಿ

ಹ್ಯಾಪಿಯೆಸ್ಟ್ ಮೈಂಡ್ಸ್ ಎಡುಟೆಕ್ ಪ್ರೈವೇಟ್ ಲಿಮಿಟೆಡ್
(ಈ ಮೊದಲು ಮ್ಯಾಕ್‌ಮಿಲನ್ ಲರ್ನಿಂಗ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು) (ಈ ಮೊದಲು ಇಂಟೆಲಸ್ ಸಾಫ್ಟ್‌ವೇರ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು) (CIN: U72200KA2015FTC082947)
ಈ ಕಂಪನಿಯನ್ನು ಕಂಪನಿಗಳ ಕಾಯಿದೆ, 2013 ಅಡಿಯಲ್ಲಿ ನೋಂದಾಯಿಸಲಾಗಿದೆ.
ನೋಂದಾಯಿತ ಕಛೇರಿ ವಿಳಾಸ: ಎಸ್‌ಜೆಆರ್ ಎಕ್ವಿನಾಕ್ಸ್, ಸರ್ವೇ ಸಂ.47/8, ದೊಡ್ಡತೊಗೂರ್ ಗ್ರಾಮ, ಬೇಗೂರು ಹೋಬ್ಳಿ, ಎಲೆಕ್ಟ್ರಾನಿಕ್ಸ್ ಸಿಟಿ ಫೇಸ್ 1, ಹೊಸೂರು ರಸ್ತೆ, ಎಲೆಕ್ಟ್ರಾನಿಕ್ಸ್ ಸಿಟಿ, ಬೆಂಗಳೂರು, ಕರ್ನಾಟಕ, 560100.
ಪ್ರತಿನಿಧಿ: ಶ್ರೀ ನುಗ್ಗೇಹಳ್ಳಿ ಕೃಷ್ಣಮಾಚಾರ್ಯ ಶ್ರೀರಂಗನಾರಾಯಣನ್, ಅಧಿಕೃತ ಸಹಿದಾರ
...ಪಿಟಿಷನರ್ ಕಂಪನಿ 1/ ವರ್ಗಾವಣೆಗಾರ ಕಂಪನಿ

ಹ್ಯಾಪಿಯೆಸ್ಟ್ ಮೈಂಡ್ಸ್ ಟೆಕ್ನಾಲಜೀಸ್ ಲಿಮಿಟೆಡ್
(CIN: L72900KA2011PLC057931)
ಈ ಕಂಪನಿಯನ್ನು ಕಂಪನಿಗಳ ಕಾಯಿದೆ, 1956 ಅಡಿಯಲ್ಲಿ ನೋಂದಾಯಿಸಲಾಗಿದೆ.
ನೋಂದಾಯಿತ ಕಚೇರಿ ವಿಳಾಸ: ನಂ. 53/1-4, ಹೊಸೂರು ಮುಖ್ಯ ರಸ್ತೆ,
ಮಡಿವಾಳ (ಮಡಿವಾಳ ಪೊಲೀಸು ಠಾಣೆ ಪಕ್ಕ)
ಬೆಂಗಳೂರು, ಕರ್ನಾಟಕ, ಭಾರತ, 560068
ಪ್ರತಿನಿಧಿ: ಶ್ರೀ ಪ್ರವೀಣಕುಮಾರ್ ದರ್ಶನಕರ್, ಅಧಿಕೃತ ಸಹಿದಾರ
...ಪಿಟಿಷನರ್ ಕಂಪನಿ 2/ ವರ್ಗಾಯಿತ ಕಂಪನಿ
(ಒಟ್ಟಾಗಿ "ಅರ್ಜಿದಾರ ಕಂಪನಿಗಳು" ಎಂದು ಕರೆಯಲಾಗಿದೆ)

ಪಿಟಿಷನ್ ಸೂಚನೆ

ಹ್ಯಾಪಿಯೆಸ್ಟ್ ಮೈಂಡ್ಸ್ ಎಡುಟೆಕ್ ಪ್ರೈವೇಟ್ ಲಿಮಿಟೆಡ್ (ಈ ಮೊದಲು ಮ್ಯಾಕ್‌ಮಿಲನ್ ಲರ್ನಿಂಗ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ / ಇಂಟೆಲಸ್ ಸಾಫ್ಟ್‌ವೇರ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು) (ಅರ್ಜಿದಾರ ಕಂಪನಿ ನಂ.1/ ವರ್ಗಾವಣೆದಾರ ಕಂಪನಿ) ಇದನ್ನು ಹ್ಯಾಪಿಯೆಸ್ಟ್ ಮೈಂಡ್ಸ್ ಟೆಕ್ನಾಲಜೀಸ್ ಲಿಮಿಟೆಡ್ (ಅರ್ಜಿದಾರ ಕಂಪನಿ ನಂ.2/ವರ್ಗಾಯಿತ ಕಂಪನಿ) ಜೊತೆಗೆ ಮತ್ತು ಅವರವರ ಷೇರುದಾರರು ಮತ್ತು ಸಾಲಗಾರರ ವಿಲೀನೀಕರಣ ಯೋಜನೆ ("ಯೋಜನೆ") ಗೆ ಅನುಮೋದನೆಯನ್ನು ಕೋರಿ 24ನೇ ಏಪ್ರಿಲ್, 2025 ರಂದು ಅರ್ಜಿದಾರ ಕಂಪನಿಗಳು ಕಂಪನಿ ಕಾಯಿದೆ, 2013 ರ ಸೆಕ್ಷನ್ 230 ರಿಂದ 232 ರ ಅಡಿಯಲ್ಲಿ ಒಂದು ಜಂಟಿ ಕಂಪನಿ ಅರ್ಜಿಯನ್ನು ಸಲ್ಲಿಸಿವೆ, ಮತ್ತು ಈ ಅರ್ಜಿಯ ವಿಚಾರಣೆಯನ್ನು ಮಾನ್ಯ ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿ, ಬೆಂಗಳೂರು ಪೀಠದ ಮುಂದೆ 19ನೇ ಜೂನ್, 2025 ದಿನದಂದು ನಿಗದಿಪಡಿಸಲಾಗಿದೆ. ಸದರಿ ಅರ್ಜಿಯನ್ನು ಬೆಂಬಲಿಸಲು ಅಥವಾ ವಿರೋಧಿಸಲು ಬಯಸುವ ಯಾವುದೇ ವ್ಯಕ್ತಿಯು ತಮ್ಮ ಉದ್ದೇಶದ ಸೂಚನೆಯನ್ನು ಆಯಾ ಅರ್ಜಿದಾರ ಕಂಪನಿಗಳ ನೋಂದಾಯಿತ ಕಛೇರಿಗಳಿಗೆ ಕಳುಹಿಸಬೇಕು; ಸೂಚನೆಗೆ ಅವರು ಅಥವಾ ಅವರ ಅಡ್ವೊಕೇಟ್/ಪ್ರತಿನಿಧಿಯು ತಮ್ಮ ಹೆಸರು ಮತ್ತು ವಿಳಾಸ ಸಹಿತವಾಗಿ ಸಹಿ ಮಾಡಿರಬೇಕು. ಈ ಅರ್ಜಿಯ ನಿಗದಿತ ವಿಚಾರಣೆಯ ದಿನಾಂಕಕ್ಕಿಂತ ಕನಿಷ್ಠ ಎರಡು ದಿನಗಳ ಮೊದಲು ಅರ್ಜಿದಾರರ ನೋಂದಾಯಿತ ಕಛೇರಿಗಳನ್ನು ತಲುಪಬೇಕು. ಒಂದೊಮ್ಮೆ ಪಿಟಿಷನನ್ನು ವಿರೋಧಿಸಲು ಬಯಸುತ್ತಿದ್ದರೆ ತಮ್ಮ ವಿರೋಧಕ್ಕೆ ಇರುವ ಕಾರಣಗಳನ್ನು ಅಥವಾ ತಮ್ಮ ಅಫಿಡವಿಟ್‌ನ ಪ್ರತಿಯೊಂದನ್ನು ಅಂತಹ ಸೂಚನೆಯೊಂದಿಗೆ ಒದಗಿಸಬೇಕು. ಯಾವುದೇ ವ್ಯಕ್ತಿಯು ನಿಗದಿತ ಶುಲ್ಕಗಳನ್ನು ಪಾವತಿಸಿ ಕೋರಿದಲ್ಲಿ, ಇಲ್ಲಿ ಕೆಳಗೆ ಸಹಿ ಮಾಡಿದವರು ಪಿಟಿಷನ್‌ನ ಪ್ರತಿಯೊಂದನ್ನು ಅಂತಹವರಿಗೆ ಒದಗಿಸುತ್ತಾರೆ.

ಹ್ಯಾಪಿಯೆಸ್ಟ್ ಮೈಂಡ್ಸ್ ಎಡುಟೆಕ್ ಪ್ರೈವೇಟ್ ಲಿಮಿಟೆಡ್ (ಅರ್ಜಿದಾರ ಕಂಪನಿ 1/ ವರ್ಗಾವಣೆದಾರ ಕಂಪನಿ)	ಹ್ಯಾಪಿಯೆಸ್ಟ್ ಮೈಂಡ್ಸ್ ಟೆಕ್ನಾಲಜೀಸ್ ಲಿಮಿಟೆಡ್, (ಅರ್ಜಿದಾರ ಕಂಪನಿ 1/ ವರ್ಗಾಯಿತ ಕಂಪನಿ)
ಸಹಿ/- ನುಗ್ಗೇಹಳ್ಳಿ ಕೃಷ್ಣಮಾಚಾರ್ಯ ಶ್ರೀರಂಗನಾರಾಯಣನ್, ಅಧಿಕೃತ ಸಹಿದಾರ	ಸಹಿ/- ಪ್ರವೀಣಕುಮಾರ್ ದರ್ಶನಕರ್, ಅಧಿಕೃತ ಸಹಿದಾರ

ದಿನಾಂಕ: ಏಪ್ರಿಲ್ 30, 2025
ಸ್ಥಳ: ಬೆಂಗಳೂರು

ಬೇಸಿಗೆ ರಜೆ: ಹೆಚ್ಚುವರಿ ರೈಲು ಸಂಚಾರ

ಬೆಂಗಳೂರು: ಬೇಸಿಗೆ ರಜೆಯ ಪ್ರಯಾಣಿಕರ ದಟ್ಟಣೆಯನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ನೈಋತ್ಯ ರೈಲ್ವೆಯು ಎಕ್ಸ್‌ಪ್ರೆಸ್ ಹೆಚ್ಚುವರಿ ರೈಲು ಓಡಿಸಲು ನಿರ್ಧರಿಸಿದ್ದು, ಸರ್.ಎಂ.ವಿಶ್ವೇಶ್ವರಯ್ಯ ಟರ್ಮಿನಲ್ -ಬೆಳಗಾವಿ ನಡುವೆ ಎರಡು ಟ್ರಿಪ್‌ಗಳು, ಯಶವಂತಪುರ - ವಿಜಯಪುರ ಮತ್ತು ಎಸ್‌ಎಂವಿಟಿ ಬೆಂಗಳೂರು -ಮಧುರೈ ನಡುವೆ ತಲಾ ಒಂದು ಟ್ರಿಪ್ ಸೇರಿವೆ.

ರೈಲು ಸಂಖ್ಯೆ 06551 ಎಸ್‌ಎಂವಿಟಿ ಬೆಂಗಳೂರು -ಬೆಳಗಾವಿ ವಿಶೇಷ ವಿಶೇಷ ಎಕ್ಸ್‌ಪ್ರೆಸ್ ಸರ್ ಎಂ.ವಿಶ್ವೇಶ್ವರಯ್ಯ ಟರ್ಮಿನಲ್‌ನಿಂದ ಏ.30 ಮತ್ತು ಮೇ 2 ರಂದು ಸಂಜೆ 7 ಗಂಟೆಗೆ ಹೊರಟು, ಮರುದಿನ ಬೆಳಗ್ಗೆ 7.30ಕ್ಕೆ ಬೆಳಗಾವಿ ತಲುಪಲಿದೆ. ಹಿಂತಿರುಗುವ ಮಾರ್ಗದಲ್ಲಿ, ರೈಲು ಸಂಖ್ಯೆ 06552 ಬೆಳಗಾವಿ- ಎಸ್‌ಎಂವಿಟಿ ಬೆಂಗಳೂರು ವಿಶೇಷ ಎಕ್ಸ್‌ಪ್ರೆಸ್ ಬೆಳಗಾವಿಯಿಂದ ಮೇ 1 ಮತ್ತು 3ರಂದು ಸಂಜೆ 5.30ಕ್ಕೆ ಹೊರಟು, ಮರುದಿನ ಬೆಳಗಿನ ಜಾವ 4.30ಕ್ಕೆ ಸರ್.ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ತಲುಪಲಿದೆ.

ರೈಲು ಸಂಖ್ಯೆ 06561 ಯಶವಂತಪುರ - ವಿಜಯಪುರ ವಿಶೇಷ ಎಕ್ಸ್‌ಪ್ರೆಸ್ ಯಶವಂತಪುರದಿಂದ ಏ.30 ರಂದು ರಾತ್ರಿ 10 ಗಂಟೆಗೆ ಹೊರಟು, ಮರುದಿನ ಮಧ್ಯಾಹ್ನ 2.05ಕ್ಕೆ ವಿಜಯಪುರ ತಲುಪಲಿದೆ. ಹಿಂತಿರುಗುವ ಮಾರ್ಗದಲ್ಲಿ, ರೈಲು ಸಂಖ್ಯೆ 06562 ವಿಜಯಪುರ-ಯಶವಂತಪುರ ವಿಶೇಷ ಎಕ್ಸ್‌ಪ್ರೆಸ್ ವಿಜಯಪುರದಿಂದ ಮೇ 1ರಂದು ಸಂಜೆ 7 ಗಂಟೆಗೆ ಹೊರಟು, ಮರುದಿನ ಬೆಳಿಗ್ಗೆ 11.15 ಗಂಟೆಗೆ ಯಶವಂತಪುರ ತಲುಪಲಿದೆ.

ರೈಲು ಸಂಖ್ಯೆ 06521 ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರು - ಮಧುರೈ ವಿಶೇಷ ಎಕ್ಸ್‌ಪ್ರೆಸ್ ಬೆಂಗಳೂರಿನ ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್‌ನಿಂದ ಏ.30 ರಂದು ಸಂಜೆ 7ಗಂಟೆಗೆ ಹೊರಟು, ಮರುದಿನ ಬೆಳಗ್ಗೆ 6.15 ಗಂಟೆಗೆ ಮಧುರೈಯನ್ನು ತಲುಪಲಿದೆ. ಹಿಂತಿರುಗುವ ಮಾರ್ಗದಲ್ಲಿ, ರೈಲು ಸಂಖ್ಯೆ 06522 ಮಧುರೈ - ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ವಿಶೇಷ ಎಕ್ಸ್ ಪ್ರೆಸ್ ಮಧುರೈಯಿಂದ ಮೇ 1 ರಂದು ಬೆಳಗ್ಗೆ 9.10 ಗಂಟೆಗೆ ಹೊರಟು, ಅದೇ ದಿನ ಸಂಜೆ 7.50 ಗಂಟೆಗೆ ಸರ್.ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರು ತಲುಪಲಿದೆ.

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, **ಶ್ರೀಮತಿ. ಶೈಲಜಾ. ಕೆ ಮತ್ತು ಶ್ರೀ. ನಾರಾಯಣ ವರ್ಮ. ಸಿ** ಇವರುಗಳು ಕೆಳಗೆ ಷೆಡ್ಯೂಲ್‌ನಲ್ಲಿ ತಿಳಿಸಿರುವ ಸ್ಥಿರಾಸ್ತಿ ಸ್ವತ್ತಿಗೆ ಮಾಲೀಕರಾಗಿರುತ್ತಾರೆ ಮತ್ತು ಶ್ರೀ. ಸದಾಶಿವಯ್ಯ ಇವರು ಶ್ರೀ.ಕೆ.ಪ್ರಭಾಕರ್ ರೆಡ್ಡಿ ರವರ ಹೆಸರಿಗೆ ಬರೆದುಕೊಟ್ಟಿರುವ ಈ ಸ್ವತ್ತಿನ ಕ್ರಯ ಪತ್ರದ ದಿನಾಂಕ: 25-10-2007, ದಸ್ತಾವೇಜು ನಂ. 2846/ 2007-08, ಪುಸ್ತಕ -1, ಸಿ.ಡಿ.ನಂ. 11, ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು, ಬನ್ನೇರಘಟ್ಟ, ಉಪನೋಂದಣಿ ಕಚೇರಿಯಲ್ಲಿ ನೋಂದಣಿಯಾಗಿರುವ ಮೂಲ ಅಸಲಿ ಮಾರಾಟ ಪತ್ರವನ್ನು ಕಳೆದುಕೊಂಡಿರುತ್ತಾರೆ. ಈ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾರಾದರೂ ಸ್ವತ್ತಿನ ಮೇಲೆ ಸ್ವಾಧೀನವನ್ನು ಹೊಂದಿದ್ದರೆ, ಅದನ್ನು ಈ ದಿನಾಂಕದಿಂದ ನೋಟೀಸು ಪ್ರಕಟವಾದ ಏಳು ದಿನಗಳ ಒಳಗಾಗಿ ಕೆಳಸಹಿದಾರರಿಗೆ ತಲುಪಿಸಬೇಕೆಂದು ಈ ಮೂಲಕ ತಿಳಿಸಲಾಗಿದೆ.

ಷೆಡ್ಯೂಲ್ ಸ್ವತ್ತು

ಐಟಂ ನಂ.1: ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು, ಜಿಗಣಿ ಹೋಬಳಿ, ಹೆನ್ನಾಗರ ಗ್ರಾಮ ಪಂಚಾಯತ್, ಯರಂಡಹಳ್ಳಿ ಗ್ರಾಮದಲ್ಲಿರುವ ಕೃಷಿ ಭೂಮಿಯಿಂದ ಕೃಷಿಯೇತರ ಉದ್ದೇಶಕ್ಕಾಗಿ ಪರಿವರ್ತಿತವಾದ ಭೂಮಿಯ ಸರ್ವೆ ನಂ.29/5ಬಿ,ರಲ್ಲಿ ರಚಿಸಿರುವ ಸ್ವತ್ತಿನ ನಂ.328/ 1049/11, (ಆದೇಶ ಸಂಖ್ಯೆ : B.DIS.ALN.SR(A)51/93-94, ದಿನಾಂಕ : 04-05-1993) ಮತ್ತು ಸ್ವತ್ತಿನ ಬಿಯರಿಂಗ್ ನಂ. 1049/11, ಜಂಜಾರು ನಂ.328, ವೈಡ್ ಇ-ಖಾತಾ ನಂ.150200103200120321, ಮತ್ತು ಇದರ ವಿಸ್ತೀರ್ಣ : ಪೂರ್ವದಿಂದ ಪಶ್ಚಿಮಕ್ಕೆ 45 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ 38-0 ಅಡಿ, ಸಂಪೂರ್ಣವಾಗಿ 1710 ಚದರ ಅಡಿ ಇರುವ ಈ ಸಂಪೂರ್ಣ ಸ್ವತ್ತಿಗೆ ಚಕ್ಕುಬಂಧಿ:- ಪೂರ್ವದಿಂದ: ಖಾಸಗಿ ಆಸ್ತಿ, ಪಶ್ಚಿಮಕ್ಕೆ: ಸೈಟ್ ಸಂಖ್ಯೆ 1051/13, ಉತ್ತರಕ್ಕೆ: ಸೈಟ್. ನಂ.1050/12, ದಕ್ಷಿಣಕ್ಕೆ: ರಸ್ತೆ.

ಐಟಂ ನಂ.2: ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು, ಜಿಗಣಿ ಹೋಬಳಿ, ಹೆನ್ನಾಗರ ಗ್ರಾಮ ಪಂಚಾಯತ್, ಯರಂಡಹಳ್ಳಿ ಗ್ರಾಮದಲ್ಲಿರುವ ಕೃಷಿ ಭೂಮಿಯಿಂದ ಕೃಷಿಯೇತರ ಉದ್ದೇಶಕ್ಕಾಗಿ ಪರಿವರ್ತಿತವಾದ ಭೂಮಿಯ ಸರ್ವೆ ನಂ.29/5ಬಿ,ರಲ್ಲಿ ರಚಿಸಿರುವ ಸ್ವತ್ತಿನ ನಂ.328/ 1050/12, (ಆದೇಶ ಸಂಖ್ಯೆ : B.DIS.ALN.SR(A)51/93-94, ದಿನಾಂಕ : 04-05-1993) ಮತ್ತು ಸ್ವತ್ತಿನ ಬಿಯರಿಂಗ್ ನಂ. 1050/12, ಜಂಜಾರು ನಂ.328, ವೈಡ್ ಇ-ಖಾತಾ ನಂ.150200103200120286 ಮತ್ತು ಇದರ ವಿಸ್ತೀರ್ಣ : ಪೂರ್ವದಿಂದ ಪಶ್ಚಿಮಕ್ಕೆ 45 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ (66 + 48)/2 ಅಡಿ, ಸಂಪೂರ್ಣವಾಗಿ 1282 ಚದರ ಅಡಿ ಇರುವ ಈ ಸಂಪೂರ್ಣ ಸ್ವತ್ತಿಗೆ ಚಕ್ಕುಬಂಧಿ:- ಪೂರ್ವದಿಂದ: ಖಾಸಗಿ ಸ್ವತ್ತು, ಪಶ್ಚಿಮಕ್ಕೆ: ಸೈಟ್ ಸಂಖ್ಯೆ 1051/13, ಉತ್ತರಕ್ಕೆ: ಕೆಂಪಣ್ಣನವರಿಗೆ ಸೇರಿದ ಸ್ವತ್ತು ಮತ್ತು ಖಾಸಗಿ ಸ್ವತ್ತು, ದಕ್ಷಿಣಕ್ಕೆ: ಸ್ವತ್ತು ನಂ.1049/11.

ಎನ್ ಜಗದೀಶ್ ಕುಮಾರ್, ವಕೀಲರು
ನಂ.30/1, 2ನೇ ಮಹಡಿ, 7ನೇ ಕ್ರಾಸ್,
ಎನ್.ಆರ್.ಕಾಲೋನಿ ಬಸ್ ನಿಲ್ದಾಣದ ಹತ್ತಿರ,
ಹೋಟೆಲ್ ದ್ವಾರಕ ಎದುರು, ಬೆಂಗಳೂರು-560019.

ಮನೆಗಳ್ಳತನ: ಇಬ್ಬರು ಮಹಿಳೆಯರ ಬಂಧನ

ಬೆಂಗಳೂರು: ಆಟೋ ಚಲಾಯಿಸಿಕೊಂಡು ಬಂದು ಮನೆಗಳಲ್ಲಿ ಕಳ್ಳತನ ಮಾಡುತ್ತಿದ್ದ ಇಬ್ಬರು ಮಹಿಳೆಯರನ್ನು ಬೊಮ್ಮನಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ. ನಿಲೋಫರ್ ಹಾಗೂ ಶಬ್ರೀನ್ ತಾಜ್ ಬಂಧಿತ ಆರೋಪಿಗಳು. ಬಂಧಿತರಿಂದ 130 ಗ್ರಾಂ ಚಿನ್ನಾಭರಣ ಹಾಗೂ 1 ಆಟೋ ರಿಕ್ಷಾವನ್ನು ವಶಕ್ಕೆ ಪಡೆದುಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಪುರುಷರಂತೆ ವೇಷ ಧರಿಸಿ ಆಟೋ ಚಲಾಯಿಸುತ್ತಿದ್ದ ನಿಲೋಫರ್, ಮನೆ ಅಂಗಡಿಗಳಲ್ಲಿ ಚಿನ್ನಾ ಭರಣ, ನಗದು ಕಳ್ಳತನ ಮಾಡುತ್ತಿದ್ದಳು. ಅಂಗಡಿಗೆ ಹೊಂದಿಕೊಂಡಂತಿರುವ ಮನೆಯೊಂದರಲ್ಲಿ ಕೈಚಳಕ ತೋರಿದ್ದ ನಿಲೋಫರ್‌ಳನ್ನು ಕಳೆದ ವರ್ಷ ಆಗಸ್ಟ್‌ನಲ್ಲಿ ಬಾಗಲಗುಂಟೆ ಠಾಣೆ ಪೊಲೀಸರು ಬಂಧಿಸಿ ಜೈಲಿಗಟ್ಟಿದ್ದರು.

ಜೈಲಿನಿಂದ ಹೊರಬಂದ ಬಳಿಕ ಶಬ್ರೀನ್ ತಾಜ್‌ಳೊಂದಿಗೆ ಸೇರಿದ್ದ ನಿಲೋಫರ್, ಮತ್ತದೇ ಕಳ್ಳತನದ ಚಾಳಿ ಮುಂದುವರಿಸಿದ್ದಳು. ಮಾ.17ರಂದು ಇಬ್ಬರೂ ಸೇರಿ ಹಾಡಹಗಲೆ ಬೊಮ್ಮನಹಳ್ಳಿ ವ್ಯಾಪ್ತಿಯ ಮನೆಯೊಂದರ ಮುಂಬಾಗಿಲಿನ ಬೀಗ ಮುರಿದಿದ್ದ ಆರೋಪಿಗಳು, 130 ಗ್ರಾಂ ಚಿನ್ನಾಭರಣ ಹಾಗೂ 3 ಲಕ್ಷ ನಗದು ದೋಚಿ ಪರಾರಿಯಾಗಿದ್ದರು. ಮನೆ ಮಾಲೀಕ ನೀಡಿದ ದೂರಿನನ್ವಯ ಪ್ರಕರಣ ದಾಖಲಿಸಿಕೊಂಡ ಬೊಮ್ಮನಹಳ್ಳಿ ಠಾಣೆ ಪೊಲೀಸರು, ಇಬ್ಬರೂ ಆರೋಪಿಗಳನ್ನು ಬಂಧಿಸಿದ್ದಾರೆ. ಆರೋಪಿಗಳು ಮೈಕೋ ಲೇಔಟ್ ಠಾಣೆ ವ್ಯಾಪ್ತಿಯಲ್ಲಿಯೂ ಮನೆಗಳ್ಳತನ ಮಾಡಿರುವುದು ಪೊಲೀಸರ ತನಿಖೆಯಿಂದ ತಿಳಿದು ಬಂದಿದೆ. ಬಂಧಿತರು ಕದ್ದ ಚಿನ್ನಾಭರಣಗಳನ್ನ ಅಡವಿಟ್ಟಿದ್ದ ಡಿ.ಜೆ.ಹಳ್ಳಿ, ಟ್ಯಾನರಿ ರಸ್ತೆಯಲ್ಲಿರುವ ಜ್ಯೂವೆಲ್ಲರಿ ಅಂಗಡಿಗಳಿಂದ 130 ಗ್ರಾಂ ಚಿನ್ನಾಭರಣಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದರು.

ಸಮಾಚಾರ ಸಣ್ಣದಲ್ಲ

ತೆರಿಗೆ ಪಾವತಿ ಅವಧಿ ವಿಸ್ತರಣೆ

ಬೆಂಗಳೂರು: ಆಸ್ತಿ ತೆರಿಗೆಯನ್ನು ಸಂಪೂರ್ಣವಾಗಿ ಪಾವತಿಸುವ ತೆರಿಗೆದಾರರಿಗೆ ಬಿಬಿಎಂಪಿಯು ಶೇ.5ರಷ್ಟು ರಿಯಾಯಿತಿಯೊಂದಿಗೆ ಮೇ.21ರ ವರೆಗೆ ಅವಧಿ ವಿಸ್ತರಣೆ ಮಾಡಿದೆ. 2025-26ನೇ ಸಾಲಿನಲ್ಲಿ ಆಸ್ತಿ ತೆರಿಗೆಯನ್ನು ಸಂಪೂರ್ಣವಾಗಿ ಪಾವತಿಸುವ ತೆರಿಗೆದಾರರಿಗೆ ಶೇ.5ರಷ್ಟು ರಿಯಾಯಿತಿ ನೀಡುವ ಅವಧಿಯನ್ನು ಮೇ.21ರವರೆಗೆ ವಿಸ್ತರಿಸಿ ಆದೇಶಿಸಿದ್ದು, ಪಾಲಿಕೆ ವ್ಯಾಪ್ತಿಯ ಸಾರ್ವಜನಿಕರ ಅನುಕೂಲಕ್ಕಾಗಿ ಹಾಗೂ ಬಿಬಿಎಂಪಿಯ ಆರ್ಥಿಕ ಹಿತದೃಷ್ಟಿಯಿಂದ ಆಸ್ತಿ ತೆರಿಗೆಯನ್ನು ಸಂಪೂರ್ಣವಾಗಿ ಪಾವತಿಸುವವರಿಗೆ ರಿಯಾಯಿತಿ ನೀಡುವ ಅವಧಿಯನ್ನು ಒಂದು ತಿಂಗಳವರೆಗೆ ಬಿಬಿಎಂಪಿ ವಿಸ್ತರಿಸಲಾಗಿದೆ. ಈ ಕುರಿತು ನಗಾರಾಭಿವೃದ್ಧಿ ಇಲಾಖೆಯ (ಬಿಬಿಎಂಪಿ) ಸರಕಾರದ ಅಧೀನ ಕಾರ್ಯದರ್ಶಿ ಲಕ್ಷ್ಮೀ ಸಾಗರ ಎನ್ .ಕೆ. ಆದೇಶದಲ್ಲಿ ಉಲ್ಲೇಖಿಸಿದ್ದಾರೆ. ಆನ್ ಲೈನ್ ಮೂಲಕ ಆಸ್ತಿ ತೆರಿಗೆ ಪಾವತಿಸುವವರು ಅಧಿಕೃತ ಜಾಲತಾಣ https://bbmptax.karnataka.gov.in/ ಗೆ ಭೇಟಿ ನೀಡಬಹುದು.

ಓರಾದಲ್ಲಿ ಭರ್ಜರಿ ರಿಯಾಯಿತಿ

ಬೆಂಗಳೂರು: ಅಕ್ಷಯ ತೃತೀಯ ದಿನದ ಪ್ರಯುಕ್ತ ಓರಾ ಚಿನ್ನದ ಆಭರಣದ ಮೇಲೆ ಭರ್ಜರಿ ರಿಯಾಯಿತಿ ನೀಡುತ್ತಿದೆ. ಪ್ರಸ್ತುತ ನಡೆಯುತ್ತಿರುವ ವಾರ್ಷಿಕ ಮಾರಾಟದಲ್ಲಿ ನಿಯಮ ಹಾಗೂ ನಿಬಂಧನೆಳ ಅನ್ವಯದೊಂದಿಗೆ ವಜ್ರದ ಮೌಲ್ಯದ ಮೇಲೆ ಶೇ.25 ರಷ್ಟು ಕಡಿತ, ಇಎಂಐ ಸೌಲಭ್ಯದ ಮೇಲೆ ಶೇ.0 ರಷ್ಟು ಬಡ್ಡಿ, ಹಳೆಯ ವಜ್ರಾಭರಣ ವಿನಿಮಯದ ಮೇಲೆ ಶೇ.0 ರಷ್ಟು ಕಡಿತ ಸಿಗಲಿದೆ. ಈ ಹೊಸ ಸಂಗ್ರಹವು ನೆಕ್ಲೇಸ್ ಸೆಟ್, ಇಯರ್ ರಿಂಗ್, ಪೆಂಡೆಂಟ್, ರಿಂಗ್ ಮತ್ತು ಚೈನ್‌ಗಳನ್ನು ಹೊಂದಿದೆ. ಹತ್ತಿರದ ಓರಾ ಫೈನ್ ಜ್ಯುವೆಲ್ಲರಿ ಮಳಿಗೆಗೆ ಭೇಟಿ ನೀಡಿ ಹೆಚ್ಚುವರಿ ವಿಶೇಷ ರಿಯಾಯಿತಿ ಪಡೆಯಬಹುದಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಉಪಾಧ್ಯಕ್ಷೆಯಾಗಿ ಡಾ.ಲತಾ ನೇಮಕ

ಬೆಂಗಳೂರು: ಭಾರತೀಯ ಸಾರ್ವಜನಿಕ ಸಂಪರ್ಕ

ಮಂಡಳಿಗೆ ಡಾ.ಲತಾರನ್ನು ಹಿರಿಯ ಕಾರ್ಯ ನಿರ್ವಾಹಕ ಉಪಾಧ್ಯಕ್ಷೆಯನ್ನಾಗಿ ನೇಮಕ ಮಾಡಿ ಆದೇಶಿಸಲಾಗಿದೆ. ಕೆಎಸ್‌ಆರ್‌ಟಿಸಿಯ ಸಾರ್ವಜನಿಕ ಸಂಪರ್ಕ ಅಧಿಕಾರಿ ಡಾ. ಲತಾ ಟಿ.ಎಸ್. ಅವರನ್ನು ತಕ್ಷಣದಿಂದಲೇ ಜಾರಿಗೆ ಬರುವಂತೆ ಭಾರತೀಯ ಸಾರ್ವಜನಿಕ ಸಂಪರ್ಕ ಮಂಡಳಿ ಅವರನ್ನು ನೇಮಿಸಲಾಗಿದ್ದು, ಈ ಕುರಿತು ಭಾರತೀಯ ಸಾರ್ವಜನಿಕ ಸಂಪರ್ಕ ಮಂಡಳಿಯ ಗೌರವಾಧ್ಯಕ್ಷ ಎಂ.ಬಿ.ಜಯರಾಂ ಹಾಗೂ ರಾಷ್ಟ್ರೀಯ ಕಾರ್ಯಕಾರಿಣಿಯ ಅಧ್ಯಕ್ಷೆ ಗೀತಾ ಶಂಕರ್ ಈ ಕುರಿತು ಪ್ರಕಟಣೆ ಮೂಲಕ ಮಾಹಿತಿ ನೀಡಿದ್ದಾರೆ. ಪಿಆರ್‌ಎಸ್‌ಐ ದೇಶದಲ್ಲಿ ಒಟ್ಟು 85 ಶಾಖೆಗಳನ್ನು ಹೊಂದಿದೆ. ಅದೇ ರೀತಿ ಸಿಂಗಾಪುರ, ಲಂಡನ್, ಶ್ರೀಲಂಕಾ, ದುಬೈ ನೇಪಾಳ, ಆಸ್ಟ್ರೇಲಿಯಾ, ಅಮೆರಿಕಾದಲ್ಲೂ ಅಂತಾರಾಷ್ಟ್ರೀಯ ಶಾಖೆಗಳಿವೆ. ಇನ್ನು ದೇಶದ 70ಕ್ಕೂ ಅಧಿಕ ಕಾಲೇಜಿಗಳಲ್ಲಿ ಮಂಡಳಿಯು ತನ್ನ ವ್ಯಾಪ್ತಿಯನ್ನು ವಿಸ್ತರಿಸಿದೆ ಎಂದು ಪ್ರಕಟಣೆಯಲ್ಲಿ ಉಲ್ಲೇಖಿಸಿದ್ದಾರೆ.

ವಾಸ್ತವತೆ ಬಗ್ಗೆ ಯಾರೂ ಮಾತಾಡುತ್ತಿಲ್ಲ

ಬೆಂಗಳೂರು: ಯಾವುದೋ ಕೆರೆಯನ್ನು ತೋರಿಸಿ, ಪಾಕಿಸ್ತಾನಕ್ಕೆ ಹರಿಯುತ್ತಿದ್ದ ಸಿಂಧೂ ನದಿಯನ್ನು ತಡೆಯಲಾಗಿದೆ ಎಂದು ಹೇಳಿಕೊಂಡು ಓಡಾಡುತ್ತಿದ್ದಾರೆ ಎಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ವ್ಯಂಗ್ಯವಾಡಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪಾಕಿಸ್ತಾನಕ್ಕೆ ನೀರು ನಿಲ್ಲಿಸಲು ಸಾಧ್ಯವಿದೆಯೇ? ಈ ಬಗ್ಗೆ ಪರಾಮರ್ಶೆ ಆಗಿದೆಯೇ? ಸರಕಾರ ನಿರ್ಣಯ ತೆಗೆದುಕೊಳ್ಳುವ ಮೊದಲೇ ಮಾಧ್ಯಮಗಳಿಗೆ ಸುದ್ದಿ ನೀಡಲಾಗುತ್ತಿದೆ. ವಾಸ್ತವ ವಿಷಯ ಮರೆಮಾಚಿ, ಜನರ ದಾರಿ ತಪ್ಪಿಸಲು ಇಂತಹ ವಿಚಾರ ಚರ್ಚೆಗೆ ಬರುತ್ತಿದೆ. ಪಾಕಿಸ್ತಾನಕ್ಕೆ ನೀರು ಹೋಗುತ್ತಿಲ್ಲ ಎಂದು ಯಾವುದೋ ಕೆರೆ ನೀರು ತೋರಿಸುತ್ತಿದ್ದಾರೆ. ಪುಲ್ವಾಮಾ ದಾಳಿ ಬಗ್ಗೆ ಬಿಜೆಪಿಯವರು ಯಾರೂ ಈಗ ಮಾತನಾಡುತ್ತಿಲ್ಲ. ಪಹಲ್ಗಾಮ್ ದಾಳಿ ಮುಂದಿಟ್ಟು ಮುಂಬರುವ ಬಿಹಾರ ಚುನಾವಣೆ ಎದುರಿಸಲು ಬಿಜೆಪಿಯವರು ಹೊರಟಿದ್ದಾರೆ ಎಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ಟೀಕಿಸಿದರು.

ವಿರಾಮ
ಪ್ರತಿ ಭಾನುವಾರ

{ ಆರ್.ಅಶೋಕ } ವಿರೋಧ ಪಕ್ಷದ ನಾಯಕ

ಭಯೋತ್ಪಾದಕರು ಧರ್ಮ ನೋಡಿ ಸಾಯಿಸಿಲ್ಲ ಎಂದಾದರೆ ಕಾಂಗ್ರೆಸ್‌ನವರು ಮಾಧ್ಯಮಗಳು ಹಾಗೂ ಸಂತ್ರಸ್ತರ ವಿರುದ್ಧ ಪ್ರಕರಣ ದಾಖಲಿಸಲಿ. ಇಲ್ಲವಾದರೆ ಮಂಡಿಯೂರಿ ಕ್ಷಮೆ ಯಾಚಿಸಲಿ. ಪಾಕಿಸ್ತಾನದ ಪರವಾದ ಹೇಳಿಕೆ ನೀಡುವವರು ದೇಶದ್ರೋಹಿಗಳು.

ಚಾಲಕರಹಿತ ಪ್ರೊಟೋಟೈಪ್ ಮೂರನೇ ರೈಲಿನ ಆಗಮನದ ಬಳಿಕ ಸೇವೆ ಆರಂಭವಾಗುವ ಸಾಧ್ಯತೆ

ತಿಂಗಳಲ್ಲೇ ಹಳದಿ ಮಾರ್ಗದಲ್ಲಿ ಸಂಚಾರ ಆರಂಭ?

ಬೆಂಗಳೂರು: ಬಹುನಿರೀಕ್ಷಿತ ಹಳದಿ ಮಾರ್ಗ ಕೆಲ ತಿಂಗಳಿನಲ್ಲೇ ಆರಂಭವಾಗಲಿದ್ದು, ಮೇ ಅಂತ್ಯ ಅಥವಾ ಜೂನ್ ಆರಂಭದಲ್ಲಿ ಮೆಟ್ರೋ ಕಾರ್ಯ ನಿರ್ವಹಿಸುವ ಸಾಧ್ಯತೆಯಿದೆ ಎಂದು ಹೇಳಲಾಗುತ್ತಿದೆ.

ಬೊಮ್ಮಸಂದ್ರ ಹಾಗೂ ಆರ್.ವಿ ರಸ್ತೆಯವರಗೆ ಮೆಟ್ರೋ ಮಾರ್ಗದಲ್ಲಿ ರೈಲು ಸಂಚಾರ ಆರಂಭಕ್ಕೆ ಕನಿಷ್ಟ ಮೂರು ರೈಲುಗಳ ಅಗತ್ಯವಿದ್ದು, ಈಗಾಗಲೇ ಚಾಲಕರಹಿತ ಎಂಜಿನ್‌ನ ಎರಡು ಪ್ರೊಟೋ ಟೈಪ್ ರೈಲನ್ನು ಪೂರೈಸಲಾಗಿದ್ದು, ಇನ್ನುಳಿದ ಮೂರನೇ ರೈಲಿಗೆ ನಮ್ಮ ಮೆಟ್ರೋ ಕಾಯುತ್ತಿದೆ. ಚಾಲಕರಹಿತ ಪ್ರೊಟೋಟೈಪ್ ರೈಲಿನ ಆಗಮದ ಬಳಿಕ ಸೇವೆ ಆರಂಭವಾಗುವ ಸಾಧ್ಯತೆಯಿದೆ ಎಂದು ಹೇಳಲಾಗುತ್ತಿದೆ. ನಮ್ಮ ಮೆಟ್ರೋ ಹಳದಿ ಮಾರ್ಗ ಬೊಮ್ಮಸಂದ್ರದಿಂದ ಆರ್.ವಿ. ರಸ್ತೆವರೆಗೆ ವಿಸ್ತರಿಸಲಾದ ಹಳದಿ ಮೆಟ್ರೋ ಮಾರ್ಗವು 18.8 ಕಿ.ಮೀ ಉದ್ದವಿದ್ದು, ದಕ್ಷಿಣ ಬೆಂಗಳೂರು ಮತ್ತು ನಗರ ಕೇಂದ್ರದ ನಡುವಿನ ಸಂಚಾರಕ್ಕೆ ಪ್ರಮುಖ ಸಂಪರ್ಕವನ್ನು ನೀಡುತ್ತದೆ. ಈ ಮಾರ್ಗದಲ್ಲಿ ಬೊಮ್ಮಸಂದ್ರ, ಹೆಬ್ಬಗೋಡಿ, ಹುಸ್ಕೂರು ರಸ್ತೆ, ಇನ್ಫೋಸಿಸ್ ಫೌಂಡೇಶನ್ (ಕೋನಪ್ಪನ ಅಗ್ರಹಾರ), ಎಲೆಕ್ಟ್ರಾನಿಕ್ ಸಿಟಿ, ಬೆರಟೇನ ಅಗ್ರಹಾರ, ಹೊಸ ರಸ್ತೆ, ಸಿಂಗಸಂದ್ರ, ಕೂಡ್ಲು ಗೇಟ್, ಹೊಂಗಸಂದ್ರ, ಬೊಮ್ಮನಹಳ್ಳಿ, ಸೆಂಟ್ರಲ್ ಸಿಲ್ಕ್ ಬೋರ್ಡ್, ಬಿಟಿಎಂ ಲೇಔಟ್, ಜಯದೇವ ಆಸ್ಪತ್ರೆ, ರಾಗಿಗುಡ್ಡ ಮತ್ತು ಆರ್.ವಿ. ರಸ್ತೆ 16 ನಿಲ್ದಾಣಗಳಿದ್ದು, ಈ ಮಾರ್ಗದಲ್ಲಿ ಐಟಿ ಉದ್ಯೋಗಿ ಕೆಲಸಕ್ಕೆ ಹೋಗುವ ಎಲೆಕ್ಟ್ರಾನಿಕ್ ಸಿಟಿ ಸೇರಿದಂತೆ ದಕ್ಷಿಣ ಬೆಂಗಳೂರಿನ ಜನಸಂಚಾರ ಪ್ರದೇಶದ ಕೇಂದ್ರವನ್ನು ಈ ಮಾರ್ಗವು ಸಂಪರ್ಕಿಸಲಿದೆ. ಹಳದಿ ಮಾರ್ಗದಲ್ಲಿ ರೈಲು ಸಂಚಾರ ಪ್ರಾರಂಭದ ತಯಾರಿ ಅಂತಿಮ ಹಂತದಲ್ಲಿದೆ. ಆರಂಭಿಕ ದಿನಗಳಲ್ಲಿ ರೈಲುಗಳು ಪ್ರತಿ ಅರ್ಧ ಗಂಟೆಗೆ ಒಮ್ಮೆ ಸಂಚರಿಸಲಿದ್ದು, ಈ ಹಂತದಲ್ಲೇ ದಿನಕ್ಕೆ 50,000 ಜನರು ಈ ಮಾರ್ಗದಲ್ಲಿ ಪ್ರಯಾಣಿಸುವ ನಿರೀಕ್ಷೆ ಇದೆ. ಮೆಟ್ರೋ ಅಧಿಕಾರಿಗಳ ಅಂದಾಜು ಪ್ರಕಾರ, ಈ ಮಾರ್ಗವು ಸಂಪೂರ್ಣ ಪ್ರಮಾಣದಲ್ಲಿ ಕಾರ್ಯಾರಂಭ ಮಾಡಿದಾಗ, ದಿನಕ್ಕೆ ಸುಮಾರು 3.5 ಲಕ್ಷ ಜನರಿಗೆ ಪ್ರಯೋಜನವಾಗಲಿದೆ. ಪ್ರಮುಖವಾಗಿ ಎಲೆಕ್ಟ್ರಾನಿಕ್ ಸಿಟಿ ಮತ್ತು ಸುತ್ತಮುತ್ತಲಿನ ಐಟಿ ಉದ್ಯೋಗಿಗಳು ಹಾಗೂ ದಕ್ಷಿಣ ಬೆಂಗಳೂರು ನಿವಾಸಿಗಳಿಗೆ ಇದು ಪ್ರಮುಖ ಸಂಚಾರ ಮಾರ್ಗವಾಗುತ್ತದೆ ಎಂದು ಹೇಳಿದ್ದಾರೆ.

ಮುದ್ರಾ ವೆಂಚರ್ಸ್ ಮತ್ತು ಲೋಕೇಶ್ ಔಟ್‌ಡೋರ್ ಸಂಸ್ಥೆಗಳೊಂದಿಗೆ ಈ ಸಹಕಾರದ ಮೂಲಕ, ನಮ್ಮ ಮೆಟ್ರೋ ವಿಶ್ವಮಟ್ಟದ ಮೆಟ್ರೋ ಸೇವೆಗಳನ್ನು ನೀಡುವುದರ ಜತೆಗೆ ನೂತನ ವ್ಯಾಪಾರ ಮಾದರಿಗಳನ್ನು ಅಳವಡಿಸಿಕೊಂಡು ಆರ್ಥಿಕ ಶಾಶ್ವತತೆಯನ್ನು ಖಚಿತಪಡಿಸಲು ಮತ್ತು ನಗರ ಮೂಲಸೌಕರ್ಯ ಅಭಿವೃದ್ಧಿಗೆ ಮುಂದಾಗುತ್ತದೆ.

-ಎಂ. ಮಹೇಶ್ವರ ರಾವ್, ವ್ಯವಸ್ಥಾಪಕ ನಿರ್ದೇಶಕ, ನಮ್ಮ ಮೆಟ್ರೋ

2 ಸಂಸ್ಥೆಗಳೊಂದಿಗೆ ಮೆಟ್ರೋ ಜಾಹೀರಾತು ಒಪ್ಪಂದ

ಬೆಂಗಳೂರು: ಬೆಂಗಳೂರು ಮೆಟ್ರೋ ರೈಲು ನಿಲ್ದಾಣಗಳು, ಆವರಣಗಳು ಮತ್ತು ರೈಲುಗಳ ಒಳಭಾಗದಲ್ಲಿ ಜಾಹೀರಾತು ಪ್ರದರ್ಶನದ ಕುರಿತು ನಮ್ಮ ಮೆಟ್ರೋವು ಎರಡು ಸಂಸ್ಥೆಗಳೊಂದಿಗೆ ವಾರ್ಷಿಕ 3.5 ಕೋಟಿ ರು. ಒಪ್ಪಂದ ಮಾಡಿಕೊಂಡಿದೆ.

ಈ ಕುರಿತು ಪ್ರಕಟಣೆ ಹೊರಡಿಸಿರುವ ನಮ್ಮ ಮೆಟ್ರೋ , ಜಾಹೀರಾತು ಆದಾಯ ಗಳಿಕೆಗಾಗಿ ಬಿಎಂಆರ್‌ಸಿಎಲ್ ಮುದ್ರಾ ವೆಂಚರ್ಸ್ ಮತ್ತು ಲೋಕೇಶ್ ಔಟ್‌ಡೋರ್ ಜತೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ. ನೇರಳೆ ಮಾರ್ಗ ಮತ್ತು ಹಸಿರು ಮಾರ್ಗದ ರೈಲುಗಳಲ್ಲಿ ಜಾಹೀರಾತು ಹಕ್ಕುಗಳಿಗಾಗಿ ಕ್ರಮವಾಗಿ ಮುದ್ರಾ ವೆಂಚರ್ಸ್ ಮತ್ತು ಲೋಕೇಶ್ ಔಟ್ ಡೋರ್ ಸಂಸ್ಥೆಗಳೊಂದಿಗೆ ಪ್ರತ್ಯೇಕ ಒಪ್ಪಂದಗಳಿಗೆ 7 ವರ್ಷಕ್ಕೆ ಒಂಡಂಬಡಿಕೆ ಮಾಡಿಕೊಳ್ಳಲಾಗಿದೆ. ಈ ಸಹಕಾರದಿಂದ ಸುಮಾರು 25 ಕೋಟಿ ರು. ಆದಾಯ ನಿರೀಕ್ಷೆಯಲ್ಲಿದ್ದು, ಬೆಂಗಳೂರು ಮೆಟ್ರೋ ಮಾರ್ಗಗಳಲ್ಲಿ ಕಂಡುಬರುವ ಹೆಚ್ಚಿನ ಪ್ರಯಾಣಿಕ ಸಂಖ್ಯೆಯ ಲಾಭವನ್ನು ತೆಗೆದುಕೊಳ್ಳುವ ಗುರಿಯಿದೆ ಎಂದು ಹೇಳಿದೆ. ಈ ಒಪ್ಪಂದಲ್ಲಿ ರೈಲು ರಾಪಿಂಗ್ ಹಾಗೂ ರೈಲಿನ ಒಳಾಂಗಣ ಜಾಹೀರಾತು ಸೇರಿದಂತೆ ವಿವಿಧ ಜಾಹೀ ರಾತು ಮಾಧ್ಯಮಗಳ ಬಳಕೆಯು ನಡೆಯಲಿದೆ. ಇದರ ಮೂಲಕ ಬ್ರಾಂಡ್‌ಗಳು ಮೆಟ್ರೋದಲ್ಲಿ ಪ್ರತಿದಿನ ಪ್ರಯಾಣಿಸುವ ಲಕ್ಷಾಂತರ ಜನರಿಗೆ ತಲುಪುವ ಅಪರೂಪದ ಅವಕಾಶವನ್ನು ಪಡೆಯಲಿವೆ. ಬಿಎಂಆರ್‌ಸಿಎಲ್ ತನ್ನ ಟಿಕೆಟ್ ಮಾರಾಟದ ಆದಾಯವಲ್ಲದೆ ಬದಲಿಯಾಗಿ ಶಾಶ್ವತ ಆದಾಯ ಮಾರ್ಗಗಳನ್ನು ಹುಡುಕುವ ಪ್ರಯತ್ನದ ಭಾಗವಾಗಿ ಈ ಕ್ರಮವನ್ನು ಕೈಗೊಂಡಿದೆ.

ಟ್ರಾನ್ಸಿಟ್ ಮೀಡಿಯಾ ಕ್ಷೇತ್ರದಲ್ಲಿ ಪರಿಣತಿಯನ್ನು ಹೊಂದಿರುವ ಮುದ್ರಾ ವೆಂಚರ್ಸ್ ಮತ್ತು ಲೋಕೇಶ್ ಔಟ್‌ಡೋರ್ , ನೇರಳೆ ಮತ್ತು ಹಸಿರು ಮಾರ್ಗಗಳಲ್ಲಿ ಆಕರ್ಷಕ ವಿನ್ಯಾಸ ಹಾಗೂ ನವೀನ ಜಾಹೀರಾತು ಮಾದರಿಗಳನ್ನು ಪರಿಚಯಿಸುವ ಮೂಲಕ ಬೆಂಗಳೂರು ಮೆಟ್ರೋ ವ್ಯವಸ್ಥೆಯನ್ನು ಇನ್ನಷ್ಟು ಜೀವನವಾದ ಸಾರ್ವಜನಿಕ ಸ್ಥಳವನ್ನಾಗಿ ಮಾಡಲಿದ್ದಾರೆ.

ಅಕ್ರಮ ಬಾಂಗ್ಲಾದೇಶಿಗರನ್ನು ಹೊರ ಹಾಕಿ

ಬೆಂಗಳೂರು: ರಾಜ್ಯದ ಸಲೂನ್ ಹಾಗೂ ಕಟ್ಟಿಂಗ್ ಶಾಪ್‌ಗಳಲ್ಲಿ ಬಾಂಗ್ಲಾದೇಶಿಗಳ ಸಂಖ್ಯೆ ಹೆಚ್ಚಾಗುತ್ತಿದ್ದು, ಅಕ್ರಮವಾಗಿ ನೆಲೆಸಿ ಕ್ಷೌರಿಕರ ವೃತ್ತಿಯಲ್ಲಿ ತೊಡಗಿಕೊಂಡಿರುವಂತವರನ್ನು ಹೊರ ಹಾಕುವ ನಿಟ್ಟಿನಲ್ಲಿ ರಾಜ್ಯ ಸರಕಾರ ಕ್ರಮ ಕೈಗೊಳ್ಳಬೇಕು ಎಂದು ಕರ್ನಾಟಕ ಸವಿತಾ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಎಸ್ ನರೇಶ್ ಕುಮಾರ್ ಆಗ್ರಹಿಸಿದ್ದಾರೆ.

ಈ ಬಗ್ಗೆ ಪತ್ರಿಕಾ ಹೇಳಿಕೆ ಮಾಡಿರುವ ಅವರು, ರಾಜ್ಯದಲ್ಲಿ ಸವಿತಾ ಸಮುದಾಯದ ಮೂಲ ವೃತ್ತಿ ಬಾಂಧವರು, ಕ್ಷೌರಿಕ ವೃತ್ತಿಯಿಂದ ವಿಮುಖರಾಗುತ್ತಿರುವುದು ಕಳವಳಕಾರಿ ಅಂಶವಾಗಿದೆ. ಬಹುತೇಕ ಜನರು ತಮ್ಮ ಸಲೂನ್ ಹಾಗೂ ಕಟ್ಟಿಂಗ್ ಶಾಪ್‌ಗಳಲ್ಲಿ ಉತ್ತರ ಭಾರತೀಯರೆಂದು ಬಿಂಬಿಸಿಕೊಳ್ಳುತ್ತಿರುವ ಬಾಂಗ್ಲಾದೇಶಿಗರನ್ನು ಕೆಲಸಕ್ಕೆ ಇಟ್ಟುಕೊಂಡಿದ್ದಾರೆ. ಇದರಿಂದ ರಾಷ್ಟ್ರದ ಭದ್ರತೆಗೆ ತೊಂದರೆಯಾಗುವ ಸಂಭವವಿದೆ. ಅಲ್ಲದೇ, ನಮ್ಮ ವೃತ್ತಿಯಲ್ಲಿ ತೊಡಗಿಸಿಕೊಳ್ಳುವವರ ಸಂಖ್ಯೆ ಕಾಲಕ್ರಮೇಣ ಕಡಿಮೆಯಾಗುವ ಆತಂಕ ಎದುರಾಗಿದೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ. ಇತ್ತೀಚಿನ ದಿನಗಳಲ್ಲಿ ಧರ್ಮಾಧಾರಿತ ವಾಗಿ ಕ್ಷೌರಿಕರನ್ನು ವಿಂಗಡಿಸಲಾಗುತ್ತಿದೆ. ಹಿಂದಿನ ದಿನಗಳಲ್ಲಿ ಎಲ್ಲಾ ಸಮುದಾಯ ಹಾಗೂ ಧರ್ಮದವರಿಗೂ ಸವಿತಾ ಸಮುದಾಯದ ಜನರೇ ಕ್ಷೌರ ಮಾಡುತ್ತಿದ್ದರು. ಆದರೆ, ಕೆಲವು ಪ್ರದೇಶಗಳಲ್ಲಿ ಆಯಾ ಸಮುದಾಯದ್ದೇ ಆದಂತಹ ಜನರಿಗೆ ಆದ್ಯತೆ ನೀಡಲಾಗುತ್ತಿದೆ. ರಾಜ್ಯದಲ್ಲಿ ನಮ್ಮ ಸವಿತಾ ಸಮುದಾಯದ ಮೂಲ ವೃತ್ತಿ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ತೊಡಗಿಕೊಳ್ಳುವಂತೆ ಅವಕಾಶ ನೀಡುವುದು, ನಮ್ಮ ವೃತ್ತಿಯಲ್ಲಿ ತೊಡಗಿಕೊಂಡಿರುವ ಬಾಂಗ್ಲಾದೇಶಿಗರನ್ನು ಹೊರ ಹಾಕುವುದು ಇದರ ಉದ್ದೇಶವಾಗಿದೆ ಎಂದರು.

ಹಿಂದಿನ ಬಿಜೆಪಿ ಸರಕಾರದ ಕಾಲಾವಧಿಯಲ್ಲಿ ಸವಿತಾ ಸಮುದಾಯದ ಕೌಶಲ್ಯ ವೃದ್ಧಿಗೆ ಡೋಲು ನಾದ ಸ್ವರದ ತರಬೇತಿ ಕಾರ್ಯಕ್ರಮ ಹಲವಾರು ಯೋಜನೆಗಳನ್ನು ಹಮ್ಮಿಕೊಳ್ಳಲಾಗಿತ್ತು. ನಮ್ಮ ಸಮುದಾಯದ ಯುವ ಪೀಳಿಗೆ ಸವಿತಾ ಸಮುದಾಯದ ವೃತ್ತಿಯನ್ನು ಮುಂದುವರಿಸುವ ನಿಟ್ಟಿನಲ್ಲಿ ಇದು ಬಹಳಷ್ಟು ಸಹಕಾರಿಯಾಗಿರಲಿದೆ. ಈ ನಿಟ್ಟಿನಲ್ಲಿ ರಾಜ್ಯ ಸರಕಾರ ರಾಜ್ಯದಲ್ಲಿ ನೆಲೆಸಿರುವ ಪಾಕಿಸ್ತಾನಿಗಳ ಜತೆಯಲ್ಲಿಯೇ, ಬಾಂಗ್ಲಾದೇಶಿಗರನ್ನೂ ಹೊರ ಹಾಕಲು ಕ್ರಮ ಕೈಗೊಳ್ಳಬೇಕು.

-ಎಸ್.ನರೇಶ್ ಕುಮಾರ್, ಕರ್ನಾಟಕ ಸವಿತಾ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ

ಮೇನಲ್ಲಿ ರಿಯಾಯಿತಿ ದರದಲ್ಲಿ ಪುಸ್ತಕ ಮಾರಾಟ

ಬೆಂಗಳೂರು: ಮೇ ತಿಂಗಳಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಪುಸ್ತಕಗಳನ್ನು ಶೇ.75 ರಿಂದ ಶೇ.10 ರಷ್ಟು ರಿಯಾಯತಿ ದರದಲ್ಲಿ ಮಾರಾಟ ಮಾಡಲು ನಿರ್ಧರಿಸಲಾಗಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ನಾಡೋಜ ಡಾ.ಮಹೇಶ ಜೋಶಿ ತಿಳಿಸಿದ್ದಾರೆ. ಈ ಕುರಿತ ಪ್ರಕಟಣೆಯಲ್ಲಿ ಅವರು, ಪರಿಷತ್ತಿನ ಕಾರ್ಯ ಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಹಾಗು ಜನ ಸಾಮಾನ್ಯರಿಗೂ ತಲುಪಿಸುವ ಅನೇಕ ಮಹತ್ವದ ಯೋಜನೆಗಳನ್ನು ಕನ್ನಡ ಸಾಹಿತ್ಯ ಪರಿಷತ್ತು ತೆಗೆದುಕೊಳ್ಳುತ್ತಿದೆ. ಪರಿಷತ್ತಿನ ಪ್ರಮುಖ ಕಾರ್ಯ ಚಟುವಟಿಕೆಗಳಲ್ಲಿ ಪುಸ್ತಕ ಪ್ರಕಟಣೆ ಬಹಳ ಮುಖ್ಯವಾದದ್ದು. ಇದುವರೆಗೂ 1,800 ಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದ್ದು ಅದು ಒಂದು ರೀತಿಯಲ್ಲಿ ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆ ಬಿಂಬಿಸುತ್ತದೆ. ಪರಿಷತ್ತು ಪ್ರಕಟಿಸುವ ಪುಸ್ತಕಗಳು ಎಂದರೆ ಹೂರಣ ಮತ್ತು ಮುದ್ರಣ ಎರಡರಲ್ಲಿಯೂ ಶ್ರೇಷ್ಠ ಗುಣಮಟ್ಟ ಹೊಂದಿವೆ. ಮೇ 5 ರಂದು ಕನ್ನಡ ಸಾಹಿತ್ಯ ಪರಿಷತ್ತಿನ 111 ನೆಯ ಸಂಸ್ಥಾಪನಾ ದಿನದ ಪ್ರಯುಕ್ತ ಮೇ ತಿಂಗಳಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಟಕಣೆಗಳನ್ನು ಶೇ.10 ರಿಂದ75ರಷ್ಟು ರಿಯಾಯಿತಿ ದರದಲ್ಲಿ ಮಾರಾಟ ಮಾಡಲು ನಿರ್ಧರಿಸಲಾಗಿದೆ. ವಿದ್ವಾಂಸರಿಂದ ಹಿಡಿದು ಜನ ಸಾಮಾನ್ಯರವರೆಗೂ ಬಹು ಉಪಯುಕ್ತವಾದ ಈ ಕೃತಿಗಳ ರಿಯಾಯಿತಿ ದರದ ಮಾರಾಟವು ಕನ್ನಡ ಸಾಹಿತ್ಯ ಪರಿಷತ್ತಿನ ಗಳಗನಾಥ ಮಾರಾಟ ಮಳಿಗೆಯಲ್ಲಿ ಬೆಳಗ್ಗೆ 10 ರಿಂದ ಸಂಜೆ 5.30 ರವರೆಗೂ ನಡೆಯಲಿದ್ದು ಸಾರ್ವಜನಿಕರು ಇದರ ಸದುಪಯೋಗ ಪಡಿಸಿಕೊಳ್ಳಬೇಕೆಂದು ಮಹೇಶ ಜೋಶಿ ತಿಳಿಸಿದ್ದಾರೆ.

ಮರಕಡಿಯಲು ಅನುಮತಿ ನೀಡಬಾರದೆಂದು ಪಾಲಿಕೆಗೆ ಪರಿಸರ ಪ್ರೇಮಿಗಳ ಆಗ್ರಹ

368 ಮರ ತೆರವಿಗೆ ರೈಲ್ವೆ ಇಲಾಖೆಯಿಂದ ಪ್ರಸ್ತಾವನೆ ಸಲ್ಲಿಕೆ

ಬೆಂಗಳೂರು: ನಗರದ ಕಂಟೋನ್ಮೆಂಟ್ ರೈಲ್ವೆ ನಿಲ್ದಾಣದ ಅಭಿವೃದ್ಧಿ ಕಾಮಗಾರಿಯ ಸಲುವಾಗಿ ಆವರಣದಲ್ಲಿರುವ 368 ಮರಗಳನ್ನು ಕಡಿಯಲು ರೈಲ್ವೆ ಇಲಾಖೆಯು ಬಿಬಿಎಂಪಿ ಅರಣ್ಯ ವಿಭಾಗಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು, ಅರಣ್ಯ ವಿಭಾಗವು ಸಾರ್ವಜನಿಕ ಆಕ್ಷೇಪಣೆಗೆ ಅವಕಾಶ ನೀಡಿದೆ.

ನಗರದ ಪ್ರಮುಖ ರೈಲ್ವೆ ನಿಲ್ದಾಣಗಳಲ್ಲಿ ಒಂದಾದ ಕಂಟೋನ್ಮೆಂಟ್‌ನಲ್ಲಿ ಬಹುಕೋಟಿ ವೆಚ್ಚದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದ್ದು, 368 ಮರಗಳನ್ನು ಕಡಿಯಬೇಕು ಎಂದು ರೈಲ್ವೆ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಬಿಬಿಎಂಪಿ ಅರಣ್ಯ ವಿಭಾಗಕ್ಕೆ ಮನವಿ ಮಾಡಿದ್ದು, ಇದಕ್ಕೆ ಸ್ಪಂದಿಸಿರುವ ಪಾಲಿಕೆ ಸಾರ್ವಜನಿಕರ ಹಿತಾಸಕ್ತಿಗಾಗಿ ಪ್ರಕಟಣೆ ಹೊರಡಿಸಿದೆ. ರೈಲ್ವೆ ಇಲಾಖೆಯ ಈ ಯೋಜನೆಗೆ ಆಕ್ಷೇಪಗಳು ಕಂಡು ಬಂದರೆ ಹಾಗೂ ರೈಲ್ವೆ ಅಧಿಕಾರಿಗಳು ಸೂಕ್ತ ಉತ್ತರ ನೀಡದಿದ್ದಲ್ಲಿ ಮರ ಕಡಿಯಲು ಅನುಮತಿಯನ್ನು ನಿರಾಕರಿಸಲಾಗುವುದು ಎಂದು ಅಧಿಕಾರಿಗಳು ಹೇಳಿದ್ದಾರೆ.

ಪರಿಸರ ಪ್ರೇಮಿಗಳು ಮತ್ತು ಪರಿಸರ ವಾದಿಗಳು ಯಾವುದೇ ಕಾರಣಕ್ಕೂ ಪಾಲಿಕೆಯು ಮರ ಕಡಿಯಲು ಅನುಮತಿ ನೀಡಬಾರದು ಎಂದು ಆಗ್ರಹಿಸಿದ್ದು, ನಗರದ ಎಲ್ಲ ಕಡೆಗಳಲ್ಲೂ ಬಹು ಮಹಡಿ ಕಟ್ಟಡಗಳು ತಲೆ ಎತ್ತುತ್ತಿವೆ. ಇದಕ್ಕೆ ಮರ ಗಿಡಗಳ ನಾಶ ನಿರಂತರವಾಗಿ ಆಗುತ್ತಿದೆ. ಪರಿಸರ ಸ್ನೇಹಿಯಾಗಿ ನಗರ ಅಭಿವೃದ್ಧಿ ಆಗುವುದು ಮರೀಚಿಕೆ ಆಗುತ್ತಿದೆ. ಇನ್ನಾದರೂ ಕೂಡ ಪ್ರಕೃತಿ ಬಗ್ಗೆ ಕಳಕಳಿ ಇಟ್ಟುಕೊಳ್ಳುವ ಮೂಲಕ ಬೆಂಗಳೂರಿನಲ್ಲಿ ಮರಗಳು ಕಣ್ಮರೆ ಆಗುವುದು ಕಡಿಮೆಯಾಗಲಿ ಎಂದು ಪರಿಸರ ವಾದಿಗಳು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.



ಕಂಟೋನ್ಮೆಂಟ್ ರೈಲ್ವೆ ನಿಲ್ದಾಣಕ್ಕೆ ಹೊಸ ರೂಪ

ಕಂಟೋನ್ಮೆಂಟ್ ರೈಲು ನಿಲ್ದಾಣವನ್ನು 480 ಕೋಟಿ ರು. ವೆಚ್ಚದಲ್ಲಿ ನವೀಕರಿಸಲಾಗುತ್ತಿದೆ. ಈ ರೈಲು ನಿಲ್ದಾಣದಲ್ಲಿ 1000 ಬೈಕ್ ಹಾಗೂ 1000 ಕಾರು ಒಟ್ಟು 2000 ವಾಹನಗಳ ನಿಲುಗಡೆಗೆ ಬಹು ಮಹಡಿ ವಾಹನ ನಿಲುಗಡೆ ಸಂಕೀರ್ಣ ವ್ಯವಸ್ಥೆಯನ್ನು ಮಾಡಲಾಗುತ್ತಿದೆ. ಈಗಾಗಲೇ ಕೆಲಸಗಳು ಸಹ ಭರದಿಂದ ಸಾಗಿವೆ. ಲಾರ್ಜ್ ವೇಟಿಂಗ್ ರೂಮ್, ಹೆಚ್ಚುವರಿ ಟಿಕೆಟ್ ಕೌಂಟರ್‌ಗಳು, ಸೋಲಾರ್ ಪವರ್ ಮೇಲ್ಛಾವಣಿ, ನಾಲ್ಕು ಫೂಟ್ ಓವರ್ ಬ್ರಿಡ್ಜ್ ಹಾಗೂ ಬೈಕ್ ಮತ್ತು ಕಾರುಗಳ ನಿಲುಗಡೆಗೆ 2000 ವಾಹನಗಳನ್ನು ಪಾರ್ಕಿಂಗ್ ಮಾಡಲು ಸಾಧ್ಯವಾಗುವಂತಹ ಬಹು ಮಹಡಿ ವಾಹನ ನಿಲುಗಡೆ ಸಂಕೀರ್ಣ ವ್ಯವಸ್ಥೆಯನ್ನು ಈ ಯೋಜನೆಯಲ್ಲಿ ಕಲ್ಪಿಸಲಾಗುತ್ತಿದೆ.

ವೈಟ್‌ಟಾಪಿಂಗ್ ಕಾಮಗಾರಿ ವಿಳಂಬ: 10 ಲಕ್ಷ ರು. ದಂಡ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ದಕ್ಷಿಣ ಹಾಗೂ ಪಶ್ಚಿಮ ವಲಯ ವ್ಯಾಪ್ತಿಯಲ್ಲಿ ವೈಟ್‌ಟಾಪಿಂಗ್ ಕಾಮಗಾರಿಯನ್ನು ಪ್ರಾರಂಭಿಸದೇ ಇರುವ ಇಬ್ಬರು ಗುತ್ತಿಗೆದಾರರಿಗೆ 10 ಲಕ್ಷ ರು. ದಂಡ ವಿಧಿಸಲಾಗಿದೆ.

ದಕ್ಷಿಣ ವಲಯ ವ್ಯಾಪ್ತಿಯಲ್ಲಿ ವಿಜಯನಗರ ವಿಧಾನಸಭಾ ಕ್ಷೇತ್ರದ ವೆಸ್ಟ್ ಆಫ್ ಕಾರ್ಡ್ ರಸ್ತೆ ಹಾಗೂ ಹೊಸಕೆರೆಹಳ್ಳಿ ಮುಖ್ಯ ರಸ್ತೆಯಲ್ಲಿ ಮೆಜೆಎಂಸಿ ಸಂಸ್ಥೆ ವೈಟ್ ಟಾಪಿಂಗ್ ಕಾಮಗಾರಿಯನ್ನು ಪ್ರಾರಂಭಿಸದೇ ಇರುವುದರಿಂದ ಮತ್ತು ಸಾರ್ವಜನಿಕರಿಗೆ ಅನಾನುಕೂಲ ಉಂಟು ಮಾಡಿರುವ ಹಿನ್ನಲೆ ಗುತ್ತಿಗೆ ಕರಾರಿನಂತೆ ಪರಿಶೋಧ 41(1) ಮತ್ತು 41(2) ರಂತೆ ಮೊದಲ ಕಂತಾಗಿ 5.00 ಲಕ್ಷ ರು.ಗಳ ದಂಡವನ್ನು ವಿಧಿಸಲಾಗಿರುತ್ತದೆ. ಪಶ್ಚಿಮ ವಲಯ ವ್ಯಾಪ್ತಿಯಲ್ಲಿ ಓಷನ್ಸ್ ಸಂಸ್ಥೆ ವೈಯಾಲಿಕಾವಲ್ ರಸ್ತೆಯಲ್ಲಿ ನಿಧಾನಗತಿಯಲ್ಲಿ ವೈಟ್ ಟಾಪಿಂಗ್ ಕಾಮಗಾರಿಯನ್ನು ನಿರ್ವಹಿಸುತ್ತಿರುವುದರಿಂದ ಮತ್ತು ಸಾರ್ವಜನಿಕರಿಗೆ ಅನಾನುಕೂಲ ಉಂಟು ಮಾಡಿರುವ ಹಿನ್ನಲೆ ಗುತ್ತಿಗೆ ಕರಾರಿನಂತೆ ಪರಿಶೋಧ 41(1) ಮತ್ತು 41(2) ರಂತೆ ಮೊದಲ ಕಂತಾಗಿ ಐದು ಲಕ್ಷ ದಂಡವನ್ನು ವಿಧಿಸಲಾಗಿರುತ್ತದೆ. ನಗರದಲ್ಲಿ ವೈಟ್ ಟಾಪಿಂಗ್ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದ್ದು, ಅವುಗಳನ್ನು ತ್ವರಿತಗತಿಯಲ್ಲಿ ಕಾಮಗಾರಿ ನಡೆದವರಿಗೆ ದಂಡ ವಿಧಿಸಲು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್‌ರು ಎಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ ಡಾ. ಬಿ.ಎಸ್ ಪ್ರಹ್ಲಾದ್‌ರಿಗೆ ಆದೇಶ ನೀಡಿದ್ದು, ಅದರಂತೆ, ದಕ್ಷಿಣ ಹಾಗೂ ಪಶ್ಚಿಮ ವಲಯ ವ್ಯಾಪ್ತಿಯಲ್ಲಿ ನಿಧಾನಗತಿಯಲ್ಲಿ ವೈಟ್ ಟಾಪಿಂಗ್ ಕಾಮಗಾರಿ ನಡೆಸುತ್ತಿರುವ ಗುತ್ತಿಗೆದಾರರಿಗೆ ದಂಡ ವಿಧಿಸಲಾಗಿದೆ.

ಮಕ್ಕಳಲ್ಲಿ ಜಾಗತಿಕ ಮಟ್ಟದ ಉದ್ಯಮದ ಮನೋಭಾವ ಮೂಡಿಸಲು ಎಲ್‌ಐಎನ್ ಹಾಗೂ ನಿಶ್ಚಲ್ಸ್ ಸ್ಮಾರ್ಟ್ ಲರ್ನಿಂಗ್ ಸೊಲ್ಯೂಷನ್ಸ್ ಸಹಯೋಗದಲ್ಲಿ ಸ್ವಾರ್ ಎಕ್ಸ್ ಯೋಜನೆ ಮೂಲಕ ಬೆಂಗಳೂರಿನ 6 ಶಾಲೆಗಳು ಸೇರಿದಂತೆ ದೇಶದ ಒಟ್ಟು 9 ಪ್ರತಿಷ್ಠಿತ ಶಾಲೆಗಳ 32 ವಿದ್ಯಾರ್ಥಿಗಳು ಜಪಾನಿಗೆ ಕಲಿಕಾ ಪ್ರವಾಸ ಕೈಗೊಳ್ಳಲಿದ್ದಾರೆ. ಈ ಪ್ರವಾಸದಲ್ಲಿ ನ್ಯಾಷನಲ್ ಹಿಲ್ ವ್ಯೂ ಪಬ್ಲಿಕ್ ಶಾಲೆ, ಅಪೋಲೊ ನ್ಯಾಷನಲ್ ಪಬ್ಲಿಕ್ ಶಾಲೆ, ಅಂಬರ್ ವ್ಯಾಲಿ ರೆಸಿಡೆನ್ಶಿಯಲ್ ಶಾಲೆ, ಶಾರದಾ ವಿದ್ಯಾನಿಕೇತನ್, ಡಿಪಿಎಸ್, ಸರ್ವಪಲ್ಲಿ ವಿದ್ಯಾ ನಿಲಯಂ ಹೈಸ್ಕೂಲ್‌ನ 21 ವಿದ್ಯಾರ್ಥಿಗಳು ಈ ಪ್ರವಾಸದಲ್ಲಿ ಉದ್ಯಮಶೀಲತೆಯ ಮೊದಲ ಹಂತದ ಕಲಿಕೆಗೆ ಆಯ್ಕೆಯಾಗಿದ್ದಾರೆ.

ಜೂನ್ 15ರ ವರೆಗೆ ಬೈಕ್ ಸೇವೆ ಮುಂದುವರಿಸಲು ಹೈಕೋರ್ಟ್ ಅನುಮತಿ

ಓಲಾ, ಉಬರ್ ಬೈಕ್ ಸೇವೆಗೆ ರಿಲೀಫ್

ಬೆಂಗಳೂರು: ಓಲಾ, ಉಬರ್ ಮತ್ತು ರ್‍ಯಾಪಿಡೋ ಬೈಕ್ ಟ್ಯಾಕ್ಸಿ ಸೇವೆಯನ್ನು ರಾಜ್ಯದಲ್ಲಿ ಜೂನ್ 15ರ ವರೆಗೂ ವಿಸ್ತರಿಸಿ ಹೈಕೋರ್ಟ್ ಆದೇಶ ಹೊರಡಿಸಿದೆ.

ಬೈಕ್ ಟ್ಯಾಕ್ಸಿ ಸೇವೆಯನ್ನು ರಾಜ್ಯದಲ್ಲಿ ಮುಂದುವರಿಸಲು ನಿರ್ದೇಶನ ಕೋರಿ ಉಬರ್ ಇಂಡಿಯಾ ಸಿಸ್ಟಮ್ಸ್ ಪ್ರೈವೇಟ್ ಲಿಮಿಟೆಡ್, ರೋಪೆನ್ ಟ್ರಾನ್ಸ್‌ಪೋರ್ಟೇಶನ್ ಸರ್ವೀಸ್ ಲಿಮಿಟೆಡ್(ರ್‍ಯಾಪಿಡೋ), ಎಎನ್‌ಐ ಟಕ್ನಾಲಜಿ ಪ್ರೈವೇಟ್ ಲಿಮಿಟೆಡ್(ಓಲಾ), ವರ್ಕುಟಿ ಮಹೇಂದ್ರ ರೆಡ್ಡಿ(ಬೈಕ್ ಟ್ಯಾಕ್ಸಿಗಳ ಮಾಲೀಕರು) ಮತ್ತಿತರರು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಬಿ.ಎಂ. ಶ್ಯಾಂಪ್ರಸಾದ್ ಅವರಿದ್ದ ನ್ಯಾಯಪೀಠ ಈ ಆದೇಶ ನೀಡಿದೆ. ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, ಕರ್ನಾಟಕ ರಾಜ್ಯದಲ್ಲಿ ಸುಮಾರು ಆರು ಲಕ್ಷಕ್ಕೂ ಹೆಚ್ಚು ಮಂದಿ ಬೈಕ್ ಟ್ಯಾಕ್ಸಿಗಳ ಮೂಲಕ ಜೀವನ ರೂಪಿಸಿಕೊಂಡಿದ್ದಾರೆ. ಬೈಕ್ ಟ್ಯಾಕ್ಸಿಗಳ ಕಾರ್ಯಾಚರಣೆ ಸ್ಥಗಿತಗೊಳಿಸಿರುವುದರಿಂದ ಅವರ ಬದುಕು ಸಂಕಷ್ಟಕ್ಕೆ ಸಿಲುಕಿದೆ. ಅಲ್ಲದೆ, ದೇಶದ ಹಲವು ರಾಜ್ಯ ಸರಕಾರಗಳು ಬೈಕ್ ಟ್ಯಾಕ್ಸಿ ಕಾರ್ಯಾಚರಣೆಗೆ ನಿಯಮಗಳನ್ನು ರೂಪಿಸಿವೆ. ಆದರೆ, ರಾಜ್ಯದಲ್ಲಿ ಈವರೆಗೆ ಯಾವುದೇ ನಿಯಮಗಳನ್ನು ರೂಪಿಸಿಲ್ಲ, ಹೀಗಾಗಿ ಹೈಕೋರ್ಟ್ ಈ ಹಿಂದೆ ನೀಡಿದ್ದ ಕಾಲಾವಕಾಶ ವಿಸ್ತರಣೆ ಮಾಡಬೇಕು ಎಂದು ಮನವಿ ಮಾಡಿದರು. ವಾದ ಆಲಿಸಿದ ನ್ಯಾಯಪೀಠ, ಬೈಕ್ ಟ್ಯಾಕ್ಸಿಗಳನ್ನು ಸೇವೆಯನ್ನು ಜೂನ್ 15ರ ವರೆಗೂ ನಡೆಸಲು ವಿಸ್ತರಣೆ ಮಾಡಿ ವಿಚಾರಣೆ ಮುಂದೂಡಿತು. ರಾಜ್ಯದಲ್ಲಿ ಬೈಕ್ ಟ್ಯಾಕ್ಸಿಗಳ ನಿರ್ವಹಣೆಗೆ ಮಾರ್ಗಸೂಚಿಗಳನ್ನು ರಚನೆ ಮಾಡಿಲ್ಲದ ಪರಿಣಾಮ ಬೈಕ್ ಟ್ಯಾಕ್ಸಿ ಸೇವೆ ಸ್ಥಗಿತಗೊ ಳಿಸುವಂತೆ ಹೈಕೋರ್ಟ್ ಆದೇಶಿಸಿತ್ತು. ಇದನ್ನು ಪ್ರಶ್ನಿಸಿ ಇದೀಗ ಮತ್ತೆ ಹೈಕೋರ್ಟ್‌ಗೆ ಪ್ರಶ್ನೆ ಮಾಡಿದ್ದಾರೆ.

ಅಗಲಿದ ಪತ್ರಕರ್ತರ ನುಡಿ ನಮನ ಕಾರ್ಯಕ್ರಮದಲ್ಲಿ ಪ್ರಜಾವಾಣಿ ವಿಶ್ರಾಂತ ಸಂಪಾದಕ ಪದ್ಮರಾಜ ದಂಡಾವತಿ ಅಭಿಪ್ರಾಯ

ಶ್ಯಾಮಸುಂದರ್, ಅಶೋಕ್ ಕುಮಾರ್ ಸಾಧನೆ ಮರೆಯಲಾಗದು

ಬೆಂಗಳೂರು: ಕನ್ನಡದಲ್ಲಿ ಡಿಜಿಟಲ್ ಪತ್ರಿಕೋದ್ಯಮಕ್ಕೆ ಹೊಸ ಆಯಾಮ ನೀಡಿದ ಎಸ್.ಕೆ.ಶ್ಯಾಮ ಸುಂದರ್ ಮತ್ತು ಶ್ರವಣಬೆಳಗೊಳ ಬಾಹುಬಲಿ ಮಹಾಮಸ್ತಕಾಭಿಷೇಕ ಸಂಪರ್ಕ ಸೇತುವೆಯಂತಿದ್ದ ಎಸ್.ಎನ್.ಅಶೋಕ್ ಕುಮಾರ್ ಅವರ ಸಾಧನೆಯ ಹೆಜ್ಜೆ ಗುರುತು ಮರೆಯಲಾಗದು ಎಂದು ಪ್ರಜಾವಾಣಿ ವಿಶ್ರಾಂತ ಸಂಪಾದಕ ಪದ್ಮರಾಜ ದಂಡಾವತಿ ಹೇಳಿದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಹಮ್ಮಿಕೊಂಡಿದ್ದ ಅಗಲಿದ ಪತ್ರಕರ್ತರ ನುಡಿ ನಮನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಅಶೋಕ್ ಕುಮಾರ್ ಅವರು, ಗೊಮ್ಮಟವಾಣಿ ಪತ್ರಿಕೆಯ ಸಂಪಾದಕರಾಗಿ ಶ್ರವಣಬೆಳಗೊಳ ಮಠ ಮತ್ತು ನಾಡಿನ ಪತ್ರಕರ್ತರ ಸಮನ್ವಯ ಸೇತುವೆಯಂತೆ ಕಾರ್ಯನಿರ್ವಹಿಸಿದ್ದರು. ಸುಮಾರು ಮೂವತ್ತೈದು ವರ್ಷಗಳ ಅವರ ವೃತ್ತಿಜೀವನ ನಿಜಕ್ಕೂ ಶ್ಲಾಘನೀಯ. ಕನ್ನಡ ಡಿಜಿಟಲ್ ಪತ್ರಿಕೋದ್ಯಮಕ್ಕೆ ಹೊಸ ಆಯಾಮ ತಂದ ಕೀರ್ತಿ ಶ್ಯಾಮಸುಂದರ್ ಅವರದು. ನೂರಾರು ಯುವ ಪತ್ರಕರ್ತರಿಗೆ ಮಾರ್ಗದರ್ಶಕರೂ ಆಗಿದ್ದರು ಎಂದರು.

ಕಾರ್ಯಕ್ರಮದಲ್ಲಿ ಅಗಲಿದ ಪತ್ರಕರ್ತರಿಗೆ ಮತ್ತು ಇತ್ತೀಚೆಗೆ ಕಾಶ್ಮೀರದ ಪಹಲ್ಗಾಮ್‌ನಲ್ಲಿ ಮಡಿದವರಿಗೆ ಮೌನಾಚರಣೆಯ ಮೂಲಕ ಶ್ರದ್ಧಾಂಜಲಿ ಅರ್ಪಿಸಲಾಯಿತು. ಹಿರಿಯ ಪತ್ರಕರ್ತ ಅನಂತ್ ಚಿನಿವಾರ್, ಎಚ್.ಕೆ.ಶೇಷಚಂದ್ರಿಕಾ, ರಾಷ್ಟ್ರೀಯ ಕಾರ್ಯನಿರತ ಪತ್ರಕರ್ತರ ಒಕ್ಕೂಟದ ಅಪರ ಪ್ರಧಾನ ಕಾರ್ಯದರ್ಶಿ ಎಚ್.ಬಿ.ಮದನಗೌಡ, ವಾಸುದೇವ ಹೊಳ್ಳ, ಬೆಂಗಳೂರು ನಗರ ಜಿಲ್ಲಾ ಘಟಕದ ಅಧ್ಯಕ್ಷ ಕೆ. ಸತ್ಯನಾರಾಯಣ, ಪ್ರಧಾನ ಕಾರ್ಯದರ್ಶಿ ನರೇಂದ್ರ ಪಾರೆಕಟ್, ರಾಜ್ಯ ಸಮಿತಿ ಸದಸ್ಯ ಕೆ.ಆರ್. ದೇವರಾಜ್, ಅಶೋಕ್ ಕುಮಾರ್ ಅವರ ಪುತ್ರ ಸಚಿನ್ ಮತ್ತು ಸೊಸೆ ಅರ್ಚನಾ ಹಾಜರಿದ್ದರು.

ಅಗಲಿದ ಪತ್ರಕರ್ತರ ನುಡಿ ನಮನ ಕಾರ್ಯಕ್ರಮದಲ್ಲಿ ಕೆಯುಡಬ್ಲ್ಯುಜೆ ಅಧ್ಯಕ್ಷ ಶಿವಾನಂದ ತಗಡೂರು ಅವರು ಶ್ಯಾಮಸುಂದರ್ ಮತ್ತು ಅಶೋಕ್ ಕುಮಾರ್ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು.

ಸ್ಮರಣೀಯ ಕೊಡುಗೆ

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಮಾತನಾಡಿ, ಅಗಲಿದ ಪತ್ರಕರ್ತರ ಸಂಸ್ಮರಣೆಯು ಸಂಘದ ಕರ್ತವ್ಯವಾಗಿದ್ದು, ಅವರೆಲ್ಲರ ಆದರ್ಶ ಮತ್ತು ಸಾಧನೆ ಇಂದಿನ ಪತ್ರಕರ್ತರಿಗೆ ತಿಳಿಯಬೇಕೆಂಬ ಸದುದ್ದೇಶದಿಂದ ಕೂಡಿದೆ. ಶ್ಯಾಮಸುಂದರ ಅವರ ಮತ್ತು ಅಶೋಕ್ ಕುಮಾರ್ ಅವರು ಪತ್ರಿಕೋದ್ಯಮಕ್ಕೆ ನೀಡಿದ ಕೊಡುಗೆ ಅನನ್ಯ ಎಂದರು.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ಫನ್‌ತರಂಗ

- ರಘುಪತಿ ಶೃಂಗೇರಿ -

ಎಸ್‌ಪಿ ಮೇಲೆ ಕೈ ಎತ್ತಿದ ಸಿಎಂ



ಸೇನೆಗೆ ಕಾರ್ಯಾಚರಣೆ ಸ್ವಾತಂತ್ರ್ಯ

← ಮೊದಲಪುಟದಿಂದ

ಜಿಪ್‌ಲೈನ್ ಆಪರೇಟರ್ ಮೇಲೆ ಶಂಕೆ: ಪಹಲ್ಗಾಮ್ ದಾಳಿಯ ವೇಳೆ ಉಗ್ರರಿಂದ ಗುಂಡಿನ ಸದ್ದು ಕೇಳುತ್ತಿದ್ದಂತೆಯೇ ಜಿಪ್ ಲೈನ್ ಆಪರೇಟರ್ 'ಅಲ್ಲಾಹು ಅಕ್ಬರ್' ಎಂದು ಮೂರು ಬಾರಿ ಹೇಳಿರುವುದು ಇದೀಗ ಸಾಕಷ್ಟು ಅನುಮಾನಕ್ಕೆ ಕಾರಣವಾಗಿದೆ. ದಾಳಿಯಲ್ಲಿ ಈತನ ಪಾತ್ರನ ಕುರಿತು ರಾಷ್ಟ್ರೀಯ ತನಿಖಾ ದಳ ಎಲ್ಲಾ ಆಯಾಮಗಳಲ್ಲಿ ತನಿಖೆ ನಡೆಸುತ್ತಿದೆ. ಏಪ್ರಿಲ್ 22 ರಂದು ಉಗ್ರರ ದಾಳಿಯ ಕ್ಷಣಗಳು ಪಹಲ್ಗಾಮ್‌ಗೆ ತೆರಳಿದ್ದ ಪ್ರವಾಸಿಗರೊಬ್ಬರ ವಿಡಿಯೋದಲ್ಲಿ ದಾಖಲಾಗಿದೆ.

ಈ ವಿಡಿಯೋ ಸಾಮಾಜಿಕ ಮಾಧ್ಯಮಗಳಲ್ಲಿ ವೈರಲ್ ಆಗಿದೆ. ಇದರಲ್ಲಿ ಜಿಪ್ ಲೈನ್ ಆಪರೇಟರ್ ಮೂರು ಬಾರಿ ಅಲ್ಲಾಹು ಅಕ್ಬರ್ ಎಂದು ಹೇಳುವುದು ದಾಖಲಾಗಿದೆ. 53 ಸೆಕೆಂಡ್ ಗಳ ವಿಡಿಯೋವನ್ನು ಗುಜರಾತ್ ನ ಪ್ರವಾಸಿಗ ರಿಷಿ ಭಟ್ ಸೆಲ್ಫಿ ಸ್ಟಿಕ್ ನಲ್ಲಿ ರೆಕಾರ್ಡ್ ಮಾಡಿಕೊಂಡಿದ್ದು, ಪ್ರವಾಸಿಗರೊಬ್ಬರು ಗುಂಡಿನ ದಾಳಿಯಿಂದ ಕೆಳಗುರುಳಿದ ದೃಶ್ಯವೂ ದಾಖಲಾಗಿದೆ.

ಪಾಕ್ ಸೇನಾಧಿಕಾರಿ ಭಾಗಿ: ದಾಳಿಗೆ ಸಂಬಂಧಿಸಿ ಎನ್‌ಐಎ ತನಿಖೆ ಮುಂದುವರಿಸಿದ್ದು, ಪಾಕಿಸ್ತಾನ ಮೂಲದ ಇಬ್ಬರು ದಾಳಿಕೋರರಲ್ಲಿ ಒಬ್ಬನಾದ ಹಾಶಿಮ್ ಮೂಸಾ ಪಾಕಿಸ್ತಾನ ಸೇನೆಯ ಮಾಜಿ ಅಧಿಕಾರಿ ಎಂದು ತಿಳಿದುಬಂದಿದೆ. ಇದರೊಂದಿಗೆ ದಾಳಿಯಲ್ಲಿ ಪಾಕ್ ಸೇನೆಯ ನೇರ ಕೈವಾಡ ಬಯಲಾಗಿದೆ. ದಾಳಿಯಲ್ಲಿ ಭಾಗಿಯಾಗಿದ್ದ ಪಾಕಿಸ್ತಾನಿ ಮೂಲದ ಹಾಶಿಮ್ ಮೂಸಾ ಪಾಕಿಸ್ತಾನ ವಿಶೇಷ ಪಡೆಗಳಲ್ಲಿ ಪ್ಯಾರಾ ಕಮಾಂಡೋ ಆಗಿದ್ದ. ಪಾಕಿಸ್ತಾನದ ವಿಶೇಷ ಪಡೆಗಳು ಅವನನ್ನು ಎಲ್ ಇಟಿಗೆ ನೀಡಿರಬಹುದು ಎನ್ನಲಾಗಿದೆ.

ಜಾತಿ ಗಣತಿಯ ಸಂಪೂರ್ಣ ಮಾಹಿತಿ ನೀಡಲು ನಾಗಮೋಹನ ದಾಸ್ ಮನವಿ

ಮೇ 5ರಿಂದ ಒಳ ಮೀಸಲು ಸಮೀಕ್ಷೆ

ಬೆಂಗಳೂರು: ಬಹುವರ್ಷದ ಬೇಡಿಕೆಯಾ ಗಿದ್ದ ಒಳ ಮೀಸಲು ಕಲ್ಪಿಸುವ ಸಂಬಂಧ ರಾಜ್ಯ ಸರಕಾರ, ಒಳ ಮೀಸಲು ಜಾರಿಗೆ ಸಂಬಂಧಿಸಿ ದಂತೆ ರಚಿಸಿರುವ ಏಕ ಸದಸ್ಯ ಆಯೋಗ, ಮೇ.5ರಿಂದ ಸಮೀಕ್ಷೆ ನಡೆಸಲು ತೀರ್ಮಾ ನಿಸಿದ್ದು, ಇದಕ್ಕಾಗಿ 58ಸಾವಿರಕ್ಕೂ ಹೆಚ್ಚು ಸಿಬ್ಬಂದಿಗಳನ್ನು ಬಳಸಿಕೊಳ್ಳಲು ತೀರ್ಮಾನಿ ಸಲಾಗಿದೆ.

ಪರಿಶಿಷ್ಟ ಜಾತಿ ಸಮುದಾಯದ ಒಳ ಮೀಸಲನ್ನು ಈಗಾಗಲೇ ತೆಲಂಗಾಣ ಸರಕಾರ ಘೋಷಿಸಿದೆ. ಇದರ ಬೆನ್ನಲ್ಲೇ, ಈ ವಿಷಯಕ್ಕೆ ರಾಜ್ಯ ಸರಕಾರ ವೇಗ ನೀಡಲು ತೀರ್ಮಾನಿಸಿ ದಿನಾಂಕ ನಿಗದಿಪಡಿಸಿದೆ. ಈಗಾಗಲೇ ಸಚಿವ ಸಂಪುಟದಲ್ಲಿ ತೆಗೆದುಕೊಂಡಿದ್ದ ತೀರ್ಮಾನ ದಂತೆ ನಾಗಮೋಹನ ದಾಸ್ ನೇತೃತ್ವದಲ್ಲಿ ಏಕ ಸದಸ್ಯ ಆಯೋಗವನ್ನು ಸರಕಾರ ರಚಿಸಿತ್ತು. ಇದೀಗ ಮೇ.5ರಿಂದ ಸಮೀಕ್ಷೆ ಆರಂಭ ವಾಗಲಿದೆ. ಪರಿಶಿಷ್ಟ ಜಾತಿ ಪಟ್ಟಿಯಲ್ಲಿ ಒಟ್ಟು 101 ಜಾತಿಗಳಿವೆ. ಈ ಪೈಕಿ ಆದಿ ಕರ್ನಾಟಕ, ಆದಿ ದ್ರಾವಿಡ ಮತ್ತು ಆದಿ ಆಂಧ್ರ ಉಪ ಜಾತಿಗಳು ಯಾವ ಜಾತಿಗೆ ಸೇರಿವೆ ಎಂಬ ಗೊಂದಲವನ್ನೂ ಇತ್ಯರ್ಥ ಪಡಿಸಬೇಕಾಗಿದೆ. ದಾಖಲೆ, ಪುರಾವೆ, ಅಂತರ್ ಹಿಂದುಳಿದಿರುವಿಕೆ ಇನ್ನಿತರ ಮಾಹಿತಿ ಸಂಗ್ರಹಿಸಿ ವೈಜ್ಞಾನಿಕ ಮತ್ತು ತರ್ಕಬದ್ಧವಾಗಿ ಪರಿಶಿಷ್ಟ ಜಾತಿಗೆ ಮೀಸಲು ವರ್ಗೀಕರಣದ ವರದಿ ಸಿದ್ಧಪಡಿಸಬೇಕಾಗಿದೆ. ಎರಡು ತಿಂಗಳಲ್ಲಿ ವರದಿ ನೀಡಲು ಸೂಚಿಸಲಾಗಿತ್ತು. ಆಯೋಗ ಬಳಿಕ ಪರಿಶಿಷ್ಟ ಜಾತಿಯ ವಿವಿಧ ಉಪಜಾತಿಗಳಿಗೆ ಸೇರಿದವರ ಪ್ರಾತಿನಿಧ್ಯತೆ ಕುರಿತು ಸಮೀಕ್ಷೆ ನಡೆಸುವ ಶಿಫಾರಸು ಮಾಡಿತ್ತು.

ಜಾತಿಗಣತಿ ವರದಿ ನೀಡುವಂತೆ ಪತ್ರ

ಸಚಿವ ಸಂಪುಟದಲ್ಲಿ ಮಂಡನೆಯಾಗಿರುವ ಜಾತಿ ಗಣತಿ ವರದಿಯಲ್ಲಿ ಎಸ್‌ಸಿ ಸಮುದಾಯದ ಅಂಕಿಅಂಶವನ್ನು ಪಡೆಯಲು ನಾಗಮೋಹನ್ ದಾಸ್ ಆಯೋಗ ಮುಂದಾಗಿದೆ. ಹಿಂದುಳಿದ ವರ್ಗಗಳ ಆಯೋಗ ಸಲ್ಲಿಸಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ-2015ರ (ಜಾತಿ ಜನ ಗಣತಿ) ದತ್ತಾಂಶಗಳ ಅಧ್ಯಯನ ವರದಿಯನ್ನು ಏ.11ರಂದು ಸಚಿವ ಸಂಪುಟ ಸಭೆಯಲ್ಲಿ ಮಂಡಿಸಲಾಗಿತ್ತು.

ಹಿಂದುಳಿದ ವರ್ಗಗಳ ಆಯೋಗವು ಈ ವರದಿಯನ್ನು ಮುಚ್ಚಿದ ಲಕೋಟೆಯಲ್ಲಿ 2024ರ ಫೆ. 29ರಂದು ಸರಕಾರಕ್ಕೆ ಸಲ್ಲಿಸಿತ್ತು. ಈ ಸಂಬಂಧ ಈಗಾಗಲೇ ಸರಕಾರಕ್ಕೆ ಪತ್ರ ಬರೆದಿರುವ ನಾಗಮೋಹನ್ ದಾಸ್, ಜಾತಿ ಗಣತಿ ವರದಿ ದತ್ತಾಂಶ ನೀಡುವಂತೆ ಕೋರಲಾಗಿದೆ ಎಂದು ತಿಳಿಸಿದ್ದಾರೆ. ಸೋರಿಕೆಯಾದ ಜಾತಿಗಣತಿ ಪ್ರಕಾರ ರಾಜ್ಯದಲ್ಲಿ ಪರಿಶಿಷ್ಟ ಜಾತಿ ಜನಸಂಖ್ಯೆ 1,09,29,347 ಇದೆ. ಈ ಪೈಕಿ ನಗರದಲ್ಲಿ 28,47,232 ಇದ್ದರೆ, ಗ್ರಾಮೀಣ ಪ್ರದೇಶದಲ್ಲಿ 80,82,115 ಇದ್ದಾರೆ ಎಂದು ಹೇಳಲಾಗಿದೆ. ರಾಜ್ಯದಲ್ಲಿ ಎಸ್‌ಸಿ ಸಮುದಾಯದಲ್ಲಿನ ಅಧಿಕೃತ ಉಪಜಾತಿ ಇರುವುದು 101. ಆದರೆ, ಜಾತಿ ಗಣತಿಯಲ್ಲಿ ಈ ಉಪಜಾತಿ ಸಂಖ್ಯೆ 182ಕ್ಕೆ ಏರಿಕೆಯಾಗಿದೆ. ಹೀಗಾಗಿ ಒಳ ಮೀಸಲಾತಿ ಕಲ್ಪಿಸಲು ದತ್ತಾಂಶ ಸಂಗ್ರಹಕ್ಕಾಗಿ ರಚಿಸಲಾಗಿ ರುವ ನಾಗಮೋಹನ್ ದಾಸ್ ಆಯೋಗ ಈ ಜಾತಿ ಗಣತಿ ದತ್ತಾಂಶ ಪಡೆದು ಪರಿಶೀಲಿಸಲು ಮುಂದಾಗಿದೆ.

ಇದೀಗ ನಾಗಮೋಹನ್ ದಾಸ್ ಆಯೋಗ ಪರಿಶಿಷ್ಟ ಜಾತಿ ಒಳ ಮೀಸಲಾತಿ ಅನುಷ್ಠಾನಕ್ಕಾಗಿ ಸಮುದಾಯದ ಉಪಜಾತಿಗಳು, ಪ್ರಾತಿನಿಧ್ಯತೆ ಕುರಿತು ಮನೆ ಮನೆಗೆ ತೆರಳಿ ಮೇ 5 ರಿಂದ ಸಮೀಕ್ಷೆ ನಡೆಸಲು ಸಿದ್ಧತೆ ನಡೆಸಿದೆ. ಮೇ 5ರಿಂದ ಮೇ 17ರ ವರೆಗೆ ಮನೆ ಮನೆಗೆ ತೆರಳಿ ಎಸ್‌ಸಿ ಸಮುದಾಯದ ಉಪಜಾತಿಗಳು, ಆರ್ಥಿಕ ಸ್ಥಿತಿಗತಿ ಬಗ್ಗೆ ಸಮಗ್ರ ಸಮೀಕ್ಷೆ ನಡೆಸಲಿದೆ. ಈ ಸಂಬಂಧ ಪ್ರಶ್ನಾವಳಿಗಳೂ ಸಿದ್ಧವಾಗಿದ್ದು, ಸಮೀಕ್ಷೆಗಾಗಿ ಸಿಬ್ಬಂದಿಗೆ ತರಬೇತಿಯನ್ನು ನೀಡಲಾಗುತ್ತಿದೆ. ಮೇ 19ರಿಂದ ಮೇ 21ರವರೆಗೆ ಪಂಚಾಯತ್ ಮಟ್ಟದಲ್ಲಿ ಕೇಂದ್ರಗಳನ್ನು ರಚಿಸಲಿದ್ದು, ಯಾರು ಮನೆ ಮನೆ ಸಮೀಕ್ಷೆಯಲ್ಲಿ ಭಾಗವಹಿಸಿಲ್ಲವೋ, ಅಲ್ಲಿಗೆ ಹೋಗಿ ಮಾಹಿತಿ, ಉಪಜಾತಿಗಳ, ಆದಾಯ ಮುಂತಾದ ಅಂಶಗಳನ್ನು ನೀಡಬಹುದು. ಬಳಿಕ ಮೇ 19ರಿಂದ ಮೇ 23ರಂದು ಆನ್‌ಲೈನ್ ಮೂಲಕವೂ ಘೋಷಿಸಿಕೊಳ್ಳಲು ಅವಕಾಶ ನೀಡಲಾಗಿದೆ. ಇದಕ್ಕಾಗಿ ವಿಶೇಷ ಆ್ಯಪ್, ವೆಬ್ ಪೋರ್ಟಲ್ ಅಭಿವೃದ್ಧಿಪಡಿಸಲಾಗಿದೆ.



ಮೇ 5ರಿಂದ 12 ದಿನಗಳ ಕಾಲ ಮನೆ ಮನೆ ಸಮೀಕ್ಷೆ ನಡೆಯಲಿದೆ. ಇದಕ್ಕಾಗಿ ಸಕಲ ಸಿದ್ಧತೆ ಮಾಡಿಕೊಂಡಿದ್ದು, 58,960 ಗಣತಿದಾರರನ್ನು ನೇಮಕ ಮಾಡಲಾ ಗಿದೆ. ಆನ್‌ಲೈನ್ ಮೂಲಕವೂ ಮಾಹಿತಿ ನೀಡಬಹುದಾಗಿದೆ. ಈ ಸಂಬಂಧ ಪ್ರಶ್ನಾವಳಿ ಯನ್ನೂ ಸಿದ್ಧಪಡಿಸಲಾಗಿದೆ. ಪರಿಶಿಷ್ಟ ಜಾತಿ ಸಮುದಾಯದ ಎಲ್ಲರೂ ಸಮೀಕ್ಷೆಯಲ್ಲಿ ಪಾಲ್ಗೊಂಡು ನಿಖರ ಮಾಹಿತಿ ಯನ್ನು ನೀಡಬೇಕು. ಇದರಿಂದ ಆದಷ್ಟು ಬೇಗ ಒಳಮೀಸಲು ಕಲ್ಪಿಸಲು ಸಾಧ್ಯವಾಗಲಿದೆ.

-ನಾಗಮೋಹನ್ ದಾಸ್,
ಒಳ ಮೀಸಲು ಆಯೋಗದ ಮುಖ್ಯಸ್ಥ

58,960 ಗಣತಿದಾರರ ನೇಮಕ

ಪರಿಶಿಷ್ಟ ಜಾತಿಗಳ ಉಪಜಾತಿಗಳು, ಪ್ರಾತಿನಿಧ್ಯತೆ ಬಗ್ಗೆ ಸಮಗ್ರ ಸಮೀಕ್ಷೆ ನಡೆಸುವುದಕ್ಕಾಗಿ 58,960 ಗಣತಿದಾರರನ್ನು ನೇಮಿಸಲಾಗಿದೆ. ಈ ಗಣತಿದಾರರು ಮನೆ ಮನೆಗೆ ತೆರಳಿ ಸಮೀಕ್ಷೆ ನಡೆಸಲಿದ್ದಾರೆ. ಸುಮಾರು 6,000 ಮೇಲುಸ್ತುವಾರಿಗಳನ್ನು ನಿಯೋಜಿಸಲಾಗಿದೆ. ಇವರು ಸಮೀಕ್ಷೆಯ ಮೇಲೆ ನಿಗಾ ವಹಿಸಲಿದ್ದಾರೆ. ಈಗಾಗಲೇ ಗಣತಿದಾರರಿಗೆ ತರಬೇತಿ ಕಾರ್ಯ ಪ್ರಗತಿಯಲ್ಲಿದೆ. ಬೆಂಗಳೂರಿನಲ್ಲಿ 150 ಮಾಸ್ಟರ್ ಟ್ರೈನರ್‌ಗಳಿಗೆ ತರಬೇತಿ ನೀಡಲಾಗಿದೆ. ಮಂಗಳ ವಾರದಿಂದ ಮೂರು ದಿನ ತಾಲೂಕು ಮಟ್ಟದಲ್ಲಿ ತರಬೇತಿ ಆರಂಭವಾಗಲಿದೆ.

JANA SMALL FINANCE BANK
(A Scheduled Commercial Bank)
CIN No: L65923KA2006PLC040028
Regd Office : The Fairway Business Park #10/1, 11/2, 12/2B, Off Domlur, Koramangala Inner Ring Road, Next to EGL, Challaghatta, Bengaluru 560071

EXTRACTS OF STANDALONE AUDITED FINANCIAL RESULTS FOR THE QUARTER AND YEAR ENDED MARCH 31, 2025

(₹ in 000s)

Particulars	Quarter Ended			Year Ended	
	31-03-2025 Audited	31-12-2024 Unaudited	31-03-2024 Audited	31-03-2025 Audited	31-03-2024 Audited
Total Income from Operations	1,43,31,633	1,35,48,159	1,29,09,480	5,48,56,549	4,68,40,563
Net Profit / (Loss) for the period (before Tax, Exceptional and/or Extraordinary items)	11,98,385	10,53,359	16,64,902	47,36,780	51,43,528
Net Profit / (Loss) for the period before tax (after Exceptional and/or Extraordinary items)	11,98,385	10,53,359	16,64,902	47,36,780	51,43,528
Net Profit / (Loss) for the year (after tax) (after exceptional and/or extraordinary items)	**12,34,785**	**11,06,601**	**32,16,777**	**50,14,187**	**66,95,403**
Paid up Equity Share Capital	10,50,565	10,47,423	10,45,903	10,50,565	10,45,903
Reserves (excluding Employees Stock Option Reserve)	-	-	-	3,98,65,467	3,46,19,093
Networth	**3,87,43,078**	**3,73,60,643**	**3,39,09,020**	**3,87,43,078**	**3,39,09,020**
Paid up Debt Capital / Outstanding Debt	3,86,68,171	3,97,24,950	5,21,14,591	3,86,68,171	5,21,14,591
Outstanding Redeemable Preference Shares	Nil	Nil	Nil	Nil	Nil
Capital Adequacy Ratio (%)	20.68%	18.39%	20.31%	20.68%	20.31%
Debt Equity Ratio	0.95	1.00	1.46	0.95	1.46
Earnings Per Equity Share (face value of ₹ 10 per share)					
1. Basic (₹)	11.76	10.57	34.55	47.89	90.85
2. Diluted (₹)	11.71	10.49	34.50	47.67	90.72

Notes :
1. The above publication is an extract of the detailed financial results filed with the Stock Exchange under Regulation 30, 33, 51 and 52 of the SEBI (Listing Obligation and Disclosure Requirements) Regulations, 2015.
2. The above results of the Bank have been reviewed and recommended by the Audit Committee and approved by the Board of Directors at their meeting held on April 29, 2025.
3. Previous period/year figures have been regrouped / reclassified, wherever necessary to conform with the current period/year presentation.
4. The full format of financial results are available on Stock Exchange websites (www.bseindia.com and www.nseindia.com) and Bank's website (www.janabank.com)

Scan QR Code for Detailed Information

Bengaluru
April 29, 2025

For and on behalf of the Board of Directors
Ajay Kanwal
Managing Director & Chief Executive Officer

ಕಾರಿನಲ್ಲಿ ಮೂವರ ಮೃತದೇಹ ಪತ್ತೆ

ಮಂಡ್ಯ: ಕಾರಿನಲ್ಲಿ ತಂದೆ ಹಾಗೂ ಇಬ್ಬರು ಮಕ್ಕಳು ಶವವಾಗಿ ಪತ್ತೆಯಾಗಿರುವ ಘಟನೆ ಮಂಡ್ಯ ಜಿಲ್ಲೆಯ ವಿ.ಸಿ.ನಾಲೆಯಲ್ಲಿ ನಡೆದಿದೆ. ಮೃತರನ್ನು ಮೈಸೂರು ಜಿಲ್ಲೆಯ ಕೆ.ಆರ್ .ನಗರ ತಾಲೂಕಿನ ಹೆಬ್ಬಾಳು ಗ್ರಾಮದ ಕುಮಾರಸ್ವಾಮಿ (38), ಮಕ್ಕಳಾದ ಅದ್ವೈತ್ (8) ಹಾಗೂ ಅಕ್ಷತಾ (3) ಎಂದು ಗುರುತಿಸಲಾಗಿದೆ. ಏ.16 ರಂದು ಮಕ್ಕಳ ಜತೆ ಕಾರಿನಲ್ಲಿ ಬೆಂಗಳೂರಿನಿಂದ ಕೆ.ಆರ್.ನಗರಕ್ಕೆ ಹೊರಟಿದ್ದರು. ಆದರೆ ಆ ಬಳಿಕ ಅವರ ಸುಳಿವು ಇರಲಿಲ್ಲ. ಏ.19ರಂದು ಕೆ.ಆರ್.ನಗರ ಪೊಲೀಸ್ ಠಾಣೆಯಲ್ಲಿ ನಾಪತ್ತೆ ಪ್ರಕರಣ ದಾಖಲಾಗಿತ್ತು. ಇದೀಗ ವಿ.ಸಿ.ನಾಲೆಯಲ್ಲಿ ಕಾರೊಂದು ಪತ್ತೆಯಾಗಿದ್ದು, ಅದರಲ್ಲಿ ತಂದೆ ಹಾಗೂ ಇಬ್ಬರ ಮಕ್ಕಳ ಮೃತದೇಹ ಪತ್ತೆಯಾಗಿದೆ. ಕಾರು ನಾಲೆಗೆ ಉರುಳಲು ನಿಖರ ಕಾರಣ ತಿಳಿದುಬಂದಿಲ್ಲ. ಸ್ಥಳಕ್ಕೆ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ಭೇಟಿ ನೀಡಿ ಪರಿಶೀಲಿಸಿದರು.

ಬಾಗಲಕೋಟೆ, ಉಳಿದ ಜಿಲ್ಲೆಗಳಿಗೂ ಪ್ರಯೋಜನ: ಎಂ.ಬಿ.ಪಾಟೀಲ

ವಿಜಯಪುರದಲ್ಲಿ ಮುಂದಿನ ಸಂಪುಟ ಸಭೆ

ವಿಜಯಪುರ: ಜಿಲ್ಲೆಯಲ್ಲಿ ವಿಶೇಷ ಸಚಿವ ಸಂಪುಟ ಸಭೆ ನಡೆಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಮಾಡಿದ್ದೇನೆ. ಇದಕ್ಕೆ ಮುಖ್ಯಮಂತ್ರಿಗಳು ಸಹ ಬಹಳ ಸಂತೋಷದಿಂದ ಒಪ್ಪಿಕೊಂಡಿದ್ದಾರೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ್ ತಿಳಿಸಿದರು.

ಸುದ್ದಿಗಾರರ ಜತೆ ಮಾತನಾಡಿ, ಕಲಬುರಗಿ ಮತ್ತು ಮಲೆ ಮಹದೇಶ್ವರದಲ್ಲಿ ಸಂಪುಟ ಸಭೆ ನಡೆದಂತೆ ವಿಜಯಪುರದಲ್ಲೂ ಸಂಪುಟ ಸಭೆ ನಡೆಸಬೇಕು ಎಂದು ಮಲೆ ಮಹದೇಶ್ವರದ ಸಚಿವ ಸಂಪುಟ ಸಭೆಯಲ್ಲಿ ಮನವಿ ಮಾಡಿರುವೆ. ಮುಂದಿನ ದಿನಗಳಲ್ಲಿ ವಿಜಯಪುರದಲ್ಲಿ ವಿಶೇಷ ಸಂಪುಟ ಸಭೆ ನಡೆಯಲಿದೆ. ಬಾಗಲಕೋಟೆ ಹಾಗೂ ಉಳಿದ ಜಿಲ್ಲೆಗಳಿಗೂ ಇದು ಪ್ರಯೋಜನವಾಗಲಿದೆ. ಇಲ್ಲಿನ ಹೊಸ ಯೋಜನೆಗಳ ಘೋಷಣೆಗೂ ಅನುಕೂಲವಾಗಲಿದೆ ಎಂದು ಹೇಳಿದರು. ಈಗಾಗಲೇ ಜಿಲ್ಲಾಧಿಕಾರಿಗಳಿಗೆ ಸೂಚನೆ ಕೊಡಲಾಗಿದ್ದು, ಜತೆಗೆ ಸಚಿವ ಶಿವಾನಂದ ಪಾಟೀಲರು ಸೇರಿ ಎಲ್ಲ ಶಾಸಕರೊಂದಿಗೆ ಮಾತನಾಡಿರುವೆ. ತಮ್ಮ- ತಮ್ಮ ಕ್ಷೇತ್ರಗಳ ಪ್ರಸ್ತಾವನೆಗಳ ಸರಕಾರಕ್ಕೆ ಸಲ್ಲಿಸಿ, ಸಂಪುಟದಲ್ಲಿ ಅನುಮೋದನೆ ಪಡೆಯಲು ಅನುಕೂಲವಾಗಲಿದೆ. ಪ್ರವಾಸೋದ್ಯಮ, ನೀರಾವರಿ, ಶಿಕ್ಷಣ ಸೇರಿ ಎಲ್ಲ ಇಲಾಖೆಗಳಲ್ಲಿನ ಬೇಡಿಕೆ ಈಡೇರಿಸುವ ಸಂಪುಟ ಸಭೆಯಲ್ಲಿ ಸಾಧ್ಯವಾಗಲಿದೆ. ಈ ವೇಳೆ ವಿಶ್ವಜ್ಯೋತಿ ಬಸವಣ್ಣನವರ ಜನ್ಮಭೂಮಿ ಮತ್ತು ಕರ್ಮ ಭೂಮಿಯಾದ ವಿಜಯಪುರ ಜಿಲ್ಲೆಯಲ್ಲಿ ಮುಂದಿನ ವರ್ಷ ಸರಕಾರದಿಂದ ಬಸವ ಜಯಂತಿ ಆಚರಿಸಲು ವಿನಂತಿ ಮಾಡುತ್ತೇನೆ ಎಂದರು.

ಗುಂಡು ಹಾರಿಸಿಕೊಂಡು ಉದ್ಯಮಿ ಆತ್ಮಹತ್ಯೆ

ಕಾರ್ಕಳ: ತಾಲೂಕಿನ ನಿಟ್ಟೆ ಗ್ರಾಮದ ದೂಪದಕಟ್ಟೆ ರಾಜ್ಯ ಹೆದ್ದಾರಿಯ ಸಮೀಪ ಉದ್ಯಮಿಯೊಬ್ಬರು ಮಂಗಳವಾರ ನಸುಕಿನ ವೇಳೆ ಕಾರಿನಲ್ಲೇ ರಿವಾಲ್ವರ್‌ನಿಂದ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಕಾರ್ಕಳದ ನಿವಾಸಿಯಾದ ಅವರು ಮಂಗಳೂರಿನಲ್ಲಿ ಉದ್ಯಮ ನಡೆಸುತ್ತಿದ್ದರು. ಆತ್ಮಹತ್ಯೆಗೆ ನಿಖರ ಕಾರಣ ತಿಳಿದುಬಂದಿಲ್ಲ. ಘಟನಾ ಸ್ಥಳಕ್ಕೆ ಕಾರ್ಕಳ ಗ್ರಾಮಾಂತರ ಠಾಣಾ ಪೊಲೀಸರು ತಲುಪಿ ಪರಿಶೀಲನೆ ನಡೆಸಿದ್ದಾರೆ

ಶಾಸಕರ ಅಮಾನತು ರಾಜ್ಯಪಾಲರ ಪತ್ರ

← ಮೊದಲಪುಟದಿಂದ

ಪ್ರಜಾಪ್ರಭುತ್ವದ ಮೂಲಭೂತ ಮೌಲ್ಯಗಳನ್ನು ಎತ್ತಿಹಿಡಿದು, ಜನಪ್ರತಿನಿಧಿಗಳಾಗಿ ಜವಾಬ್ದಾರಿ ನಿರ್ವಹಿಸಲು ಅನುವು ಮಾಡಿಕೊಡಿ ಎನ್ನುವ ಸೂಚನೆ ನೀಡಿದ್ದಾರೆ.

ಪತ್ರದಲ್ಲಿ ಏನಿದೆ?: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಬರೆದಿರುವ ಪತ್ರದಲ್ಲಿ, ವಿಧಾನಸಭೆ ಮತ್ತು ವಿಧಾನಪರಿಷತ್ತಿನ ಪ್ರತಿಪಕ್ಷ ನಾಯಕರು ನಿಯೋಗ ನನ್ನನ್ನು ಭೇಟಿ ಮಾಡಿ ವಿವರವಾದ ಮನವಿ ಸಲ್ಲಿಸಿದ್ದಾರೆ. ಕರ್ನಾಟಕ ವಿಧಾನಸಭೆಯ 18 ಸದಸ್ಯರ ಅಮಾನತು ಆದೇಶ ತೆರವುಗೊಳಿಸಬೇಕು ಎಂದು ಸೂಚನೆ ನೀಡಿದ್ದಾರೆ. ವಿಧಾನಸಭೆಯಲ್ಲಿ ಪ್ರತಿಪಕ್ಷಕ್ಕೆ ಸೇರಿದ 18 ಶಾಸಕರ ಮೇಲೆ ಹೇರಿರುವ ಅಮಾನತು ಆದೇಶವನ್ನು ಪುನರ್ ಪರಿಶೀಲಿಸುವಂತೆ ಸರ್ಕಾರ ಹಾಗೂ ಸ್ಪೀಕರ್‌ಗೆ ನಿಯೋಗ ಈಗಾಗಲೇ ಮನವಿ ಮಾಡಿದೆ. ಈ ಎಲ್ಲ ದೃಷ್ಟಿಕೋನದಿಂದ, ಪ್ರಜಾಪ್ರಭುತ್ವದ ಮೂಲಭೂತ ಮೌಲ್ಯಗಳನ್ನು ಎತ್ತಿಹಿಡಿಯಲು ಮತ್ತು ಜನರ ಪ್ರತಿನಿಧಿಗಳಾಗಿ ಅವರ ಜವಾಬ್ದಾರಿ ನಿರ್ವಹಿಸಲು ಅನುವಾಗುವಂತೆ ಅಮಾನತು ಹಿಂಪಡೆಯಬೇಕು ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು-560020

ಬೆಂಅಪ್ರಾ/ನಯೋಸ/CLU-254/2023-24/321/2025-26 ದಿನಾಂಕ: 28.04.2025

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **ವಸತಿ** ವಲಯದಿಂದ **ವಾಣಿಜ್ಯ** ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ ಸಂ	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ/ಗುಂ	ಪರಿಷ್ಕೃತ ಮಹಾಯೋಜನೆ-2015 ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀಮತಿ. ಸೌಭಾಗ್ಯ ಮಂಜುನಾಥ್ ಗೌಡ	ಬೆಂಗಳೂರು ದಕ್ಷಿಣ	ಕೆಂಗೇರಿ	ಕಂಬೀಪುರ	257	0-17	ವಸತಿ	ವಾಣಿಜ್ಯ

ಷರಾ: ಅರ್ಜಿದಾರರು ವಾಣಿಜ್ಯ ಕಟ್ಟಡ ಅಭಿವೃದ್ಧಿ ಕಾಮಗಾರಿ ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ, ಈ ವಾಣಿಜ್ಯ ಕಟ್ಟಡ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶಾಭಿವೃದ್ಧಿಗೆ ಸಹಕಾರಿಯಾಗಲಿದೆ, ವಾಣಿಜ್ಯ ಅಭಿವೃದ್ಧಿಯಿಂದ ಉದ್ಯೋಗ ಅವಕಾಶಗಳು ಸೃಷ್ಟಿಯಾಗುತ್ತವೆ ಮತ್ತು ಸರ್ಕಾರಕ್ಕೆ ತೆರಿಗೆ ಹಾಗೂ ಇತರೆ ಶುಲ್ಕಗಳು ಸಂದಾಯವಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತ, ಪ್ರಶ್ನಿತ ಜಮೀನನ್ನು ವಸತಿ ವಲಯ' ದಿಂದ 'ವಾಣಿಜ್ಯ ಉಪಯೋಗಕ್ಕೆ' ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/- ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.

ಕರ್ನಾಟಕ ಸರ್ಕಾರ (ಅರಣ್ಯ ಇಲಾಖೆ)
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಯವರ ಕಛೇರಿ, ಚಾಮರಾಜನಗರ ವನ್ಯಜೀವಿ ಉಪವಿಭಾಗ, ಚಾಮರಾಜನಗರ.
ಸುಲ್ತಾನ್ ಷರೀಫ್ ವೃತ್ತ, ಸತ್ತಿ ರಸ್ತೆ, ಚಾಮರಾಜನಗರ-571313
ಕಚೇರಿ ದೂರವಾಣಿ: 08226-222059 e-mail: acfcnagar@gmail.com

ಸಂಖ್ಯೆ:ಎ1/ಬಿಯುಡಿ/ರೈಲ್ವೆ ಬ್ಯಾ.ನಿ.ಟೆಂ/ಸಿಆರ್-01/2025-26 ದಿನಾಂಕ: 23-04 2025

ಟೆಂಡರ್ ಅಧಿಸೂಚನೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ 2025-26ನೇ ಸಾಲಿನಲ್ಲಿ ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶ, ಚಾಮರಾಜನಗರ ವಿಭಾಗದ ಚಾಮರಾಜನಗರ ವನ್ಯಜೀವಿ ಉಪವಿಭಾಗ ವ್ಯಾಪ್ತಿಯಲ್ಲಿ ರೈಲ್ವೆ ಬ್ಯಾರಿಕೇಡ್ ನಿರ್ಮಾಣ ಕಾಮಗಾರಿಗಳನ್ನು ಚಾಲ್ತಿಯಲ್ಲಿರುವ ಲೋಕೋಪಯೋಗಿ ಇಲಾಖೆಯ ನೊಂದಾಯಿತ ಗುತ್ತಿಗೆದಾರರಿಂದ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (KPPP.Karnataka.gov.in) ಮೂಲಕ ದಿನಾಂಕ 23-05-2025 ರವರೆಗೆ ಟೆಂಡರ್ ಆಹ್ವಾನಿಸಲಾಗಿದೆ. ಸದರಿ ಟೆಂಡರಿನಲ್ಲಿ ಯಾರು ಭಾಗವಹಿಸದೇ ಇದ್ದಲ್ಲಿ ಮರು ಟೆಂಡರ್ ನಡೆಸಲಾಗುವುದು ಇದಕ್ಕೆ ಪ್ರತ್ಯೇಕ ಪ್ರಕಟಣೆ ಹೊರಡಿಸಲಾಗುವುದಿಲ್ಲ. ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (KPPP.Karnataka.gov.in) ನಲ್ಲಿ ರಿಕಾಲ್ ಮಾಡಲಾಗುವುದು. ಟೆಂಡರ್ ಪ್ರಕಟಣೆಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ/-
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ವನ್ಯಜೀವಿ ಉಪವಿಭಾಗ, ಚಾಮರಾಜನಗರ.

ಸಂ:ವಾಸಾಸಂಇ/ಚಾನಗರ/39/2025-26

ಹೊಸಕೋಟೆ ಯೋಜನಾ ಪ್ರಾಧಿಕಾರ
ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ - 562114, ಬೆಂಗಳೂರು ಗ್ರಾಮಾಂತರ ಜಿಲ್ಲೆ. ದೂರವಾಣಿ / ಫ್ಯಾಕ್ಸ್: 080-27934470/ 27935412
E-mail: hosakote.pa@gmail.com URL: www.hoskote.tpa.gov.in

ಸಂಖ್ಯೆ: ಹೊಯೋಪ್ರಾ/ಭೂಉಬ/54/2024-25 ದಿನಾಂಕ: 28-04-2025

ಸಾರ್ವಜನಿಕ ಪ್ರಕಟಣೆ

ವಿಷಯ: ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14 (ಎ) ರಡಿಯಲ್ಲಿ ಕೃಷಿ ಉದ್ದೇಶಕ್ಕಾಗಿ ಕಾಯ್ದಿರಿಸಲಾಗಿರುವ ಜಮೀನುಗಳನ್ನು ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುವ ಬಗ್ಗೆ.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14 (ಎ) ರಡಿಯಲ್ಲಿ ಈ ಕೆಳಕಂಡ ಜಮೀನುಗಳನ್ನು ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದಿಂದ ದಿನಾಂಕ: 30.01.2018 ರಂದು ಅನುಮೋದನೆಯಾದ ಮಹಾಯೋಜನೆಯಂತೆ **ಕೃಷಿ ವಲಯದಲ್ಲಿ ಕಾಯ್ದಿರಿಸಲಾಗಿರುವ ಜಮೀನುಗಳನ್ನು ವಸತಿ ಉದ್ದೇಶಕ್ಕಾಗಿ ಭೂ ಉಪಯೋಗ ಬದಲಾವಣೆ** ಮಾಡಲು ಕೋರಿ ಈ ಪ್ರಾಧಿಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸದರಿ ಭೂ ಉಪಯೋಗ ಬದಲಾವಣೆಯ ಪ್ರಸ್ತಾವನೆಯನ್ನು ಪರಿಗಣಿಸುವ ಬಗ್ಗೆ ಅಕ್ಕಪಕ್ಕದ ಜಮೀನಿನ ಮಾಲೀಕರಿಗೆ / ಇತರರಿಗೆ / ಪರಿಸರಕ್ಕೆ ಉಂಟಾಗಬಹುದಾದಂತಹ ತೊಂದರೆಗಳು ಹಾಗೂ ಇತರೆ ಅಂಶಗಳಿಗೆ ಸಂಬಂಧಿಸಿದಂತೆ ತಮ್ಮ ಸಲಹೆ / ಸೂಚನೆ / ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆ ನೀಡಿದ ದಿನಾಂಕದಿಂದ 15 ದಿನಗಳ ಒಳಗಾಗಿ ಲಿಖಿತ ರೂಪದಲ್ಲಿ **ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ - 562114, ಬೆಂಗಳೂರು ಗ್ರಾಮಾಂತರ ಜಿಲ್ಲೆ** ರವರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಲು ಕೋರಲಾಗಿದೆ. ಅವಧಿ ಮೀರಿದ ನಂತರ ಸ್ವೀಕರಿಸಲಾಗುವ ಸಲಹೆ / ಸೂಚನೆ / ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಹೊಸಕೋಟೆ ತಾಲ್ಲೂಕು, ಅನುಗೊಂಡನಹಳ್ಳಿ ಹೋಬಳಿ, ಗುಳ್ಳಕಾಯಿಪುರ ಗ್ರಾಮದ

ಕ್ರ. ಸಂ.	ಭೂ ಮಾಲೀಕರ ಹೆಸರು	ಸ.ನಂ.	ವಿಸ್ತೀರ್ಣ ಎ-ಗುಂ
1	ಶ್ರೀಮತಿ ಜೆ. ಶಾಂತ ಬಿನ್ ಲೇಟ್ ಎನ್. ಜಯರಾಮ್	45/6 ರ ಪೈಕಿ	00-31
2	ಶ್ರೀಮತಿ ಪ್ರತ್ಯೂಷ ಕಟ್ರಗಡ್ಡ ಕೋಂ ಅಟ್ಲೂರಿ ಪ್ರತಾಪ್ ಕುಮಾರ್	45/7	00-06 1/2
3	ಶ್ರೀ ಮುನಿರಾಜು, ಶ್ರೀ ಮುನಿಯಪ್ಪ ಮತ್ತು ಶ್ರೀ ಎಂ. ಮುನಿಸ್ವಾಮಿ ಬಿನ್ ಮುತ್ತಪ್ಪ ಅಲಿಯಾಸ್ ಮುತ್ತುಗ	46/2	02-02
4		46/3	02-00
5	ಶ್ರೀ ಕೇಶವರೆಡ್ಡಿ	46/6	00-05 1/4
6	ಶ್ರೀ ರಾಜಪ್ಪ	46/7	00-01
7	ಶ್ರೀ ಕೆ. ನಾಗರಾಜ ಮತ್ತು ಕೆ. ವೆಂಕಟೇಶ ಬಿನ್ ಕೃಷ್ಣಾರೆಡ್ಡಿ	46/8	00-27
8	ಶ್ರೀ ಮುನಿರಾಜು, ಶ್ರೀ ಮುನಿಯಪ್ಪ ಮತ್ತು ಶ್ರೀ ಎಂ. ಮುನಿಸ್ವಾಮಿ ಬಿನ್ ಮುತ್ತಪ್ಪ ಉ. ಮುತ್ತುಗ	46/9	00-10
9	ಶ್ರೀ ಕೇಶವಾರೆಡ್ಡಿ ಬಿನ್ ಚಿಕ್ಕಬ್ಬಯ್ಯ ರೆಡ್ಡಿ	46/16	00-01 1/2
10	ಶ್ರೀ ರಾಜಪ್ಪ	46/17	00-14
11	ಶ್ರೀ ಜಿ. ಶ್ರೀನಿವಾಸರೆಡ್ಡಿ ಮತ್ತು ಶ್ರೀ ಜಿ. ಅಂಕಣ್ಣರೆಡ್ಡಿ ಬಿನ್ ಗುರಪ್ಪರೆಡ್ಡಿ	48/4	03-08

ಷರಾ:- ಪ್ರಶ್ನಿತ ಜಮೀನುಗಳ ಸುತ್ತಮುತ್ತಲಿನ ಪರಿಸರದಲ್ಲಿ ವಸತಿ ಬೆಳವಣಿಗೆಗಳು ಬಂದಿದ್ದು / ಬರುತ್ತಿದ್ದು, ಸದರಿ ಜಮೀನುಗಳಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡ ಯೋಜನಾ ಬದ್ಧವಾದ ವಸತಿ ಬಡಾವಣೆಯನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಿರುವುದರಿಂದ ಸಾರ್ವಜನಿಕರಿಗೆ ಕಡಿಮೆ ದರದಲ್ಲಿ ಉತ್ತಮವಾದ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಒಳಗೊಂಡ ವಸತಿ ನಿವೇಶನಗಳನ್ನು ಒದಗಿಸಿ ಕೊಡುವುದರ ಜೊತೆಗೆ ನಗರದ ಯೋಜನಾ ಬದ್ಧವಾದ ಬೆಳವಣಿಗೆಗೆ ಸಹಕಾರಿಯಾಗುವುದು ಎಂಬ ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಂಡಿರುತ್ತೇವೆ ಎಂದು ಅರ್ಜಿದಾರರು ತಮ್ಮ ಪ್ರಮಾಣ ಪತ್ರದ ಮುಖಾಂತರ ತಿಳಿಸಿರುತ್ತಾರೆ.

ಸಹಿ/-
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಹೊಸಕೋಟೆ.

ವಾಸಾಸಂಇ/ವಾ.ಪ್ರ/415/ಅಡ್ವರ್ಟೋರ್/2025-26

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಮುಖ್ಯ ಅಭಿಯಂತರರವರ ಕಛೇರಿ, ಕನನೀಸ ಮತ್ತು ಒಚ ಮಂಡಳಿ, ಜಲಭವನ, ನಂ.ಪಿ-4, 10ನೇ ಮುಖ್ಯ ರಸ್ತೆ, 3ನೇ ಅಡ್ಡರಸ್ತೆ, 3ನೇ ಮಹಡಿ ಸರಸ್ವತಿ ಪುರಂ, ಮೈಸೂರು- 570 009.
ದೂ. 0821-2545894, Email: kwbcemys2014@gmail.com

2ನೇ ಕರೆ ಟೆಂಡರ್ ಪ್ರಕಟಣೆ

(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)

ಕಾಮಗಾರಿಯ ವಿವರ: ಮಾನ್ಯ ಮುಖ್ಯ ಮಂತ್ರಿಗಳ ನಗರೋತ್ಥಾನ ಹಂತ-4ರ ಯೋಜನೆಯಡಿ ಮಡಿಕೇರಿ ನಗರಸಭೆ ವ್ಯಾಪ್ತಿಯ ಮಡಿಕೇರಿ ನಗರದ ಸೆಂಟ್. ಜೋಸೆಫ್ ಶಾಲೆಯ ಬಳಿ ಹಾಲಿ ಇರುವ 2.5 ಲಕ್ಷ ಲೀ. ಸಾಮರ್ಥ್ಯದ ಮೇಲ್ಮಟ್ಟದ ಜಲ ಸಂಗ್ರಹಗಾರವನ್ನು ನೆಲಸಮಗೊಳಿಸಿ 5.00 ಲಕ್ಷ ಲೀ. ಸಾಮರ್ಥ್ಯದ ಮೇಲ್ಮಟ್ಟದ ಜಲ ಸಂಗ್ರಹಗಾರವನ್ನು ನಿರ್ಮಿಸುವ ಕಾಮಗಾರಿಯ ರೂ.126.24 ಲಕ್ಷಗಳಿಗೆ (ಜಿ.ಎಸ್.ಟಿ ಹೊರತುಪಡಿಸಿ) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಇಂಡೆಂಟ್ ಸಂಖ್ಯೆ:KUWSDB/2024-25/WS/WORK_INDENT326/CALL-2 ರಲ್ಲಿ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಹೆಚ್ಚಿನ ವಿವರಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ವೆಬ್‌ಸೈಟ್ https://kppp.karnataka.gov.in ಸಂಪರ್ಕಿಸುವುದು.

ಸಹಿ/- ಅಧೀಕ್ಷಕ ಅಭಿಯಂತರರು, ಕ.ನ.ನೀ.ಸ. ಮತ್ತು ಒ.ಚ. ಮಂಡಳಿ, ಮೈಸೂರು

DIPR/DDMYS/114/KSMCA/92/2024-25

ಜಿಲ್ಲಾ ಶಸ್ತ್ರ ಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ ತುಮಕೂರು
ಸಂ.ಜಿಆತು:ಸ್ವಚ್ಛತೆ/05/2024-25 ದಿನಾಂಕ: 23.04.2024

ಇ-ಟೆಂಡರ್ ಪ್ರಕಟಣೆ

ಜಿಲ್ಲಾ ಆಸ್ಪತ್ರೆ, ತುಮಕೂರು ಇಲ್ಲಿಗೆ ನಾನ್ ಕ್ಲಿನಿಕಲ್, ಗ್ರೂಪ್-ಡಿ ನೌಕರರು ಹಾಗೂ ಆಸ್ಪತ್ರೆಯ ನರ್ಸಿಂಗ್ ಶಾಲೆ ಮತ್ತು ಕಾಲೇಜಿಗೆ ಅಗತ್ಯ ಸಿಬ್ಬಂದಿಯನ್ನು 2025-26ನೇ ಸಾಲಿಗೆ ಹೊರಗುತ್ತಿಗೆ ಆಧಾರದಲ್ಲಿ ಪಡೆಯುವ ಸಂಬಂಧ, ಅಧಿಕೃತ ಸಂಸ್ಥೆದಾರರಿಂದ ಕಾರ್ಯಗತ ಮಾಡಲು ದ್ವಿ-ಲಕೋಟೆ ಪದ್ಧತಿ ಅನ್ವಯ ಕರ್ನಾಟಕ ಪಾರದರ್ಶಕ ನಿಯಮ 1999-2000 ರಂತೆ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಕರೆಯಲಾಗಿದೆ.

ಅರ್ಹ, ಅಧಿಕೃತ, ಸಂಸ್ಥೆದಾರರು ಖಾಲಿ ಟೆಂಡರ್ ಫಾರಂಗಳನ್ನು ದಿನಾಂಕ: **28.04.2025** ರಿಂದ **27.05.2025** ಅಪರಾಹ್ನ 4.30 ಗಂಟೆ ಒಳಗೆ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಪಡೆಯಬಹುದು. ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ದ್ವಿ-ಲಕೋಟೆ ಪದ್ಧತಿಯಂತೆ ಸಲ್ಲಿಸುವುದು.

ಅರ್ಹ ಸಂಸ್ಥೆಗಳು ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ದಿನಾಂಕ: **27.05.2025** ರಂದು 4.30ರ ಒಳಗಾಗಿ ಅರ್ಜಿ ಸಲ್ಲಿಸಬಹುದಾಗಿರುತ್ತದೆ. (ಅಪ್‌ಲೋಡ್),

* ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ: **29.05.2025** ಅಪರಾಹ್ನ 12.00 ಗಂಟೆ, * ಆರ್ಥಿಕ ಲಕೋಟೆ ತೆರೆಯುವ ದಿನಾಂಕ: **02.06.2025** ಅಪರಾಹ್ನ 12.00 ಗಂಟೆಗೆ, ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ http//.Kppp.karnataka.gov.in ರ ಮೂಲಕ ಅಥವಾ ಆಸ್ಪತ್ರೆ ಕಛೇರಿಯ ಕರ್ತವ್ಯದ ವೇಳೆಯಲ್ಲಿ ಪಡೆಯಬಹುದು.

ಸಹಿ/- ಜಿಲ್ಲಾ ಶಸ್ತ್ರ ಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ, ತುಮಕೂರು

DIPR/TUM/37/KSMCA/2025-26

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಮುಖ್ಯ ಅಭಿಯಂತರರವರ ಕಾರ್ಯಾಲಯ, ಧಾರವಾಡ
ಸರ್.ಎಂ. ವಿಶ್ವೇಶ್ವರಯ್ಯ ರಸ್ತೆ, ಜಲಮಂಡಳಿ ಆವರಣ, ಧಾರವಾಡ-580001.
ದೂರವಾಣಿ: 0836-2447090 ಇ-ಮೇಲ್: kwbcen@ gmail.com

ಟೆಂಡರ್ ಪ್ರಕಟಣೆ (ಎಲೆಕ್ಟ್ರಾನಿಕ್ ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಈ ಕೆಳಗಿನ ಕಾಮಗಾರಿಗೆ ತಾಂತ್ರಿಕ ಮತ್ತು ಆರ್ಥಿಕ ಅರ್ಹತಾ ಅಗತ್ಯತೆಗಳನ್ನು ತೃಪ್ತಿಕರವಾಗಿ ಅರ್ಹರಿರುವ ಸಂಸ್ಥೆ/ಗುತ್ತಿಗೆದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (https://kppp.karnataka.gov.in) ಮೂಲಕ (ದ್ವಿ-ಟೆಂಡರ್ ದಾಖಲೆ ಪದ್ಧತಿಯಲ್ಲಿ) ಟೆಂಡರ್ ಆಹ್ವಾನಿಸಲಾಗಿದೆ. ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ:225 **ದಿನಾಂಕ: 28-04-2025.** ಕಾಮಗಾರಿಯ ಹೆಸರು: ವಿಜಯಪುರ ಜಿಲ್ಲೆಯ ವಿಜಯಪುರ ನಗರಕ್ಕೆ ಸಗಟು ನೀರು ಸರಬರಾಜು ಮಾಡುವ ಆಲಮಟ್ಟಿ ಹಿನ್ನೀರಿನ (ಕೊಲ್ಹಾರದಿಂದ ವಿಜಯಪುರ ನಗರಕ್ಕೆ) ಪಿ.ಎಸ್.ಸಿ. ಕೊಳವೆ ಮಾರ್ಗವನ್ನು ಬದಲಾಯಿಸಿ ಎಮ್.ಎಸ್. ಪೈಪ್ ಅಳವಡಿಸುವ ಕಾಮಗಾರಿ (ಇಡುಗಂಟು ಟೆಂಡರ್). **INDENT NO. KUWSDB/2025-26/WS/WORK_INDENT341.** ಹೆಚ್ಚಿನ ವಿವರಗಳಿಗಾಗಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಡುವುದು ಅಥವಾ **ಮುಖ್ಯ ಅಭಿಯಂತರು, ಕನನೀಸ ಮತ್ತು ಒಚ ಮಂಡಳಿ, ಧಾರವಾಡ ಕಚೇರಿಯನ್ನು** ಸಂಪರ್ಕಿಸಬಹುದು.

ಸಹಿ/- ಮುಖ್ಯ ಅಭಿಯಂತರು,
ಕನನೀಸ ಮತ್ತು ಒಚ ಮಂಡಳಿ, ಧಾರವಾಡ.

ವಾ.ಸಾ.ಇ./ಧಾ/107/2025-26/ದೇಶಪಾಂಡೆಪಬ್ಲಿಸಿಟಿ

ಕರ್ನಾಟಕ ಸರ್ಕಾರ
ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಅಧಿಕಾರಿಗಳ ಕಛೇರಿ ಕಾರವಾರ
ಕಛೇರಿ ದೂರವಾಣಿ ಸಂಖ್ಯೆ (08382-226575) 226575
(email: dtwo.karwar@gmail.com)

ಸಂ:ಜಿಪವಕನಿ:ವಿನಿಅ:ಟೆಂಡರ್:ಸಿಆರ್-32:2024-25 ದಿನಾಂಕ : 24-04-2025

'ಇ-ಪ್ರೊಕ್ಯೂರ್‌ಮೆಂಟ್' ಟೆಂಡರ್ ಪ್ರಕಟಣೆ
(Inviting Tender through E-Procurement)

2025-26 ಮತ್ತು 2026-27 ನೇ ಸಾಲಿಗಾಗಿ ಉತ್ತರಕನ್ನಡ ಜಿಲ್ಲೆಯ ಕಾರವಾರ ಮತ್ತು ಹಳಿಯಾಳ ತಾಲ್ಲೂಕಿನಲ್ಲಿರುವ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ಬಾಲಕರ, ಬಾಲಕಿಯರ ವಿದ್ಯಾರ್ಥಿ ನಿಲಯ ಮತ್ತು ಶ್ರೀ ಮಹರ್ಷಿ ವಾಲ್ಮೀಕಿ ಆದಿವಾಸಿ ಬುಡಕಟ್ಟು ವಸತಿ ಶಾಲೆಗಳಿಗೆ ಆಹಾರ ಹಾಗೂ ಇತರ ಸಾಮಗ್ರಿಗಳನ್ನು ಸರಬರಾಜು ಮಾಡಲು ತಾಲ್ಲೂಕುವಾರು ದ್ವಿ-ಲಕೋಟ ಪದ್ಧತಿ ಪ್ರಕಾರ ಅರ್ಹ ನೋಂದಾಯಿತ ಏಜೆನ್ಸಿ/ಸಂಸ್ಥೆಗಳಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮಗಳು 2000 ಅಡಿಯಲ್ಲಿ ನಿಬಂಧನೆಗಳಿಗೆ ಒಳಪಟ್ಟು, 'ಇ-ಪ್ರೊಕ್ಯೂರ್‌ಮೆಂಟ್' ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ದಿನಾಂಕ: 27.05.2025 ಸಂಜೆ 5.30 ಗಂಟೆಗೆ ಒಳಗೆ ಟೆಂಡರ್ ಸಲ್ಲಿಸಲು ಅವಕಾಶ ಇರುತ್ತದೆ. ಹೆಚ್ಚಿನ ಮಾಹಿತಿ ಹಾಗೂ ಟೆಂಡರ್ ನಮೂನೆಗಳನ್ನು ಇ-ಪ್ರೊಕ್ಯೂರಮೆಂಟ್ ವಿಳಾಸ http://kppp.karnataka.gov.in ನಲ್ಲಿ ಪಡೆಯಬಹುದಾಗಿದೆ.

ಸಹಿ/-
ವೈ.ಕೆ. ಉಮೇಶ
ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು
ಉತ್ತರಕನ್ನಡ ಜಿಲ್ಲೆ, ಕಾರವಾರ

ವೈದ್ಯರ ನಿರ್ಲಕ್ಷ್ಯ ಬಾಲಕಿ ಸಾವು

ಹಾವೇರಿ: ಜಿಲ್ಲೆಯ ಬ್ಯಾಡಗಿ ತಾಲೂಕು ಹೆಡ್ಡಿಗೊಂಡ ಗ್ರಾಮದ ವಂದನಾ ಶಿವಪ್ಪ ತುಪ್ಪದ(17) ಮೃತ ಬಾಲಕಿ. ವಂದನಾ ಕೈಯ ಮಣಿಕಟ್ಟಿನ ಭಾಗದಲ್ಲಿ ಗುಳ್ಳೆ ಎದ್ದಿದೆ ಎಂದು ನಗರದ ಖಾಸಗಿ ಆಸ್ಪತ್ರೆಗೆ ಆಕೆಯನ್ನು ಕುಟುಂಬಸ್ಥರು ಕರೆತಂದಿದ್ದರು. ಇದಕ್ಕೆ ಸಣ್ಣ ಶಸ್ತ್ರಚಿಕಿತ್ಸೆಯ ಅಗತ್ಯವಿದೆ ಎಂದು ವೈದ್ಯರು ಹೇಳಿದ್ದರು. ಬಳಿಕ ಸಲೈನ್ ಹಚ್ಚಿ ಅದರಲ್ಲೇ ಇಂಜೆಕ್ಷನ್ ನೀಡಿದ್ದರು. ಇಂಜೆಕ್ಷನ್ ನೀಡಿದ ಕೂಡಲೇ ಬಾಲಕಿಯ ದೇಹದಲ್ಲಿ ರಿಯಾಕ್ಷನ್ ಆಗಿದ್ದು, ಮೈ ಕೆರೆತ, ಬಾಯಲ್ಲಿ ನೊರೆ ಬಂದು ಕ್ಷಣಾರ್ಧದಲ್ಲೇ ಮೃತಪಟ್ಟಿದ್ದಾಳೆ. ಬಾಲಕಿ ಸಾವಿಗೆ ವೈದ್ಯರ ನಿರ್ಲಕ್ಷ್ಯವೇ ಕಾರಣ ಎಂದು ಕುಟುಂಬಸ್ಥರ ಆರೋಪಿದ್ದಾರೆ. ಇತ್ತ ಬಾಲಕಿಯ ಸಾವಿನ ಸುದ್ದಿ ತಿಳಿಯುತ್ತಿದ್ದಂತೆ ಆಸ್ಪತ್ರೆಯ ವೈದ್ಯರು ನಾಪತ್ತೆಯಾಗಿದ್ದಾರೆ

ನೇಣಿಗೆ ಶರಣು

ಕೋಲಾರ: ಮನೆಯಲ್ಲಿ ತಂದೆ ತಾಯಿ ಬುದ್ದಿವಾದ ಹೇಳಿದ ಹಿನ್ನೆಲೆ ವ್ಯಕ್ತಿಯೋರ್ವ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಕೋಲಾರದಲ್ಲಿ ನಡೆದಿದೆ. ಮುಳಬಾಗಿಲು ಪಟ್ಟಣದ ಕುಂಬಾರಪಾಳ್ಯದಲ್ಲಿ ಕಳೆದ ರಾತ್ರಿ ಈ ಘಟನೆ ನಡೆದಿದೆ. ಬೆಳೆದು ನಿಂತಿದ್ದ ಮಗ ಜವಾಬ್ದಾರಿ ಇಲ್ಲದೇ ಸ್ನೇಹಿತರೊಂದಿಗೆ ಸೇರಿಕೊಂಡು ಬೇಕಾಬಿಟ್ಟಿ ಜೀವನ ನಡೆಸುತ್ತಿದ್ದ. ಇದನ್ನು ಪ್ರಶ್ನೆ ಮಾಡಿದ ತಂದೆ ತಾಯಿ ಮಾತಿನಿಂದ ಬೇಸತ್ತು ನೇಣಿಗೆ ಶರಣಾಗಿದ್ದಾನೆ.

ಟ್ವೀಟೂ-ಖಾರಾ

ಕರ್ನಾಟಕ ಕಾಂಗ್ರೆಸ್

ದೇಶದಲ್ಲಿ ಬಿಜೆಪಿ ಸರಕಾರ ಇದ್ದಾಗಲೇ ಸಾಕಷ್ಟು ಬಾರಿ ಭಯೋತ್ಪಾದಕ ದಾಳಿಗಳಾಗಿವೆ. ಇದನ್ನು ಗಮನಿಸಿದರೆ ಬಿಜೆಪಿ ಮತ್ತು ಉಗ್ರರ ನಡುವೆ ಬಿಟ್ಟಿರಲಾರದ ಸಂಬಂಧ ಇದ್ದಂತಿದೆ.ದೇಶದ ಮೇಲೆ ದಾಳಿ ಆದಾಗ ಬಿಜೆಪಿ ಸರಕಾರವೇ ಯಾಕಿರುತ್ತದೆ?. ಬಿಜೆಪಿ ಸರಕಾರ ಇದ್ದಾಗಲೇ ದೇಶದ ಸಂಸತ್ ಮೇಲೆ ದಾಳಿ, ವಿಮಾನ ಹೈಜಾಕ್ ಮಾಡಲಾಗಿದೆ. ಮೋದಿ ಪ್ರಧಾನಿ ಆದ ಬಳಿಕವೇ ಪಠಾಣ್ ಕೋಟ್ ಮೇಲೆ ಉಗ್ರರ ದಾಳಿ ಆಯಿತು. ಪುಲ್ವಾಮಾದಲ್ಲಿ ಸೇನಾ ವಾಹನ ಮೇಲೆ ಉಗ್ರರು ದಾಳಿ ಮಾಡಿದ್ದಾರೆ. ಅಮರನಾಥ ಯಾತ್ರಾರ್ಥಿಗಳ ಹತ್ಯೆ ಹಾಗೂ ಈಗ ಪಹಲ್ಗಾಮ್‌ನಲ್ಲಿನ ದಾಳಿ ಮಾಡಲಾಗಿದೆ. ಇದಕ್ಕೆ ಕಾರಣ ಏನು ಮೋದಿಯವರೇ? . ಉಗ್ರರನ್ನು ಮಟ್ಟ ಹಾಕಲು ಸರಕಾರದ ಪ್ರತಿಯೊಂದು ಕಾರ್ಯಕ್ಕೆ ಬೆಂಬಲ ನೀಡುವುದಾಗಿ ಕಾಂಗ್ರೆಸ್ ಹೇಳಿದೆ. ಪಹಲ್ಗಾಮ್ ಉಗ್ರರ ದಾಳಿಗೆ ಗುಪ್ತಚರ ಹಾಗೂ ಭದ್ರತಾ ವೈಫಲ್ಯ ಕಾರಣ.

ಅರವಿಂದ ಹೊಸಮನೆ

ದೇಶದಲ್ಲಿ ಕಾಂಗ್ರೆಸ್ ಸರಕಾರ ಇದ್ದಾಗಲೇ ಭಾರತದ ಮೇಲೆ ವೈರಿ ರಾಷ್ಟ್ರಗಳು ದಾಳಿ ಮಾಡಿದವು. ಭಾರತದ ಭೂ ಭಾಗವನ್ನು ಕಳೆದುಕೊಂಡೆವು. ಇದಕ್ಕೆ ಕಾಂಗ್ರೆಸ್ ಕಾರಣವೇ ದೇಶ ಇಬ್ಭಾಗ ಆಗಲು ಯಾರು ಕಾರಣ ಕಾಶ್ಮೀರದಲ್ಲಿ ಹಿಂದೂಗಳು ಅಸ್ತಿತ್ವ ಕಳೆದುಕೊಳ್ಳಲು ಯಾರು ಕಾರಣ?. 70ವರ್ಷ ಆಡಳಿತ ಮಾಡಿದರು ಏಕರೂಪ ನಾಗರಿಕ ಸಂಹಿತೆ ಜಾರಿಯಾಗದಿರಲು ಕಾರಣ ಯಾರು.

ವಿಶ್ವವಾಣಿ ಕ್ಲಬ್ ಹೌಸ್
30.04.2025
ಸಂಜೆ: 06.55 ರಿಂದ 08.05 ರವರೆಗೆ

ಬುಧವಾರದ ಅತಿಥಿ
ಸತ್ಯೇಶ್ ಬೆಳ್ಳೂರು
ವಿಷಯ
ಮ್ಯಾನೇಜ್ಮೆಂಟ್ ಕಥೆಗಳು

vishwavani.news

ನಾಡ ಸಮಸ್ಯೆಗೆ ಸಿಎಂ ಪರಿಹಾರ

- **ಸ್ಥಳ : ಬೆಂಗಳೂರು**

ಸಮಸ್ಯೆಯೇನು..?

- 'ರಾರಸಾ ನಿಗಮದ ಬಸ್ಸುಗಳಲ್ಲಿ ಕೂಲ್ ಲಿಪ್ ಜಾಹೀರಾತು ಪ್ರದರ್ಶಿಸಿರುವ ಬಗ್ಗೆ.
- **ಪರಿಹಾರ:** ಕರಾರಸಾ ನಿಗಮದ ಬಸ್ಸುಗಳಲ್ಲಿ ಮದ್ಯ, ತಂಬಾಕು, ಮಾದಕ ದ್ರವ್ಯಗಳು ಸಂಬಂಧಿತ ಹಾಗೂ ಯಾವುದೇ ಕಾನೂನು ಅಡಿಯಲ್ಲಿ ನಿಷೇಧಿಸಲಾದ ಜಾಹೀರಾತು ಪ್ರದರ್ಶನ ಮಾಡದಂತೆ ನೋಟಿಸ್ ನೀಡಲಾಗಿರುತ್ತದೆ. ಆದ್ದರಿಂದ ಕೂಲ್ ಲಿಪ್ ಜಾಹೀರಾತು ಪ್ರದರ್ಶಿಸಿರುವ ಸಂಪೂರ್ಣವಾಗಿ ತೆರವುಗೊಳಿಸಲು ಕ್ರಮ ವಹಿಸಲಾಗಿದೆ.

ಸಮಾಚಾರ ಸಣ್ಣದಲ್ಲ

ತೇಜಸ್ವಿ ಸೂರ್ಯಗೆ ದಲಿತರ ಬಗ್ಗೆ ಅಸಡ್ಡೆ

ಬಾಗಲಕೋಟೆ: ದಲಿತರು, ಅಂಬೇಡ್ಕರ್ ಹಾಗೂ ಸಂವಿಧಾನದ ಬಗ್ಗೆ ಗೌರವವಿಲ್ಲದ ಕಾರಣ ಸಂಸದ ತೇಜಸ್ವಿ ಸೂರ್ಯ ತಮ್ಮ ವಿರುದ್ಧ ಬಾಲಿಶತನದ ಹೇಳಿಕೆ ನೀಡಿದ್ದಾರೆ ಎಂದು ಅಬಕಾರಿ ಸಚಿವ ಆರ್.ಬಿ.ತಿಮ್ಮಾಪುರ ಆಕ್ರೋಶ ವ್ಯಕ್ತಪಡಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಚಡ್ಡಿ ಬಿಚ್ಚಿ ಚೆಕ್ ಮಾಡಬೇಕೆಂದು ತಮ್ಮ ವಿರುದ್ಧ ತೇಜಸ್ವಿ ಸೂರ್ಯ ಮಾತನಾಡಿದ್ದು, ದಲಿತರ ಬಗ್ಗೆ ಇರುವ ಅಸಡ್ಡೆಯನ್ನು ಅದು ತೋರುತ್ತದೆ ಎಂದು ವಾಗ್ದಾಳಿ ನಡೆಸಿದರು. ಪೆಹಲ್ಗಾಮ್ ಘಟನೆಯಲ್ಲಿ ಹೀಗೆಯೇ ನಡೆದಿದೆ ಎಂದು ನಾನೂ ಎಲ್ಲೂ ಹೇಳಿಲ್ಲ. ಕೆಲವು ಅನುಮಾನ ವ್ಯಕ್ತಪಡಿಸಿದ್ದೆ. ಈ ಬಗ್ಗೆ ಪಕ್ಷದ ಸೂಚನೆ ಇರುವುದರಿಂದ ನಾನೇನೂ ಮಾತನಾಡಲಾರೆ ಎಂದರು. ಬೆಳಗಾವಿಯಲ್ಲಿ ಪೊಲೀಸ್ ಅಧಿಕಾರಿ ಕಡೆಗೆ ಸಿಎಂ ಕೈ ಮಾಡಿರುವ ವಿಚಾರವನ್ನು ಸಮರ್ಥಿಸಿಕೊಂಡ ಅವರು ಪಕ್ಕಕ್ಕೆ ಸರಿಯುವಂತೆ ಕೈ ಮಾಡಿರಬಹುದು ಎಂದರು.

ವಿರಾಮ
ಪ್ರತಿ ಭಾನುವಾರ

ಗ್ರಾಮ ಆಡಳಿತಾಧಿಕಾರಿಗಳ ಹುದ್ದೆ ಖಾಲಿಯಾಗದಂತೆ ಕ್ರಮ। ಇನ್ನುಮುಂದೆ ಟಪಾಲು ಹೊತ್ತುಕೊಂಡು ಓಡಾಡುವ ಅಗತ್ಯವಿಲ್ಲ : ಕೃಷ್ಣಬೈರೇಗೌಡ

ಭ್ರಷ್ಟಾಚಾರಕ್ಕೆ ಆಸ್ಪದ ನೀಡದಂತೆ ಕಾರ್ಯನಿರ್ವಹಿಸಿ: ಸಿಎಂ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕಂದಾಯ ಇಲಾಖೆಯಲ್ಲಿ ಖಾಲಿಯಿರುವ ಹುದ್ದೆಗಳನ್ನು ಹಂತ-ಹಂತವಾಗಿ ಭರ್ತಿ ಮಾಡಲಾಗುವುದು. ಕಂದಾಯ ಇಲಾಖಾಧಿಕಾರಿಗಳು ಅನ್ನದಾತ ರೈತರ ಸೇವೆ ಮಾಡುತ್ತಿದ್ದೇವೆ ಎಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಯಾವುದೇ ಭ್ರಷ್ಟಾಚಾರಕ್ಕೆ ಆಸ್ಪದವಿರದಂತೆ ಪ್ರಾಮಾಣಿಕವಾಗಿ ಸೇವೆ ಸಲ್ಲಿಸಬೇಕು ಎಂದು ಹೇಳಿದರು.

ಕಂದಾಯ ಇಲಾಖೆಯಲ್ಲಿ ನೂತನವಾಗಿ ಆಯ್ಕೆಯಾಗಿರುವ 1000 ಪಿಡಿಒಗಳಿಗೆ ನೇಮಕಾತಿ ಆದೇಶ ವಿತರಣೆ ಮಾಡಿದ ಬಳಿಕ ಮಾತನಾಡಿದ ಅವರು, ನಮ್ಮ ದೇಶ ಗ್ರಾಮಗಳ ದೇಶ. ಕೃಷಿ ಪ್ರಮುಖವಾದ ಉದ್ಯೋಗವಾಗಿದ್ದು, ಹೆಚ್ಚು ಶೇ.60ಕ್ಕೂ ಹೆಚ್ಚು ಜನ ಕೃಷಿಯ ಮೇಲೆ ಅವಲಂಬಿತರಾಗಿದ್ದಾರೆ. ಜಮೀನುಗಳ ಲೆಕ್ಕಯಿಡುವುದು ಗ್ರಾಮ ಆಡಳಿತಾಧಿಕಾರಿಗಳ ಜವಾಬ್ದಾರಿ. ಹಳ್ಳಿಗಳಲ್ಲಿ ಶಾಂತಿ, ನೆಮ್ಮದಿ ನೆಲೆಸಲು ದಾಖಲೆಗಳು ಸರಿಯಾಗಿರಬೇಕು. ರೈತರಿಗೂ ಗ್ರಾಮ ಆಡಳಿತಾಧಿಕಾರಿಗಳಿಗೆ ಹತ್ತಿರದ ಸಂಬಂಧವಿದ್ದು, ಪ್ರತಿಯೊಬ್ಬ ರೈತರ ಪರಿಚಯ ಅವರಿಗಿರುತ್ತದೆ. ಅವರ ಭೂಮಿಯ ಕುರಿತು ಮಾಹಿತಿ ಗೊತ್ತಿರುತ್ತದೆ. ಅವರ ಪರಿಚಯವಿಟ್ಟುಕೊಂಡು ಅಗತ್ಯ ದಾಖಲಾತಿಗಳನ್ನು ಒದಗಿಸುವುದು ನಿಮ್ಮ ಕೆಲಸ ಎಂದು ಹೇಳಿದರು.

ಪಿಡಿಒಗಳು ಉತ್ತಮ ನಡತೆ, ಸಂಪರ್ಕವನ್ನು ಹೊಂದಿದ್ದರೆ ರೈತರು ನಿಮ್ಮ ಮಾತನ್ನು ಕೇಳುತ್ತಾರೆ. ಗ್ರಾಮ ಆಡಳಿತಾಧಿಕಾರಿಗಳು ಒಳ್ಳೆ ರೀತಿಯ ಕೆಲಸ ಮಾಡಿಕೊಟ್ಟರೆ ಅವರ ಮೇಲೂ ಗೌರವ ವಿರುತ್ತದೆ. ಜನರ ಕೆಲಸ ದೇವರ ಕೆಲಸ ಎಂದು ನೆನೆಪಿಟ್ಟುಕೊಳ್ಳಬೇಕು. ನಾವಿರುವುದೇ ಜನರ ಸೇವೆಗಾಗಿ ಎನ್ನುವುದನ್ನು ಮರೆಯಬಾರದು. ಆರು ಲಕ್ಷ ಜನ ಸರಕಾರಿ ನೌಕರರು ಅವರಿಗಾಗಿಯೇ ಇರುವುದು. ರಾಜಕಾರಣಿಗಳು, ಜನರಿಂದ ಆಯ್ಕೆಯಾದರೆ, ಸರಕಾರದಿಂದ ಆಯ್ಕೆಯಾದ ಸರಕಾರಿ ನೌಕರರು ಜನಸೇವೆಯನ್ನು ಅವರ ಧ್ಯೇಯವಾಗಿಸಬೇಕು ಎಂದರು.

ಕಂದಾಯ ಇಲಾಖೆಯಲ್ಲಿ ನೂತನವಾಗಿ ಆಯ್ಕೆಯಾಗಿರುವ 1000 ಪಿಡಿಒಗಳಿಗೆ ನೇಮಕಾತಿ ಆದೇಶ ಪತ್ರವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ,ಕಂದಾಯ ಸಚಿವ ಕೃಷ್ಣಬೈರೇಗೌಡ ವಿತರಣೆ ಮಾಡಿದರು.

> ಗ್ರಾಮ ಆಡಳಿತಾಧಿಕಾರಿಗಳು ಎಚ್ಚರಿಕೆಯಿಂದ ಕಾರ್ಯನಿರ್ವಹಿಸಿ, ರೈತರಿಗೆ ಅನ್ಯಾಯವಾಗದಂತೆ ಕರ್ತವ್ಯ ನಿರ್ವಹಿಸಬೇಕು. ಜಮೀನಿನ ದಾಖಲಾತಿಗಳ ಹಾಗೂ ಸರ್ವೇಗಳು ಸಮರ್ಪಕವಾಗಿ ನಡೆದರೆ ಗ್ರಾಮಗಳಲ್ಲಿ ಭೂಮಿ ಕಲಹವಿಲ್ಲದೇ ಬಹುಮಟ್ಟಿಗೆ ನೆಮ್ಮದಿ ನೆಲಸಲು ಸಾಧ್ಯವಿದೆ. ನೇಮಕಗೊಂಡಿರುವ ಪಿಡಿಒಗಳು ಉದಾಸೀನತೆಯ ಭಾವನೆ ತಾಳದೇ ಪ್ರಾಮಾಣಿಕವಾಗಿ ದುಡಿಯಬೇಕು.
> -ಸಿದ್ದರಾಮಯ್ಯ, ಮುಖ್ಯಮಂತ್ರಿ

ಲಂಚವಿಲ್ಲದೇ ಗ್ರಾಮ ಆಡಳಿತ ಹುದ್ದೆ: ಕೃಷ್ಣ ಬೈರೇಗೌಡ: ಕಾರ್ಯಕ್ರಮದಲ್ಲಿ ಮಾತನಾಡಿದ ಕಂದಾಯ ಸಚಿವ ಕೃಷ್ಣಬೈರೇಗೌಡ, ರಾಜ್ಯದ ಇತಿಹಾಸದಲ್ಲೇ 1,000 ಜನ ಗ್ರಾಮ ಆಡಳಿತ ಅಧಿಕಾರಿಗಳ ನೇಮಕಕ್ಕೆ ಒಂದೇ ಹಂತದಲ್ಲಿ ಆದೇಶ ಹೊರಡಿಸಿದ್ದು ಇದೇ ಮೊದಲು. ಅಲ್ಲದೆ, ಒಂದು ಪೈಸೆಯೂ ಲಂಚಕ್ಕೆ ಆಸ್ಪದ ನೀಡದೆ ಪಾರದರ್ಶಕವಾಗಿ ನೇಮಕ ಮಾಡಲಾಗಿದೆ. ರಾಜ್ಯದ ಇತಿಹಾಸದಲ್ಲೇ ಏಕ ಕಾಲದಲ್ಲಿ ಸಾವಿರ ಜನರ ನೇಮಕ ಇದೆ ಮೊದಲು. ಇದೊಂದು ದಾಖಲೆ. ಈ ಹಿಂದೆ ಪಿಯುಸಿ ಅಂಕದ ಆಧಾರದಲ್ಲಿ ಆಯಾ ಜಿಲ್ಲೆಯಲ್ಲಿ ಸೀಮಿತ ಸ್ಥಾನಗಳಿಗೆ ನೇಮಕಾತಿ ಆಗುತ್ತಿತ್ತು. ಆದರೆ, ಹುದ್ದೆ ನೇಮಕಾತಿ ಪ್ರಕ್ರಿಯೆಯಲ್ಲಿ ಹಲವು ಜಿಲ್ಲೆಗಳಲ್ಲಿ ಪಾರದರ್ಶಕತೆ ಇಲ್ಲ ಎಂಬ ದೂರು ಇತ್ತು. ಹೀಗಾಗಿ ನಮ್ಮ ಸರಕಾರ ಬಂದ ಮೇಲೆ ಇಡೀ ರಾಜ್ಯದಲ್ಲಿ ಒಂದೇ ಬಾರಿ ಪಾರದರ್ಶಕವಾಗಿ ನೇಮಕವಾಗಬೇಕು, ಎಲ್ಲ ಜಿಲ್ಲೆಯವರಿಗೂ ಸಮಾನ ಸವಕಾಶ ಸಿಗಬೇಕು ಎಂಬ ದೃಷ್ಟಿಯಲ್ಲಿ ಕ್ರಮವಹಿಸಲಾಗಿತ್ತು ಎಂದರು.

> ಗ್ರಾಮ ಆಡಳಿತ ಅಧಿಕಾರಿ ಕೆಲಸಕ್ಕೆ ಶಿಫಾರಸು ಮಾಡುವಂತೆ ಏಳೆಂಟು ಜನ ನನ್ನ ಬಳಿಯೂ ಬಂದಿದ್ದರು. ಆದರೆ, ನಾನೇ ಮನಸ್ಸು ಮಾಡಿದರೂ ಶಿಫಾರಸು ಮಾಡಲು ಸಾಧ್ಯವಾಗದಂತೆ ಪಾರದರ್ಶಕವಾಗಿ ಪರೀಕ್ಷೆ ನಡೆಸಲಾಗಿದೆ. ಪರೀಕ್ಷೆಯ ಉತ್ತರ ಪತ್ರಿಕೆ ತಿದ್ದುವುದು ಸೇರಿದಂತೆ ಯಾವ ಅಕ್ರಮ ಚಟುವಟಿಕೆಗಳಿಗೂ ಆಸ್ಪದ ಇಲ್ಲದಂತೆ ಪರೀಕ್ಷೆ ನಡೆಸಲಾಗಿದೆ. ಇಲ್ಲಿ ಕೆಲಸ ಗಿಟ್ಟಿಸಿದವರು ಹುದ್ದೆಗಾಗಿ ಒಂದು ಪೈಸೆಯಾದರೂ ಯಾರಿಗಾದರೂ ಲಂಚ ಕೊಟ್ಟಿದ್ದೀರ . ಇದೇ ಕಾರಣಕ್ಕೆ ಈ ಬಗ್ಗೆ ಈವರೆಗೆ ಒಂದೂ ತಕರಾರು ಬಂದಿಲ್ಲ. ಒಂದು ಪೈಸೆಯೂ ಲಂಚ ಇಲ್ಲದೆ ಹುದ್ದೆ ನೀಡಿದ್ದೇವೆ.
> ಕೃಷ್ಣಬೈರೇಗೌಡ, ಕಂದಾಯ ಸಚಿವ

ಕಾರ್ಯಕ್ರಮದಲ್ಲಿ ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿಗಳಾದ ರಾಜೇಂದ್ರ ಕುಮಾರ್ ಕಟಾರಿಯಾ, ಬೆಂಗಳೂರು ವಲಯ ಆಯುಕ್ತರಾದ ಆದಿತ್ಯ ಆಮ್ಲನ್ ಬಿಶ್ವಾಸ್, ಕಂದಾಯ ಆಯುಕ್ತರಾದ ಸುನೀಲ್ ಕುಮಾರ್ ಹಾಗೂ ಬೆಂಗಳೂರು ನಗರ ಜಿಲ್ಲಾಧಿಕಾರಿಗಳಾದ ಜಿ. ಜಗದೀಶ್ ಉಪಸ್ಥಿತರಿದ್ದರು.

4000 ಜನರಿಗೆ ಲ್ಯಾಪ್‌ಟಾಪ್ ವಿತರಣೆ

ಕಾರ್ಯಕ್ರಮದಲ್ಲಿ ನಾಲ್ಕು ಸಾವಿರ ಜನ ಗ್ರಾಮ ಆಡಳಿತ ಅಧಿಕಾರಿಗಳಿಗೆ ಲ್ಯಾಪ್ ಟಾಪ್ ವಿತರಿಸಿದ ಬಗ್ಗೆ ಮಾತನಾಡಿದ ಕೃಷ್ಣಬೈರೇಗೌಡ, ದಿನ ಬೆಳಗಾದರೆ ಗ್ರಾಮ ಆಡಳಿತ ಅಧಿಕಾರಿಗಳು ತಾಲೂಕು ಕಚೇರಿಗಳಿಗೆ ಟಪಾಲು ಕೊಡೋದು ತಗೋಳೋದೆ ಅವರಿಗೆ ಕೆಲಸವಾಗಿದೆ. ಕೆಲಸ ಮಾಡೋದು ಬಿಟ್ಟು ಓಡಾಡೋದರಲ್ಲೇ ಸಮಯ ವ್ಯರ್ಥವಾಗುತ್ತಿದೆ. ಈ ಟಪಾಲು ವ್ಯವಸ್ಥೆ 200 ವರ್ಷಗಳಷ್ಟು ಹಳೆಯದು. ಈ ವ್ಯವಸ್ಥೆಗೆ ಏನಾದ್ರೂ ಅರ್ಥ ಇದೆಯಾ? ಇದು ಎಷ್ಟು ಅನಗತ್ಯ ಹೊರೆ. ಈ ಹೊರೆ ಕಡಿಮೆ ಮಾಡುವ ಉದ್ದೇಶದಿಂದ ಗ್ರಾಮ ಆಡಳಿತ ಅಧಿಕಾರಿಗಳಿಗೆ ಲ್ಯಾಪ್‌ಟಾಪ್ ನೀಡಲಾಗುತ್ತಿದೆ. ಟಪಾಲು ವ್ಯವಸ್ಥೆಯಿಂದ ಕೆಲಸ ಸಾಕಷ್ಟು ವಿಳಂಬವಾಗುತ್ತಿದೆ. ಪರಿಣಾಮ ಅರ್ಜಿ ನೀಡಿದ ಜನ ಆಕಾಶ ಭೂಮಿ ನೋಡುವಂತಾಗಿದೆ. ಆದ್ದರಿಂದ ಸಂಪೂರ್ಣ ಡಿಜಿಟಲೀಕರಣಗೊಳಿಸಲು ತೀರ್ಮಾನಿಸಲಾಗಿದೆ ಎಂದರು.

ಉತ್ತರ ವಲಯದ ಐಜಿಪಿ ಚೇತನಸಿಂಗ್ ರಾಥೋಡ್‌ರಿಂದ ಆದೇಶ

ಕಪ್ಪು ಬಾವುಟ ಪ್ರದರ್ಶನ: ಇಬ್ಬರು ಪೇದೆಗಳು ಅಮಾನತು

ಬೆಳಗಾವಿ: ಮುಖ್ಯಮಂತ್ರಿ ಸಿದ್ದರಾಮಯ್ಯ ಭಾಷಣಕ್ಕೆ ಅಡ್ಡಿಪಡಿಸಿದ್ದು ಮಾತ್ರವಲ್ಲದೆ ಕಪ್ಪು ಬಾವುಟ ಪ್ರದರ್ಶನ ಮಾಡಿ ಗದ್ದಲ ಉಂಟುಮಾಡಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರು ಪೊಲೀಸ್ ಪೇದೆಗಳ ತಲೆದಂಡವಾಗಿದೆ.

ಖಡೇಬಜಾರ್ ಠಾಣೆಯ ಬಿ.ಎ. ನೌಕುಡಿ ಹಾಗೂ ಕ್ಯಾಂಪ್ ಠಾಣೆಯ ಮಲ್ಲಪ್ಪ ಹಡಗಿನಾಳ ಎಂಬ ಪೇದೆಗಳನ್ನು ಅಮಾನತು ಮಾಡಿ ಉತ್ತರ ವಲಯದ ಐಜಿಪಿ ಚೇತನಸಿಂಗ್ ರಾಥೋಡ್ ಆದೇಶ ಹೊರಡಿಸಿದ್ದಾರೆ.

ಸೋಮವಾರ ನಗರದ ಸಿಪಿಎಡ್ ಮೈದಾನದಲ್ಲಿ ಕೇಂದ್ರ ಸರಕಾರದ ಬೆಲೆ ಏರಿಕೆ ನೀತಿ ಖಂಡಿಸಿ ಕಾಂಗ್ರೆಸ್ ವತಿಯಿಂದ ಪ್ರತಿಭಟನಾ ಸಮಾವೇಶ ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಸಿಎಂ ಸಿದ್ದರಾಮಯ್ಯ ಕೇಂದ್ರ ಸರಕಾರದ ವಿರುದ್ಧ ವಾಗ್ದಾಳಿ ನಡೆಸುವ ಸಂದರ್ಭದಲ್ಲಿ ಬಿಜೆಪಿ ಮಹಿಳಾ ಕಾರ್ಯಕರ್ತೆಯರು ವೇದಿಕೆಗೆ ನುಗ್ಗಿ ಕಪ್ಪು ವಸ್ತ್ರ ಪ್ರದರ್ಶಿಸಿದ್ದು ಮಾತ್ರವಲ್ಲದೆ ಘೋಷಣೆ ಕೂಗಿ ಕೈ ನಾಯಕರಿಗೆ ಮುಜುಗರ ಉಂಟುಮಾಡಿದ್ದರು.

ಈ ಘಟನೆಗೆ ವೇಳೆ ಖುದ್ದು ಸಿಎಂ ಸಿದ್ದರಾಮಯ್ಯ ಪೊಲೀಸ್ ಅಧಿಕಾರಿಗಳ ಕಾರ್ಯವೈಖರಿ ವಿರುದ್ಧ ಆಕ್ರೋಶ ಹೊರಹಾಕಿದ್ದರು. ಇನ್ನೂ ಘಟನಾ ಸ್ಥಳಕ್ಕೆ ಓಡಿಬಂದ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಕಾನೂನು ಸುವ್ಯವಸ್ಥೆ ಡಿಸಿಪಿ ರೋಹನ್ ಜಗದೀಶ್ ವಿರುದ್ಧ ಏಕವಚನದಲ್ಲೇ ತರಾಟೆಗೆ ತಗೆದುಕೊಂಡಿದ್ದರು. ಆದರೆ ಇಷ್ಟೆಲ್ಲಾ ಅವಾಂತರ ನಡುವೆ ಕ್ಷುಲ್ಲಕ ಕಾರಣ ನೀಡಿ ಇಬ್ಬರು ಪೊಲೀಸ್ ಪೇದೆಗಳನ್ನು ಅಮಾನತು ಮಾಡಿರುವ ಹಿರಿಯ ಅಧಿಕಾರಿಗಳ ನಿರ್ಧಾರಕ್ಕೆ ಸಾರ್ವಜನಿಕರು ಆಕ್ರೋಶ ಹೊರಹಾಕಿದ್ದಾರೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಮಂಗಳವಾರವೂ ರಾಜ್ಯ ಸರಕಾರದ ವಿರುದ್ಧ ಬಿಜೆಪಿ ನಾಯಕರು ವಾಗ್ದಾಳಿ ನಡೆಸಿದ್ದು, ಸಿದ್ದರಾಮಯ್ಯ ಅವರ ಈ ನಡೆ ಪೊಲೀಸರ ಮನಸ್ಥೈರ್ಯವನ್ನು ಕುಸಿಯುವ ಕೆಲಸವನ್ನು ಮಾಡುತ್ತಿದ್ದಾರೆ ಎಂದು ಟೀಕಿಸಿದ್ದಾರೆ.

ವಿಷಯವೇ ಗೊತ್ತಿಲ್ಲ: ರಾಜ್ಯದಲ್ಲಿ ತೀವ್ರ ವಿವಾದಕ್ಕೆ ಕಾರಣವಾಗಿರುವ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾತನಾಡಿರುವ ಗೃಹ ಸಚಿವ ಡಾ.ಜಿ. ಪರಮೇಶ್ವರ, ಬೆಳಗಾವಿಯಲ್ಲಿ ವೇದಿಕೆ ಮೇಲೆ ನಡೆದ ಘಟನೆಯೇ ಗೊತ್ತಿಲ್ಲ, ಪೂರ್ಣ ಮಾಹಿತಿ ಪಡೆದು ಪ್ರತಿಕ್ರಿಯಿಸುವೆ ಎನ್ನುವ ಮೂಲಕ ಪ್ರಕರಣದ ಪ್ರತಿಕ್ರಿಯಿಸಿಲು ಹಿಂದೇಟು ಹಾಕಿದ್ದಾರೆ.

ಎಎಸ್‌ಪಿ ಮೇಲೆ ಮುಖ್ಯಮಂತ್ರಿಗಳು ಕೈ ಮಾಡಲು ಹೋಗಿರುವ ಬಗ್ಗೆ ನನಗೆ ಸಂಪೂರ್ಣವಾದ ಮಾಹಿತಿ ಇಲ್ಲ. ನಡೆದಿರುವ ಘಟನೆ ಏನು? ಏತಕ್ಕೆ ಕೋಪಗೊಂಡರು ಎಂಬುದು ಸರಿಯಾದ ಮಾಹಿತಿ ತೆಗೆದುಕೊಂಡಿಲ್ಲ. ಪೂರ್ಣ ಮಾಹಿತಿ ತೆಗೆದುಕೊಂಡ ಬಳಿಕ ನಾನು ಪ್ರತಿಕ್ರಿಯೆ ಮಾಡುತ್ತೇನೆ. ಬಿಜೆಪಿ ಮಹಿಳಾ ಮೋರ್ಚಾದ ಐದಾರು ಜನ ಕಾಂಗ್ರೆಸ್ ಶಾಲುಗಳನ್ನು ಹಾಕಿಕೊಂಡು ಕಾರ್ಯಕ್ರಮಕ್ಕೆ ಒಳಗೆ ಹೋಗಿದ್ದರು. ನಂತರ ಅವರು ಎಲ್ಲರೂ ಮಾತಾಡುವಾಗ ಏನು ಮಾಡಿಲ್ಲ. ಮುಖ್ಯಮಂತ್ರಿಯವರು ಮಾತಾಡುವಾಗ ಕಪ್ಪು ಬಾವುಟ ಪ್ರದರ್ಶಿಸಿದ್ದಾರೆ. ಈ ವೇಳೆ ಲೋಪ ಇಲಾಖೆಯಿಂದ ಆಗಿದೆಯಾ ಎಂಬುದರ ಬಗ್ಗೆ ಮಾಹಿತಿ ನೀಡುವಂತೆ ಕಾನೂನು ಸುವ್ಯವಸ್ಥೆ ಎಡಿಜಿಪಿಯವರಿಗೆ ಸೂಚಿಸಿದ್ದೇನೆ ಎಂದು ತಿಳಿಸಿದರು.

> ಭದ್ರತಾ ವೈಫಲ್ಯ ಎನ್ನುವುದಾದರೆ ಬಿಜೆಪಿಯವರು ಕಾಂಗ್ರೆಸ್ ಶಾಲು ಯಾಕೆ ಹಾಕಿಕೊಂಡು ಬಂದರು. ಬಿಜೆಪಿ ಶಾಲು ಹಾಕಿಕೊಂಡು ಬರಬಹುದಿತ್ತಲ್ಲವೇ? ಬಿಜೆಪಿ ಶಾಲು ಹಾಕಿಕೊಂಡು ಬಂದಿದ್ದರೆ ಭದ್ರತಾ ವೈಫಲ್ಯವೇ ಅಥವಾ ಏನು ಎಂಬುದು ಗೊತ್ತಾಗುತ್ತಿತ್ತು. ಕಾಂಗ್ರೆಸ್ ಪಕ್ಷದ ಶಾಲು ಹಾಕಿಕೊಂಡು ಬರುವುದಕ್ಕೆ ಇವರಿಗೆ ಏನು ನೈತಿಕತೆ ಇತ್ತೋ ಗೊತ್ತಿಲ್ಲ.
> ಪರಮೇಶ್ವರ, ಗೃಹ ಸಚಿವ

> ರಾಜ್ಯಾದ್ಯಂತ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಅಭಿಮಾನಿಗಳು ಇದ್ದಾರೆ. ನಮ್ಮ ಮುಖ್ಯಮಂತ್ರಿಗಳು ಮಾತನಾಡುವಾಗ ಕಪ್ಪು ಬಟ್ಟೆ ಹಾರಿಸಿದ್ದಾರೆ. ಇದು ಬಿಜೆಪಿ ಕಾರ್ಯಕರ್ತರಿಗೆ ಶೋಭೆ ತರುವುದಿಲ್ಲ.
> ಲಕ್ಷ್ಮೀ ಹೆಬ್ಬಾಳ್ಕರ್, ಸಚಿವೆ

ರಾಜ್ಯದ ಆಯ್ದ 100 ಗ್ರಾಮ ಪಂಚಾಯಿತಿಗಳಲ್ಲಿ ಆರಂಭ: ಖರ್ಗೆ

ಮಹಿಳೆಯರಿಗೆ ಕೌಶಲ ತರಬೇತಿ

ಬೆಂಗಳೂರು: ರಾಜ್ಯದ ಆಯ್ದ 100 ಗ್ರಾ.ಪಂ ಮಹಿಳೆಯರ ಆಕಾಂಕ್ಷೆ ಮತ್ತು ಆಸಕ್ತಿಗೆ ಅನುಗುಣವಾಗಿ ಉದ್ಯೋಗಾಧಾರಿತ ಕೌಶಲ ತರಬೇತಿ ನೀಡಲು ಸಾವಿತ್ರಿಬಾಯಿ ಫುಲೆ ಮಹಿಳಾ ಸಬಲೀಕರಣ ಯೋಜನೆ ಪ್ರಾರಂಭಿಸಲಾಗುತ್ತಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

ಈ ಕುರಿತ ಪ್ರಕಟಣೆಯಲ್ಲಿ ಅವರು, ಈ ಯೋಜನೆಯಲ್ಲಿ ಪ್ರತಿ ಜಿಲ್ಲೆಯಿಂದ ಆಯ್ದ 3 ಗ್ರಾಮ ಪಂಚಾಯತಿಗಳಂತೆ ಒಟ್ಟು 29 ಜಿಲ್ಲೆಗಳಿಂದ 87 ಕೇಂದ್ರಗಳು, ಹಾಗೂ ಬೆಳಗಾವಿ ಜಿಲ್ಲೆಯಿಂದ 7 ಮತ್ತು ತುಮಕೂರು ಜಿಲ್ಲೆಯಲ್ಲಿ 6 ಕೇಂದ್ರಗಳಂತೆ ಒಟ್ಟು 100 ಕೇಂದ್ರಗಳನ್ನು ಪ್ರಾರಂಭಿಸಲಾಗುವುದು. ಪ್ರಾಯೋಗಿಕವಾಗಿ 100 ಗ್ರಾ.ಪಂ ಗಳಲ್ಲಿ ಸಾವಿತ್ರಿಬಾಯಿ ಫುಲೆ ಮಹಿಳಾ ಸಬಲೀಕರಣ ಯೋಜನೆ ಮಹಿಳಾ ಕೌಶಲ್ಯ ಅಭಿವೃದ್ಧಿ ಕೇಂದ್ರ ಪ್ರಾರಂಭಿಸಲಾಗುತ್ತಿದ್ದು, ಈ ಕೇಂದ್ರಗಳಲ್ಲಿ ಮಹಿಳೆಯರ ಆಕಾಂಕ್ಷೆ ಮತ್ತು ಆಸಕ್ತಿಗೆ ಅನುಗುಣವಾಗಿ ಉದ್ಯೋಗಾಧಾರಿತ ಕೌಶಲ ತರಬೇತಿ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಕಲ್ಪಿಸಲು ಇಲಾಖೆಯ ಸಹಯೋಗದೊಂದಿಗೆ ಯೋಜನೆ ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ ಎಂದು ಹೇಳಿದ್ದಾರೆ.

ಪ್ರತಿ ಕೇಂದ್ರದಲ್ಲಿ ಸ್ವ ಉದ್ಯೋಗ ಕೈಗೊಳ್ಳುವ ಮಹಿಳೆಯರಿಗೆ ಸರಕಾರದ ಕೌಶಲ ಅಭಿವೃದ್ಧಿ ನಿಗಮ, ರುಡ್ಸೆಟಿ-ಆರ್‌ಸೆಟಿ ಸರಕಾರೇತರ ಬೆಂಬಲ ಸಂಸ್ಥೆಗಳ ಮೂಲಕ ತರಬೇತಿ ನೀಡಿ, ಬ್ಯಾಂಕುಗಳೊಂದಿಗೆ ಸಂಪರ್ಕ ಏರ್ಪಡಿಸಿ, ಅನುಸರಣೆ ಮತ್ತು ಬೆಂಬಲ ನೀಡುವ ಮೂಲಕ 30,000 ಮಹಿಳೆಯರಿಗೆ ಸ್ವ-ಉದ್ಯೋಗ ಪ್ರಾರಂಭಿಸುವಂತೆ ಪ್ರೇರೇಪಿಸಲಾಗುವುದು. ಪ್ರತಿ ತರಬೇತಿ ಕೇಂದ್ರದಿಂದ 300 ಮಹಿಳೆಯರಿಗೆ ಕೌಶಲ ತರಬೇತಿ ನೀಡುವ ಗುರಿ ಹೊಂದ ಲಾಗಿದೆ ಎಂದು ಹೇಳಿದ್ದಾರೆ.

> ಗ್ರಾಮೀಣ ಪ್ರದೇಶದ ಮಹಿಳೆಯರು ಕೃಷಿಯಿಂದ ಹೆಚ್ಚಿನ ಲಾಭಪಡೆಯಲಾಗದೇ, ಆದಾಯ ಗಳಿಕೆಗಾಗಿ ಪರ್ಯಾಯ ವ್ಯವಸ್ಥೆ ಹುಡುಕುತ್ತಿದ್ದಾರೆ. ಆದ್ದರಿಂದ ಗ್ರಾ.ಪಂ ವ್ಯಾಪ್ತಿಯಲ್ಲಿ ಮಹಿಳೆಯರ ಆಕಾಂಕ್ಷೆ ಮತ್ತು ಆಸಕ್ತಿಗೆ ಅನುಗುಣವಾಗಿ ಉದ್ಯೋಗಾಧಾರಿತ ಕೌಶಲ ತರಬೇತಿ ಕೇಂದ್ರ ಪ್ರಾರಂಭಿಸುವ ಅವಶ್ಯಕತೆ ಇದೆ. ಆಯ-ವ್ಯಯದಲ್ಲಿ ಘೋಷಿಸಿರುವಂತೆ ಸಾವಿತ್ರಿಬಾಯಿ ಫುಲೆ ಮಹಿಳಾ ಸಬಲೀಕರಣ ಯೋಜನೆ ಪ್ರಾರಂಭಿಸುವುದರಿಂದ ಮಹಿಳೆಯರಲ್ಲಿ ಅಡಗಿರುವ ಸಾಮರ್ಥ್ಯ ವೃದ್ಧಿಗೊಳ್ಳುವುದಲ್ಲದೆ, ಅವರನ್ನು ಆರ್ಥಿಕವಾಗಿ ಸಬಲಗೊಳಿಸುವುದರ ಜತೆಗೆ ಸ್ವಾವಲಂಬಿಗಳನ್ನಾಗಿ ಮಾಡುವ ಮಹತ್ವಾಕಾಂಕ್ಷೆ ಹೊಂದಿದೆ.
> -ಪ್ರಿಯಾಂಕ್ ಖರ್ಗೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ

ಬಿಜೆಪಿ ಅವರಷ್ಟು ಮಾನ, ಮರ್ಯಾದೆ ಬಿಟ್ಟಿಲ್ಲ: ಸಚಿವ ಶಿವರಾಜ್ ತಂಗಡಗಿ

ಬಿಜೆಪಿ ಕಾರ್ಯಕರ್ತರಿಂದ ಅಪಮಾನ

ಬಾಗಲಕೋಟೆ: ಬೆಳಗಾವಿಯಲ್ಲಿ ಈಚೆಗೆ ನಡೆದ ಕಾಂಗ್ರೆಸ್ ಪ್ರತಿಭಟನಾ ಸಭೆಯಲ್ಲಿ ಸಿಎಂ ಮಾತನಾಡುತ್ತಿರುವಾಗ ಬಿಜೆಪಿ ಪಕ್ಷವರು ತಮ್ಮ ಕಾರ್ಯಕರ್ತರನ್ನು ಬಿಟ್ಟು ಅಪಮಾನ ಎಸಗಿದ್ದಾರೆ. ಅವರಿಗೆ ಮಾನ ಮರ್ಯಾದೆ ಇಲ್ಲ ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ ಕಿಡಿಕಾರಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಮುಂದಿನ ದಿನಗಳಲ್ಲಿ ಅವರ ಕಾರ್ಯಕ್ರಮದಲ್ಲಿ ನಮ್ಮ ಕಾರ್ಯಕರ್ತರು ಇದೇ ರೀತಿ ಮಾಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಸಿಎಂ ಕಾರ್ಯಕ್ರಮಕ್ಕೆ ಬಂದು ಧಿಕ್ಕಾರ ಕೂಗುತ್ತಾರೆ. ಕಪ್ಪು ಬಟ್ಟೆ ತೋರಿಸುತ್ತಾರೆ. ಈ ಕೆಲಸ ನಮ್ಮ ಕಾರ್ಯಕರ್ತರಿಂದ ಸಾಧ್ಯ ಇಲ್ಲವೇ. ಬಿಜೆಪಿ ಅವರಷ್ಟು ಮಾನ, ಮರ್ಯಾದೆ ಬಿಟ್ಟಿಲ್ಲ. ಈ ರೀತಿ ಮಾಡುವುದರಿಂದ ಕಾನೂನು ಮತ್ತು ಸುವ್ಯವಸ್ಥೆಗೆ ಧಕ್ಕೆ ಬರುತ್ತದೆ ಎಂಬ ಸಾಮಾನ್ಯ ಪ್ರಜ್ಞೆ ಇರಬೇಕು. ಈ ರೀತಿ ವರ್ತಿಸುವುದು ಸರಿಯಲ್ಲ. ಕೇಂದ್ರ ಸರಕಾರ ಅಗತ್ಯ ವಸ್ತುಗಳ ಬೆಲೆ ಏರಿಸಿದೆ. ಆ ಬಗ್ಗೆ ಪ್ರತಿಭಟಿಸಲಿ ಎಂದು ಹೇಳಿದರು.

ಪಹಲ್ಗಾಮ್ ಘಟನೆಯಲ್ಲಿ ಭದ್ರತಾ ವೈಫಲ್ಯ ಎದ್ದು ಕಾಣುತ್ತಿದೆ. ಸರ್ವಪಕ್ಷಗಳ ಸಭೆ ಕರೆದಿರುವ ಪ್ರಧಾನಿ ಮೋದಿ ಅವರು,ತಾವು ಬಿಹಾರ ಚುನಾವಣೆ ಪ್ರಚಾರಕ್ಕೆ ತೆರಳುತ್ತಾರೆ. ಇದು ಅವರ ಹುದ್ದೆಗೆ ಶೋಭೆ ತರುತ್ತದೆಯೇ ಎಂದು ಪ್ರಶ್ನಿಸಿದರು.

- ಬಿಜೆಪಿ ಪಕ್ಷದವರು ತಮ್ಮ ಕಾರ್ಯಕರ್ತರನ್ನು ಬಿಟ್ಟು ಅಪಮಾನ ಎಸಗಿದ್ದಾರೆ.
- ಮುಂದಿನ ದಿನಗಳಲ್ಲಿ ಅವರ ಕಾರ್ಯಕ್ರಮದಲ್ಲಿ ನಮ್ಮ ಕಾರ್ಯಕರ್ತರು ಇದೇ ರೀತಿ ಮಾಡಬೇಕಾಗುತ್ತದೆ.
- ಕೇಂದ್ರ ಸರಕಾರ ಅಗತ್ಯ ವಸ್ತುಗಳ ಬೆಲೆ ಏರಿಸಿದೆ. ಆ ಬಗ್ಗೆ ಬಿಜೆಪಿಯವರು ಪ್ರತಿಭಟಿಸಲಿ

ಕಾಯಕವೇ ಕೈಲಾಸವೆಂದು ಜಗಕ್ಕೆ ತೋರಿದವರು ಬಸವಣ್ಣ

ಶಿವರಾಜ್ ತಂಗಡಗಿ
ಕನ್ನಡ ಮತ್ತು ಸಂಸ್ಕೃತಿ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವರು

ಇಡೀ ಜಗತ್ತು ಗೌರವಿಸುವ ಹಾಗೂ ಎಲ್ಲೂ ಒಪ್ಪುವ 12ನೇ ಶತಮಾನದ ಸಾಮಾಜಿಕ ಹರಿಕಾರ ಜಗಜ್ಯೋತಿ ಬಸವಣ್ಣನವರು ಜನಿಸಿದ್ದು, ವಿಜಯಪುರ ಜಿಲ್ಲೆಯ ಬಾಗೇವಾಡಿಯಲ್ಲಿ. ಇವರ ತಂದೆ ಮಾದರಸ, ತಾಯಿ ಮಾದಲಾಂಬಿಕೆ. ಬಸವಣ್ಣ ಅವರು ಬಾಲ್ಯದಿಂದಲೇ ಅವರ ಚಿಂತನಶೀಲತೆ, ಗೊಡ್ಡು ಸಂಪ್ರದಾಯಗಳನ್ನು ಪ್ರಶ್ನಿಸುವ ಮತ್ತು ಪ್ರತಿಭಟಿಸುತ್ತಿದ್ದ ಗುಣ ಹೊಂದಿದ್ದವರು. ತನ್ನ ಸಮಾಜ ಕೂಡ ಹೀಗೆ ಇರಬೇಕೆಂದು ಸಮಾಜದ ಏಳ್ಗೆಗಾಗಿ ದುಡಿದ ಮಹಾನ್ ಸುಧಾರಕರು ಬಸವಣ್ಣ.

ಕಲಚೂರಿ ರಾಜವಂಶದ ದೊರೆ ಬಿಜ್ಜಳರ ಆಳ್ವಿಕೆಯಲ್ಲಿ ಬಸವಣ್ಣ ಅವರು 12ನೇ ಶತಮಾನದ ಭಾರತೀಯ ತತ್ವಜ್ಞಾನಿ, ರಾಜನೀತಿಜ್ಞ, ಶಿವ - ಕೇಂದ್ರಿತ ಭಕ್ತಿ ಚಳವಳಿಯಲ್ಲಿ ಕನ್ನಡ ಕವಿ ಮತ್ತು ಸಮಾಜ ಸುಧಾರಕರಾಗಿದ್ದರು. ಇನ್ನು ಕನ್ನಡ ಸಾಹಿತ್ಯ ಲೋಕಕ್ಕೆ ವಚನಕಾರರ ಕೊಡುಗೆ ವಿಶಿಷ್ಟವಾದದ್ದು. ಅಲ್ಲಮಪ್ರಭು, ಅಕ್ಕಮಹಾದೇವಿ, ದಾಸಿಮಯ್ಯ, ಸಿದ್ದರಾಮ ಮುಂತಾದ ಶ್ರೇಷ್ಠ ವಚನಕಾರರಲ್ಲಿ ಅತಿ ಶ್ರೇಷ್ಠ ವಚನಕಾರರು ಬಸವಣ್ಣ.

ಬಸವಣ್ಣ ಅವರು ತಮ್ಮ ಭಕ್ತಿ ಪ್ರಧಾನ ವಚನಗಳಲ್ಲಿ ಸಮಾಜದ ಅಂಕು- ಡೊಂಕುಗಳನ್ನು ಹಾಗೂ ಅಂದಿನ ಕಾಲದ ಸಮಾಜದಲ್ಲಿದ್ದ ಮೇಲು- ಕೀಳು, ಡಂಭಾಚಾರ, ಮೂಢ ನಂಬಿಕೆ ಮುಂತಾದವುಗಳ ವಿರುದ್ಧ ಧ್ವನಿ ಎತ್ತಿದ್ದನ್ನು ಅವರ ವಚನಗಳಲ್ಲಿ ಗಮನಿಸಬಹುದು. ಬಸವಣ್ಣ ಅವರು 'ವಚನ'ಗಳೆಂಬ ಹೊಸ ಸಾಹಿತ್ಯ ಪ್ರಕಾರವನ್ನೇ ಹುಟ್ಟು ಹಾಕಿದರು. ಬಸವಣ್ಣನ ವಚನಗಳು ಇಂದಿಗೂ ಪ್ರಸ್ತುತವಾಗಿದ್ದು, ಅಂದು ಅವರು ವಚನಗಳ ಮೂಲಕ ನುಡಿದಿದ್ದ ಮಾತುಗಳನ್ನು ಪಾಲಿಸಿದರೆ ಇಡೀ ಸಮಾಜದ ಶಾಂತಿಯ ನೆಲೆವೀಡಾಗುವುದರಲ್ಲಿ ಸಂಶಯವಿಲ್ಲ. ಬಸವೇಶ್ವರರು ಮಾನವೀಯತೆಯ ಏಕತೆ, ಸಮಾನತೆ, ಸಹೋದರತ್ವವನ್ನು ವಿಶ್ವಾದ್ಯಂತ ಸಂದೇಶವನ್ನು ನೀಡಿದ್ದರಿಂದ ಸಮಕಾಲೀನ ಮತ್ತು ಪ್ರಗತಿಪರ ಸಮಾಜವನ್ನು ನಿರ್ಮಿಸಲು ಅತ್ಯಂತ ಪ್ರಸ್ತುತರಾಗಿದ್ದಾರೆ.

ಬಸವಣ್ಣ ಅವರ ನೇತೃತ್ವದಲ್ಲಿ ಜಾತಿ ಭೇದ ಮತ್ತು ಲಿಂಗತಾರಮ್ಯವಿಲ್ಲದ ಸಮಾಜವನ್ನು ರೂಪಿಸುವ ಕೆಲಸ ನಡೆಯಿತು. ಭಾರತದ ಸಂವಿಧಾನವು ಇದನ್ನೇ ಎತ್ತಿ ಹಿಡಿದಿದೆ. ಬಸವಣ್ಣ ಅವರು ರಾಜಕೀಯ, ಸಾಮಾಜಿಕ, ಆರ್ಥಿಕ ಹಾಗೂ ತಾತ್ವಿಕ ಮೌಲ್ಯಗಳನ್ನು ಬಸವಣ್ಣ ಪ್ರತಿಪಾದಿಸಿದ್ದರಲ್ಲದೆ, ಸಾಮಾಜಿಕ ಜಾಗೃತಿಯನ್ನು ಉತ್ತೇಜಿಸಿದರು. ಅಂತರ್ ಜಾತಿಯ ವಿವಾಹಕ್ಕೆ ಪ್ರೋತ್ಸಾಹ, ಸಹ ಭೋಜನಕ್ಕೆ ಪ್ರೋತ್ಸಾಹ, ಅಸ್ಪೃಶ್ಯತೆಯ ಖಂಡನೆ, ಶಕ್ತಿ ವಿಶಿಷ್ಟಾದ್ವೈತ ಸಿದ್ಧಾಂತ ಪ್ರತಿಪಾದನೆ, ದಾಸೋಹ ತತ್ವವನ್ನು ಪ್ರತಿಪಾದಿಸುತ್ತಾರೆ. ಪ್ರತಿಯೊಬ್ಬರು ತಮ್ಮ ಆದಾಯದಲ್ಲಿ ಒಂದು ಪಾಲನ್ನು ದಾಸೋಹಕ್ಕೆ ಮೀಸಲಿಡಬೇಕು ಎಂದು ಹೇಳಿದ್ದರು.

ಬಸವಣ್ಣನವರು ಕಾಯಕ ತತ್ವವನ್ನು ಬಲವಾಗಿ ಪ್ರತಿಪಾದಿಸಿದ್ದರು. ಕಾಯಕವಿಲ್ಲದೆ ಗುರು ಲಿಂಗ ಜಂಗಮರಿಗೂ ಮುಕ್ತಿಯಿಲ್ಲ ಎಂಬ ಹಾಗೂ ಕಾಯಕವೇ ಕೈಲಾಸ ಎಂಬ ಸಿದ್ಧಾಂತವನ್ನು ಪ್ರತಿಪಾದಿಸಿದ್ದರು. ಕಾಯಕದಲ್ಲಿ ಮೇಲು ಕೀಳು ಎಂಬ ಭಾವ ಸಲ್ಲದು. ಶರಣರು ಮಾಡುವ ಕಾಯಕವು ಸತ್ಯ ಶುದ್ಧವಾಗಿರಬೇಕು, ಸಮಾಜ ಮುಖಿಯಾಗಿ ರಬೇಕು ಎಂಬುದು ಬಸವಣ್ಣನವರ ಅಚಲವಾದ ನಂಬಿಕೆ.

ಸ್ತ್ರೀ ಸಮಾನತೆ: ಬಸವಣ್ಣ ಅವರು ಶತ-ಶತಮಾನಗಳಿಂದ ಶೋಷಣೆಗೆ ಒಳಪಟ್ಟಿದ್ದ ಸ್ತ್ರೀ ಸಮುದಾಯದ ಧ್ವನಿಯಾಗಿದ್ದರು. ಲಿಂಗಬೇಧದ ವಿರುದ್ಧ ಸಿಡಿದೇಳುವ ಮೂಲಕ ಸ್ತ್ರೀ ಸ್ವಾತಂತ್ರ್ಯ ಪ್ರತಿಪಾದನೆ ಮಾಡಿದವರು ಬಸವಣ್ಣನವರು. ಹೆಣ್ಣು ಗಂಡು ಎನ್ನುವ ಕಲ್ಪನೆ ಕೇವಲ ದೇಹಕ್ಕೆ ಮಾತ್ರವೇ ವಿನಃ ಆತ್ಮಕ್ಕೆ ಅಲ್ಲ ಎಂಬ ವಿಶಿಷ್ಟ ಕಲ್ಪನೆ ನೀಡಿದ ಹಿರಿಮೆ ಬಸವಣ್ಣ ಅವರಿಗೆ ಸಲ್ಲುತ್ತದೆ.

ಜಾತಿ ಜಾತಿಗಳ ಧರ್ಮ-ಧರ್ಮಗಳ ಹೆಸರಿನಲ್ಲಿ ನಡೆಯುತ್ತಿದ್ದ ಮಾನವ ಸಂಘರ್ಷವನ್ನು ಕುರಿತು ನೊಂದು ನುಡಿದ ಬಸವಣ್ಣ ಅವರು, 'ಇವನಾರವ, ಇವನಾರವ, ಇವನಾರವನೆಂದೆನಿಸದಿರಯ್ಯಾ। ಇವ ನಮ್ಮವ, ಇವ ನಮ್ಮವ, ಇವ ನಮ್ಮವನೆಂದೆನಿಸಯ್ಯಾ' ಎನ್ನುವ ಮೂಲಕ ಇಡೀ ವಿಶ್ವಕ್ಕೆ ನೀಡಿದ ಒಂದು ದಿವ್ಯ ಸಂದೇಶವಾಗಿದೆ. ಮನುಷ್ಯನಾಗಿ ಹುಟ್ಟಿದ ಮೇಲೆ ಎಲ್ಲರೂ ಸರಿ ಸಮಾನರೇ ಎಲ್ಲರೂ ನಮ್ಮವರೆ. ಎಲ್ಲರನ್ನು ಪ್ರೀತಿಯಿಂದ ಕಾಣಬೇಕು ಎಂದು ಸಂದೇಶ ನೀಡಿದರು.

ಬಸವಣ್ಣ ಅವರ ಹಾದಿಯಲ್ಲಿ ಸರಕಾರ: ಬಸವಣ್ಣ ಅವರು ಕಾಯಕವೇ ಕೈಲಾಸ ಎಂಬ ಮಂತ್ರದ ಮೂಲಕ ಕಾಯಕದ ಶ್ರೇಷ್ಠತೆಯನ್ನು ಮನಗಾಣಿಸಿದವರು. ದಾಸೋಹದ ಪರಿಕಲ್ಪನೆಯನ್ನು ಪ್ರಬಲವಾಗಿ ಪ್ರತಿಪಾದಿಸಿದವರು. ಇದರ ಅನುಸಾರ ಶ್ರಮಪಟ್ಟು ಗಳಿಸಿದ ಸಂಪತ್ತು ತನ್ನೊಬ್ಬನಿಗಾಗಿ ಅಲ್ಲ; ಅದು ಸಮಾಜದ ಒಳಿತಿಗಾಗಿ ಬಳಕೆಯಾಗ ತಕ್ಕದ್ದು. ಅದಕ್ಕಾಗಿ, ಅನ್ನ ದಾಸೋಹ, ಜ್ಞಾನ ದಾಸೋಹ, ಕಾಯಕ ದಾಸೋಹ ನಡೆಸಬೇಕೆಂದು ಪ್ರಾದಿಪಾದಿಸಿದ್ದರು. ಬಸವಣ್ಣ ಅವರ ತತ್ವದ ದಾರಿಯಲ್ಲಿ ನಮ್ಮ ಸರಕಾರ ಸಾಗುತ್ತಿದೆ. ಅನ್ನ ದಾಸೋಹ ಕಲ್ಪನೆಯನ್ನು ಸಾಕಾರಗೊಳಿಸಲು ಅನ್ನ ಭಾಗ್ಯ ಯೋಜನೆಯನ್ನು ನಮ್ಮ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಘೋಷಿಸಿದ್ದರು. ಜಗಜ್ಯೋತಿ ಬಸವಣ್ಣ ಅವರನ್ನು ಕರ್ನಾಟಕದ ಸಾಂಸ್ಕೃತಿಕ ನಾಯಕ ಎಂದು ಘೋಷಣೆ ಮಾಡಿದ್ದು, ಅವರ ತತ್ವಾದರ್ಶಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಪ್ರಚಾರ ಮಾಡಲಾಗುತ್ತಿದೆ. ಜಾತೀಯತೆ ತಾಂಡವವಾಡುತ್ತಿರುವ ಕಲುಷಿತ ವಾತಾವರಣದಲ್ಲಿ ಬಸವಣ್ಣ ಅವರ ತತ್ವಗಳ ಪ್ರೇರಣೆ ಆಗುವಂತಹ ವಾತಾವರಣ ನಿರ್ಮಿಸುವುದೇ ಸರಕಾರದ ಉದ್ದೇಶವಾಗಿದೆ.

ವೈಚಾರಿಕ ಚಿಂತನೆಗೆ ಆದ್ಯತೆ ನೀಡಿದವರು ಬಸವಣ್ಣ: 'ಕಲ್ಲ ನಾಗರ ಕಂಡರೆ ಹಾಲನೆರೆಯೆಂಬರು, ದಿಟದ ನಾಗರ ಕಂಡರೆ ಕೊಲ್ಲೆಂಬರಯ್ಯಾ' ಎನ್ನುವ ವಚನದ ಮೂಲಕ ಮೌಢ್ಯತೆಯ ಹೆಸರಿನಲ್ಲಿ ನಡೆಯುತ್ತಿದ್ದ ಡಾಂಭಿಕ ಆಚರಣೆಗಳ ಬಗ್ಗೆಯೂ ಜನ ಸಮೂಹವನ್ನು ಎಚ್ಚರಿಸಿದವರು ಬಸವಣ್ಣನವರು. ಕಲ್ಲ ನಾಗರಕ್ಕೆ ಹಾಲೆರೆಯುವವರು ನಿಜವಾದ ಹಾವೇ ಪ್ರತ್ಯಕ್ಷವಾದಾಗ ಕೊಲ್ಲಲು ಪ್ರಯತ್ನಿಸುತ್ತಾರೆ. ಹಸಿದ ಜಂಗಮ ಬಂದರೆ ಅನ್ನ ನೀಡದೆ, ಉಣದಿರುವ ಲಿಂಗಕ್ಕೆ ಭಕ್ಷ್ಯ ಭೋಜನಗಳನ್ನಿಟ್ಟು ನೈವೇದ್ಯ ಮಾಡುತ್ತಾರೆ. ಇದೆಂತಹ ವಿಪರ್ಯಾಸ ಎಂದು ಪ್ರಶ್ನಿಸುವ ಮೂಲಕ ವೈಚಾರಿಕ ಚಿಂತನೆಗೆ ಆದ್ಯತೆ ನೀಡಿದವರು ಬಸವಣ್ಣ.

ಹೀಗೆ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ವೈಚಾರಿಕ ನೆಲೆಗಟ್ಟಿನ ಚಿಂತನೆಗಳಿಂದಾಗಿ ಬಸವಣ್ಣ ಅವರ ಚಿಂತನೆಗಳು ಎಂದೆಂದಿಗೂ ಪ್ರಸ್ತುತ. 12ನೇ ಶತಮಾನದಲ್ಲಿ ಕ್ರಾಂತಿಕಾರಕ ಪುರುಷರಾಗಿ, ಸಮಾಜ ಸುಧಾಕರಾಗಿ, ಕವಿಗಳಾಗಿ ಸಮಾಜವನ್ನು ಸುಧಾರಿಸಲು ಸಾಕಷ್ಟು ಶ್ರಮಪಟ್ಟ ಬಸವಣ್ಣನವರ ವ್ಯಕ್ತಿತ್ವವನ್ನು ಎಷ್ಟು ಹೇಳಿದರೂ ತೀರದಂತದ್ದು. ಹೀಗಾಗಿಯೇ ಅವರ ವ್ಯಕ್ತಿತ್ವ ವಿಶ್ವ ಮಾನ್ಯವಾಗಿ ಕಂಗೊಳಿಸುತ್ತಿದೆ. ಕರ್ನಾಟಕದ ಮಾರ್ಟಿನ್ ಲೂಥರ್ ಎಂದೇ ಕರೆಯಲ್ಪಡುವ ಬಸವಣ್ಣ ಅವರ ತತ್ವ ಆದರ್ಶ, ಚಿಂತನೆಗಳನ್ನು ಪ್ರತಿಯೊಬ್ಬರು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಮುನ್ನಡೆಯುವಂತಾಗಲಿ. ನಾಡಿನ ಸಮಸ್ತ ಜನತೆಗೆ ಮತ್ತೊಮ್ಮೆ ಬಸವ ಜಯಂತಿಯ ಶುಭಾಶಯಗಳು.

ಒಂದು ಧರ್ಮಕ್ಕೆ ಸೀಮಿತವಲ್ಲ

ಬಸವಣ್ಣ ಅವರು ಯಾವುದೇ ಒಂದು ಧರ್ಮಕ್ಕೆ ಸಿಮೀತವಾದವರಲ್ಲ. ಅವರು ಇಡೀ ಮಾನವ ಕುಲಕೋಟಿಗೆ ಸಲ್ಲುವ ವ್ಯಕ್ತಿ. ಬಸವಣ್ಣ ಅವರು 12ನೇ ಶತಮಾನದಲ್ಲಿ ಸಮಾಜದ ಅನಾಚಾರಗಳಿಗೆ ವಿರುದ್ಧವಾಗಿ ವಚನ ಸಾಹಿತ್ಯದ ಮೂಲಕ ಉತ್ತರ ನೀಡಿದರು. ಇಂತಹ ಮಹಾನ್ ಸುಧಾರಕನನ್ನು ನಮ್ಮ ಸರಕಾರ ಬಸವಣ್ಣ ಸಾಂಸ್ಕೃತಿಕ ನಾಯಕ ಎಂದು ಘೋಷಣೆ ಮಾಡಿದೆ. ಇಂತಹ ಸಂದರ್ಭದಲ್ಲಿ ನಾನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜವಾಬ್ದಾರಿ ಹೊಂದಿರುವುದು ನನ್ನ ಸುದೈವ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದ ಸರಕಾರ ಅಧಿಕಾರಕ್ಕೆ ಬಂದ ಕೂಡಲೇ ಬಸವಣ್ಣ ಅವರನ್ನು ಸಾಂಸ್ಕೃತಿಕ ನಾಯಕ ಎಂದು ಘೋಷಣೆ ಮಾಡಿದೆವು. ಸಾಂಸ್ಕೃತಿಕ ನಾಯಕ ಎಂದು ಏಕೆ ಘೋಷಣೆ ಮಾಡಿದೆವು ಎಂಬುದನ್ನು ಜನತೆಗೆ ತಿಳಿಸುವ ಕೆಲಸವಾಗಬೇಕಿದೆ. ಈ ಹಿನ್ನೆಲೆಯಲ್ಲಿ ಕಳೆದ ಬಜೆಟ್‌ನಲ್ಲಿ ಮುಖ್ಯಮಂತ್ರಿಗಳು ಬಸವಣ್ಣ ಅವರ ಕುರಿತು ಕಾರ್ಯಕ್ರಮ ಮಾಡುವುದಾಗಿ ಘೋಷಣೆ ಮಾಡಿದ್ದರು. ಅದರಂತೆ ಕೂಡಲಸಂಗಮದಲ್ಲಿ 'ಅನುಭವ ಮಂಟಪ- ಬಸವಾದಿ ಶರಣರ ವೈಭವ'ದ ಉತ್ಸವವನ್ನು ಇದೇ ಏ.29 ಮತ್ತು 30 ಮಾಡಲಾಗುತ್ತಿದೆ. ಸಾಂಸ್ಕೃತಿಕ ಉತ್ಸವದಲ್ಲಿ ಎಲ್ಲ ಧರ್ಮಗಳ ಸಂಗಮವಾಗಲಿದೆ. ಎಲ್ಲರನ್ನು ಒಳಗೊಂಡ ಎಲ್ಲರ ಕಲ್ಯಾಣಕ್ಕಾಗಿ ದುಡಿದ ಬಸವಾದಿ ಶರಣರ ನೆನೆಯೋಣ ಬನ್ನಿ.

ವಿಶ್ವವಾಣಿ

ಸಂಪಾದಕೀಯ

ಇದು ಸ್ವಾಗತಾರ್ಹ ಬೆಳವಣಿಗೆ

ಕಾಶ್ಮೀರಕ್ಕೆ ಹಿಡಿದಿದ್ದ ಗ್ರಹಣ ಒಂದು ಮಟ್ಟಿಗಾದರೂ ಬಿಟ್ಟಿದೆ. ಇದಕ್ಕೆ ಕಾರಣವಾಗಿರುವುದು, ಉಗ್ರರ ಪೈಶಾಚಿಕ ಕೃತ್ಯಕ್ಕೆ ಸಾಕ್ಷಿಯಾಗಿದ್ದ ಪಹಲ್ಗಾಮ್ ಪ್ರದೇಶದಲ್ಲಿ ಮತ್ತೆ ಪ್ರವಾಸಿಗರ ಜಮಾವಣೆಯಾಗಿರುವುದು. 'ನಮ್ಮದೇ ದೇಶದ ಅವಿಭಾಜ್ಯ ಅಂಗವಾಗಿರುವ ಕಾಶ್ಮೀರದಲ್ಲಿ ಈಗ ಭಯ ಪಡುವಂಥದ್ದೇನೂ ಇಲ್ಲ, ಎಲ್ಲವೂ ಸಹಜ ಸ್ಥಿತಿಗೆ ಮರಳಿದೆ' ಎಂಬ ವಿಶ್ವಾಸವನ್ನು ಜನರ ಮನದಲ್ಲಿ ಮೂಡಿಸುವ ನಿಟ್ಟಿನಲ್ಲಿ ಇಂಥ ಬೆಳವಣಿಗೆಯು ಮಹತ್ತರ ಕೊಡುಗೆಯನ್ನು ನೀಡಬಲ್ಲದು. ಉಗ್ರರ ಜತೆಗೆ ಕೆಲವು ಸ್ಥಳೀಯರೂ ಕೈಜೋಡಿಸಿರುವುದರಿಂದ ಈ ಕಣಿವೆ ಪ್ರದೇಶದ ರಮ್ಯನೋಟವನ್ನು ಇನ್ನು ಮುಂದೆ ಕಣ್ತುಂಬಿಕೊಳ್ಳುವುದು ಕನಸೇ ಎಂದುಕೊಂಡಿದ್ದವರಿಗೆ ಕೂಡ ಈ ಬೆಳವಣಿಗೆ ಸಮಾಧಾನವನ್ನು ತಂದಿದೆ. ಹಾಗೆಂದ ಮಾತ್ರಕ್ಕೆ ಜನರಾಗಲೀ, ಕೇಂದ್ರ ಮತ್ತು ರಾಜ್ಯದ ಆಳುಗ ವ್ಯವಸ್ಥೆಗಳಾಗಲೀ ಮೈಮರೆತು ಕೂರುವಂತಿಲ್ಲ. ಏಕೆಂದರೆ 'ಉಗ್ರವಾದ' ಎಂಬ ಕುತ್ಸಿತ ಸಿದ್ಧಾಂತವನ್ನು ಮತ್ತು ಅದನ್ನು ನೆಚ್ಚಿಕೊಂಡಿರುವ 'ಉಗ್ರವಾದಿ'ಗಳನ್ನು ದಮನ ಮಾಡುವುದು ಅಂದುಕೊಂಡಷ್ಟು ಸಲೀಸು ಕಾರ್ಯವಲ್ಲ; ತಮ್ಮ ಕುಯುಕ್ತಿಗಳನ್ನು ಕಾರ್ಯರೂಪಕ್ಕೆ ತಂದು ಹಿತಾಸಕ್ತಿಗಳನ್ನು ನೆರವೇರಿಸಿಕೊಳ್ಳಲಿಕ್ಕೆ ಉಗ್ರವಾದಿ ಗಳು ಕೆಲ ಕಾಲದ ನಂತರವಾದರೂ ಮತ್ತೆ ಮತ್ತೆ ಯತ್ನಿಸುವ ಸಾಧ್ಯತೆ ಇರುತ್ತದೆ. ಆದ್ದರಿಂದ, ಈಗಾಗಲೇ ಪಹಲ್ಗಾಮ್‌ನಲ್ಲಿ ಪೈಶಾಚಿಕ ಕೃತ್ಯವೆಸಗಿ ಜಗದ ದಿಗಿಲಿಗೆ ಕಾರಣವಾಗಿರುವ ಖೂಳ ಭಯೋತ್ಪಾದಕರನ್ನು, ಅವರನ್ನು ಪೋಷಿಸುತ್ತಿರುವ ಬಾಹ್ಯ ಶಕ್ತಿಗಳನ್ನು ಹಾಗೂ ಒತ್ತಾಸೆಯಾಗಿ ನಿಂತಿರುವ ಸ್ಥಳೀಯರನ್ನು ತಲಾಶೆ ಮಾಡಿ ಬೇಟೆಯಾಡುವುದರ ಜತೆಜತೆಗೆ, ನೆರೆರಾಷ್ಟ್ರದ ಈ ಸಂಚನ್ನು ಅಂತಾರಾಷ್ಟ್ರೀಯ ಸಮುದಾಯದೆದುರು ಬಯಲುಮಾಡ ಬೇಕಿದೆ ಹಾಗೂ ಜಾಗತಿಕ ಮಟ್ಟದಲ್ಲಿ ಪಾಕಿಸ್ತಾನವನ್ನು ಮೂಲೆಗುಂಪು ಮಾಡಬೇಕಿದೆ. ಈ ಭೂಮಿಯನ್ನು ಶಾಂತಿ ಮತ್ತು ನೆಮ್ಮದಿಗಳ ನೆಲೆವೀಡಾಗಿ ಸುವ ನಿಟ್ಟಿನಲ್ಲಿ, ವಿಶ್ವದ ಮಿಕ್ಕ ಶಾಂತಿಪ್ರಿಯ ರಾಷ್ಟ್ರಗಳೂ ಭಾರತದ ಈ ಸಂಕಲ್ಪಕ್ಕೆ ಕೈಜೋಡಿಸಬೇಕಿದೆ. ಅದು ಬಹುಜನರ ನಿರೀಕ್ಷೆಯೂ ಹೌದು, ಆಶಯವೂ ಹೌದು.

ಸೊಂಪಾದಕೀಯ

ಈ ಬಂಧನಾ... ನಿರ್ಬಂಧನಾ?

ನಾಗರಿಕ ಸಮಾಜ ಅಂದಮೇಲೆ ಅಲ್ಲಿ ಒಂದಷ್ಟು 'ಡೂಸ್ ಆ್ಯಂಡ್ ಡೋಂಟ್ಸ್' ಇದ್ದೇ ಇರುತ್ತವೆ. ಅದು ಮಾಡಂಗಿಲ್ಲ, ಇದು ಮಾಡಂಗಿಲ್ಲ ಅನ್ನೋ ನಿಯಮಗಳನ್ನು ನಾಗರಿಕರ ಮೇಲೆ ಹೇರುವುದು ಹೊಸದೇನಲ್ಲ. ಕೆಲವು ಸಂಗತಿಗಳಲ್ಲಿ ಇದು ಕೇವಲ ನಿರ್ಬಂಧಕ್ಕೆ ಮಾತ್ರ ಸೀಮಿತ ಆದ್ರೆ, ಇನ್ನು ಕೆಲವು ಸಂಗತಿಗಳಲ್ಲಿ 'ನಿಂಗೆ ದಂಡ ವಿಧಿಸಿ ಗತಿ ಕಾಣಿಸದೇ ಬಿಡಲ್ಲ' ಎನ್ನುವ ಮಟ್ಟಕ್ಕೆ ಹೋಗುತ್ತವೆ. ಇಂಥವೇ ಕೆಲವು ಸುದ್ದಿಗಳು ಈಗ ಸದ್ದು ಮಾಡುತ್ತಿವೆ. ಕಳೆದ ಎರಡು ವಾರ ಪೂರ್ತಿ ಜನಿವಾರ ಆಗಿತ್ತು ಅಂದ್ರೆ, ತಪ್ಪಿಲ್ಲ. ಪರೀಕ್ಷಾ ಕೇಂದ್ರವೊಂದಕ್ಕೆ ಜನಿವಾರ ಹಾಕಿಕೊಂಡು ಹೋಗುವಂತಿಲ್ಲ ಅಂತೆಲ್ಲ ಹುಡುಗನೊಬ್ಬನ ಜನಿವಾರ ತೆಗೆಸಿದ ಪ್ರಕರಣ ಅದು. ವಿಶೇಷ ಅಂದ್ರೆ, ಇಂಥ ಪ್ರಕರಣಗಳಲ್ಲಿ ಕೇವಲ ನಿಯಮ ಹೇಳುತ್ತಾ ರೆಯೇ ಹೊರತು ಅದಕ್ಕೆ ಸೂಕ್ತ ಕಾರಣ ಕೊಡೋದಿಲ್ಲ. ಈ ವಾರ ಜನಿವಾರದ ಜತೆ ತಾಳಿ ಕೂಡಾ ಸೇರಿಕೊಂಡಿದೆ. ಪರೀಕ್ಷೆ ಬರೆಯಲು ತಾಳಿ ಹಾಕಿಕೊಂಡು ಹೋಗುತ್ತಿದ್ದ ಮಹಿಳೆಯೊಬ್ಬಳನ್ನು 'ತಾಳಿ' ಅಂತ ತಡೆದು ನಿಲ್ಲಿಸಿ, 'ತಾಳಿ ಹಾಕ್ಕೊಂಡು ಪರೀಕ್ಷೆ ಬರೆಯಂಗಿಲ್ಲ, ತಾಳಿ ಕಿತ್ತು ಹಾಕಿ' ಅಂತ ತಾಕೀತು ಮಾಡಿದ ಪ್ರಸಂಗ ನಡೆದಿದೆ. ಇವೆಲ್ಲ ಹೋಗ್ಲಿ ಅಂದ್ರೆ, ಪಾಪ ಮೊನ್ನೆ ಬೆಂಗಳೂರಿನಲ್ಲಿ ಮೆಟ್ರೋ ರೈಲಿನಲ್ಲಿ ತಿಂಡಿ ತಿಂದರು ಅನ್ನೋ ಕಾರಣಕ್ಕೆ ಮಹಿಳೆಯೊಬ್ಬರಿಗೆ ದಂಡ ವಿಧಿಸಿದ್ದಾರೆ. ಹೌದು, ಮೆಟ್ರೋ ರೈಲಿನಲ್ಲಿ ಅನ್ನ ತಿನ್ನಂಗಿಲ್ಲ ಅಂತ ರೂಲ್ ಇದೆಯಂತೆ. ಇದನ್ನು ಕೇಳಿ ನೀವು ಹೊಟ್ಟೆಗೆ ಅನ್ನ ತಿಂತಿರೋ ಇಲ್ವೋ ಅಂತ ಕೇಳಂಗಿಲ್ಲ. ಯಾಕಂದ್ರೆ, ವೆಬ್‌ಸೈಟ್‌ನ ವರದಿಯೊಂದರ ಪ್ರಕಾರ ಖ್ಯಾತ ಆಸ್ಪತ್ರೆಯ ವೈದ್ಯರು ವೈಟ್ ರೈಸ್ ತಿನ್ನೋದು ಆರೋಗ್ಯಕ್ಕೆ ಹಾನಿಕರ ಅಂತ ಹೇಳಿದ್ದಾರಂತೆ. ಇದನ್ನು ಕೇಳಿದ ಮೇಲೆ ಹೊಟ್ಟೆಗೆ ಅನ್ನ ತಿನ್ನೋರೆಲ್ಲ ಸುಸ್ತು ಹೊಡೆಯೋದಂತೂ ಗ್ಯಾರಂಟಿ. ಕೆಲವರು ಇದಕ್ಕೆ ತಮಾಷೆಯಾಗಿ 'ಹಂಗಾದ್ರೆ ಜೀರಾ ರೈಸ್, ಎಗ್ ರೈಸ್ ತಿನ್ನಬೇಕಾ?' ಅಂತ ಕೇಳಿದರೂ, 'ತೀರಾ ಅನ್ನನೂ ಆರೋಗ್ಯಕ್ಕೆ ಹಾನಿಕರ ಅಂದ್ರೆ ಇನ್ನೇನ್ ಮಣ್ ತಿನ್ಬೇಕಾ?' ಅಂತ ಆರೋಗ್ಯವಂತ ಸಮಾಜ ಕೇಳ್ತಾ ಇರೋದಂತೂ ಸತ್ಯ.

ಸಂಪಾದಕರ ಸದ್ಯಶೋಧನೆ

ಕಲೆಯಾಗಿ ಅರಳಿದ ಬೆರ್ಚಪ್ಪಗಳು

ಜಪಾನಿನ ಟೋಕಿಯೋ ನಗರ ಪ್ರದೇಶವನ್ನು ದಾಟಿ, ಗ್ರಾಮೀಣ ಪ್ರದೇಶಗಳಲ್ಲಿ ಪ್ರಯಾಣ ಮಾಡುವಾಗ, ಅಲ್ಲಿನ ಹೊಲ-ಗದ್ದೆಗಳಲ್ಲಿ ಬೆರ್ಚಪ್ಪ (ಬೆದರುಬೊಂಬೆ)ಗಳನ್ನು ನಿಲ್ಲಿಸಿರುವುದನ್ನು ಕಾಣಬಹುದು. ಬೆರ್ಚಪ್ಪಗಳು ಕೇವಲ ಕೃಷಿಕರ ಹೊಲಗಳಲ್ಲಿ ಪಕ್ಷಿಗಳನ್ನು ತಡೆಯುವ, ಬೆದರಿಸುವ ಸಾಧನಗಳಷ್ಟೇ ಅಲ್ಲ, ಅವುಗಳು ಜಪಾನಿನ ಗ್ರಾಮೀಣ ಸಂಸ್ಕೃತಿಯ ಒಂದು ವಿಶಿಷ್ಟ ಭಾಗವಾಗಿವೆ. ಜಪಾನಿನಲ್ಲಿ ಬೆರ್ಚಪ್ಪಗಳನ್ನು 'ಕಾಕಾಶಿ' ಎಂದು ಕರೆಯಲಾಗುತ್ತದೆ. ಇವುಗಳನ್ನು ಪ್ರಾಚೀನ ಕಾಲದಿಂದಲೇ ಕೃಷಿಕರು ತಮ್ಮ ಬೆಳೆಗಳನ್ನು ಪಕ್ಷಿಗಳಿಂದ ರಕ್ಷಿಸಲು ಬಳಸುತ್ತಿದ್ದರು. ಬೆರ್ಚಪ್ಪಗಳನ್ನು ಮಾನವನಂತೆ ತಯಾರಿಸಿ, ಹೊಲಗಳಲ್ಲಿ ಸ್ಥಾಪಿಸಲಾಗುತ್ತಿತ್ತು, ಇದರಿಂದಾಗಿ ಪಕ್ಷಿಗಳು ಭಯಪಟ್ಟು ದೂರವಿರುತ್ತವೆ ಎಂಬ ನಂಬಿಕೆ ಇತ್ತು. ಇವುಗಳನ್ನು ತಯಾರಿಸಲು ಹಳೆಯ ಬಟ್ಟೆಗಳು, ಹುಲ್ಲು ಮತ್ತು ಮರದ ಕಂಬಗಳನ್ನು ಬಳಸಲಾಗುತ್ತಿತ್ತು. ಟೋಕುಶಿಮಾ ಪ್ರಾಂತ್ಯ (ಪ್ರಿಫೆಕ್ಚರ್)ದಲ್ಲಿರುವ ಶಿಕೋಕು ದ್ವೀಪದ ಇಯಾ ಕಣಿವೆಯಲ್ಲಿ ನಗೊರೋ ಎಂಬ ಪುಟ್ಟ ಗ್ರಾಮವಿದೆ. ಈ ಗ್ರಾಮದಲ್ಲಿ ಜನಸಂಖ್ಯೆ ಕಡಿಮೆಯಾಗಿದ್ದು, ಸುಮಾರು 30 ಜನ ಮಾತ್ರ ವಾಸಿಸುತ್ತಿದ್ದಾರೆ. ಆದರೆ, ಈ ಗ್ರಾಮದಲ್ಲಿ 350ಕ್ಕಿಂತ ಹೆಚ್ಚು ಬೆರ್ಚಪ್ಪಗಳಿದ್ದು, ಸೋಜಿಗವೆಂಬಂತೆ ಅವು ಅಲ್ಲಿನ ನಿವಾಸಿಗಳಿಗಿಂತ ಹೆಚ್ಚಿನ ಸಂಖ್ಯೆಯಲ್ಲಿವೆ. ಈ ಬೆರ್ಚಪ್ಪಗಳನ್ನು ಸ್ಥಳೀಯ ಕಲಾವಿದರೇ ತಯಾರಿಸುತ್ತಾರೆ. ಆಯಾನೊ ತ್ಸುಕಿಮಿ ಎಂಬ ಬೆರ್ಚಪ್ಪಗಳ ಕಲಾವಿದ ನಗೊರೋ ಗ್ರಾಮದಲ್ಲಿ ಹುಟ್ಟಿ, ನಂತರ ಓಸಾಕಾ ನಗರಕ್ಕೆ ವಲಸೆ ಹೋದ. 2002ರಲ್ಲಿ ಆತ ತನ್ನ ತಂದೆಯ ಆರೈಕೆಗೆ ಗ್ರಾಮಕ್ಕೆ ಮರಳಿದ. ಆತ ತನ್ನ ಹೊಲದಲ್ಲಿ ಬೆಳೆಗಳನ್ನು ಪಕ್ಷಿಗಳಿಂದ ರಕ್ಷಿಸಲು ತನ್ನ ತಂದೆಯ ರೂಪದಲ್ಲಿ ಮೊದಲ ಬೆರ್ಚಪ್ಪನನ್ನು ತಯಾರಿಸಿದ. ಈ ಬೆರ್ಚಪ್ಪ ನಿಜವಾದ ವ್ಯಕ್ತಿಯಂತೆ ಕಾಣುತ್ತಿದ್ದರಿಂದ, ಸ್ಥಳೀಯರು ಅದನ್ನು ನಿಜವಾದ ವ್ಯಕ್ತಿ ಎಂದು ಭಾವಿಸಿದರು. ಈ ಘಟನೆ ಆಯಾನೊಗೆ ಪ್ರೇರಣೆಯಾಗಿ, ಆತ ತನ್ನ ನೆನಪಿನಲ್ಲಿರುವ ಗ್ರಾಮಸ್ಥರ ಪ್ರತಿರೂಪವಾಗಿ ಬೆರ್ಚಪ್ಪಗಳನ್ನು ತಯಾರಿಸಲು ಪ್ರಾರಂಭಿಸಿದ. ಆಯಾನೊ ತಯಾರಿಸಿದ ಪ್ರತಿಯೊಂದು ಬೆರ್ಚಪ್ಪಗೆ ಹೆಸರು, ವ್ಯಕ್ತಿತ್ವ ಮತ್ತು ಕಥೆ ಇದೆ. ಇವುಗಳನ್ನು ಆತ ಬೆರ್ಚಪ್ಪಗಳ ನೋಂದಣಿಯಲ್ಲಿ ದಾಖಲಿಸಿದ್ದಾನೆ. ತೊಗರಿ ಹೊಲಗಳಲ್ಲಿ ಕೃಷಿಕರಂತೆ, ಬಸ್ ನಿಲ್ದಾಣದಲ್ಲಿ ಕಾಯುತ್ತಿರುವವರಂತೆ, ಶಾಲೆಯಲ್ಲಿರುವ ಮಕ್ಕಳಂತೆ ಮತ್ತು ವಿವಿಧ ದೈನಂದಿನ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡವರಂತೆ ಅವನ್ನು ನಿಲ್ಲಿಸಲಾಗಿದೆ. ಈ ಬೆರ್ಚಪ್ಪಗಳು ಆ ಗ್ರಾಮಕ್ಕೆ ಜೀವಂತಿಕೆ ಮತ್ತು ಕಲಾ ಸೊಗಡನ್ನು ನೀಡಿವೆ. ಆ ಗ್ರಾಮದ ಹಳೆಯ ಪ್ರಾಥಮಿಕ ಶಾಲೆಯನ್ನು ಆಯಾನೊ ಬೆರ್ಚಪ್ಪಗಳಿಂದ ತುಂಬಿದ್ದಾನೆ. ಇಲ್ಲಿ ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಶಾಲೆಯ ವಿವಿಧ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡ ಬೆರ್ಚಪ್ಪಗಳನ್ನು ಕಾಣಬಹುದು. ಈ ಶಾಲೆಯನ್ನು ಈಗ ಪ್ರವಾಸಿಗರಿಗೆ ತೆರೆಯಲಾಗಿದ್ದು, ಅವರು ಈ ವಿಶಿಷ್ಟ ಅನುಭವವನ್ನು ಅನುಭವಿಸಬಹುದು. ಪ್ರತಿ ವರ್ಷದ ಅಕ್ಟೋಬರ್ ತಿಂಗಳ ಮೊದಲ ಭಾನುವಾರ, ನಗೊರೋ ಗ್ರಾಮದಲ್ಲಿ ಬೆರ್ಚಪ್ಪಗಳ ಹಬ್ಬವನ್ನು ಆಚರಿಸಲಾಗುತ್ತದೆ. ಈ ಹಬ್ಬದಲ್ಲಿ ಆಹಾರದ ಮಳಿಗೆಗಳು, ಮೋಚಿ ತಯಾರಿಕೆ ಮತ್ತು ಫೋಟೋ ಸ್ಪರ್ಧೆಗಳನ್ನು ಆಯೋಜಿಸಲಾಗುತ್ತದೆ. ಫೋಟೋ ಸ್ಪರ್ಧೆಯ ವಿಜೇತರಿಗೆ ಆಯಾನೊ ವಿಶೇಷ ಬೆರ್ಚಪ್ಪನನ್ನು ತಯಾರಿಸಿ ನೀಡುತ್ತಾನೆ. ನಗೊರೋ ಗ್ರಾಮ ಈಗ ಜಪಾನಿನ ಒಂದು ಪ್ರಮುಖ ಪ್ರವಾಸಿ ಆಕರ್ಷಣೆ. ಪ್ರವಾಸಿಗರು ಈ ಗ್ರಾಮಕ್ಕೆ ಬಂದು ಬೆರ್ಚಪ್ಪಗಳನ್ನು ನೋಡಲು, ಆಯಾನೊ ಕಾರ್ಯಾಗಾರವನ್ನು ಭೇಟಿ ಮಾಡಲು ಮತ್ತು ಈ ವಿಶಿಷ್ಟ ಅನುಭವವನ್ನು ಅನುಭವಿಸಲು ಬರುತ್ತಾರೆ. ಇದು ಗ್ರಾಮಕ್ಕೆ ಆರ್ಥಿಕ ಲಾಭವನ್ನು ತಂದಿದ್ದು, ಸ್ಥಳೀಯರಿಗೆ ಉದ್ಯೋಗಾವಕಾಶಗಳನ್ನು ಒದಗಿಸಿದೆ. ನಗೊರೋ ಗ್ರಾಮದ ಬೆರ್ಚಪ್ಪಗಳು ಜಪಾನಿನ ಗ್ರಾಮೀಣ ಪ್ರದೇಶಗಳಲ್ಲಿ ಜನಸಂಖ್ಯೆ ಕುಸಿತದ ಸಮಸ್ಯೆಯನ್ನು ಹತ್ತಿಕ್ಕಲು ಒಂದು ಮಾದರಿಯಾಗಿವೆ. ಆಯಾನೊ ಕಲಾತ್ಮಕ ಪ್ರಯತ್ನಗಳು ಗ್ರಾಮಕ್ಕೆ ಜೀವಂತಿಕೆ ನೀಡಿವೆ ಮತ್ತು ಸಮಾಜದಲ್ಲಿ ಸಂವಾದವನ್ನು ಪ್ರೇರೇಪಿಸಿವೆ. ಇದು ಕಲೆಯ ಮೂಲಕ ಸಾಮಾಜಿಕ ಬದಲಾವಣೆಯನ್ನು ತರುವಲ್ಲಿ ಒಂದು ದಿಟ್ಟ ಪ್ರಯತ್ನ. ಆಯಾನೊ ಪ್ರತಿಮಾಸದ ನಾಲ್ಕನೇ ಬುಧವಾರ, ಹಳೆಯ ಬಾಲವಾಡಿಯಲ್ಲಿ ಬೆರ್ಚಪ್ಪ ತಯಾರಿಕೆ ಕಾರ್ಯಾಗಾರಗಳನ್ನು ಆಯೋಜಿಸುತ್ತಾನೆ. ಈ ಕಾರ್ಯಾಗಾರಗಳಲ್ಲಿ ಭಾಗವಹಿಸುವವರು ಬೆರ್ಚಪ್ಪಗಳ ತಲೆಗಳನ್ನು ತಯಾರಿಸಲು ಕಲಿಯುತ್ತಾರೆ ಮತ್ತು ತಮ್ಮದೇ ಆದ ಬೆರ್ಚಪ್ಪಗಳನ್ನು ಮನೆಗೆ ತೆಗೆದುಕೊಂಡು ಹೋಗಬಹುದು. ಈ ಕಾರ್ಯಾಗಾರಗಳು ಬೆರ್ಚಪ್ಪಗಳ ಕಲೆಯ ಬಗ್ಗೆ ಆಸಕ್ತಿಯುಳ್ಳವರಿಗೆ ಒಂದು ಉತ್ತಮ ಅವಕಾಶವನ್ನು ಒದಗಿಸುವುದಂತೂ ನಿಜ. ಇದನ್ನು ನೋಡಲೆಂದೇ ನಗರಪ್ರದೇಶಗಳಿಂದ ಜನ ಬರುತ್ತಿರುವುದು ಗಮನಾರ್ಹ.

ಅಲೆದಾಡುವ ಗರ್ಭಕೋಶ ಮತ್ತು ಮಾನಸಿಕ ಅನಾಥರು

ಹಿಸ್ಟೀರಿಯ, ಮನುಕುಲದ ಅತ್ಯಂತ ಹಳೆಯ ಕಾಯಿಲೆಗಳಲ್ಲಿ ಒಂದು. ಈಜಿಪ್ಷಿಯನ್ ನಾಗರಿಕತೆಯಿಂದ ಹಿಡಿದು 20ನೆಯ ಶತಮಾನದ ಆದಿಭಾಗದವರೆಗೆ ಜನರನ್ನು ಮೌಢ್ಯದಲ್ಲಿ ಮುಳುಗಿಸಿದ್ದ ಮಾನಸಿಕ ಸಮಸ್ಯೆ. ನಮ್ಮ ದೇಹ ಮತ್ತು ಮನಸ್ಸುಗಳ ನಡುವೆ ಇರುವ ಸಂಬಂಧ, ಇವೆರಡರ ಅಸ್ವಸ್ಥತೆಯಿಂದ ಬರುವ ಕಾಯಿಲೆಗಳು ಇವನ್ನು ನಾವು ಅರ್ಥ ಮಾಡಿಕೊಂಡಿಲ್ಲ.

ಹಿಂದಿರುಗಿ ನೋಡಿದಾಗ

ಡಾ. ನಾ.ಸೋಮೇಶ್ವರ
vveditoped@gmail.com

ಅದು 1632ನೆಯ ವರ್ಷ. ಫ್ರಾನ್ಸ್ ದೇಶದ ಲೌಡನ್ ಎಂಬ ಹಳ್ಳಿ. ಅಲ್ಲಿ ಒಂದು ಕಾನ್ವೆಂಟ್. ಆ ಕಾನ್ವೆಂಟಿನಲ್ಲಿ ಉರ್ಸುಲೈನ್ ಕ್ರೈಸ್ತ ಸನ್ಯಾಸಿನಿಯರು. ಹತ್ತಿರದಲ್ಲಿಯೇ ಓರ್ವ ಕ್ರೈಸ್ತ ಪಾದ್ರಿ, ಫಾದರ್ ಉರ್ಬೈನ್ ಗ್ರಾಂಡೀರ್ ವಾಸವಾಗಿದ್ದ. ಊರು ಚಿಕ್ಕದಾದರೂ ಊರಿನ ರಾಜಕೀಯವು ಮಹತ್ತರವಾಗಿಯೇ ಇತ್ತು. ಮಧ್ಯಯುಗದ ಎಲ್ಲ ದೇಶಗಳಲ್ಲಿರುವಂತೆ ಚರ್ಚ್ ರಾಜನಿಗಿಂತಲೂ ಸರ್ವಶಕ್ತವಾಗಿತ್ತು.

ಒಂದು ದಿನ, ಕಾನ್ವೆಂಟಿನಲ್ಲಿದ್ದ ಉರ್ಸುಲಾ ಕ್ರೈಸ್ತ ಸನ್ಯಾಸಿನಿಯರಲ್ಲಿ ವಿಚಿತ್ರ ವರ್ತನೆಗಳು ಕಂಡುಬಂದವು. ಕೆಲವರಿಗೆ ಸೆಳವು (ಕನ್ವಲ್ಷನ್) ಬಂದಿತು. ಹಲವರು ಕೀಚಲು ಧ್ವನಿಯಲ್ಲಿ ಜೋರಾಗಿ ಚೀರಲಾರಂಭಿಸಿದರು. ಇನ್ನುಳಿದವರು ಅರ್ಥವಾಗದ ಬೇರೆ ಬೇರೆ ಭಾಷೆಗಳಲ್ಲಿ ಮಾತನಾಡಲಾರಂಭಿಸಿದರು. ಅಸಹ್ಯ ಸನ್ನೆಗಳನ್ನು ಮಾಡುತ್ತಾ ಬೈಯುತ್ತಿದ್ದರು. ತಮ್ಮ ಕಣ್ಣ ಮುಂದೆ ಏನೇನೋ ಕಾಣುತ್ತಿದೆ ಎಂದು ಬಡಬಡಿಸಿದರು. ತಮ್ಮ ಕಣ್ಣಿಗೆ ಕಾಣದ ಅದೃಶ್ಯ ದುಷ್ಟ ಶಕ್ತಿಗಳು ತಮ್ಮನ್ನು ಹೊಡೆದು, ಬಡಿದು ಹಿಂಸಿಸುತ್ತಿವೆ ಎಂದು ದೂರಿದರು. ಎಲ್ಲಕ್ಕಿಂತ ಮುಖ್ಯವಾಗಿ ಫಾದರ್ ಗ್ರಾಂಡೀರ್ ಈ ದುಷ್ಟಶಕ್ತಿಗಳನ್ನು ತಮ್ಮೆಡೆ ಕಳುಹಿಸುತ್ತಿದ್ದಾನೆಂದು ದೂರಿದರು. ಅದರಲ್ಲೂ ಮದರ್ ಸುಪೀರಿಯರ್ ಜೀನ್ ದೆಸ್ ಆಂಗೆಸ್, ಗ್ರಾಂಡೀರ್ ದುಷ್ಟಶಕ್ತಿಗಳ ಜತೆಯಲ್ಲಿ ಒಪ್ಪಂದ ಮಾಡಿಕೊಂಡಿದ್ದಾನೆಂದು, ಅವನೇ ಹೆಣ್ಣುಮಕ್ಕಳನ್ನು ಗೋಳು ಹೊಯ್ದುಕೊಳ್ಳಲು ಆ ಭೂತಗಳನ್ನು ಕಳುಹಿಸುತ್ತಾನೆಂದು, ಸ್ವಯಂ ಅವನೇ ಒಂದು ದೊಡ್ಡ ಭೂತವೆಂದು, ಇನ್ನಿಲ್ಲದಂತೆ ದೂರಿದಳು.

ಫಾದರ್ ಗ್ರಾಂಡೀರ್ ಯುವಕ. ಸುಫರ್ದ್ರೂಪಿ. ನೋಡುಗರನ್ನು ಸಮ್ಮೋಹನಗೊಳಿಸುವ ಗುಣ. ಹೆಣ್ಣು ಮಕ್ಕಳನ್ನು ಸೂಜಿಗಲ್ಲಿನಂತೆ ಆಕರ್ಷಿಸಬಲ್ಲಾತ. ಸ್ವಲ್ಪ ಅಹಂಕಾರಿ. ಹಳ್ಳಿಯಲ್ಲಿದ್ದ ಹಲವರಿಗೆ ಇವನ ಮೇಲೆ ಹೊಟ್ಟೆಕಿಚ್ಚು. ಕಾರ್ಡಿನಲ್ ರಿಷೆಲ್ಯೂ ವಿಧಿಸಿದ ನಿಯಮಗಳನ್ನು ಮೀರಿದ್ದಾನೆ ಎಂಬ ಆರೋಪವನ್ನು ಹೊರಿಸಿ, ಅವನ ನಡತೆ ಸರಿಯಿಲ್ಲವೆಂದು ಕರೆದು ವಾಗ್ದಂಡನೆಯನ್ನು ನೀಡಿದ್ದರು. ಅವನ ಶತ್ರುಗಳಿಗೆ ಇಷ್ಟರಿಂದ ತೃಪ್ತಿಯಾಗಿರಲಿಲ್ಲ. ಹಾಗಾಗಿ ಕ್ರೈಸ್ತಸನ್ಯಾಸಿನಿಯರ ದೂರಿನ ಆಧಾರದ ಮೇಲೆ, ಅವನ ಬಹಿರಂಗ ವಿಚಾರಣೆಯನ್ನು ನಡೆಸಿದರು. ಅವನು ನಿಜಕ್ಕೂ ವಾಮಾಚಾರದಲ್ಲಿ ತೊಡಗಿದ್ದಾನೆ ಎನ್ನುವುದಕ್ಕೆ ಯಾವುದೇ ಭೌತಿಕ ಸಾಕ್ಷ್ಯ ದೊರೆಯಲಿಲ್ಲ. ಕೊನೆಗೆ ಗ್ರಾಂಡೀರ್ ಸೈತಾನನ (ಸೇಟನ್) ಜತೆಯಲ್ಲಿ ಒಡಂಬಡಿಕೆಯನ್ನು ಮಾಡಿಕೊಂಡಿರುವ ಒಂದು ಲ್ಯಾಟಿನ್ ಭಾಷೆಯ ಪತ್ರವನ್ನು ವಿಚಾರಣಾ ಸಭೆಯಲ್ಲಿ ಹಾಜರುಪಡಿಸಿದರು. ಈ ಪತ್ರದ ಆಧಾರದ ಮೇಲೆ, ಗ್ರಾಂಡೀರ್ ತಪ್ಪಿತಸ್ಥನೆಂದು ಘೋಷಿಸಿದರು. ಅವನನ್ನು ನಾನಾ ರೀತಿಯಲ್ಲಿ ಹಿಂಸಿಸಿದರು. ಕೊನೆಗೆ ಆಗಸ್ಟ್ 18, 1634ರಂದು, ಚೌಕದ ನಡುವೆ ಒಂದು ಕಂಬವನ್ನು ನೆಟ್ಟು ಅದಕ್ಕೆ ಅವನನ್ನು ಬಿಗಿದರು. ಸುತ್ತಲೂ ಒಣಕಟ್ಟಿಗೆಯನ್ನು ಪೇರಿಸಿ ಬೆಂಕಿಯನ್ನಿಟ್ಟರು. ನೋಡನೋಡುತ್ತಿರುವಂತೆಯೇ ಗ್ರಾಂಡೀರ್ ಸುಟ್ಟು ಬೂದಿಯಾದ!

ವಾಸ್ತವದಲ್ಲಿ ಏನು ನಡೆಯಿತು? ಇದು 'ಸಾಮೂಹಿಕ ಹಿಸ್ಟೀರಿಯ' ಅಥವಾ 'ಮಾಸ್ ಹಿಸ್ಟೀರಿಯ' ಎನ್ನುವ ಮಾನಸಿಕ ಅಸ್ವಸ್ಥತೆ. ಕಾನ್ವೆಂಟ್ ಸನ್ಯಾಸಿನಿಯರು ತೀರಾ ಕಟ್ಟುನಿಟ್ಟಿನ ಪರಿಸರದಲ್ಲಿ ಬೆಳೆಯುತ್ತಿದ್ದರು. ಲೈಂಗಿಕ ಅಭಿವ್ಯಕ್ತಿಗೆ ಅವಕಾಶವಿರಲಿಲ್ಲ. ಕ್ಷುದ್ರ ರಾಜಕೀಯ ಚಟುವಟಿಕೆಗಳು ವಿಜೃಂಭಿಸುತ್ತಿದ್ದವು. ಚರ್ಚಿನಲ್ಲಿ ಅಧಿಕಾರಕ್ಕಾಗಿ ಒಳಗೊಳಗೆ ಕಚ್ಚಾಟ ನಡೆಯುತ್ತಿದ್ದವು. ಇವೆಲ್ಲವನ್ನು ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಅನುಭವಿಸುತ್ತಿದ್ದ ಕ್ರೈಸ್ತ ಸನ್ಯಾಸಿನಿಯರು, ಅಪ್ರಜ್ಞಾಪೂರ್ವಕವಾಗಿ ನಾನಾ ಅಸಹಜ ನಡವಳಿಕೆಯನ್ನು ತೋರಿಸಲಾರಂಭಿಸಿದರು. ಗ್ರಾಂಡೀರ್‌ನನ್ನು ಮಟ್ಟ ಹಾಕಲೆಂದೇ ಕಾದಿದ್ದ ಜನರು ಮದರ್ ಸುಪೀರಿಯರ್‌ರನ್ನು ಪುಸಲಾಯಿಸಿದರು. ಅಧಿಕಾರವರ್ಗದವರ ಒತ್ತಾಯಕ್ಕೆ ಮಣಿದು, ಗ್ರಾಂಡೀರ್ ಬಗ್ಗೆ ಇಲ್ಲಸಲ್ಲದ ದೂರನ್ನು ನೀಡಿದಾಗ ನಂತರ ಮದರ್ ಸುಪೀರಿಯರ್ ಒಪ್ಪಿಕೊಂಡರು. ಹೀಗೆ ನಾನಾ ಮಾನಸಿಕ ಸಮಸ್ಯೆಗಳು, ಧಾರ್ಮಿಕ ಮೌಢ್ಯಗಳು, ರಾಜಕೀಯ ಕುತಂತ್ರಗಳು ಹಾಗೂ ಪಕ್ಷಪಾತಪೂರಿತ ನ್ಯಾಯ ವ್ಯವಸ್ಥೆಯ ಕಾರಣ, ಗ್ರಾಂಡೀರ್ ದಾರುಣವಾಗಿ ಸಾವಿಗೆ ಒಳಗಾದ. ಈ ಪ್ರಕರಣವನ್ನು ಆಲ್ಡಸ್ ಹಕ್ಸಲೇ 'ಡೆವಿಲ್ಸ್ ಆಫ್ ಲೌಡನ್' ಎಂಬ ಹೆಸರಿನಲ್ಲಿ ಕಾದಂಬರಿಯಾಗಿ ಪ್ರಕಟಿಸಿದರೆ, ಕೆನ್ ರಸೆಲ್ 1971ರಲ್ಲಿ 'ದಿ ಡೆವಿಲ್ಸ್' ಎನ್ನುವ ಚಿತ್ರವನ್ನಾಗಿಸಿದ.

ಹಿಸ್ಟೀರಿಯ, ಮನುಕುಲದ ಅತ್ಯಂತ ಹಳೆಯ ಕಾಯಿಲೆಗಳಲ್ಲಿ ಒಂದು. ಈಜಿಪ್ಷಿಯನ್ ನಾಗರಿಕತೆಯಿಂದ ಹಿಡಿದು 20ನೆಯ ಶತಮಾನದ ಆದಿಭಾಗದವರೆಗೆ ಜನರನ್ನು ಮೌಢ್ಯದಲ್ಲಿ ಮುಳುಗಿಸಿದ್ದ ಮಾನಸಿಕ ಸಮಸ್ಯೆ. ನಮ್ಮ ದೇಹ, ನಮ್ಮ ಮನಸ್ಸು, ನಮ್ಮ ದೇಹ ಮತ್ತು ಮನಸ್ಸುಗಳ ನಡುವೆ ಇರುವ ಸಂಬಂಧ, ಇವೆರಡರ ಅಸ್ವಸ್ಥತೆಯಿಂದ ಬರುವ ಕಾಯಿಲೆಗಳು ಇವುಗಳನ್ನು ಇಂದಿಗೂ ನಾವು ಪೂರ್ಣವಾಗಿ ಅರ್ಥ ಮಾಡಿಕೊಂಡಿಲ್ಲ. ಅನಾದಿ ಕಾಲದಿಂದಲೂ ಹೆಣ್ಣುಮಕ್ಕಳನ್ನು ದ್ವಿತೀಯ ದರ್ಜೆಯ ಪ್ರಜೆಯನ್ನಾಗಿ ನಡೆಸಿಕೊಂಡು ಬಂದಿದ್ದೇವೆ. ಹೆಣ್ಣು ಎಂದರೆ ಲೈಂಗಿಕ ಸುಖಕ್ಕಾಗಿ ಇರುವ, ಮಕ್ಕಳನ್ನು ಹೆರುವ ಯಂತ್ರ ಎಂದು ಭಾವಿಸಿರುವುದೇ ಹೆಚ್ಚು. ಹೆಣ್ಣುಮಕ್ಕಳ ಅಸ್ಮಿತೆಯನ್ನು ಗುರುತಿಸದೆ, ಆಕೆಯನ್ನು ಓರ್ವ ಮನುಷ್ಯಳಂತೆ ಕಾಣದೆ, ಆಕೆಗೆ ತನ್ನ ಭಾವನೆಗಳನ್ನು ವ್ಯಕ್ತಪಡಿಸಲು ಅವಕಾಶವನ್ನೇ ನೀಡದೇ ಬೆಳೆಸಿಕೊಂಡು ಬರುತ್ತಿರುವ ಕಾರಣ, ಆಕೆಯಲ್ಲಿ ದಮ್ಯವಾಗಿರುವ ಭಾವನೆಗಳು ನಾನಾ ರೂಪದಲ್ಲಿ ಹೊರಹೊಮ್ಮುತ್ತವೆ. ಈ ಎಲ್ಲವನ್ನು 'ಹಿಸ್ಟೀರಿಯ' ಎಂಬ ಹೆಸರಿನಲ್ಲಿ ಕರೆದು ಅಮಾನವೀಯವಾಗಿ ನಡೆಸಿಕೊಂಡದ್ದನ್ನು ಇತಿಹಾಸದಾದ್ಯಂತ ನೋಡಬಹುದು.

'ಹಿಸ್ಟೀರಿಯ' ಎಂಬುದರ ಮೂಲ 'ಹಿಸ್ಟೆರ' ಎಂಬ ಶಬ್ದ. ಹಿಸ್ಟೆರ ಎಂದರೆ ಗರ್ಭಕೋಶ ಎಂದರ್ಥ. ಹಾಗಾಗಿ ಹಿಸ್ಟೀರಿಯ ಎಂದರೆ 'ನಡೆದಾಡುವ ಗರ್ಭಕೋಶ' ಎಂದರ್ಥ. ಕ್ರಿ.ಪೂ.1900ರ ಆಸುಪಾಸಿನ ಈಜಿಪ್ಷಿಯನ್ನರ ಕಾಲದ 'ಈಬರ್ಸ್ ಪ್ಯಾಪಿರಸ್' ಎಂಬ ವೈದ್ಯಕೀಯ ಗ್ರಂಥದಲ್ಲಿ ಹಿಸ್ಟೀರಿಯದ ಮೊದಲ ಪ್ರಸ್ತಾಪವಿದೆ. ಹೆಣ್ಣುಮಕ್ಕಳಲ್ಲಿ ಕಂಡುಬರಬಹುದಾದ ರೋಗಲಕ್ಷಣಗಳಲ್ಲಿ ಉಸಿರುಕಟ್ಟುವಿಕೆ, ಸೆಳವು, ಮಾನಸಿಕ ಏರುಪೇರುಗಳಿಗೆ 'ಚಲಿಸುವ ಗರ್ಭಕೋಶವೇ ಕಾರಣ' ಎಂದು ಭಾವಿಸುತ್ತಿದ್ದರು. ಗರ್ಭಕೋಶವು 'ಮಹಾ ತುಂಟ ಅಂಗ'. ಇದು ಆಗಾಗ್ಗೆ ತನ್ನ ಎಡೆಯನ್ನು ಬಿಟ್ಟು, ದೇಹದ ಎಲ್ಲ ಕಡೆ ಚಲಿಸುತ್ತಾ, ಆಯಾ ಅಂಗದ ಮೇಲೆ ಒತ್ತಡವನ್ನು ಹಾಕಿ, ನಾನಾ ರೋಗಲಕ್ಷಣಗಳಿಗೆ ಕಾರಣವಾಗುತ್ತದೆ ಎನ್ನುವುದು ಈ ಮೌಢ್ಯದ ಸಾರಾಂಶ. ಎಲ್ಲೆಲ್ಲೋ ಅಲೆಯುತ್ತಿರುವ ಗರ್ಭಕೋಶವನ್ನು ಸ್ವಸ್ಥಾನಕ್ಕೆ ಬರುವಂತೆ ಒಲಿಸಲು ಎರಡು ರೀತಿಯ ಚಿಕಿತ್ಸೆಯನ್ನು ನೀಡುತ್ತಿದ್ದರು. ಮೊದಲನೆಯದು ಮೂಗಿನ ಬಳಿ ಅತ್ಯಂತ ಕೆಟ್ಟವಾಸನೆ ಬೀರುವ ವಸ್ತುವನ್ನು ಇಡುತ್ತಿದ್ದರು. ಅದೇ ವೇಳೆ ಯೋನಿದ್ವಾರದ ಬಳಿ ಸುಗಂಧದ್ರವ್ಯಗಳನ್ನು ಇಡುತ್ತಿದ್ದರು. ಗರ್ಭಕೋಶವು ಕೆಟ್ಟ ವಾಸನೆಯನ್ನು ತಡೆದುಕೊಳ್ಳಲಾಗದೆ, ಸುಗಂಧದ್ರವ್ಯಗಳಿಗೆ ಆಕರ್ಷಿತವಾಗಿ ಸ್ವಸ್ಥಾನಕ್ಕೆ ಬರುತ್ತದೆ ಎನ್ನುವುದು ಚಿಕಿತ್ಸೆಯ ಸಾರಾಂಶವಾಗಿತ್ತು.

ಗ್ರೀಕರ ಹಿಪ್ಪೋಕ್ರೇಟ್ಸ್ (ಕ್ರಿ.ಪೂ.460-ಕ್ರಿ.ಪೂ.370) ಸಹ ಚಲಿಸುವ ಗರ್ಭಕೋಶ ಸಿದ್ಧಾಂತವನ್ನು ನಂಬಿದ್ದ. ಲೈಂಗಿಕ ಸುಖ ವಂಚಿತರಾದ ಹೆಣ್ಣುಮಕ್ಕಳ ಗರ್ಭಕೋಶವು ಒಣಗಿ ಹಗುರವಾಗುತ್ತದೆ. ಹಾಗಾಗಿ ಅದು ಒಡಲಿನಲ್ಲೆಲ್ಲ ಓಡಾಡುತ್ತದೆ ಎನ್ನುವುದು ಆತನ ನಿಲುವು. ಇದರ ಹಿನ್ನೆಲೆಯಲ್ಲಿ ಅವನು ಹಿಸ್ಟೀರಿಯ ಪೀಡಿತ ಹೆಣ್ಣು ಮಕ್ಕಳಿಗೆ ಬೇಗನೆ ಮದುವೆಯಾಗುವಂತೆ ಹಾಗೂ ಹೆಚ್ಚು ಹೆಚ್ಚು ಸಲ ಸಂಭೋಗವನ್ನು ಮಾಡುವಂತೆ ಹೇಳುತ್ತಿದ್ದ.

ಗ್ರೀಕ್ ಮತ್ತು ರೋಮನ್ ಯುಗವು ಅವಸಾನವಾಗುತ್ತಿರುವಂತೆಯೇ ಇಡೀ ಯುರೋಪಿನಾದ್ಯಂತ ಕಗ್ಗತ್ತಲ ಯುಗವು ಆರಂಭವಾಯಿತು. ಈ ಅವಧಿಯಲ್ಲಿ ಅಜ್ಞಾನವು ಎಲ್ಲೆಡೆ ತುಂಬಿ ತುಳುಕುತ್ತಿತ್ತು. ಜಮೀನುದಾರರು ಪ್ರಬಲರಾಗಿ ರೈತರಿಂದ ಸುಂಕವನ್ನು ವಸೂಲಿ ಮಾಡುತ್ತಿದ್ದರು. ಜಮೀನುದಾರರು ಮತ್ತು ರೈತರಿಂದ ರಾಜನ ಹಾಗೂ ಚರ್ಚ್ ಹಣವನ್ನು ಪಡೆಯುತ್ತಿದ್ದವು. ಹಾಗಾಗಿ ಯುರೋಪಿನಲ್ಲಿ ಶ್ರೀಸಾಮಾನ್ಯನ ಬದುಕು ದುರ್ಭರವಾಗಿತ್ತು. ಎಲ್ಲೆಡೆ ಚರ್ಚ್ ಮತ್ತು ರಾಜನದೇ ದರ್ಬಾರು! ಇಂಥ ಅವಧಿಯಲ್ಲಿ ನಡೆದ ಒಂದು ಘಟನೆಯನ್ನು ಈಗಷ್ಟೇ ನೋಡಿದ್ದೇವೆ. ಹೆಣ್ಣುಮಕ್ಕಳ ದೈಹಿಕ ಹಾಗೂ ಮಾನಸಿಕ ನೋವುಗಳಿಗೆ ದೆವ್ವ, ಭೂತ, ಪಿಶಾಚಿ, ಮಾಟ, ವಾಮಾಚಾರಗಳೇ ಕಾರಣ ಎಂದು ಎಲ್ಲರೂ ನಂಬಿದರು. ಇವರಿಗೆ ಭೂತೋಚ್ಚಾಟನೆಯಂಥ (ಎಕ್ಸಾರ್ಸಿಸಂ) ಹಾಗೂ ಕ್ರೌರ್ಯಾತಿಕ್ರೌರ್ಯ ಶಿಕ್ಷೆಗಳನ್ನು ಕೊಡುತ್ತಿದ್ದರು. ಹಲವರನ್ನು ಬಹಿರಂಗವಾಗಿ ಕೊಲ್ಲುತ್ತಿದ್ದರು.

ಯುರೋಪಿನ 14ರಿಂದ 17ನೆಯ ಶತಮಾನದವರೆಗಿನ ಕಾಲವನ್ನು 'ನವೋದಯ' ಅಥವಾ 'ರಿನೇಸಾನ್ಸ್' ಯುಗ ಎಂದು ಕರೆಯುವುದುಂಟು. ಪ್ರಾಚೀನ ಹಾಗೂ ಅರ್ವಾಚೀನ ಅರಿವನ್ನು ಒಗ್ಗೂಡಿಸಿ, ವೈಜ್ಞಾನಿಕ ಸಿದ್ಧಾಂತಗಳನ್ನು ಹೊಸದಾಗಿ ರೂಪಿಸುವ ಪ್ರಾಮಾಣಿಕ ಪ್ರಯತ್ನಗಳು ಈ ಅವಧಿಯಲ್ಲಿ ನಡೆದವು. ಆದರೂ ಹೆಣ್ಣುಮಕ್ಕಳ ಸ್ಥಿತಿಗತಿಯು ಸುಧಾರಿಸಲಿಲ್ಲ, ಆದರೆ 'ಗರ್ಭಕೋಶವು ಇದ್ದಲ್ಲಿಯೇ ಇರುತ್ತದೆ, ಅದು ಚಲಿಸುವುದಿಲ್ಲ' ಎನ್ನುವ ಸತ್ಯವನ್ನು ಒಪ್ಪಿದ್ದರು. ಆದರೂ 'ಹೆಣ್ಣುಮಕ್ಕಳ ಭಾವನಾತ್ಮಕ ಅಸ್ಥಿರತೆಗೆ ಮೂಲವು ಆಕೆಯ ಜನನಾಂಗಳಲ್ಲಿಯೇ ಇದೆ' ಎಂಬ ಪರಿಕಲ್ಪನೆಯು ಬದಲಾಗಲಿಲ್ಲ. 18ನೆಯ ಶತಮಾನದಲ್ಲಿ ನರವಿಜ್ಞಾನದ ಬೆಳವಣಿಗೆಯ ಹಿನ್ನೆಲೆಯಲ್ಲಿ ಹಿಸ್ಟೀರಿಯವು ಒಂದು ನರವೈಪರೀತ್ಯವಿರಬಹುದು ಎನ್ನುವ ಸಿದ್ಧಾಂತವನ್ನು ಫ್ರೆಂಚ್ ವೈದ್ಯ ಫಿಲಿಪ್ಪೆ ಪೈನಲ್ (1745-1826) ಮಂಡಿಸಿದ. ಅಪಸ್ಮಾರ, ವಿಷಣ್ಣತೆ ಅಥವಾ ಮೆಲಾಂಕೋಲಿಯದ ಹಾಗೆ ಹಿಸ್ಟೀರಿಯವು ಮಿದುಳಿನಲ್ಲಿಯೇ ಹುಟ್ಟುತ್ತದೆ ಎಂದು ಭಾವಿಸಿದ. ಇದಕ್ಕೆ ಚಿಕಿತ್ಸೆಯಾಗಿ ಅವೈಜ್ಞಾನಿಕ ರಕ್ತವಿಮೋಚನೆ ಮತ್ತು ವಿರೇಚನವನ್ನು ಸೂಚಿಸಿದ. ಜತೆಗೆ ನೈತಿಕ ಚಿಕಿತ್ಸೆ (ಮಾರಲ್ ಥೆರಪಿ) ಆರಂಭಿಸಿ, ರೋಗಿಯು ಪ್ರಶಾಂತ ವಾತಾವರಣದಲ್ಲಿ ಇರಬೇಕೆಂದ. ಗಂಡಸರಿಗೂ ಹಿಸ್ಟೀರಿಯದ ಲಕ್ಷಣಗಳು ಕಂಡುಬಂದರೂ, ಅವರಿಗೆ ಹಿಸ್ಟೀರಿಯವಾಗಿದೆ, ಎನ್ನದೇ ಮತ್ಯಾವುದೋ ಕಾರಣವನ್ನು ನೀಡುತ್ತಿದ್ದರು. ಇದಕ್ಕೆ ಪುರುಷ ದಬ್ಬಾಳಿಕೆಯೇ ಕಾರಣ. ಹಾಗಾಗಿ ಹಿಸ್ಟೀರಿಯವು ಕೇವಲ ಹೆಣ್ಣುಮಕ್ಕಳ ರೋಗವೆಂಬ ಅಂಶವು ಬೇರೂರಿತು.

19ನೆಯ ಶತಮಾನದಲ್ಲಿ ಫ್ರೆಂಚ್ ಜೀನ್ ಮಾರ್ಟಿನ್ ಷಾರ್ಕಾಟ್ (1825-1893) ಎಂಬ ನರವೈದ್ಯನು ಸಾಲ್ಪೀತ್ರಿಯೇ ಆಸ್ಪತ್ರೆಯಲ್ಲಿ ಹಿಸ್ಟೀರಿಯದ ಲಕ್ಷಣಗಳನ್ನು ಬಹಿರಂಗವಾಗಿ ಪ್ರದರ್ಶಿಸಲಾರಂಭಿಸಿದ. ನೂರಾರು ಪ್ರೇಕ್ಷಕರ ಎದುರು ಹೆಣ್ಣುಮಕ್ಕಳನ್ನು ವಶೀಕರಣಕ್ಕೆ (ಹಿಪ್ನೋಸಿಸ್) ಒಳಪಡಿಸಿ, ಹಿಸ್ಟೀರಿಯದ ಲಕ್ಷಣಗಳು ಎನ್ನಲಾದ ದೇಹವು ಸೆಡೆತುಕೊಳ್ಳುವುದು ಅಥವಾ ಸೆಳೆತಕ್ಕೆ ಒಳಗಾಗುವುದನ್ನು ಪ್ರದರ್ಶಿಸುತ್ತಿದ್ದ. ಇದೇ ವೇಳೆಗೆ ವಿಕ್ಟೋರಿಯನ್ ಇಂಗ್ಲೆಂಡಿನಲ್ಲಿ ಸಿರಿವಂತ ಹೆಣ್ಣುಮಕ್ಕಳ ಹಿಸ್ಟೀರಿಯ ಚಿಕಿತ್ಸೆಯೆಂದು 'ವಿಶ್ರಾಂತಿ ಚಿಕಿತ್ಸೆ' ಅಥವಾ 'ರೆಸ್ಟ್ ಕ್ಯೂರ್' ಆರಂಭವಾಯಿತು. ಅಮೆರಿಕದ ಸೈಲಾಸ್ ವೀರ್ ಮಿಷೆಲ್ (1829-1914) ಎಂಬ ವೈದ್ಯನು ಏಕಾಂತವಾಸ, ಪರಿಪೂರ್ಣ ವಿಶ್ರಾಂತಿ ಹಾಗೂ ಬಲವಂತವಾಗಿ ಊಟವನ್ನು ಮಾಡಿಸಿದ. ಈ ಚಿಕಿತ್ಸೆಯು ಎಷ್ಟು ಕ್ರೌರ್ಯವಾಗಿತ್ತು ಎನ್ನುವುದನ್ನು ಷಾರ್ಲೊಟ್ ಪರ್ಕಿನ್ಸ್ ಗಿಲ್ಮನ್ (1860-1935) 'ದಿ ಯೆಲ್ಲೋ ಪೇಪರ್' ಎನ್ನುವ ಕೃತಿಯಲ್ಲಿ ವಿವರಿಸಿದಳು.

ಇದೇ ವೇಳೆಗೆ ವಿಯನ್ನಾದಲ್ಲಿ ಸಿಗ್ಮಂಡ್ ಫ್ರಾಯ್ಡ್ (1856-1939) ಮತ್ತು ಜೋಸೆಫ್ ಬ್ರೂಯರ್ (1842-1925) ಹಿಸ್ಟೀರಿಯಕ್ಕೆ ದಮನಿತ ಭಾವನೆಗಳು, ಅದರಲ್ಲೂ ಕೆಟ್ಟ ಲೈಂಗಿಕ ಅನುಭವಗಳೇ ಕಾರಣ ಎಂಬ ಸಿದ್ಧಾಂತವನ್ನು ಒಪ್ಪಿದ್ದರು. ಜೋಸೆಫ್ ಬ್ರೂಯರನ ರೋಗಿಯಾಗಿದ್ದ 'ಅನ್ನಾ ಓ' ತನ್ನ 'ಮಾತನಾಡುವ ಚಿಕಿತ್ಸೆ' ಅಥವಾ 'ಟಾಕಿಂಗ್ ಥೆರಪಿ'ಯ ಮೂಲಕ ಮನೋವೈದ್ಯಕೀಯದಲ್ಲಿ ಒಂದು ಹೊಸ ಮಾರ್ಗವನ್ನು ರೂಪಿಸಿದ್ದಳು (ನೋಡಿ- 'ವಿಶ್ವವಾಣಿ' 09.04.25. ಮನೋವೈದ್ಯಕೀಯಕ್ಕೆ ಮಹಾ ತಿರುವನ್ನು ಕೊಟ್ಟ ಅನ್ನಾ ಓ).

20ನೆಯ ಶತಮಾನದಲ್ಲಿ 'ಹಿಸ್ಟೀರಿಯ' ಎನ್ನುವ ರೋಗ ನಿದಾನವು ಅಪರೂಪವಾಗಲಾರಂಭಿಸಿತು. ಫ್ರಾಯ್ಡ್ ಸಿದ್ಧಾಂತಗಳ 'ಮನೋವಿಶ್ಲೇಷಣೆ' ಅಥವಾ 'ಸೈಕೋ-ಅನಾಲಿಸಿಸ್' ಮೂಲಕ ಮನಸ್ಸಿನ ಆಂತರ್ಯವನ್ನು ಅನಾವರಣ ಮಾಡುವ ಪ್ರಯತ್ನಗಳು ನಡೆದವು. 1980ರಲ್ಲಿ ಅಮೆರಿಕದ 'ಡಯಾಗ್ನೋಸ್ಟಿಕ್ ಆ್ಯಂಡ್ ಸ್ಟಾಟಿಸ್ಟಿಕ್ ಮಾನ್ಯುವಲ್ ಹಿಸ್ಟೀರಿಯ' ಎಂಬ ಅಧಿಕೃತ ಗ್ರಂಥವು, ಹಿಸ್ಟೀರಿಯ ಎಂಬ ರೋಗನಿದಾನವನ್ನು ಬಿಟ್ಟು ಬಿಟ್ಟಿತು.

- ಯಾವುದೇ ದೈಹಿಕ ಕಾರಣಗಳಿಲ್ಲದೆ ಕಂಡುಬರುವ ಸೆಳವು, ಸೆಡೆತ ಮತ್ತು ಅಂಧತ್ವವನ್ನು 'ಕನ್ವರ್ಷನ್ ಡಿಸಾರ್ಡರ್' ಎಂದು ಕರೆಯಿತು.
- ಉರ್ಸುಲೈನ್ ಕ್ರೈಸ್ತ ಸನ್ಯಾಸಿಯರು ತೋರಿದಂಥ ಸಾಮೂಹಿಕ ಅಸಹಜ ವರ್ತನೆಗಳು ಅತಿ ಒತ್ತಡದ ಕಾರಣ ಅಥವಾ ಬಲವಾದ ಮನೋಸಲಹೆಯ ಮೇಲೆ ಕಂಡುಬರಬಹುದು. ಇಂಥದನ್ನು 'ಮಾಸ್ ಸೈಕೋಜೆನಿಕ್ ಇಲ್ನೆಸ್' ಎಂದಿತು.
- ನಿಖರ ದೈಹಿಕ ಕಾರಣಗಳಿಲ್ಲದೆ ಕಂಡುಬರುವ ಮನೋ-ಯಾತನೆಗಳಿಗೆ ಹಾಗೂ ದೈಹಿಕ ಲಕ್ಷಣಗಳಿಗೆ 'ಸೊಮಾಟಿಕ್ ಸಿಂಪ್ಟಮ್ ಡಿಸಾರ್ಡರ್' ಎಂಬ ಹೆಸರನ್ನು ನೀಡಿತು.

2012ರಲ್ಲಿ ನ್ಯೂಯಾರ್ಕಿನ 'ಲೇ ರಾಯ್' ಪ್ರದೇಶದಲ್ಲಿ ಹದಿಹರೆಯದ ಹೆಣ್ಣುಮಕ್ಕಳು ಅನಿಯಂತ್ರಿತ ಕೆಟ್ಟ ಕೆಟ್ಟ ಮಾತುಗಳನ್ನು ಆಡಲಾರಂಭಿಸಿದರು ಹಾಗೂ ಅವರ ದೇಹವು ಹೇಗೆ ಹೇಗೋ ನುಲಿಯಲಾರಂಭಿಸಿತು. ಇದನ್ನು ಟಿವಿ ಮಾಧ್ಯಮವು ಎಲ್ಲೆಡೆ ಪ್ರಸಾರ ಮಾಡಿತು. ಟಿವಿ ಪ್ರಸಾರವಾದ ಮೇಲೆ ಅವರ ವರ್ತನೆಗಳು ಮತ್ತಷ್ಟು ಬಿಗಡಾಯಿಸಿದವು. 16ನೆಯ ಶತಮಾನದ ಉರ್ಸುಲೈನ್ ಕ್ರೈಸ್ತಸನ್ಯಾಸಿಯರ ಪ್ರಕರಣವು ಮರುಕಳಿಸಿತ್ತು.

ನಾವು ಮನಸ್ಸಿನ ಬಗ್ಗೆ ಏನೆಲ್ಲ ತಿಳಿದಿದ್ದೇವೆ ಎಂದು ಬೀಗುತ್ತಿರುವ ವೇಳೆಯಲ್ಲಿ-

- ಭಾವನೆಗಳು ನಮ್ಮ ದೇಹದಲ್ಲಿ ಹೇಗೆ ಮೂಡುತ್ತವೆ?
- ಸಮಾಜದ ನಿರೀಕ್ಷೆಗಳು ಹೇಗೆ ಮಾನಸಿಕ ಕಾಯಿಲೆಗಳಿಗೆ ಕಾರಣವಾಗುತ್ತವೆ?
- ಅವ್ಯಕ್ತ 'ಮಾನಸಿಕ ಅನಾಥ'ರನ್ನು ಹೇಗೆ ಗುರುತಿಸುವುದು ಹಾಗೂ ಸಾಂತ್ವನವನ್ನು ನೀಡುವುದು?

ಈ ಪ್ರಶ್ನೆಗಳಿಗೆ ಉತ್ತರವನ್ನು ತಿಳಿಯಬೇಕಾಗಿದೆ.

ಕೃಷ್ಣೆಗೆ ಅಂಟಿದ ದುಷ್ಟ ರಾಜಕಾರಣದ ರೋಗ

ಕೃಷ್ಣಾ ನದಿ ಉತ್ತರ ಕರ್ನಾಟಕದ ಜನರ ಪಾಲಿನ ಜೀವನದಿ. ಆದರೆ ಈ ಭಾಗದ ರಾಜಕಾರಣಿಗಳ ರಾಜಕೀಯ ಲಾಭಕ್ಕೆ ಸಿಲುಕಿ ಕೃಷ್ಣಾನದಿ ಅಕ್ಷರಶಃ ನಲುಗಿಹೋಗಿದೆ. ಬತ್ತಿದ ನದಿ ನೋಡುತ್ತ ನೀರಿಗಾಗಿ ಜನ ಪರಿತಪಿಸುತ್ತಿದ್ದರೆ, ಇದೆಲ್ಲ ನಮಗೆ ಸಂಬಂಧವಿಲ್ಲ ಎಂಬಂತೆ ಈ ಭಾಗದ ರಾಜಕಾರಣಿಗಳು ವರ್ತಿಸುತ್ತಾರೆ. ಚುನಾವಣೆ ಬಂತೆಂದರೆ ಸಾಕು ನಾಟಕಮಾಡುತ್ತಾ ಜನರಿಂದ ವೋಟು ಪಡೆಯುತ್ತಾರೆ.

ರಾಜಬೀದಿ

ವಿನಾಯಕ ಮಠಪತಿ
vveditoped@gmail.com

ಚುನಾವಣೆ ಸಮೀಪಿಸುತ್ತಿತ್ತು, ಇತ್ತ ಬೇಸಗೆ ಕಾವು ನಿಧಾನಕ್ಕೆ ಏರತೊಡಗಿತ್ತು. ನೋಡನೋಡುತ್ತಿದ್ದಂತೆ ನದಿಯ ಒಡಲು ಬರಿದಾಗತೊಡಗಿತ್ತು. 40 ಡಿಗ್ರಿ ಸೆಲ್ಸಿಯಸ್ ತಾಪಮಾನಕ್ಕೆ ಜನ ಚಡಪಡಿಸುತ್ತಿದ್ದರು. ಆದರೆ ಜನರಿಗೆ ಈ ಬಾರಿ ಅಚ್ಚರಿ. ಪ್ರತಿಭಟನೆ ನಡೆಸುವ ಮೊದಲೇ ನದಿಗೆ ನೀರು. ಯುದ್ಧ ಗೆದ್ದು ನೀರು ತಂದವರಂತೆ ನದಿ ಹರಿದುಹೋಗುವ ಆಯಾ ತಾಲೂಕಿನ ರಾಜಕೀಯ ನಾಯಕರು ಹಾಳೆಯೊಂದನ್ನು ಹಿಡಿದು ಹಾದಿಗೆ ನಿಂತಿದ್ದರು. ತಮಗೆ ತಾವೇ ಬೆನ್ನು ತಟ್ಟಿಕೊಳ್ಳುವ ಈ ನಟನೆಯನ್ನು ಉತ್ತರ ಕರ್ನಾಟಕದ ಕೃಷ್ಣಾ ನದಿ ಪಾತ್ರದ ಜನ ಚುನಾವಣೆ ಸಂದರ್ಭದಲ್ಲಿ ನೋಡಿ ಆನಂದಿಸಿದ್ದು ಮಾತ್ರವಲ್ಲ ತಮ್ಮ ನಾಯಕರನ್ನು ಹೊತ್ತು ಮೆರೆಸಿದ್ದರು.

ಪ್ರತಿ ವರ್ಷ ಬೇಸಗೆ ಆರಂಭವಾಗುತ್ತಿದ್ದಂತೆ ಕೃಷ್ಣಾ ನದಿ ತೀರದ ಜನ ಹನಿ ನೀರಿಗಾಗಿ ಮಹಾರಾಷ್ಟ್ರದತ್ತ ಮುಖ ಮಾಡಿ ನಿಲ್ಲಬೇಕು. ರಾಜಕೀಯ ನಾಯಕರಿಗೆ ಮನವಿಗಳ ಮೇಲೆ ಮನವಿ ಕೊಟ್ಟರೂ ಪ್ರಯೋಜನವಿಲ್ಲ, ಆದರೆ ಯಾವುದಾದರೂ ಚುನಾವಣೆ ಬಂದರೆ ಸಾಕು ಮಹಾರಾಷ್ಟ್ರ ನಾಯಕರ ಮನೆ ಬಾಗಿಲಿಗೆ ಅಡ್ಡಾಡಿ ನಮ್ಮ ರಾಜಕಾರಣಿಗಳು ನೀರು ಬಿಡಿಸುತ್ತಾರೆ. ಬಿಟ್ಟ ನೀರನ್ನು ಹಿಡಿದುಕೊಂಡು ಗಂಗೆಯನ್ನೇ ಧರೆಗೆ ತಂದ ಭಗೀರಥ ಇವರೇ ಎಂಬಂತೆ ಆಡುತ್ತಾರೆ. ರಾಜ್ಯದಲ್ಲಿ ಕೃಷ್ಣಾನದಿ ಹರಿದುಹೋಗುವ ಪ್ರತಿಯೊಂದು ವಿಧಾನಸಭಾ ಕ್ಷೇತ್ರದ ರಾಜಕೀಯ ನಾಯಕರು ಚುನಾವಣೆ ಸಂದರ್ಭದಲ್ಲಿ ಆಡುವ ನಾಟಕ ಉಳಿದ ಸಮಯದಲ್ಲಿ ಕಾಣುವುದಿಲ್ಲ.

ಕೃಷ್ಣಾ ನದಿ ಉತ್ತರ ಕರ್ನಾಟಕದ ಜನರ ಪಾಲಿನ ಜೀವನದಿ. ದಕ್ಷಿಣದಲ್ಲಿ ಕಾವೇರಿ ಹೇಗೋ, ಉತ್ತರದಲ್ಲಿ ಕೃಷ್ಣೆಯೂ ಹಾಗೆಯೇ. ಆದರೆ ಉತ್ತರ ಕರ್ನಾಟಕದ ರಾಜಕಾರಣಿಗಳ ರಾಜಕೀಯ ಲಾಭಕ್ಕೆ ಸಿಲುಕಿ ಕೃಷ್ಣಾನದಿ ಅಕ್ಷರಶಃ ನಲುಗಿಹೋಗಿದೆ. ಬತ್ತಿದ ನದಿ ನೋಡುತ್ತ ನೀರಿಗಾಗಿ ಜನ ಪರಿತಪಿಸುತ್ತಿದ್ದರೆ, ಇದೆಲ್ಲ ನಮಗೆ ಸಂಬಂಧವಿಲ್ಲ ಎಂಬಂತೆ ಉತ್ತರ ಕರ್ನಾಟಕ ಭಾಗದ ರಾಜಕಾರಣಿಗಳು ವರ್ತಿಸುತ್ತಾರೆ. ಆದರೆ ಅದೇ ಚುನಾವಣೆ ಬಂತೆಂದರೆ ಸಾಕು ನಿರಂತರ ನಾಟಕಮಾಡುತ್ತಾ ಜನರಿಂದ ವೋಟು ಪಡೆಯುತ್ತಾರೆ.

ಹೌದು, ಕೃಷ್ಣಾ ನದಿ ನೀರು ಹಂಚಿಕೆ ವಿಚಾರವಾಗಿ ಪಕ್ಕದ ರಾಜ್ಯ ಮಹಾರಾಷ್ಟ್ರವು ಕರ್ನಾಟಕಕ್ಕೆ ನಿರಂತರವಾಗಿ ಅನ್ಯಾಯ ಮಾಡುತ್ತಾ ಬಂದಿದೆ. ಉಭಯ ರಾಜ್ಯಗಳ ಮಧ್ಯೆ ನದಿ ನೀರು ಹಂಚಿಕೆ ಒಪ್ಪಂದ ಇದ್ದರೂ ಅದು ಈವರೆಗೂ ಜಾರಿಯಾಗಿಲ್ಲ. ಪ್ರತಿ ಬೇಸಗೆ ಸಂದರ್ಭದಲ್ಲಿ ಮಹಾರಾಷ್ಟ್ರದ ಮುಖ್ಯಮಂತ್ರಿಗೆ ಪತ್ರ ಬರೆಯಬೇಕು. ಅವರ ಕೈ, ಕಾಲು ಹಿಡಿದು ಒಂದೆರಡು ಟಿಎಂಸಿ ನೀರು ಬಿಡಿಸಿಕೊಂಡು ಬಂದರಾಯ್ತು. ಆದರೆ ಈ ಕೆಲಸವನ್ನು ಉತ್ತರ ಕರ್ನಾಟಕದ ರಾಜಕಾರಣಿಗಳು ಚುನಾವಣೆ ಸಂದರ್ಭದಲ್ಲಿ ಮಾತ್ರ ಅಚ್ಚುಕಟ್ಟಾಗಿ ನಿರ್ವಹಿಸುತ್ತಾರೆ. ಉಳಿದ ಸಂದರ್ಭದಲ್ಲಿ ಕೃಷ್ಣಾ ನದಿ ಪಕ್ಕದಲ್ಲಿ ಸುಳಿಯುವ ಕೆಲಸವನ್ನೂ ಮಾಡುವುದಿಲ್ಲ.

ಸಾಮಾನ್ಯವಾಗಿ ಮಾರ್ಚ್ ತಿಂಗಳಿನಿಂದ ಮೇ ಅಂತ್ಯದವರೆಗೂ ಕೃಷ್ಣಾ ನದಿ ನೀರಿನ ಅಭಾವ ಕಾಡುತ್ತದೆ. ವರ್ಷಪೂರ್ತಿ ಬೆಳೆದ ಕಬ್ಬು ಈ ಮೂರು ತಿಂಗಳಲ್ಲಿ ನೀರಿಲ್ಲದೆ ಒಣಗಿ ನೆಲ ಕಚ್ಚುವ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಈ ಸಂದರ್ಭದಲ್ಲಿ ಮಹಾರಾಷ್ಟ್ರದ ಕೋಯ್ನಾ ಜಲಾಶಯದಲ್ಲಿ ನೀರಿದ್ದರೂ ಅಲ್ಲಿನ ಸರಕಾರ ಒಂದೆರಡು ಟಿಎಂಸಿ ನೀರು ಬಿಡುವುದಿಲ್ಲ. ಮಹಾರಾಷ್ಟ್ರ ಸರಕಾರದ ಮೇಲೆ ರಾಜ್ಯ ಸರಕಾರವೂ ಒತ್ತಡ ಹೇರುವ ಪ್ರಯತ್ನ ನಡೆಸುವುದಿಲ್ಲ. ಆದರೆ ಜೂನ್ ಕಳೆದು ಜುಲೈ ಸಮೀಪಿಸುತ್ತಿದ್ದಂತೆ ಮಹಾರಾಷ್ಟ್ರ ಮಾಹಿತಿ ನೀಡದೆ ಕೃಷ್ಣೆಗೆ ನೀರು ಹರಿಸುತ್ತದೆ. ಪ್ರವಾಹ ಉಂಟಾಗಿ ಕೃಷ್ಣಾ ನದೀಪಾತ್ರದ ಜನರ ಬದುಕು ಬೀದಿಗೆ ಬಿದ್ದರೂ ರಾಜಕಾರಣಿಗಳನ್ನು ಪ್ರಶ್ನೆ ಮಾಡದ ಪರಿಸ್ಥಿತಿ ಇಲ್ಲಿದೆ.

ಬೇಕು ಶಾಶ್ವತ ಪರಿಹಾರ

ಕಾವೇರಿ ನದಿ ನೀರು ಹಂಚಿಕೆ ವಿಷಯದಲ್ಲಿ ರಾಜ್ಯ ಸರಕಾರ ಹಾಗೂ ದಕ್ಷಿಣ ಭಾಗದ ರಾಜಕೀಯ ನಾಯಕರು ನಡೆದುಕೊಳ್ಳುವ ರೀತಿ ಹಾಗೂ ಪ್ರತಿಭಟಿಸುವ ಪರಿ ಯಾವತ್ತೂ

ಶ್ಲಾಘನೀಯ. ಆದರೆ ಉತ್ತರದ ಕೃಷ್ಣಾ ನದಿ ವಿಚಾರವಾಗಿ ಇಲ್ಲಿನ ರಾಜಕಾರಣಿಗಳು ಅಧಿವೇಶನ ಸಂದರ್ಭದಲ್ಲಿ ಅರಚಿಕೊಳ್ಳುವುದು ಬಿಟ್ಟರೆ ಹೋರಾಟಕ್ಕೆ ಇಳಿಯುವುದು ತೀರಾ ಕಡಿಮೆ. ಕೇವಲ ಆಡಳಿತ ಪಕ್ಷದ ವಿರುದ್ಧ ಆಕ್ರೋಶ ಹೊರಹಾಕುತ್ತ ದಿನಗಳೆಯುತ್ತಾರೆ.

ಕೃಷ್ಣಾ ನದಿ ನೀರು ಹಂಚಿಕೆ ವಿಚಾರವಾಗಿ ಈ ಹಿಂದೆ 2004ರಿಂದ 2015ರವರೆಗೆ ರಾಜ್ಯದಿಂದ ಮಹಾರಾಷ್ಟ್ರಕ್ಕೆ, ಬರಗಾಲ ಸಂದರ್ಭದಲ್ಲಿ ಹಣ ಕೊಟ್ಟು ನೀರು ಬಿಡಿಸಿಕೊಳ್ಳುತ್ತಾ ಬರಲಾಗಿತ್ತು. ಆದರೆ 2016ಕ್ಕೆ ಮಹಾರಾಷ್ಟ್ರವು ನದಿ ನೀರು ವಿನಿಮಯ ಒಪ್ಪಂದಕ್ಕೆ ಬರುವಂತೆ ಒತ್ತಡ ಹೇರಿತ್ತು. ಈ ಹಿನ್ನೆಲೆಯಲ್ಲಿ ರಾಜ್ಯದ ವಿಜಯಪುರದ ಕೃಷ್ಣಾ ನದಿಯಿಂದ ಪ್ರಾರಂಭವಾಗುವ ತುಬಚಿ-ಬಬಲೇಶ್ವರ ಏತ ನೀರಾವರಿ ಮೂಲಕ ಮಹಾರಾಷ್ಟ್ರದ ಜತ್ತ ತಾಲೂಕಿನ ಹಳ್ಳಿಗಳಿಗೆ ನಾಲ್ಕು ಟಿಎಂಸಿ ನೀರು ಕೊಟ್ಟರೆ ಅತ್ತ ಮಹಾರಾಷ್ಟ್ರ ರಾಜ್ಯಕ್ಕೆ ನಾಲ್ಕು ಟಿಎಂಸಿ ನೀರು ಬಿಡುತ್ತೇವೆ ಎಂಬ ಒಪ್ಪಂದಕ್ಕೆ ಬಂದಿತ್ತು.

ತುಬಚಿ-ಬಬಲೇಶ್ವರ ಏತ ನೀರಾವರಿ ಯೋಜನೆಯ ತಿಕೋಟಾ ನೀರು ವಿತರಣಾ ಕೇಂದ್ರದಿಂದ ಸುಮಾರು 30 ಕಿ.ಮೀ. ಪೈಪ್‌ಲೈನ್ ಅಳವಡಿಕೆ ಮಾಡಿ ಜತ್ತ ತಾಲೂಕಿಗೆ ನೀರು ಹರಿಸುವ ಕೆಲಸವನ್ನು ರಾಜ್ಯ ಸರಕಾರ ಮಾಡಬೇಕಾಗಿದೆ. 2016ರಲ್ಲಿ ಕಾಮಗಾರಿ ವೆಚ್ಚ ಕೇವಲ 300 ಕೋಟಿ ರು. ಇದ್ದಿದ್ದು ಸದ್ಯ ಈ ಯೋಜನೆ ಒಟ್ಟು ಮೊತ್ತ ಮೂರು ಪಟ್ಟು ಹೆಚ್ಚಾಗಿದೆ. ಒಂದು ವೇಳೆ ಕರ್ನಾಟಕ ಸರಕಾರ ಈ ಕಾಮಗಾರಿ ಮಾಡಿದ್ದೇ ಆದರೆ ಅತ್ತ ಮಹಾರಾಷ್ಟ್ರದಿಂದ ಪ್ರತಿ ಬೇಸಗೆ ಸಂದರ್ಭದಲ್ಲಿ ನಾಲ್ಕು ಟಿಎಂಸಿ ನೀರು ಪಡೆಯಬಹುದು. ಇಲ್ಲವಾದರೆ ಚುನಾವಣೆ ಸಂದರ್ಭದಲ್ಲಿ ಮಹಾರಾಷ್ಟ್ರ ಸರಕಾರಕ್ಕೆ ಬೇಡಿಕೊಂಡು ನೀರು ಹರಿಸುವುದು ನಂತರದ ದಿನಗಳಲ್ಲಿ ಇತ್ತ ಕಡೆ ತಿರುಗಿ ನೋಡದ ರಾಜಕೀಯ ನಾಯಕರ ವಿರುದ್ಧ ಜನ ಹಿಡಿಶಾಪ ಹಾಕುತ್ತಲೇ ಇರುವ ಪರಿಸ್ಥಿತಿ ಮುಂದುವರಿಯಲಿದೆ.

ಇದೇ ಏಪ್ರಿಲ್ ಮೊದಲ ವಾರದಲ್ಲಿ ಖುದ್ದು ಸಿಎಂ ಸಿದ್ದರಾಮಯ್ಯ ಅವರು ಕೃಷ್ಣಾ ನದಿಗೆ ನೀರು ಹರಿಸುವಂತೆ ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡ್ನವಿಸ್ ಅವರಿಗೆ ಪತ್ರ ಬರೆದಿದ್ದು ಬಿಟ್ಟರೆ ರಾಜ್ಯದ ಯಾವೊಬ್ಬ ನಾಯಕರೂ ನಿಯೋಗದ ಜತೆ ಮಹಾರಾಷ್ಟ್ರ ಸರಕಾರಕ್ಕೆ ಒತ್ತಡ ಹೇರುವ ಪ್ರಯತ್ನ ಮಾಡಿಲ್ಲ. ಅಷ್ಟೇ ಅಲ್ಲದೆ ಬೆಳಗಾವಿ, ಬಾಗಲಕೋಟ, ವಿಜಯಪುರ ಸೇರಿದಂತೆ ರಾಜ್ಯದ ಯಾವೊಬ್ಬ ಜಿಲ್ಲಾ ನಾಯಕರೂ ನದಿ ನೀರು ಬಿಡಿಸಲು ಪ್ರಾಮಾಣಿಕ ಪ್ರಯತ್ನ ಮಾಡಿಲ್ಲ. ಆದರೆ ಅಧಿವೇಶನ ಸಂದರ್ಭದಲ್ಲಿ ಉತ್ತರ ಕರ್ನಾಟಕ ನೀರಾವರಿ ಯೋಜನೆ ಕುರಿತು ಉದ್ದುದ್ದ ಭಾಷಣ ಮಾಡುವುದರಲ್ಲಿ ಯಾರೂ ಹಿಂದೆ ಬಿದ್ದಿಲ್ಲ.

ಸದ್ಯ ಕೃಷ್ಣಾ ನದಿ ಪಾತ್ರದ ಜನರ ಪರಿಸ್ಥಿತಿ ಯಾವ ಮಟ್ಟಿಗಿದೆ ಎಂದರೆ ಬಿಸಿಲು ಹೆಚ್ಚಾದಂತೆ ನೀರಿಗಾಗಿ ಹೋರಾಡಬೇಕು. ನಂತರ ಮಳೆಗಾಲದಲ್ಲಿ ಪ್ರವಾಹಕ್ಕೆ ಸಿಲುಕಿ ಊರು ಬಿಟ್ಟು ಹೋಗಬೇಕು. ಈ ಮಧ್ಯೆ ಪರಿಹಾರದ ರೂಪದಲ್ಲಿ ಸರಕಾರಗಳು ಕೊಡುವ ಅಲ್ಪ ಹಣ ಇತ್ತ ಬೆಳೆಗೆ ಮಾಡಿದ್ದ ಸಾಲ ತೀರಿಸಲು ಸಾಧ್ಯವಾಗುವುದಿಲ್ಲ. ಇನ್ನು, ಅವಶ್ಯಕತೆ ಇದ್ದಾಗ ನೀರು ಬಿಡದ ಮಹಾರಾಷ್ಟ್ರ ಸರಕಾರ ಮಳೆಗಾಲದ ಸಂದರ್ಭದಲ್ಲಿ ವಿಪರೀತ ನೀರು ಹರಿಸಿ ರಾಜ್ಯದ ಕೃಷ್ಣಾ ನದಿ ಪಾತ್ರದ ಜನರ ಜೀವ ಹಿಂಡುವ ಕೆಲಸ ಮಾಡುತ್ತದೆ. ಇದರಿಂದ ಜನರಿಗೆ ಮುಕ್ತಿ ಬೇಕಿದೆ. ಈ ಕುರಿತು ಉತ್ತರ ಕರ್ನಾಟಕ ಭಾಗದ ನಾಯಕರು ಗಂಭೀರವಾಗಿ ಚಿಂತನೆ ಮಾಡುವ ಮೂಲಕ ಸಮಸ್ಯೆ ಪರಿಹಾರಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಬೇಕಾಗಿದೆ.

ಜವಾಬ್ದಾರಿ ಮರೆತ ಬಿಜೆಪಿ ನಾಯಕರು

ಮಹದಾಯಿ ಹಾಗೂ ಉತ್ತರ ಕರ್ನಾಟಕ ನೀರಾವರಿ ವಿಚಾರವಾಗಿ ಬಿಜೆಪಿ ನಾಯಕರು ಅಧಿಕಾರದಲ್ಲಿಲ್ಲದ ಸಂದರ್ಭದಲ್ಲಿ ತೋರುವ ಕಾಳಜಿ ಅಧಿಕಾರದಲ್ಲಿದ್ದಾಗ ತೋರಿದ್ದರೆ ಈವರೆಗೆ ಎಲ್ಲಾ ಯೋಜನೆಗಳು ಪೂರ್ಣಗೊಂಡು ಜನ ಸಂತೋಷದಿಂದ ಬದುಕು ನಡೆಸುತ್ತಿದ್ದರು. 2023ರ ವಿಧಾನಸಭಾ ಚುನಾವಣಾ ಹಿನ್ನೆಲೆ ಬಿಜೆಪಿ ನಾಯಕರು ಮಹಾರಾಷ್ಟ್ರದ ಅಂದಿನ ಸಿಎಂ ಏಕನಾಥ ಶಿಂಧೆ ಅವರ ಬೆನ್ನುಬಿದ್ದು ನೀರು ಹರಿಸಿದ್ದರು. ಇದಾದ ನಂತರ 2024ರ ಲೋಕಸಭಾ ಚುನಾವಣೆ ವೇಳೆಗೂ ಕೊಂಚ ನದಿ ನೀರಿನ ಅಭಾವ ಉಂಟಾಗಿತ್ತಾದರೂ ಮುಂದೆ ನಿಂತು ನೀರು ಬಿಡಿಸಿದ್ದರು. ಆದರೆ ಈ ವರ್ಷ ಯಾವೊಬ್ಬ ನಾಯಕರೂ ತಮ್ಮದೇ ಬಿಜೆಪಿ ಸರಕಾರ ಇರುವ ಮಹಾರಾಷ್ಟ್ರದ ಜತೆ ಮಾತನಾಡಿ ಕೃಷ್ಣಾ ನದಿಗೆ ನೀರು ಹರಿಸುವ ಪ್ರಯತ್ನ ಮಾಡಿಲ್ಲ.

ಸಿಎಂ ಸಿದ್ದರಾಮಯ್ಯ ಪತ್ರ ಬರೆಯುವ ಮುಂಚಿತವಾಗಿ ಖುದ್ದು ಬಿಜೆಪಿ ನಾಯಕರ ನಿಯೋಗವು ಮಹಾರಾಷ್ಟ್ರ ಸರಕಾರದ ಜತೆ ಮಾತನಾಡಿ ಕೃಷ್ಣಾ ನದಿಗೆ ನೀರು ಹರಿಸುವ ಪ್ರಯತ್ನ ಮಾಡಬಹುದಿತ್ತು. ಈ ಹಿಂದೆ 2018ರಲ್ಲಿ ವಿರೋಧ ಪಕ್ಷದ ನಾಯಕರಾಗಿದ್ದ ಬಿ.ಎಸ್ ಯಡಿಯೂರಪ್ಪ ಸರಕಾರವನ್ನು ಎಚ್ಚರಿಸುತ್ತಾ ಕೃಷ್ಣಾ ನದಿಗೆ ನೀರು ಹರಿಸುವಂತೆ ಒತ್ತಡ ಹೇರಿದ್ದರು. ಆದರೆ ಇಲ್ಲಿಯವರೆಗೆ ಯಾವೊಬ್ಬ ಬಿಜೆಪಿ ನಾಯಕರೂ ಮಹಾರಾಷ್ಟ್ರ ಸರಕಾರಕ್ಕೆ ಒತ್ತಡ ಹೇರುವ ಪ್ರಯತ್ನ ಮಾಡದಿರುವುದು ಜನರ ಬಗೆಗಿನ ಇವರ ಕಾಳಜಿ ಎಷ್ಟು ಎಂಬುದನ್ನು ತೋರ್ಪಡಿಸುತ್ತದೆ. ಇನ್ನು ಆಡಳಿತ ಪಕ್ಷ ಕಾಂಗ್ರೆಸ್ ಸರ್ವಪಕ್ಷಗಳ ನಿಯೋಗವನ್ನು ಮಹಾರಾಷ್ಟ್ರಕ್ಕೆ ಕಳುಹಿಸಿ ಒತ್ತಡ ಹೇರುವ ಪ್ರಯತ್ನ ಮಾಡದೆ ಕೇವಲ ಪತ್ರ ವ್ಯವಹಾರ ಮಾಡುತ್ತಿರುವುದು ವಿಪರ್ಯಾಸ.

ಸದ್ಯ ಕೇಂದ್ರ ಹಾಗೂ ಪಕ್ಕದ ಮಹಾರಾಷ್ಟ್ರದಲ್ಲಿ ಬಿಜೆಪಿ ಅಧಿಕಾರದಲ್ಲಿದೆ. ಕೇಂದ್ರದ ನಾಯಕರ ಜತೆ ಮಾತನಾಡಿ ಕೃಷ್ಣಾ ನದಿ ನೀರು ಹಂಚಿಕೆ ವಿಚಾರವಾಗಿ ಶಾಶ್ವತ ಪರಿಹಾರಕ್ಕೆ ಪ್ರಯತ್ನಿಸಬೇಕು. 17 ಜನ ಬಿಜೆಪಿ ಸಂಸದರು ಸೇರಿಕೊಂಡು ಪ್ರಧಾನಿ ಹಾಗೂ ಕೇಂದ್ರ ಜಲಸಂಪನ್ಮೂಲ ಸಚಿವರನ್ನು ಭೇಟಿಯಾಗಿ ರಾಜ್ಯದ ವಸ್ತುಸ್ಥಿತಿ ಏನು ಎಂಬುದನ್ನು ಅವರ ಗಮನಕ್ಕೆ ತರುವ ಮೂಲಕ ಮಹಾರಾಷ್ಟ್ರ ಸರಕಾರದ ಮೇಲೆ ಒತ್ತಡ ಹೇರುವ ಅವಕಾಶ ಇದೆ. ಕಾವೇರಿ ವಿಚಾರವಾಗಿ ತಮಿಳುನಾಡಿನ ರಾಜಕೀಯ ನಾಯಕರು ತೋರುವ ಧೈರ್ಯದ ಅರ್ಧದಷ್ಟಾದರೂ ರಾಜ್ಯದ ನಾಯಕರು ತೋರಿಸಿದರೆ ಉತ್ತರ ಕರ್ನಾಟಕ ಭಾಗದ ಜನ ನೆಮ್ಮದಿಯಿಂದ ಬದುಕು ಸಾಗಿಸುತ್ತಾರೆ. ಇಲ್ಲವಾದರೆ ಅದೇ ರಾಗ, ಅದೇ ತಾಳ.

(ಲೇಖಕರು ಪತ್ರಕರ್ತರು)

ಭಟ್ಟರ್ ಸ್ಕಾಚ್

- ಸಂದೀಪ ನಾಯಕ, ಬೆಂಗಳೂರು
ಭಟ್ರೇ, ಗಗನಸಖಿಯನ್ನು ಮದುವೆಯಾಗಬೇಕೆಂದಿರುವೆ, ನಿಮ್ಮ ಸಲಹೆ?
– ಆಕೆ ಆಕಾಶದಲ್ಲಿ ಹಾರುತ್ತಿರುತ್ತಾಳೆ, ನೀನು ನೆಲದಲ್ಲಿ ತೇಲುತ್ತಿರಬೇಕಷ್ಟೇ!

- ನೆರೂರು ಹಣಮಂತ, (ಇಮೇಲ್ ಮೂಲಕ)
ಭಟ್ರೇ, ಸಂಸಾರ ತಾಪತ್ರಯ ಇದೆ ಅಂತ ಗೊತ್ತಿದ್ರೂ ಜನ ಮದುವೆಯಾಗ್ತಾರಲ್ಲ?
– ಬೆಂಕಿ ಸುಡುತ್ತೆ ಅಂತ ಗೊತ್ತಿದ್ರೂ ಕೆಲವರು ಕೈ ಇಟ್ಟು ಪರೀಕ್ಷೆ ಮಾಡುವುದಿಲ್ಲವೇ?!

- ವೀರನೂರು ರಾಯಣ್ಣ, ಹುಬ್ಬಳ್ಳಿ
ಭಟ್ರೇ, ಬೇರೆ ದೇಶದವಳನ್ನು ಮದುವೆಯಾದರೆ ಸಮಸ್ಯೆ ಅಂತಾರಲ್ಲ?
– ಭಾಷೆ ಗೊತ್ತಿಲ್ಲದವಳನ್ನು ಮದುವೆಯಾದ್ರೆ ಎಷ್ಟೋ ವಾಸಿ!

- ಕೆ. ಭಾನು, ಬೆಂಗಳೂರು
ಭಟ್ರೇ, ಹೆಂಡತಿಯೇ ಸರ್ವಸ್ವ ಅಂತ ಧೈರ್ಯವಾಗಿ ಹೇಳ್ತಾನಲ್ಲ?
– ಯಾರ ಹೆಂಡತಿ ಎಂಬುದನ್ನು ಸ್ಪಷ್ಟಪಡಿಸಬೇಕಿತ್ತು!

- ನವೀನ ವಿನಾಯಕ ಪಿ., (ಇಮೇಲ್ ಮೂಲಕ)
ಭಟ್ರೇ, ಗ್ರಹಚಾರ ಕೆಟ್ರೆ ಏನಾಗುತ್ತೆ?
– ಮುಖ್ಯಮಂತ್ರಿಯಿಂದ ಎಪ್ಪಿಗೆ ಕಪಾಳಮೋಕ್ಷ!

- ರಘು, ಹಾಸನ
ಭಟ್ರೇ, ಅಪರಿಚಿತರೊಂದಿಗೆ ಮಾತಾಡಿದ್ರೆ ಏನು ಪ್ರಯೋಜನ?
– ಅವರು ಸಾಲ ಕೇಳುವುದಿಲ್ಲವಲ್ಲ?!

- ರಾಮು ಹೆಗಡೆ, ಶಿರಸಿ
ಭಟ್ರೇ, ಪಂಡಿತನ ಮಗ ಮೂರ್ಖ ಅಂತಾರಲ್ಲ?
– ಹೀಗಾಗಿ ಪಂಡಿತರ ಮಕ್ಕಳು ತಮ್ಮ ತಂದೆಯನ್ನು ಪಂಡಿತ ಎಂದು ಒಪ್ಪಿಕೊಳ್ಳುವುದಿಲ್ಲ!

- ವೀರೇಶ ಬಳ್ಳಾರಿ, ಬಳ್ಳಾರಿ
ಭಟ್ರೇ, ನಾನು ಪ್ರೀತಿಸಿದ ಹುಡುಗಿ ಈಗ ಮದುವೆ ಆಗುವುದಿಲ್ಲ ಅಂತಾಳಲ್ಲ?
– ನೀನು ಈ ಮೊದಲೇ ಮದುವೆಯಾಗಿರುವುದು ಆಕೆಗೆ ಗೊತ್ತಾಗಿರಬೇಕು!

- ಸಂಧ್ಯಾ ಪಿ., (ಇಮೇಲ್ ಮೂಲಕ)
ಭಟ್ರೇ, ದೇವೇಗೌಡರು ಇನ್ನೊಮ್ಮೆ ಪ್ರಧಾನಿ ಆಗ್ತಾರೆ ಅಂತ ಜ್ಯೋತಿಷಿಯೊಬ್ಬರು ಹೇಳಿದ್ದಾರಲ್ಲ?
– ಅದು ಜ್ಯೋತಿಷ್ಯ ಶಾಸ್ತ್ರಕ್ಕೇ ಸವಾಲು!

- ಸದಾನಂದ ಕಾಮತ್, ಬ್ರಹ್ಮಾವರ
ಭಟ್ರೇ, ಸಿದ್ದರಾಮಯ್ಯನವರಿಗೆ ಬಹಳ ಸಹನೆ ಅಂತಾರಲ್ಲ?
– ಪೊಲೀಸ್ ಅಧಿಕಾರಿ ಕೆನ್ನೆಗೆ ಹೊಡೆಯದೆ ಬಿಟ್ಟಿದ್ದನ್ನು ನೋಡಿಯೂ ಈ ಪ್ರಶ್ನೆಯಾ?!

ದಾಳಿ, ನಮ್ಮ ಬೆಡ್ ರೂಮ್‌ನಲ್ಲೂ ಆಗಬಹುದು!

ಲೋಕಮತ
ಲೋಕೇಶ್ ಕಾಯರ್ಗ
kaayarga@gmail.com

ಕಾಶ್ಮೀರದ ಪಹಲ್ಗಾಮ್‌ನಲ್ಲಿ ಪಾಕ್ ಪ್ರೇರಿತ ಉಗ್ರರ ನರಮೇಧದ ಬಳಿಕ ಪಾಕಿಸ್ತಾನದ ಮೇಲೆ ನಿರ್ಣಾಯಕ ಕ್ರಮ ಜರುಗಿಸಬೇಕೆಂಬ ಜನಾಗ್ರಹ ಹೆಚ್ಚುತ್ತಿದೆ. ಪ್ರಧಾನಿ ನರೇಂದ್ರ ಮೋದಿ ಅವರೂ ದಾಳಿಕೋರರನ್ನು ಶಿಕ್ಷಿಸಿಯೇ ಸಿದ್ಧ ಎಂದಿದ್ದಾರೆ. ನಮ್ಮ ಸೇನೆಯೂ ಸಮರ ಸನ್ನದ್ಧವಾಗಿರುವುದಾಗಿ ಹೇಳಿಕೊಂಡಿದೆ. ನಮ್ಮ ಮಾಧ್ಯಮಗಳು ಭಾರತ ಯುದ್ಧಕ್ಕೆ ಸಿದ್ಧವಾಗುತ್ತಿದೆ ಎಂಬ ಚಿತ್ರಣ ನೀಡುತ್ತಿವೆ. ಆದರೆ ಭಾರತದ ವಿರುದ್ಧ ಅಧಿಕೃತವಾಗಿ ನಾಲ್ಕು ಯುದ್ಧಗಳಲ್ಲಿ ಸೋತ ಪಾಕಿಸ್ತಾನವಾಗಲಿ, 1965 ರಲ್ಲಿ ಮಿತ್ರದ್ರೋಹ ಎಸಗಿದ ಚೀನಾ ಆಗಲಿ ಅಂದಿನಿಂದ ಇಂದಿನವರೆಗೂ ಎಂದೂ ಯುದ್ಧ ನಿಲ್ಲಿಸಿಲ್ಲ. ಪಹಲ್ಗಾಮ್ ಅಥವಾ ಪುಲ್ವಾಮಾ ದಾಳಿಯಾಗಲಿ, ಚೀನಾ ಸೈನಿಕರೊಂದಿಗೆ ಗಲ್ವಾನ್ ನದಿ ತೀರದಲ್ಲಿ ನಡೆದ ಸಂಘರ್ಷವಾಗಲಿ ಅದರ ಒಂದು ಭಾಗವಷ್ಟೇ. ಹೀಗಾಗಿ ಈ ರಾಷ್ಟ್ರಗಳು ಹೊಸದಾಗಿ ಯುದ್ಧ ಘೋಷಣೆ ಮಾಡುವ ಪ್ರಶ್ನೆಯೇ ಬರುವುದಿಲ್ಲ. ಪ್ರತ್ಯಾಕ್ರಮಣಕ್ಕೆ ನಾವು ಎಷ್ಟರ ಮಟ್ಟಿಗೆ ಸಿದ್ಧರಾಗಿದ್ದೇವೆ ಎನ್ನುವುದಷ್ಟೇ ನಮ್ಮನ್ನು ನಾವು ಕೇಳಿಕೊಳ್ಳಬೇಕಾದ ಪ್ರಶ್ನೆ.

ಈಗ ಯುದ್ಧ ಮಾಡಲು ಸಮವಸ್ತ್ರಧಾರಿ ಸೈನಿಕರೇ ಬೇಕಿಲ್ಲ. ಮೆಷಿನ್‌ಗನ್‌ಗಳು, ಟ್ಯಾಂಕರ್‌ಗಳು, ಅತ್ಯಾಧುನಿಕ ಯುದ್ಧ ವಿಮಾನಗಳು, ಕ್ಷಿಪಣಿಗಳು, ಸಬ್‌ಮರಿನ್‌ಗಳು ಇಲ್ಲದೆ, ಸಮರಾಂಗಣಕ್ಕೆ ಇಳಿಯದೆ ಜಗತ್ತಿನ ಯಾವುದೋ ಮೂಲೆಯಲ್ಲಿ ಕುಳಿತು 'ಯುದ್ಧ' ಮಾಡುತ್ತಲೇ ಇರಬಹುದು. ಮಾರಕ ಶಸ್ತ್ರಾಸ್ತ್ರಗಳಿಲ್ಲದೆ ಎದುರಾಳಿ ರಾಷ್ಟ್ರಕ್ಕೆ ತೊಂದರೆ ಕೊಡುತ್ತಲೇ ಇರಬಹುದು. ಅಲ್ಲಿನ ಆಡಳಿತ ವ್ಯವಸ್ಥೆ, ಆರ್ಥಿಕ ವ್ಯವಸ್ಥೆ, ಆರೋಗ್ಯ ವ್ಯವಸ್ಥೆ ಮಾತ್ರವಲ್ಲ ಮೂಲಸೌಕರ್ಯಕ್ಕೂ ಧಕ್ಕೆ ತಂದು ಜನರು ನರಳುವಂತೆ ಮಾಡಬಹುದು. ಕಾಶ್ಮೀರದ ಹೆಸರಿನಲ್ಲಿ, ಧರ್ಮದ ಹೆಸರಿನಲ್ಲಿ ಯುವಕರನ್ನು ತಪ್ಪು ಹಾದಿಗೆಳೆದು ಭಾರತದ ಮೇಲೆ ಆಗಾಗ ಛೂ ಬಿಡುವ ಪಾಕಿಸ್ತಾನ ಈಗ ಈ ಕೆಲಸವನ್ನೂ ಮಾಡುತ್ತಿದೆ. ಸೈಬರ್ ದಾಳಿಯ ಮೂಲಕ ನಿರಂತರವಾಗಿ ಭಾರತದ ಮೇಲೆ ಆಕ್ರಮಣ ಮಾಡುತ್ತಲೇ ಇದೆ.

ನೌಕರರಿಗೆ, ಸೇನಾ ಸಿಬ್ಬಂದಿಗೆ ಸಂಬಳ ಕೊಡಲು ಹಣವಿಲ್ಲದೆ ದಿವಾಳಿಯಂಚಿಗೆ ಸರಿದ ದೇಶವೊಂದು ಉಗ್ರರಿಗೆ ನಿರಂತರವಾಗಿ ಬೆಂಬಲ ಕೊಡುತ್ತಿರುವುದು ಹೇಗೆ ಎಂದು ಅಚ್ಚರಿಯಾಗಬಹುದು. ಸೈಬರ್ ದಾಳಿ, ಆನ್‌ಲೈನ್ ವಂಚನೆ, ಕ್ರಿಪ್ಟೋ ಕರೆನ್ಸಿ ವಂಚನೆ, ಮಾದಕ ದ್ರವ್ಯ ಕಳ್ಳಸಾಗಾಟದ ಮೂಲಕ ಬಂದ ಹಣವೆಲ್ಲವೂ ಪಾಕಿಸ್ತಾನದಲ್ಲಿ ಉಗ್ರರ ಪೋಷಣೆ ಮತ್ತು ಅಲ್ಲಿನ ರಾಜಕೀಯ ಮತ್ತು ಮಿಲಿಟರಿ ನಾಯಕರ ಐಷಾರಾಮಿ ಜೀವನಕ್ಕೆ ಬಳಕೆಯಾಗುತ್ತಿದೆ ಎಂದು ನಮ್ಮ ಗುಪ್ತಚರ ಪಡೆಗಳು ಈ ಹಿಂದೆಯೇ ವರದಿ ನೀಡಿವೆ.

ಬಂದೂಕುಧಾರಿಯೊಬ್ಬ ನಮ್ಮ ನಾಗರಿಕರನ್ನು ಗುರಿ ಇಟ್ಟು ಉರುಳಿಸಿದಾಗ ಹರಿದ ರಕ್ತ ನಮ್ಮ ರಕ್ತ ಕುದಿಯುವಂತೆ ಮಾಡುತ್ತದೆ. ಆದರೆ ಕೇವಲ ಮೊಬೈಲ್ ಮತ್ತು ಕಂಪ್ಯೂಟರ್ ಬಳಸಿ ಸೈಬರ್ ದಾಳಿಕೋರರು ನಡೆಸುವ ನಡೆಸುವ ಹ್ಯಾಕಿಂಗ್, ಆನ್‌ಲೈನ್ ವಂಚನೆ, ಹನಿಟ್ರ್ಯಾಪ್‌ಗಳು ದೇಶದ ಭದ್ರತೆಯನ್ನು ಮಾತ್ರವಲ್ಲ ಆರ್ಥಿಕ ಮತ್ತು ನಾಗರಿಕ ವ್ಯವಸ್ಥೆಯನ್ನು ಬುಡಮೇಲು ಮಾಡಬಹುದು. ಆರ್ಥಿಕ ನಷ್ಟ, ಸಾಮಾಜಿಕ ಜಾಲತಾಣಗಳಲ್ಲಿ ಸೋರಿಕೆಯಾಗುವ ಮಾಹಿತಿ, ಅಶ್ಲೀಲ ಕಂಟೆಂಟ್‌ಗಳ ಕಾರಣಕ್ಕೆ ಅದೆಷ್ಟೋ ಕುಟುಂಬಗಳು ಸಾವಿನ ಹಾದಿ ಹಿಡಿದಿರುವುದು ನಮ್ಮ ಕಣ್ಣ ಮುಂದಿವೆ.

ಬೆಡ್‌ರೂಮಿನಲ್ಲೇ ದಾಳಿ

ಇಷ್ಟಾದರೂ ನಾವಿನ್ನೂ ಯುದ್ಧ ಎಂದರೆ ಗಡಿ ಭಾಗದಲ್ಲಿ ನಡೆಯುವ ಸಂಘರ್ಷ ಎಂಬ ಭ್ರಮೆಯಲ್ಲಿದ್ದೇವೆ. ಮನೆಯಲ್ಲೇ ಕುಳಿತು ನಡೆಯಲಿ ಯುದ್ಧ ಎಂದು ಅಬ್ಬರಿಸುತ್ತಿದ್ದೇವೆ. ಆದರೆ ಶತ್ರು ದೇಶದ ವಂಚಕರು ಅದಾಗಲೇ ನಮ್ಮ ಬೆಡ್ ರೂಮ್‌ಗಳಿಗೆ ಕಾಲಿಟ್ಟಿದ್ದಾರೆ. ನಮ್ಮ ಪ್ರತಿಯೊಂದು ಚಲನವಲನ, ವೈಯಕ್ತಿಕ ಮಾಹಿತಿ, ಇಷ್ಟಾನಿಷ್ಟಗಳೆಲ್ಲವೂ ಅವರ ಅಂಗೈಯಲ್ಲಿವೆ. ಅವರು 'ರಮ್ಮಿ ಆಡಿ' ಎಂದಾಗ ಖುಷಿಯಿಂದಲೇ ರಮ್ಮಿ ಆಡಿ ಅವರ ಜೇಬು ತುಂಬಿಸುತ್ತಿದ್ದೇವೆ. ಅವರು ಕಾಣದ ದೇಶದಲ್ಲಿ ಕುಳಿತು ಡಿಜಿಟಲ್ ಅರೆಸ್ಟ್ ಎಂದರೂ ನಾವು ಮುದುರಿ ಕೂರುತ್ತೇವೆ. ಅವರ ದುಡ್ಡು ಡಬಲ್ ಮಾಡುವ ಆಮಿಷಕ್ಕೆ ಬಲಿಯಾಗಿ ಲಕ್ಷಾಂತರ ರು.ಗಳನ್ನು ಕಳೆದುಕೊಂಡು ಕಂಗಾಲಾಗುತ್ತೇವೆ. ಈ ಎಲ್ಲ ವಂಚನೆಯೂ ಪಾಕಿಸ್ತಾನಿಯರು ಇಲ್ಲವೇ ಚೀನಿಯರು ಮಾಡಿದ್ದಾರೆಂದು ಅರ್ಥವಲ್ಲ. ಆದರೆ ಆಧುನಿಕ ಯುದ್ಧತಂತ್ರದ ಭಾಗವಾಗಿ ಭಾರತ ಸೇರಿದಂತೆ ಎಲ್ಲ ರಾಷ್ಟ್ರಗಳೂ ಈಗ ಸೈಬರ್ ದಾಳಿಯನ್ನು ಎದುರಿಸಲೇಬೇಕಿದೆ. ಪ್ರತಿ ದಾಳಿಗೆ ಸಜ್ಜಾಗಲೇಬೇಕಿದೆ.

ಸೈಬರ್ ದಾಳಿಯನ್ನು ನಮ್ಮ ಸರಕಾರವಾಗಲಿ, ಸೇನೆಯಾಗಲಿ ಪೂರ್ತಿಯಾಗಿ ತಡೆಗಟ್ಟಲಾಗದು. ನಾಗರಿಕರಲ್ಲಿ ಈ ಕುರಿತು ಹೆಚ್ಚಿನ ತಿಳಿವಳಿಕೆ, ಜಾಗೃತಿ ಮತ್ತು ತಂತ್ರಜ್ಞಾನದ ಸದ್ಬಳಕೆಯ ಅರಿವು ಮೂಡದಿದ್ದರೆ, ನಾವು ಶತ್ರು ದೇಶಗಳಿಗೆ ಸುಲಭದ ಮಿಕಗಳಾಗುತ್ತೇವೆ. ದುರದೃಷ್ಟವಶಾತ್ ಈವರೆಗಿನ ಮಾಹಿತಿಯನ್ನು ಅವಲೋಕಿಸಿದರೆ ಸೈಬರ್ ವಂಚಿತರು ಮತ್ತು ಸಂತ್ರಸ್ತರಲ್ಲಿ ನಾವೇ ಮುಂಚೂಣಿಯಲ್ಲಿದ್ದೇವೆ. ಅದರಲ್ಲೂ ಭಾರತದ ಸಿಲಿಕಾನ್ ವ್ಯಾಲಿ ಎಂದು ಕರೆಸಿಕೊಂಡ ಬೆಂಗಳೂರಿನಲ್ಲಿ ಟೆಕ್ಕಿಗಳು ಸೇರಿದಂತೆ ಸುಶಿಕ್ಷಿತರ ಬಹುದೊಡ್ಡ ವರ್ಗ ಈ ವಂಚನೆ ಜಾಲದಲ್ಲಿ ಸಿಲುಕಿ ಕೋಟ್ಯಂತರ ರು. ಕಳೆದುಕೊಳ್ಳುತ್ತಿದ್ದಾರೆ.

ಇಂಡಿಯಾ ಟುಡೇ ವರದಿ ಪ್ರಕಾರ 2024ರಲ್ಲಿ ಸೈಬರ್ ವಂಚನೆ ಕಾರಣದಿಂದ ಭಾರತೀಯರು ಸುಮಾರು 22,812 ಕೋಟಿ ರು. ನಷ್ಟ ಅನುಭವಿಸಿದ್ದಾರೆ . ಸ್ಟಾಕ್ ಟ್ರೇಡಿಂಗ್ ವಂಚನೆ ಮೂಲಕ 4,636 ಕೋಟಿ, ಹೂಡಿಕೆ ಆಮಿಷಗಳ ಮೂಲಕ 3,216 ಕೋಟಿ, ಡಿಜಿಟಲ್ ಅರೆಸ್ಟ್ ವಂಚನೆಗಳ ಮೂಲಕ 1,616 ಕೋಟಿ ರು. ನಷ್ಟ ಉಂಟಾಗಿದೆ. ದೇಶದಲ್ಲಿ ಪ್ರತಿದಿನ ಸರಾಸರಿ 6,000 ಕ್ಕಿಂತ ಹೆಚ್ಚು ಸೈಬರ್ ವಂಚನೆಗಳ ದೂರುಗಳು ದಾಖಲಾಗುತ್ತಿವೆ.ಒಟ್ಟಾರೆ ಭಾರತೀಯರು ದಿನವೊಂದಕ್ಕೆ ಸುಮಾರು 60 ಕೋಟಿ ರು.ಗಳಿಗಿಂತ ಹೆಚ್ಚು ಮೊತ್ತ ಕಳೆದುಕೊಳ್ಳುತ್ತಿದ್ದಾರೆ. ಇದರ ಹಿಂದೆ ಬಹುಸಂಖ್ಯೆಯಲ್ಲಿ ಚೀನಿಯರಿದ್ದಾರೆ. ಇಲ್ಲವೇ ಚೀನಾದ ಹ್ಯಾಕಿಂಗ್ ತಂತ್ರಜ್ಞಾನದ ನೆರವಿದೆ. ಪಾಕಿಸ್ತಾನ, ಮ್ಯಾನ್ಮಾರ್, ಥಾಯ್ಲೆಂಡ್, ಕಾಂಬೋಡಿಯಾ, ನೈಜೀರಿಯಾ ಸೇರಿದಂತೆ ನಾನಾ ರಾಷ್ಟ್ರಗಳಿಂದ ಕಾರ್ಯಾಚರಿಸುವ ಸೈಬರ್ ಖದೀಮರಿಗೆ ಶತ್ರು ದೇಶಗಳ ವ್ಯವಸ್ಥಿತ ಒತ್ತಾಸೆಯಿದೆ. ಈ ಕಾರಣಕ್ಕಾಗಿಯೇ ಸೈಬರ್ ವಂಚಕರನ್ನು, ವೆಬ್‌ಸೈಟ್ ಹ್ಯಾಕರ್‌ಗಳನ್ನು, ಕ್ರಿಪ್ಟೋ ಕರೆನ್ಸಿ ನೆಪದಲ್ಲಿ ದೋಚುವ ಆನ್‌ಲೈನ್ ದರೋಡೆಕೋರರನ್ನು, ಡಿಜಿಟಲ್ ಸುಂದರಿಯರನ್ನು ಮುಂದಿಟ್ಟು ಜನರನ್ನು ಬೆತ್ತಲು ಮಾಡುವ ಧೂರ್ತರನ್ನು ಪತ್ತೆ ಮಾಡುವುದಾಗಲಿ, ಶಿಕ್ಷಿಸುವುದಾಗಲಿ ಸಾಧ್ಯವಾಗುವುದಿಲ್ಲ.

ಚೀನಾ ತಂತ್ರ-ಕುತಂತ್ರ

ಸೈಬರ್ ದಾಳಿ ಹೊಸದೇನೂ ಅಲ್ಲ. ಎರಡು ದಶಕಗಳ ಹಿಂದೆಯೇ ರಷ್ಯಾ, ಸೈಬರ್ ದಾಳಿ ಮೂಲಕ ಎಸ್ತೇನಿಯಾದ ವಿದ್ಯುತ್ ಗ್ರಿಡ್ ವ್ಯವಸ್ಥೆಯನ್ನು ಹಾಳುಗೆಡವಿತ್ತು. ಆದರೆ ಇದೀಗ ಸೈಬರ್ ಪರಿಣತಿಯ ಖ್ಯಾತಿ, ಕುಖ್ಯಾತಿಯೆಲ್ಲವೂ ಚೀನಾಕ್ಕೆ ಸಲ್ಲುತ್ತದೆ. ಕಮ್ಯೂನಿಸ್ಟ್ ರಾಷ್ಟ್ರವು ಭಾರತ ಮಾತ್ರವಲ್ಲ, ಅಮೆರಿಕ,ಯೂರೋಪ್, ಆಸ್ಟ್ರೇಲಿಯಾ, ಜಪಾನ್ ಸೇರಿದಂತೆ ನಾನಾ ರಾಷ್ಟ್ರಗಳ ಮೇಲೆ ದಶಕಗಳ ಹಿಂದೆಯೇ ಸೈಬರ್ ದಾಳಿ ಆರಂಭಿಸಿದೆ. ಈಗಲೂ ದಾಳಿ ಮುಂದುವರಿಸಿದೆ.

ಜಗತ್ತಿನ ಎಲ್ಲ ದೇಶಗಳಿಗಿಂತ ಮುನ್ನ 2006ರಷ್ಟು ಹಿಂದೆಯೇ ಪೀಪಲ್ಸ್ ರಿಪಬ್ಲಿಕ್ ಆರ್ಮಿ ಸಾವಿರ ಸೈಬರ್ ಯೋಧರ ವಿಶೇಷ ಪಡೆಯನ್ನು ರಚಿಸಿತ್ತು. ಚೀನಾ ಇಂದು ಅಮೆರಿಕಕ್ಕೆ ಸಡ್ಡು ಹೊಡೆದು ಸೂಪರ್ ಪವರ್ ಆಗಲು ಕಾರಣಗಳನ್ನು ವಿಶ್ಲೇಷಿಸಿದರೆ ಸೈಬರ್ ತಂತ್ರಜ್ಞಾನದಲ್ಲಿ ಅದು ಸಾಧಿಸಿದ ಪರಿಣತಿಯೂ ಮುಖ್ಯ ಕಾರಣ. ಭಾರತದಂತಹ ರಾಷ್ಟ್ರಗಳು ತಮ್ಮ ಡಿಜಿಟಲ್ ಜ್ಞಾನವನ್ನು ವಿಶ್ವದ ಒಳಿತಿಗೆ ಬಳಸಿದರೆ, ಚೀನಾ ವೆಬ್‌ಸೈಟ್ ಹ್ಯಾಕಿಂಗ್, ವೈರಸ್, ಮಾಲ್‌ವೇರ್‌ಗಳು, ಸೈಬರ್ ವಂಚನೆ, ಕಂಪನಿಗಳ ಡಾಟಾ ಮತ್ತು ರಕ್ಷಣಾ ರಹಸ್ಯಗಳ ಕಳವು, ವೈರಿ ರಾಷ್ಟ್ರದ ಮೇಲೆ ಕಣ್ಗಾವಲು ಸೇರಿದಂತೆ ತನ್ನ ಪಾರಮ್ಯವನ್ನು ಮೆರೆಯಲು ಬೇಕಾದುದೆಲ್ಲವನ್ನೂ ಮಾಡಿದೆ.

2013ರಲ್ಲಿ ಅಮೆರಿಕದ Mandiant ಸೈಬರ್ ಭದ್ರತಾ ಕಂಪನಿ ಸುಮಾರು ಆರು ವರ್ಷಗಳ ಕಾಲ ಅಧ್ಯಯನ ನಡೆಸಿ ವರದಿ ನೀಡುವವರೆಗೂ ಭಾರತ ಸೇರಿದಂತೆ ವಿಶ್ವದ ಯಾವ ರಾಷ್ಟ್ರಕ್ಕೂ ಚೀನಾದ ಕರಾಮತ್ತು ತಿಳಿದಿರಲಿಲ್ಲ. ಶಾಂಘೈನಲ್ಲಿ ಪ್ರಧಾನ ಕಚೇರಿ ಹೊಂದಿರುವ ಚೀನಾದ ಪೀಪಲ್ಸ್ ಲಿಬರೇಶನ್ ಆರ್ಮಿಯ ಘಟಕವಾದ ಪಿಎಲ್‌ಎ ಯುನಿಟ್ 61398 ಸೈಬರ್ ಘಟಕ ಸುಮಾರು 141 ಕಂಪನಿಗಳ ಮೇಲೆ ಸೈಬರ್ ದಾಳಿ ನಡೆಸಿ ಡಾಟಾ ಕಳವು ಮಾಡಿದ್ದನ್ನು ಈ ವರದಿ ಬಹಿರಂಗ ಪಡಿಸಿತ್ತು. ಅಮೆರಿಕ, ಬ್ರಿಟನ್, ಕೆನಡಾ, ಆಸ್ಟ್ರೇಲಿಯಾ ಸೇರಿದಂತೆ ಪ್ರಮುಖ ದೇಶಗಳ ರಕ್ಷಣೆ, ಇಂಧನ, ಮ್ಯಾನುಫ್ಯಾಕ್ಚರಿಂಗ್, ಫೈನಾನ್ಸ್ ಕಂಪನಿಗಳು ಚೀನಾದ ಸೈಬರ್ ದಾಳಿಗೆ ಗುರಿಯಾಗಿದ್ದವು. Spear & phishing mails, Custom & built malware, Encrypted data tunneling ಮೂಲಕ ಚೀನಾ ಮಾಹಿತಿ ಸಂಗ್ರಹ ಮತ್ತು ಹ್ಯಾಕಿಂಗ್ ಕೆಲಸವನ್ನು ವ್ಯವಸ್ಥಿತವಾಗಿ ನಡೆಸಿತ್ತು.

ಇದೇ ವೇಳೆ ಭಾರತದ ಹಲವು ಸರಕಾರಿ ಸಂಸ್ಥೆಗಳು ಮತ್ತು ಖಾಸಗಿ ಕಂಪನಿಗಳ ಮೇಲೂ ಚೀನಾ ಸೈಬರ್ ದಾಳಿಯಾಗಿತ್ತು. ಈ ದಾಳಿಯ ಮೂಲಕ ಸಿಕ್ಕ ಮಾಹಿತಿಯನ್ನು ಬಳಸಿಕೊಂಡು ಚೀನಾ ತನ್ನದೇ ತಂತ್ರಜ್ಞಾನ ಅಭಿವೃದ್ಧಿ ಮತ್ತು ಉತ್ಪನ್ನಗಳ ತಯಾರಿಕೆಗೆ ಬಳಸಿಕೊಂಡಿತ್ತು. ಇಂದು ಚೀನಾದ ಮಾಲ್‌ವೇರ್ ಟೂಲ್‌ಗಳು ಡಿಜಿಟಲ್ ಮತ್ತು ಕಂಪ್ಯೂಟರ್ ತಜ್ಞರಿಗೆ ಚಿರಪರಿಚಿತ. ಇದನ್ನು ತಡೆಯಲು ಬೇಕಾದ ಹಲವು ಫೈರ್‌ವಾಲ್‌ಗಳು ಬಳಕೆಯಲ್ಲಿವೆ. ಆದರೆ ಚೀನಾದ ವಿಶೇಷ ಸೈಬರ್ ಪಡೆ ಆಗಾಗ ಅತ್ಯಾಧುನಿಕ ಮಾಲ್‌ವೇರ್‌ಗಳು, ವೈರಸ್, ಡೇಟಾ ಕಳವು ಆ್ಯಪ್ ಮೂಲಕ ಬೆದರಿಕೆ ಒಡ್ಡುತ್ತಲೇ ಇದೆ.

ಉಗ್ರ ಸ್ನೇಹಿ ತಂತ್ರಜ್ಞಾನ

ಇಷ್ಟು ಮಾತ್ರವಲ್ಲ, ಚೀನಾದಲ್ಲಿ ಅಭಿವೃದ್ಧಿಯಾಗುವ ಪ್ರತಿಯೊಂದು ತಂತ್ರಜ್ಞಾನವು ಜಗತ್ತಿನ ಇತರ ರಾಷ್ಟ್ರಗಳ ಸಮಗ್ರತೆಗೆ ಬೆದರಿಕೆ ಒಡ್ಡುತ್ತಿವೆ. ಕಾರ್ಗಿಲ್ ಯುದ್ಧ, ಮುಂಬೈ ದಾಳಿ, ಪುಲ್ವಾಮ ಮತ್ತು ಮೊನ್ನೆ ನಡೆದ ಪಹಲ್ಗಾಮ್ ನರಮೇಧದಲ್ಲಿ ಉಗ್ರರು ಚೀನಾ ನಿರ್ಮಿತ ಆ್ಯಪ್‌ಗಳ ಸಹಾಯ ಪಡೆದು ಭಾರತಕ್ಕೆ ಬಂದಿದ್ದಾರೆ. ಇವುಗಳ ಮೂಲಕವೇ ನಮ್ಮ ಗುಪ್ತಚರ ಪಡೆಗಳ ಕಣ್ತಪ್ಪಿಸಿ ಸಂವಹನ ನಡೆಸಿದ್ದಾರೆ. ಚೀನಾ ಆಗಾಗ ನಮ್ಮ ರಕ್ಷಣಾ ಸಂಸ್ಥೆಗಳು ಮತ್ತು ಸರಕಾರಿ ವೆಬ್‌ಸೈಟ್‌ಗಳ ಮೇಲೆ ದಾಳಿ ನಡೆಸುತ್ತಲೇ ಇದೆ.

ತನ್ನ ಎದುರಾಳಿಗಳನ್ನು ಹಣಿಯಲು ಮಾತ್ರವಲ್ಲ, ಅಡ್ಡ ಮಾರ್ಗದ ಮೂಲಕ ತನ್ನ ಅರ್ಥ ವ್ಯವಸ್ಥೆಯನ್ನು ಬಲಪಡಿಸಲೂ ಚೀನಾ ಸೈಬರ್ ತಂತ್ರಜ್ಞಾನ ಬಳಸಿಕೊಳ್ಳುತ್ತಿದೆ. ಸದ್ಯ ಬಳಕೆಯಲ್ಲಿರುವ ಬಹುತೇಕ ಮೊಬೈಲ್ ಗೇಮಿಂಗ್ ಆ್ಯಪ್‌ಗಳು ಚೀನಾ ನಿರ್ಮಿತ. ಇವು ನಮಗೆ ಆಟದ ಚಟ ಅಂಟಿಸಿ ಕಿಸೆಗೆ ಕನ್ನ ಹಾಕುವ ಜತೆಗೆ ನಮಗೆ ಗೊತ್ತಿಲ್ಲದೆ ನಮ್ಮ ಚಲನವಲನಗಳ ಮಾಹಿತಿ ಸಂಗ್ರಹಿಸುತ್ತವೆ. ಖಾಸಗಿ ಫೋಟೋಗಳನ್ನು ಸಂಗ್ರಹಿಸಿ ಇನ್ನಾರಿಗೋ ರವಾನಿಸುತ್ತವೆ. ಮುಂದೊಂದು ದಿನ ಇದೇ ಫೋಟೋಗಳು ಫೇಸ್‌ಬುಕ್, ವಾಟ್ಸ್ ಆ್ಯಪ್‌ನಲ್ಲೂ ಹರಿದಾಡುತ್ತವೆ. ಒಂದೇ ಮಾತಿನಲ್ಲಿ ಹೇಳುವುದಾದರೆ ಶತ್ರುದೇಶದ ಗೂಢಚಾರರಿಗೆ ನಮ್ಮ ಬೆಡ್ ರೂಮ್‌ಗಳಲ್ಲಿ ಆಶ್ರಯ ಕೊಡುತ್ತಿದ್ದೇವೆ.

ಭಾರತ ಈ ವಿದ್ಯಮಾನಕ್ಕೆ ತೀರಾ ತಡವಾಗಿ ಸ್ಪಂದಿಸುತ್ತಿದೆ. ನಮ್ಮ ಸೇನೆಯಲ್ಲೂ ಈಗ ಸೈಬರ್ ದಾಳಿ ತಡೆಯಲು ಪ್ರತ್ಯೇಕ ವಿಭಾಗಗಳಿವೆ. ರಾಷ್ಟ್ರೀಯ ಸೈಬರ್ ಭದ್ರತಾ ಮಂಡಳಿ (NCSC) ರಾಷ್ಟ್ರೀಯ ರಕ್ಷಣಾ ಮಂಡಳಿ ಸಚಿವಾಲಯದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ವಿವಿಧ ಏಜೆನ್ಸಿಗಳ ನಡುವೆ ಸಮನ್ವಯವನ್ನು ಸಾಧಿಸುತ್ತದೆ. ಭಾರತೀಯ ಕಂಪ್ಯೂಟರ್ ತುರ್ತು ಪ್ರತಿಕ್ರಿಯಾ ತಂಡ (CERT-India) ಸೈಬರ್ ಘಟನೆಗಳಿಗೆ ಪ್ರತಿಕ್ರಿಯಿಸಲು ಮತ್ತು ಸೈಬರ್ ಭದ್ರತೆಯನ್ನು ಬಲಪಡಿಸಲು ನೋಡಲ್ ಏಜೆನ್ಸಿಯಾಗಿ ಕಾರ್ಯನಿರ್ವಹಿಸುತ್ತದೆ. ಡಿಫೆನ್ಸ್ ಸೈಬರ್ ಏಜೆನ್ಸಿ (DCyA) ಮೂರು ಪಡೆಗಳ ಪರವಾಗಿ ಸೈಬರ್ ಕಾರ್ಯಾಚರಣೆಗಳನ್ನು ನಡೆಸುವ ಮತ್ತು ನಿಯಂತ್ರಿಸುವ ಕೆಲಸ ಮಾಡುತ್ತಿದೆ.

ಸೈಬರ್ ಫೊರೆನ್ಸಿಕ್, ಕ್ವಾಂಟಮ್ ಕಂಪ್ಯೂಟಿಂಗ್, ಮೊಬೈಲ್ ಸೆಕ್ಯೂರಿಟಿ, ಕ್ರಿಪ್ಟೋಗ್ರಫಿಯಂತಹ ಕ್ಷೇತ್ರಗಳಲ್ಲಿ ದೇಶೀಯ ಸಂಶೋಧನೆ ಮತ್ತು ಅಭಿವೃದ್ಧಿಗೆ ಸರಕಾರ ಇತ್ತೀಚೆಗೆ ಉತ್ತೇಜನ ನೀಡುತ್ತಿದೆ. ಬೆಂಗಳೂರಿನ ಖಾಸಗಿ ಸಂಸ್ಥೆಯೊಂದು ಈ ನಿಟ್ಟಿನಲ್ಲಿ ಮಹತ್ವದ ಸಾಧನೆಗಳನ್ನು ಮಾಡುತ್ತಿದೆ. ಭಾರತದ ಪರ Indian Cyber Force ಮತ್ತು Hacktivist Vanguard ಹ್ಯಾಕಿಂಗ್ ಕೆಲಸ ಮಾಡುತ್ತಿವೆ. ಇಸ್ರೇಲ್, ಅಮೆರಿಕದಂತಹ ದೇಶಗಳೂ ತಮ್ಮ ಗುಪ್ತಚರ ಮಾಹಿತಿಯನ್ನು ವಿನಿಮಯ ಮಾಡಿಕೊಳ್ಳುತ್ತಿವೆ.

ಆದರೆ ಸೈಬರ್ ಯುದ್ಧದಲ್ಲಿ ಇವಿಷ್ಟೇ ಸಾಕಾಗುವುದಿಲ್ಲ, ಸೇನೆ ಮತ್ತು ಸರಕಾರದ ಜೊತೆ ನಾಗರಿಕರೂ ಮೈಯೆಲ್ಲಾ ಕಣ್ಣಾಗಿರಬೇಕಾಗುತ್ತದೆ. ಶತ್ರುಗಳ ಛಾಯಾ ಸಮರವನ್ನು ಎದುರಿಸುವ ಬಗ್ಗೆ ನಮಗೂ ಒಂದಷ್ಟು ಮಾಹಿತಿ, ತಿಳಿವಳಿಕೆ ಇರಲೇಬೇಕು. ನಾವು ಆನ್‌ಲೈನ್ ವಂಚಕರಿಗೆ, ಹ್ಯಾಕರ್‌ಗಳಿಗೆ ಸುಲಭದ ಮಿಕಗಳಾಗದಂತೆ ನೋಡಿಕೊಂಡರೂ ಅದು ದೇಶಕ್ಕೆ ಸಲ್ಲಿಸುವ ಸೇವೆಯಾಗುತ್ತದೆ.

ಓದುಗರ ಓಣಿ
ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ವಿವೇಚನೆ ಇಲ್ಲವೇ?

ಬೆಂಗಳೂರಿನ ಕಂಟೋನ್ಮೆಂಟ್ ರೈಲ್ವೇಸ್ ಕಾಲೋನಿ ಆವರಣದಲ್ಲಿ ವಾಣಿಜ್ಯ ಅಭಿವೃದ್ಧಿ ಯೋಜನೆಗಾಗಿ 368 ಮರಗಳನ್ನು ತೆರವುಗೊಳಿಸಲಾಗುತ್ತಿದೆ. ನಾಗರಿಕರು ಹತ್ತು ದಿನಗಳ ಒಳಗಾಗಿ ಆಕ್ಷೇಪಣೆ ಸಲ್ಲಿಸಬಹುದು ಎಂದು ಬಿಬಿಎಂಪಿ ಅರಣ್ಯ ವಿಭಾಗ ಪ್ರಕಟಣೆ ಹೊರಡಿಸಿದೆ. ಈ ಕುರಿತಂತೆ 'ಪರಿಸರಕ್ಕೆ ನಾವು' ಸಂಘಟನೆಯ ಸದಸ್ಯರೂ ಸೇರಿದಂತೆ ಹಲವಾರು ಮಂದಿ ವಿರೋಧ ವ್ಯಕ್ತಪಡಿಸಿದ್ದಾರೆ. ಈ ಮರ ಕಡಿಯುವ ವಿಚಾರಕ್ಕೆ ನಾಗರಿಕರು ಆಕ್ಷೇಪಣೆ ಸಲ್ಲಿಸಬಹುದು ಎಂಬುದೇ ವಿಪರ್ಯಾಸದ ಪ್ರಕಟಣೆ. ಕೇವಲ ನಾಗರಿಕರೇ ಆಕ್ಷೇಪಿಸಬೇಕೇ? ಅರಣ್ಯ ಇಲಾಖೆ ಸೇರಿದಂತೆ ಸರಕಾರ ಮತ್ತು ಸರಕಾರದ ಅಡಿಯ ಮಿಕ್ಕ ಇಲಾಖೆಗಳ ಆಕ್ಷೇಪಣೆ ಇರುವುದಿಲ್ಲವೇ? ಅವಕ್ಕೆ ಸ್ವಯಂ ವಿವೇಚನೆ ಇಲ್ಲವೇ? ಯಾವುದನ್ನು ಮಾಡಬಾರದು ಎಂಬ ವಿವೇಕ ಇಲಾಖೆಗಳಿಗೆ ಇರಬೇಕು. ಕೇವಲ ವಾಣಿಜ್ಯ ಅಭಿವೃದ್ಧಿ ಎಂಬ ನೆಪದಲ್ಲಿ ಮರಗಳ ಹನನ ಕೂಡದು. ಹಾಗೆ ವಾಣಿಜ್ಯ ಕಟ್ಟಡ ಬೇಕೆಂದಾದಲ್ಲಿ ಬೇರೆಡೆ ನಿರ್ಮಿಸಲಿ. ಈಗಾಗಲೇ ಅಭಿವೃದ್ಧಿಯ ನೆಪದಲ್ಲಿ ಸಾವಿರಾರು ಮರಗಳನ್ನು ಕಳೆದುಕೊಂಡು ನಗರ ನಲುಗುತ್ತಿದೆ. ಮೂರ್ನಾಲ್ಕು ದಶಕಗಳ ಹಿಂದೆ ಉತ್ತಮ ಹವಾಮಾನವಿದ್ದ ಬೆಂಗಳೂರು ಮಹಾನಗರಿಯು ತಾಪದ ಏರಿಕೆಯಿಂದ ತತ್ತರಿಸುತ್ತಿದೆ. ಎಲ್ಲ ಮರಗಳನ್ನು ಕಡಿದು ಹಾಕಿ ಕೇವಲ ಕಟ್ಟಡಗಳನ್ನು ನಿರ್ಮಿಸುವುದು ಅಭಿವೃದ್ಧಿ ಅಲ್ಲ. ಮರಗಳಿಲ್ಲದೆ ನರರಿಲ್ಲ ಎಂಬುದನ್ನು ಸರಕಾರ ಅರ್ಥಮಾಡಿ ಕೊಳ್ಳಬೇಕು. ಆನೆ ನಡೆದಿದ್ದೇ ದಾರಿ ಎಂಬಂತೆ ವರ್ತಿಸಬಾರದು. ಕೇವಲ ಹಣವೊಂದೇ ಮನುಷ್ಯನಿಗೆ ಸಕಲವನ್ನೂ ನೀಡದು ಎಂಬ ಅರಿವಿರಲಿ.

– ಪತ್ತಂಗಿ ಎಸ್.ಮುರಳಿ, ಬೆಂಗಳೂರು

ಚರಿತ್ರೆಯ ಅರಿವಿರಲಿ

ಕನ್ನಡಕ್ಕೆ ಐದನೇ ಜ್ಞಾನಪೀಠ ಪುರಸ್ಕಾರವನ್ನು ತಂದು ಕೊಟ್ಟ ವಿನಾಯಕ ಕೃಷ್ಣ ಗೋಕಾಕರ ಮೇರುಕೃತಿ 'ಭಾರತ ಸಿಂಧು ರಶ್ಮಿ'ಯನ್ನು ಕಳೆದ ವರ್ಷ ಓದುವ ಅವಕಾಶ ನನಗೆ ಒಲಿದುಬಂದಿತ್ತು. ಈ ಕೃತಿಗೆ ಇನ್ನೂ ಹಲವಾರು ಪ್ರಶಸ್ತಿ ಗಳು ಲಭಿಸಿವೆ. ಕಾಶ್ಮೀರಕ್ಕೆ ಬಹಳ ಹಿಂದೆ ಇದ್ದ 'ಕಶ್ಯಪಮೀರ' ಹೆಸರನ್ನು ಈ ಪುಸ್ತಕದಲ್ಲಿ ಪ್ರಸ್ತಾಪಿಸಲಾಗಿದೆ. ಈಗ ಕಾಶ್ಮೀರ ಕಣಿವೆಗೆ ದೇಶದ ಉಳಿದೆಡೆಯಿಂದ ಬರುವ ಪ್ರವಾಸಿಗರಿಂದ ಅಲ್ಲಿಯ ಸಂಸ್ಕೃತಿಯ ಮೇಲೆ ದಾಳಿ ಉಂಟಾಗುತ್ತಿದೆ ಎಂದು ಹೇಳುವ ಅಲ್ಪಜ್ಞಾನಿಗಳಿಗೆ, ಕಶ್ಯಪಮೀರದಲ್ಲೂ ಈ ಹಿಂದೆ ದೇಶದ ಉಳಿದೆಡೆಯಂತೆ ಬಹುಸಂಖ್ಯಾತರ ಸಂಖ್ಯೆಯೇ ಹೆಚ್ಚಾಗಿತ್ತು ಎಂಬಂಥ ವಿಚಾರ ಖಂಡಿತ ಅಪಥ್ಯವಾದೀತು. ಇಂಥವರು ಸಮಕಾಲೀನ ವಿಷಯಗಳನ್ನು ತಿಳಿದುಕೊಳ್ಳುವ ಜತೆಗೇ ಆಗೊಮ್ಮೆ ಈಗೊಮ್ಮೆ ಚರಿತ್ರೆಯನ್ನು ಅರಿತುಕೊಳ್ಳುವುದೂ ಅಗತ್ಯ.

– ಬಿ.ಎನ್.ಭರತ್, ಬೆಂಗಳೂರು

ಕಳಪೆ ದ್ರಾಕ್ಷಾರಸ

ಮೈಸೂರು ನಗರದ ಹಲವು ಕಡೆಗಳಲ್ಲಿ ಜಿಲ್ಲಾ ಹಾಪ್‌ಕಾಮ್ಸ್ ವತಿಯಿಂದ 'ತಾಜಾ ದ್ರಾಕ್ಷಾರಸ'ವನ್ನು ಮಾರಾಟ ಮಾಡಲಾಗುತ್ತಿದೆ. 250 ಮಿ.ಲೀ. ಪ್ರಮಾಣದಲ್ಲಿದ್ದು 20 ರು. ಬೆಲೆಯನ್ನು ಹೊಂದಿರುವ ಈ ದ್ರಾಕ್ಷಾರಸ ಕಳಪೆಯಾಗಿದ್ದು ನೀಲಿ ಬಣ್ಣ ಬೆರೆಸಿದ ನೀರನ್ನು ಕುಡಿದಂತೆ ಇರುತ್ತದೆ. ಸಾರ್ವಜನಿಕರು ಬಿಸಿಲ ಬೇಗೆಯನ್ನು ತಾಳಲಾರದೆ ಈ ದ್ರಾಕ್ಷಾರಸವನ್ನೇ ಕುಡಿಯುವಂತಾಗಿದೆ. ಈ ಬಗ್ಗೆ ಮಾರಾಟಗಾರರನ್ನು ಪ್ರಶ್ನಿಸಿದರೆ, 'ಸರ್, ನೀವು ಜಿಲ್ಲಾ ಹಾಪ್‌ಕಾಮ್ಸ್ ಕಚೇರಿಗೆ ಹೋಗಿ ದೂರು ನೀಡಿ' ಎಂದು ಹೇಳಿ ತಮ್ಮ ಅಸಹಾಯಕತೆಯನ್ನು ತೋರಿಸುತ್ತಾರೆ. ಸಂಬಂಧಪಟ್ಟವರು ಈ ವಿಷಯದಲ್ಲಿ ಸೂಕ್ತ ಕ್ರಮ ಕೈಗೊಳ್ಳಲಿ.

– ಬೂಕನಕೆರೆ ವಿಜೇಂದ್ರ, ಮೈಸೂರು

ಓದುಗರ ಓಣಿಗೆ ಭೇಟಿ ಕೊಡಿ
ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಬಸವಣ್ಣ ಜಾಗತಿಕ ಸಾಂಸ್ಕೃತಿಕ ನಾಯಕನೇ ವಿನಾ, ಧರ್ಮಭಂಜಕ ಮತಸ್ಥಾಪಕನಲ್ಲ



ಬಸವ ಮಂಟಪ
ರವಿ ಹಂಜ್
vveditoped@gmail.com

ನಿನ್ನೆಯ ಸಂಚಿಕೆಯಲ್ಲಿ ಉಲ್ಲೇಖಿಸಿದ ಎಲ್ಲಾ ವಚನಗಳಲ್ಲಿ ಉಪನಿಷತ್ತಿನ ತತ್ವಗಳೇ ಅತ್ಯಂತ ಸ್ಪಷ್ಟವಾಗಿ ಸದೃಢವಾಗಿ ಪ್ರತಿಧ್ವನಿಸುತ್ತವೆ. ವೇದೋಪನಿಷತ್ತುಗಳ ಐದು ಸಂಕ್ಷಿಪ್ತ ಅಂಶಗಳನ್ನು ಸಾವಿರಾರು ವಚನಗಳಾಗಿ ವಿಸ್ತರಿಸಿ ಬೋಧಿಸಿದ ಶರಣರು ವೇದವನ್ನು ತಿರಸ್ಕರಿಸಿದರು ಎಂಬ ಕುಚೋದ್ಯಿಗರಿಗೆ ಅರ್ಧ ಶತಮಾನವನ್ನು ಭರತಖಂಡ, ಕರ್ನಾಟ ಸಾಮ್ರಾಜ್ಯವು ತನುಮನಧನದಿಂದ ಅರ್ಪಿಸಿತ್ತು ಎಂದರೆ ಬಿಳಿಯ ಕೊರಳಪಟ್ಟಿಯ ಕೆಂಪುಚಡ್ಡಿಯ ಈ ಸಂಶೋಧಕ ವರ್ಗ ಅದೆಷ್ಟು ಮಂಕುಬೂದಿ ಎರಚಿತ್ತು ಎನ್ನುವುದನ್ನು ನೀವೇ ಊಹಿಸಿಕೊಳ್ಳಿ. ಇಂಥ ಕುಚೋದ್ಯವನ್ನು ಸತ್ಯವೆಂದು ಜನಸಾಮಾನ್ಯರು ಬಿಡಿ, ರಾಜ್ಯದ ಓರ್ವ ಜನನಾಯಕರೂ, ''ಬ್ರಾಹ್ಮಣ ಕುತಂತ್ರ! ಬಡವನಾದ ಓರ್ವ ದಲಿತ ಶ್ರೀಮಂತನಾಗಬಹುದು. ಆದರೆ ಆ ದಲಿತ ಎಂದಿಗೂ ಬ್ರಾಹ್ಮಣನಾಗುವುದಿಲ್ಲ'' ಎಂದು ಜನಾಂಗೀಯ ಅವಹೇಳನ ಮಾಡಿ ಜನಾಂಗೀಯ ದ್ವೇಷದ ಕರೆ ಕೊಡುತ್ತಾರೆ ಎಂದರೆ ಸಮಾಜದಲ್ಲಿ ಅದೆಷ್ಟು ಮೌಢ್ಯವನ್ನು ಈ ಆತ್ಮರತಿ ಲಿಂಗಕರಸಂಜಾತ ಸಂಶೋಧಿಗರು ಬಿಂಬಿಸಿರಬಹುದು?

ಅಂದ ಹಾಗೆ, ಸಾಧಿಸಿ ಜಂಗಮನಾಗಿದ್ದರೂ ಈ ನವ್ಯರು ದಲಿತನೆನ್ನುವ ಮಾದಾರ ಚೆನ್ನಯ್ಯನು, ''ಆಚಾರವೆ ಕುಲ ಅನಾಚಾರವೆ ಹೊಲೆ ಆವ ಕುಲವಾದರೂ ಅರಿದಲ್ಲಿಯೆ ಪರತತ್ವಭಾವಿ ಮರೆದಲ್ಲಿಯೆ ಮಲಮ ಬಂಧ ಸಾಂಖ್ಯ ಶ್ವಪಚ, ಅಗಸ್ತ್ಯ ಕಬ್ಬಿಲ ದೂರ್ವಾಸ ಮಚ್ಚಿಗ, ದಧೀಚಿ ಕೀಲಿಗ, ಕಶ್ಯಪ ಕಮ್ಮಾರ, ರೋಮಜ ಕಂಚುಗಾರ, ಕೌಂಡಿಲ್ಯ ನಾವಿದ ನೆಂಬುದನರಿದು ಮತ್ತೆ ಕುಲವುಂಟೆಂದು ಛಲಕ್ಕೆ ಹೋರಲೇತಕ್ಕೆ?'' ಎಂದು ಐತಿಹಾಸಿಕವಾಗಿ ದಲಿತರು ಬ್ರಾಹ್ಮಣರಾದ ಉದಾಹರಣೆಗಳನ್ನು ಕೊಡುತ್ತಾನೆ ಎನ್ನುವಲ್ಲಿಗೆ ಸದರಿ ಜನನಾಯಕರ ಕರೆ ನಿಶ್ಶೂನ್ಯವಾಗುತ್ತದೆ.

ವಚನಗಳನ್ನು ಪುಂಖಾನುಪುಂಖವಾಗಿ ವ್ಯಾಖ್ಯಾನಿಸುವ ಈ ಕನ್ನಡ-ಪಂಡಿತ, ಸಾಂಸ್ಕೃತಿಕ-ಸಾಮಾಜಿಕ ಸಂಶೋಧಕರಿಗೆ ಈ ಐದು ಸಂಸ್ಕೃತ ವಾಕ್ಯಗಳನ್ನು ಅರಿಯಲು ಯಾವುದೇ ಸಂಸ್ಕೃತದ ಜ್ಞಾನ ಬೇಕಿಲ್ಲ. ಅವರಿಗಿರುವ ಕನ್ನಡ ಜ್ಞಾನದ ಹಿನ್ನೆಲೆಯಲ್ಲಿಯೇ ಇವುಗಳನ್ನು ಅರಿತುಕೊಳ್ಳಬಹುದು. ಈ ಐದು ತತ್ವಗಳಿಗೆ ವಿರುದ್ಧವಾದ ಒಂದೇ ಒಂದು ವಚನವು ಭೂತಗನ್ನಡಿ ಹಾಕಿ ಹುಡುಕಿದರೂ ಸಿಗುವುದಿಲ್ಲ! ಅಂಥ ವಚನ ಅಂತರಿಕ್ಷದಲ್ಲೇನಾದರೂ ಇದ್ದು ಈ ಕಮ್ಯುನಿಸ್ಟ್ ಪ್ರಣೀತರ ಬಳಿ ಇರಬಹುದಾದ ರಷ್ಯನ್ ಟೆಲಿಸ್ಕೋಪಿನಲ್ಲಿ ಮಾತ್ರ ಕಾಣಿಸುವುದೋ ಗೊತ್ತಿಲ್ಲ! ಹೀಗಿದ್ದೂ ವಚನಗಳನ್ನು ಪಚಿಪಚಿಸಿ ವೇದಾಗಮೋಪನಿಷತ್ತಿನ ವೈರುಧ್ಯದ ವ್ಯಾಖ್ಯಾನ ಮಂಡಿಸುವ ಕನ್ನಡ-ಪಂಡಿತ, ಸಾಂಸ್ಕೃತಿಕ ಸಂಶೋಧಿಗ, ಮಾರ್ಕ್ಸ್‌ವಾದಿ ಕಮ್ಯುನಿಸ್ಟರ ಭಂಡತನ, ಧಾರ್ಷ್ಟ್ಯ, ಅಹಮ್ಮು, ಮೂರ್ಖತನಗಳನ್ನು ಅರಿಯದಷ್ಟು ನಾಡು ಕುರುಡಾಗಿತ್ತೆ ಎಂಬುದು ಮಿಲಿಯನ್ ಬಿಟ್‌ಕಾಯಿನ್ ಪ್ರಶ್ನೆ! ಈ 21ನೇ ಶತಮಾನದ ಮಾಹಿತಿ ತಂತ್ರಜ್ಞಾನದ ಯುಗದಲ್ಲಂತೂ ಮೌಢ್ಯ ಮತ್ತಷ್ಟು ತ್ವರಿತವಾಗಿ ಹಬ್ಬುತ್ತಿದೆಯೆಂದರೆ ತಂತ್ರಜ್ಞ ಭಾರತವು ತಂತ್ರಜ್ಞಾನವನ್ನು ಯಾವ ದಿಕ್ಕಿನಲ್ಲಿ ಬಳಸುತ್ತಿದೆ ಎಂಬ ಆತ್ಮಾವಲೋಕನವು ಇಂದಿನ ರಾಷ್ಟ್ರೀಯ ತುರ್ತಾಗಿದೆ.

ಜನನಾಯಕರನ್ನು ಬಿಡಿ, ಎಷ್ಟೇ ಆದರೂ ಓಲೈಕೆಯ ರಾಜಕಾರಣ ಅವರ ಅಸ್ತಿತ್ವದ ಸವಾಲಾದ ಕಾರಣ ಅವರಿಗೆ ಸಭಿಕರ ಜಾತಿಗನುಗುಣವಾಗಿ ಓಲೈಸುವ ತುರ್ತಿರಬಹುದು. ಆದರೆ ತಮ್ಮ ವಿದ್ಯಾಭ್ಯಾಸದ ಭಾಗವಾಗಿ ಇತಿಹಾಸವನ್ನು ಓದಿರಲೇಬೇಕಾದ ರಾಜ್ಯದ ಮುಖ್ಯ ಕಾರ್ಯದರ್ಶಿಯಾಗಿದ್ದ ನಿವೃತ್ತ ಐಎಎಸ್ ಅಧಿಕಾರಿ ಜಾಮದಾರರು ಇಂದು ತಾವೇ ಪೂರ್ವಜನ್ಮದ ಬಸವಣ್ಣನಾಗಿದ್ದೆ ಎಂಬಂತೆ ಶೂನ್ಯ ಸಂಪಾದನೆಯಲ್ಲಿನ ಸೃಜನಶೀಲ ಸಂಕಥನವನ್ನು ಅನುಭವಿಸಿದಷ್ಟು ಸತ್ಯದ ನೆತ್ತಿಯ ಮೇಲೆ ಕುಟುಕಿ ಕಟಕಿ ಮೊಟಕಿ ದೃಢೀಕರಿಸುತ್ತಾರೆ. ಜಾಮದಾರರು ತಮ್ಮ ವಂಧಿಮಾಗದರ, 'ವಚನ ದರ್ಶನ: ಸತ್ಯ ವರ್ಸಸ್ ಮಿಥ್ಯ' ಪುಸ್ತಕದ ಬಿಡುಗಡೆಯಂದು ಬೆಳಗಾವಿಯಲ್ಲಿ ಹೀಗೆ ಘೋಷಿಸಿದ್ದಾರೆ: ''... ಲಿಂಗಾಯತರು ವೈದಿಕ ಶೈವರು ಎಂದು ಬಿಂಬಿಸಲು ವಚನ ದರ್ಶನ ಪುಸ್ತಕವನ್ನು ರಚಿಸಲಾಗಿದೆ. ಇದರ ಸಂಪಾದಕ ಸದಾಶಿವಾನಂದ ಸ್ವಾಮಿ ಮಹಾರಾಷ್ಟ್ರದ ಕಡೆಯವರು. ಅವರ ಗುರುಗಳು ಸಿದ್ದೇಶ್ವರ ಸ್ವಾಮಿಗಳು. ಈ ಸಿದ್ದೇಶ್ವರ ಸ್ವಾಮಿಗಳು ಅಪ್ಪಟ ಅಪ್ಪಟ ಅಪ್ಪಟ ಪರಿಶುದ್ಧ 'ವೇದಾಂತಿ'ಗಳು! ಸಿದ್ದೇಶ್ವರರ ಗುರುಗಳಾದ ಮಲ್ಲಿಕಾರ್ಜುನ ಗುರುಗಳು, 'ವೇದಾಂತ' ಕೇಸರಿ! ವೇದಾಂತ/ವೇದಾಂತಿ ಎಂದರೆ ಯಾರು ಎಂದು ಗೊತ್ತಲ್ಲ!? ಅದೇ ರೀತಿ ನೀವೆಲ್ಲಾ ಹೋಗುವ ಹುಬ್ಬಳ್ಳಿಯ ಸಿದ್ಧಾರೂಢ ಸ್ವಾಮಿಗಳ ಮಠ, ವೇದಾಂತಿಗಳ ಮಠ! ಸಿದ್ಧಾರೂಢರು ಶೆಟ್ಟರು. ಮೊದಲು ಗುಂಡುಗಡಿಗೆ (ಕರಡಿಗೆ) ತೊಟ್ಟವರು. ಆದರೆ ಅದನ್ನು ಕಾಶಿಯಲ್ಲಿ ಹರಿದು ಹಾಕಿ 'ಅಲಕ್ ನಿರಂಜನ್' (ವ್ಯಂಗ್ಯಭರಿತ) ಎಂದು ವೇದಾಂತದ ಭಾಗವಾದ ಆರೂಢಕ್ಕೆ ಸೇರಿ ಹುಬ್ಬಳ್ಳಿಗೆ ವಕ್ಕರಿಸಿದರು. ಇಂಥವರಿಗೆ ನೀವೆಲ್ಲ ಭಯಭಕ್ತಿಯಿಂದ ನಿಮ್ಮ 'ಧನಕನಕ' ಕೊಟ್ಟಿದ್ದೀರಿ. ವಚನಗಳು ವೇದದ ಸಾರ ಎನ್ನುವ ವೈದಿಕ ಮಲ್ಲೇಪುರಂ ವೆಂಕಟೇಶ್ ಅವರ ವೇದಾಂತಿ ಪೂರ್ವಜರು ಬಸವಣ್ಣನು ವೇದಗಳನ್ನು ಹಳಿದನು ಎಂದು ಏಕೆ ಬಿಜ್ಜಳನ ಆಸ್ಥಾನದಲ್ಲಿ ಬೊಗಳಿದರು....'' ಎನ್ನುತ್ತಾ ಜನಾಂಗೀಯ ದ್ವೇಷ, ಪರಮತ ಅಸಹಿಷ್ಣುತೆ, ಊಳಿಗಮಾನ ಗೈರತ್ತು, ಅಧಿಕಾರಶಾಹಿಯ ಗತ್ತಿನಲ್ಲಿ 'ತಾವಷ್ಟೇ ಸತ್ಯ ಉಳಿದವರು ಮಿಥ್ಯ' ಎಂದು ತಮ್ಮ 'ಸತ್ಯ ವರ್ಸಸ್ ಮಿಥ್ಯ'ವನ್ನು ಖುದ್ದು ತಾವೇ ರದ್ದುಗೊಳಿಸುತ್ತಾರೆ. ತಮ್ಮನ್ನು ಬೆಂಬಲಿಸದ ಜಾತ್ಯಸ್ಥ ಲಿಂಗಾಯತರನ್ನು, ಮಠಗಳನ್ನು ಲಿಂಗಾಯತದಿಂದ ಬಹಿಷ್ಕಾರ ಹಾಕುತ್ತಾರೆ. ಬಸವಣ್ಣನನ್ನು ಗುತ್ತಿಗೆಗೆ ಪಡೆದ ಗುತ್ತಿಗೆದಾರನ ದರ್ಪದಿಂದ ಮಾತನಾಡುವ ಇಂಥವರು ಇಂದಿನ ದಾರಿ ತಪ್ಪಿದ ಅಥವಾ ದಾರಿ ತಪ್ಪಿಸುವ ಶಿಕ್ಷಣ ವ್ಯವಸ್ಥೆಯ ವಿದ್ಯಮಾನದ ಪ್ರತೀಕವಾಗಿದ್ದಾರೆ!

ಖುದ್ದು ತಲೆಗಲ್ಲದೆ ಎಲ್ಲೆಡೆ ಬಣ್ಣ ಹಚ್ಚಿಕೊಂಡು ಜಮಾಜಮಾ ಜಾಮದಾರರನ್ನು 'ಜಯನ್ನಮ ಪಾರ್ವತಿಪತಿ ಪರಮೇಶ್ವರ' ಎಂದು ಭಜಿಸುವ ಪ್ರೊ. ಯಾಪಲಪರವಿ ಎಂಬುವವರು ವೀಣಾ ಬನ್ನಂಜೆಯವರನ್ನು 'ಕೂದಲಿಗೆ ಬಣ್ಣ ಹಚ್ಚಿಕೊಳ್ಳುವ ನರ್ತಕಿ' ಎಂದಿದ್ದಾರೆ. ವೀಣಾ ಬನ್ನಂಜೆ ಅವರು ಅಲ್ಲಮ-ಅಕ್ಕಮಹಾದೇವಿಯರ ಸ್ನಾತಕೋತ್ತರ ಮಟ್ಟದ ವಚನಗಳನ್ನು ವ್ಯಾಖ್ಯಾನಿಸುತ್ತಿದ್ದರೆ ಈ ನಿವೃತ್ತ ಇನ್ನೂ ಶಿಶುವಿಹಾರದ 'ಅಯ್ಯಾ ಎಂದರೆ ಸ್ವರ್ಗ, ಎಲವೋ ಎಂದರೆ ನರಕ' ವಚನವನ್ನು ಪಾಲಿಸುವ ಪ್ರಬುದ್ಧತೆಯನ್ನೂ ಗಳಿಸಿಲ್ಲ ಎಂಬುದು ಮತ್ತೊಂದು ಶಿಕ್ಷಣ ವ್ಯವಸ್ಥೆಯ ಮಾದರಿ.

ಇರಲಿ, ಸಂಶೋಧನೆಗಿಂತ ಪ್ರಚಾರದ ಹಪಾಹಪಿಯ 'ಸಂಶೋಧಕರು', ಖುದ್ದು ಆಧುನಿಕ ಬಸವಣ್ಣ ಎನಿಸಿಕೊಳ್ಳುವ ಆತ್ಮರತಿ ಪ್ರಭೃತಿಗಳು, ವಚನಗಳನ್ನು ತಮ್ಮ ರಾಜಕೀಯ ಆಲೇಖ್ಯಕ್ಕೆ ಅನುಗುಣವಾಗಿ ವಿರೂಪಗೊಳಿಸಿರುವ/ಸುತ್ತಿರುವ ಒಂದು ವಾಸ್ತವ ಮಾದರಿ ನಮ್ಮ ಮುಂದೆ ಜ್ವಲಂತವಾಗಿದೆ. ಇದು ಕಮ್ಯುನಿಸ್ಟರ ಗೋಬೆಲ್ಸ್ ತಂತ್ರದ ಪ್ರಮುಖ ಭಾಗವಾದ- ''ಒಂದು ಸುಳ್ಳನ್ನು ಸಾವಿರ ಬಾರಿ ಹೇಳಿದರೆ ಅದು ಸತ್ಯವಾಗುತ್ತದೆ'' ಎಂಬುದರ ಯಶಸ್ವಿ ಪ್ರಯೋಗವಾಗಿ ಶರಣ ಚಳವಳಿಯ ಹಿನ್ನೆಲೆಯಲ್ಲಿ ಸಾಬೀತಾಗಿದೆ ಸಹ. 'ಬಸವ ಮಂಟಪ'ದ ಹಿಂದಿನ ಅಂಕಣಗಳಲ್ಲಿ ಈ ಮೊದಲೇ ಸಾಬೀತುಪಡಿಸಿದಂತೆ: ''ಕಲಬುರ್ಗಿಯವರು, ವೀರಶೈವ ಪದ 14ನೇ ಶತಮಾನದವರೆಗೆ ಇರಲಿಲ್ಲ'' ಎನ್ನುವುದಲ್ಲದೆ ಹತ್ತು ಹಲವಾರು ಸಂಶೋಧನಾ ಸುಳ್ಳು, ''ಪ್ರತ್ಯೇಕಿಗಳು, ಲಿಂಗಾಯತವು ವೇದವಿರೋಧಿ'' ಎಂಬ ಅಸತ್ಯ, ''ದರ್ಗಾರ, ಬಸವಣ್ಣ ಮಾರ್ಕ್ಸ್‌ನ ಪೂರ್ವಗಾಮಿ'' ಎಂಬ ಹಾಸ್ಯಾಸ್ಪದ ಹೇಳಿಕೆ, ''ಎಸ್.ಜಿ.ಸಿದ್ಧರಾಮಯ್ಯ, ಶರಣರು ಪುಣ್ಯ ಸ್ತ್ರೀಯರಿಗೆ ಬಾಳು ಕೊಟ್ಟಂತೆ ಕ್ಯೂಬನ್ನರು ಕ್ಯಾಸ್ಟ್ರೋ ಮಾತು ಕೇಳಿ ವೇಶ್ಯೆಯರಿಗೆ ಬಾಳು ಕೊಟ್ಟರು'' ಎಂಬ ಕಟ್ಟುಕತೆ, ''ಜಿ.ಬಿ. ಪಾಟೀಲರ ಥಾಯ್ಲೆಂಡಿನಲ್ಲಿ ಬಸವಣ್ಣ'' ಎಂಬ ಮೂರ್ಖತನ, ''ಸಂಸ್ಕೃತ ಪದಗಳನ್ನು ವಚನಗಳಲ್ಲಿ ತುರುಕಿದರು'' ಎಂಬ ರೋಧನೆ, ''ಅವರದು ಪೌರಾಣಿಕ ನಮ್ಮದು ಇತಿಹಾಸ'' ಎನ್ನುವ ಶೋಧನೆ... ಇತ್ಯಾದಿ ಅಸಂಖ್ಯಾತ ಅಪ್ಪಟ ಸುಳ್ಳುಗಳ ಸರಮಾಲೆಗಳು ಮಹಾನ್ ಸಂಪುಟಗಳಾಗಿದ್ದವು ಈಗ ನಿಶ್ಶೂನ್ಯವಾಗಿವೆ. ಕರಣ ಹಸಿಗೆ, ಮಂತ್ರಗೋಪ್ಯಗಳಲ್ಲಿ ಓಂಕಾರ, ವೇದಗಳು ವಿಜೃಂಭಿಸಿವೆ! ಹೀಗಿದ್ದೂ ವೇದಾಗಮಗಳನ್ನು ಶರಣರು ತಿರಸ್ಕರಿಸಿದರು ಎಂದರೆ ಇದು ಗೋಬೆಲ್ಸ್ ತಂತ್ರದ ಪರಾಕಾಷ್ಠೆಯಾಗಿದೆ ಅಷ್ಟೇ.

ಇರಲಿ, ಒಟ್ಟಾರೆ ವೀರಶೈವ ಗ್ರಂಥಗಳು ಮತ್ತು ವಚನ ಸಾಹಿತ್ಯವು ವೇದಾಗಮ ಉಪನಿಷತ್ತುಗಳ ಸಾರವನ್ನು ಅನುಭವಾತ್ಮಕವಾಗಿ ವಿಸ್ತರಿಸಿವೆ. ಬಸವಣ್ಣನ 'ದೇಹವೇ ದೇಗುಲ' ಎಂಬ ದರ್ಶನ, ಉಪನಿಷತ್ತಿನ 'ಆತ್ಮವೇ ದೇವರು' ಎಂಬ ತತ್ವದ ನೇರ ಅನ್ವಯ. ಬಸವಣ್ಣನ ಕ್ರಾಂತಿ ಧರ್ಮದ ಹೊಸ ವ್ಯಾಖ್ಯಾನವಲ್ಲ- ಸನಾತನ ಮಾನವೀಯ ಧರ್ಮದ ಪುನರುಜ್ಜೀವನ. ಏಕೆಂದರೆ ಆತ ಆಗಷ್ಟೇ ಜಾರಿಯಾಗಿದ್ದ 'ಹುಟ್ಟಿನಿಂದ ಜಾತಿ' ಎಂಬ ಹೊಸ ನೀತಿಯನ್ನು ವಿರೋಧಿಸಿದ್ದನು ಮತ್ತು 12ನೇ ಶತಮಾನಕ್ಕೂ ಮುಂಚೆ 'ಹುಟ್ಟಿನಿಂದ ಜಾತಿ' ನಿರ್ಧಾರವಾಗುತ್ತಿರಲಿಲ್ಲ ಎಂಬ ಸ್ಪಷ್ಟ ಉಲ್ಲೇಖ ಅವನ ಈ ವಚನದಲ್ಲಿ ಸಿಗುತ್ತದೆ: ''ವ್ಯಾಸ ಬೋವಿತಿಯ ಮಗ, ಮಾರ್ಕಂಡೇಯ ಮಾತಂಗಿಯ ಮಗ, ಮಂಡೋದರಿ ಕಪ್ಪೆಯ ಮಗಳು. ಕುಲವನರಸದಿರಿಂ ಭೋ! ಕುಲದಿಂದ ಮುನ್ನೇನಾದಿರಿಂ ಭೋ! ಸಾಕ್ಷಾತ್ ಅಗಸ್ತ್ಯ ಕಬ್ಬಿಲ, ದೂರ್ವಾಸ ಮುಚ್ಚಿಗ, ಕಶ್ಯಪ ಕಮ್ಮಾರ, ಕೌಂಡಿನ್ಯನೆಂಬ ಋಷಿ ಮೂರು ಭುವನರಿಯದೆ ನಾವಿದ ಕಾಣಿ ಭೋ! ನಮ್ಮ ಕೂಡಲ ಸಂಗನ ವಚನವಿಂತೆಂದುದು ಶ್ವಪಚೋಪಿಯಾದಡೇನು, ಶಿವಭಕ್ತನೆ ಕುಲಜಂ ಭೋ!''. ಇನ್ನು ಕೇವಲ ಓರ್ವ ಕುತೂಹಲಿಯಾಗಿ ನಾನು ಕಂಡುಕೊಂಡ ಈ ಸತ್ಯವನ್ನು, ಇದನ್ನು ಸಂಶೋಧಿಸಲೆಂದೇ ಲಕ್ಷದ ಮೇಲೆ ತೊಂಬತ್ತಾರು ಸಾವಿರ ರೂಪಾಯಿ ಮಾಸಿಕ ಸಂಬಳ ಪಡೆವ ವಿಶ್ವವಿದ್ಯಾಲಯಗಳ ಏಳುನೂರ ಎಪ್ಪತ್ತು ಪ್ರೊಫೆಸರರುಗಳಿಗೆ ಏಕೆ ಕಂಡುಹಿಡಿಯಲು ಆಗಿಲ್ಲ?

ಸ್ವಾತಂತ್ರ್ಯ ನಂತರದ ಇಂಗ್ಲಿಷ್ 'ಭಾಷೆ'ಯ ಇಂಗ್ಲಿಷ್ 'ಶಿಕ್ಷಣ' ಕಲಿತ ನೂತನ ಕಾರಕಾನರು ಇತಿಹಾಸವನ್ನೆಲ್ಲಾ ಪುರಾಣವೆನ್ನುತ್ತಾ ಇಂಗ್ಲಿಷ್ ಶೈಲಿಯನ್ನು ನಕಲು ಮಾಡುತ್ತ ವಿಶ್ವವಿದ್ಯಾಲಯಗಳಲ್ಲಿ ಕುರುಡಾಗಿ ಎಡಪಂಥೀಯ ಚಿಂತನೆಯನ್ನು ತುರುಕಲಾರಂಬಿಸಿದರು. ಹಳತನ್ನು ಧಿಕ್ಕರಿಸಿ ಏನನ್ನಾದರೂ ಹೊಸತನವನ್ನು ಸಾಧಿಸಬೇಕೆಂಬ ಈ ವಿದ್ಯಾವಂತರಿಗೆ ತಮ್ಮದೇ ಆದ ರಾಜಕೀಯ, ಸಾಮಾಜಿಕ, ಚಿಂತನೆಗಳನ್ನು ಸ್ವತಂತ್ರ ಭಾರತದ ಮೇಲೆ ಯಶಸ್ವಿಯಾಗಿ ಹೇರಲು ಮನುಸ್ಮೃತಿಯ ವಿಸ್ಮೃತಿಯನ್ನು ಹೆಚ್ಚು ಆಸ್ಥೆಯ ಪ್ರಚಾರ ಕೊಟ್ಟು ಬಳಸಿಕೊಳ್ಳಲಾಯಿತು. ಮುಂದೆ ಎಂಬತ್ತರ ದಶಕದ ಸಮಾಜವಾದಿ ಚಳವಳಿಯ ನಿಟ್ಟಿನಲ್ಲಿ ಬಸವಣ್ಣ, ಕಾಯಕ, ಶರಣ ಚಳವಳಿ ಮತ್ತು ಕಲ್ಯಾಣ ಕ್ರಾಂತಿಗಳ ಮೂಲೋದ್ದೇಶಗಳನ್ನು ಅಪ್ಪಟ ಸಮಾಜವಾದಿ ಕಮ್ಯೂನಿಸ್ಟ್ ಚಿಂತನೆ ಎಂದು ಬಿಂಬಿಸುವ ಸಾಕಷ್ಟು ಸಂಕಥನಗಳನ್ನು ಬುದ್ಧಿಜೀವಿಗಳು ಯಶಸ್ವಿಯಾಗಿ ಕಟ್ಟಿಕೊಟ್ಟರು. ಇದನ್ನೆಲ್ಲಾ ನಂಬಿ ನಾನು ನನ್ನ ಕೊರಳಲ್ಲಿದ್ದ ಕರಡಿಗೆಯನ್ನು ಗಿರಗಿರನೇ ತಿರುಗಿಸಿ ಎಸೆದಿದ್ದೆ ಸಹ. ಕಟ್ಟಾ ವೀರಶೈವ ಸದ್ಭಕ್ತನಾಗಿದ್ದ ನಮ್ಮ ಅಪ್ಪ ನನ್ನನ್ನು ಹಿಟ್ಲರನಿಗಿಂತ ಉಗ್ರವಾಗಿ ಶಿಕ್ಷಿಸಿದರೂ ನನ್ನ ಸಮಾಜವಾದಿ ಅಚಲ ನಂಬಿಕೆ ಕಿಂಚಿತ್ತೂ ಅಲ್ಲಾಡಿರಲಿಲ್ಲ. ಅಂಥ ತಲೆಮಾಸುವಿಕೆಯ 'ಬಸವ-ಗುರಾಣಿ ಸಮಾಜವಾದದ-ಕತ್ತಿ'ಯ ಮಾಂತ್ರಿಕ ಸುಳ್ಳುಗಳ ಸಂಕಥನದ ಬರಹ ಈ ಬುದ್ಧಿಜೀವಿಗಳದಾಗಿತ್ತು! ಇರಲಿ, ಇಂದು ವಿಶ್ವದ ಅತ್ಯಂತ ವಿಡಂಬನಾತ್ಮಕ ಸಾಹಿತ್ಯಿಕ ಬರಹ ಎಂದೇ ಹೆಸರಾದ ಬ್ರಿಟಿಷ್ ಸಾಹಿತ್ಯಕ್ಕಿಂತ ಹತ್ತು ಹಲವಾರು ಶತಮಾನಗಳಿಗೂ ಮುಂಚೆಯೇ ಹೆಚ್ಚು ವಿಡಂಬನಾತ್ಮಕವಾಗಿದ್ದ ಆದರೆ ಆಳದ ಅರ್ಥ ಹೊಂದಿದ್ದ ವಚನಗಳು ಈ ಬುದ್ಧಿಜೀವಿಗಳ ವ್ಯಾಖ್ಯಾನಕ್ಕೆ ಸುಲಭ ತುತ್ತಾದವು. ಇದನ್ನು ಬಳಸಿ ಇಡೀ ಶರಣ ಇತಿಹಾಸವನ್ನೇ ಬುಡಮೇಲು ಮಾಡುವಂಥ ಸಂಕಥನವನ್ನು ಕಟ್ಟಿ ಈ ತೇಲ್ ಮೇಲ್ ಜೀವಿಗಳು ಧರ್ಮಭಂಜನೆ ಮಾಡಿದರು. ಕ್ರಮೇಣವಾಗಿ ಎಲ್ಲಾ ಸಮಾಜವಾದಿ ಚಿಂತಕ ನಾಯಕರು ತಮ್ಮ ಬುಡವನ್ನು ಭದ್ರಪಡಿಸಿಕೊಂಡು ರಾಜಕೀಯವಾಗಿ ಸಮಗ್ರವಾಗಿ ಜಾತಿ ಪ್ರಾಬಲ್ಯ ಅಧಿನಾಯಕತ್ವ (Hegemony), ಉತ್ಪ್ರೇಕ್ಷೆ, ಓಲೈಕೆಗಳ ಪ್ರಭಾವಳಿಗಳಲ್ಲಿ ಜನರನ್ನು ಪ್ರಭಾವಿಸಿಬಿಟ್ಟರು. ಅಂಥ ಸಮಾಜವಾದಿ ನಾಯಕರುಗಳಿಗೆ ಏನು ಬೇಕೋ ಅದೆಲ್ಲವನ್ನೂ ಇಂಧನವಾಗಿ ಈ ಸಂಶೋಧಿಗರು ಒದಗಿಸಿಕೊಟ್ಟಿದ್ದಾರೆ. ಇದರ ಪರಿಣಾಮವೇ ಇಂದು ನಿಮ್ಮ ಕಣ್ಣೆದುರಿಗಿರುವ ಧರ್ಮಭಂಜಕ ಸಂಘಟನೆಗಳು!

ಒಂದು ಸಂಶೋಧನ ವಸ್ತುವನ್ನು ಸಾಧ್ಯವಿರುವ ಎಲ್ಲಾ ತಾರ್ಕಿಕ ಕೋನಗಳಿಂದ ಪರಾಮರ್ಶೆಗೊಳಪಡಿಸಿ, ಸ್ಥಿತಪ್ರಜ್ಞತೆಯಿಂದ ವಾಸ್ತವಿಕವಾಗಿ ನೆಲೆಗೊಳಿಸುವ ಸಂಶೋಧನ ತಂತ್ರವನ್ನು ವೀರಶೈವ-ಲಿಂಗಾಯತ ಸಂಕಥನದ ಕಲಬುರ್ಗಿ-ಪ್ರಣೀತ ಯಾವುದೇ ಸಂಶೋಧಕನೂ, ಜಾಮದಾರ-ಜಾಮಿತ ಧರ್ಮಬೀರುವೂ ಅಳವಡಿಸಿಕೊಂಡಿಲ್ಲ. ಬಹುವಿಸ್ತಾರದ ವಿಶ್ಲೇಷಣೆಯೊಂದಿಗೆ ಈವರೆಗಿನ ಎಲ್ಲಾ ಸಿದ್ಧ ಮಾದರಿ ಸಂಶೋಧನ ತಂತ್ರಗಳನ್ನು, ಸಿದ್ಧಾಂತಗಳನ್ನು ತೀವ್ರ ಒರೆಗೆ ಹಚ್ಚಿ ಪೂರ್ವಗ್ರಹಗಳ ಲವಲೇಶವನ್ನೂ ಸೋಂಕಿಸಿಕೊಳ್ಳದಂತೆ ಮತ್ತು ಸತ್ಯವು ಬಯಸುವ ಕಠೋರ ನಿಷ್ಠುರತೆಯನ್ನು ಪ್ರತಿಪಾದಿಸುವ ಮಾರ್ಗಕ್ಕೆ ಸಂಶೋಧಕರನ್ನು ಅನುವುಗೊಳಿಸುವಲ್ಲಿ ಧರ್ಮಬೀರುಗಳು ಧರ್ಮವನ್ನು ಬೀರುವಲ್ಲಿ 'ವಿಶ್ವವಾಣಿ' ಬರಹಗಳು ಒಂದು ಪ್ರಯತ್ನವನ್ನು ಮಾಡಿವೆಯಷ್ಟೇ. ಒಂದು ಅಂತಾರಾಷ್ಟ್ರೀಯ ಮತ್ತು ಅಂತರಶಿಸ್ತೀಯ ವೈಧಾನಿಕತೆಗೆ ಬದ್ಧವಾಗಿಸಿ ನೋಡಿದಾಗ ಕಲ್ಯಾಣ ಕ್ರಾಂತಿಯ ಪಥ ಸುಸ್ಪಷ್ಟವಾಗಿ ಗೋಚರಿಸುತ್ತದೆ ಎಂಬುದನ್ನೂ ಅಷ್ಟೇ ಸುಸ್ಪಷ್ಟವಾಗಿಯೂ 'ವಿಶ್ವವಾಣಿ' ಬರಹಗಳು ದಾಖಲಿಸಿವೆ!

ಹಿಂದೂ ಪ್ರಭೇದದ ದ್ವೈತ, ಅದ್ವೈತ, ವಿಶಿಷ್ಟಾದ್ವೈತ, ಶಕ್ತಿವಿಶಿಷ್ಟಾದ್ವೈತ, ಬೌದ್ಧ, ಜೈನ, ಸಿಖ್ ಧರ್ಮಗಳ ಬುನಾದಿಯೂ ಉಪನಿಷತ್ತಿನ ಇವೇ ಐದು ವಾಕ್ಯಗಳಾಗಿವೆ. ಅಲ್ಲದೇ ಕ್ರೈಸ್ತ ಮತ್ತು ಇಸ್ಲಾಮಿನ ಮೂಲಧರ್ಮವಾದ ಯಹೂದಿಗಳ ಜೂಡಾಯಿಸಂನ ದೇವರ ಹೆಸರೇ 'ಎಹಿಯೇ ಆಶೆರ್ ಎಹಿಯೇ' ಅಂದರೆ ''ನಾನು ನಾನೇ ಆಗಿದ್ದೇನೆ!'' ಈ ''ನಾನು ನಾನೇ ಆಗಿದ್ದೇನೆ'' ಎಂಬುದು ಸಹ ನಮ್ಮ ಪರಬ್ರಹ್ಮ ಪರಮಾತ್ಮ ಅಥವಾ ಸರ್ವೋಚ್ಚ ವಾಸ್ತವಿಕತೆಯ ಸ್ಥಿತಿರಹಿತ ಸ್ಥಿತಿಯ ನಮ್ಮೊಳಗಿನ ಒಂದು ಅಮೂರ್ತತೆ ಎನ್ನಲಾಗಿದೆ! ಅದೇ ರೀತಿ 'ಅಹಂ ಬ್ರಹ್ಮಾಸ್ಮಿ' ಎಂಬುದನ್ನೇ ಯೇಸುವು 'ನಾನೇ ದೇವರು' ಎಂದಿದ್ದಾನೆ. ''ನಾನು ನಾನೇ ಆಗಿದ್ದೇನೆ'' ಎಂಬ ನಮ್ಮೊಳಗಿನ ಅಮೂರ್ತತೆಯ ಆತ್ಮಲಿಂಗದ ವಿಸ್ತೃತ ಶಾಸ್ತ್ರವೇ ವೀರಶೈವರ ಶಕ್ತಿವಿಶಿಷ್ಟಾದ್ವೈತ. ಹೀಗೆ ಜಗತ್ತು ಸನಾತನ ಸಂಸ್ಕೃತಿಯ ವಸುಧೈವ ಕುಟುಂಬಕಂ ಎಂಬಂತೆ ಅನಾದಿಯಿಂದಲೂ ಜಾಗತಿಕವಾಗಿದೆ. ಹಾಗಾಗಿಯೇ ಬಸವಣ್ಣ ವೀರಶೈವ ತತ್ವದ ''ಮಾನವ ಧರ್ಮಕ್ಕೆ ಜಯವಾಗಲಿ. ಧರ್ಮದಿಂದಲೇ ವಿಶ್ವಕ್ಕೆ ಶಾಂತಿ'' ಎನ್ನುವ ಜಾಗತಿಕ ಸಾಂಸ್ಕೃತಿಕ ನಾಯಕನಾಗಿದ್ದಾನೆಯೇ ಹೊರತು ಯಾವುದೋ ಅಜ್ಞಾನಿ ಕರ್ಮಠರು ಹಕ್ಕೊತ್ತಾಯ ಮಂಡಿಸುವಂಥ ಧರ್ಮಭಂಜಕ ಮತಸ್ಥಾಪಕನಲ್ಲ. ಅಂದ ಹಾಗೆ ಇದು ದುರಿತ ಕಾಲ ಎಂದು ನಾಡಿನ ಬುದ್ಧಿಜೀವಿಗಳೇ ಹೇಳಿದ್ದಾರೆ. ಹಾಗಾಗಿ ಬಸವಣ್ಣನನ್ನು ಈ ದುರಿತ ಕಾಲದ ಕರ್ಮಠರಿಂದ ಬಿಡಿಸಿ, ವೀರಶೈವ ಸೈದ್ಧಾಂತಿಕ ಸತ್ಯದ ಆದರೆ ಮಹತ್ವಾಕಾಂಕ್ಷಿಯೂ ಆಗಿದ್ದ ಬಸವಣ್ಣನನ್ನು ಎತ್ತಿ ಹಿಡಿದು ನಾನೇ ನಾನೆಂದು ನೀವು ನೀವಾಗಿರಿ.

ಭಾಗ-2

(ಲೇಖಕರು ಶಿಕಾಗೊ ನಿವಾಸಿ ಮತ್ತು ಸಾಹಿತಿ)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10,Issue: 106

ಸಮಾಚಾರ ಸಣ್ಣದಲ್ಲ

ವಿಭಜನೆಯ ಅಂಚಲ್ಲಿ ಪಾಕ್: ಆರ್‌ಎಸ್‌ಎಸ್

ದೆಹಲಿ: ಪಹಲ್ಗಾಮ್ ಭಯೋತ್ಪಾದಕ ದಾಳಿ ನಾಚಿಕೆಗೇಡಿನ ಕೃತ್ಯ, ಅಸಹ್ಯಕರ ಮತ್ತು ಅವಮಾನಕರ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ(ಆರ್‌ಎಸ್ ಎಸ್) ಹಿರಿಯ ನಾಯಕ ಇಂದ್ರೇಶ್ ಕುಮಾರ್ ಖಂಡಿಸಿದ್ದಾರೆ. ಸುದ್ದಿಸಂಸ್ಥೆ ಜತೆ ಮಂಗಳವಾರ ಮಾತನಾಡಿ, ಸಿಂಧ್, ಬಲೂಚಿಸ್ತಾನ್, ಖೈಬರ್ ಪಖ್ತುಂ ಖ್ವಾ, ಪಿಒಜೆಕೆ ಮತ್ತು ಪಂಜಾಬ್‌ನಂತಹ ಪ್ರದೇಶಗಳು ಸ್ವಾತಂತ್ರ್ಯ ಬಯಸುತ್ತಿದ್ದು, ಪಾಕಿಸ್ತಾನ ವಿಭಜನೆ ಅಂಚಿನಲ್ಲಿದೆ. ಭಾರತದ ವಿರುದ್ಧ ದ್ವೇಷ ಕಾರುತ್ತಾ ದೇಶದ ಪತನವನ್ನು ತಡೆಯಲು ಆಗುವುದಿಲ್ಲ ಎಂದರು. ಕಳೆದ 30-40 ವರ್ಷಗಳಲ್ಲಿ, ಅಸಂಖ್ಯಾತ ಅಮಾಯಕರ ಕೊಲೆಯಾಗಿದೆ. ಭಯೋತ್ಪಾದನೆಗೆ ಧರ್ಮವಿಲ್ಲ ಎಂದು ನಾವು ನಿಜವಾಗಿಯೂ ನಂಬಿದರೆ ಈ ತತ್ವವನ್ನು ನಿರಂತರವಾಗಿ ಎತ್ತಿಹಿಡಿಯಬೇಕು ಎಂದರು.

ಸ್ಪೈವೇರ್ ಬಳಕೆ ತಪ್ಪಲ್ಲ, ಯಾರ ವಿರುದ್ಧ ಎಂಬುದು ಮುಖ್ಯ

ದೆಹಲಿ: ಭಯೋತ್ಪಾದಕರ ವಿರುದ್ಧದ ಕಾರ್ಯಾಚರಣೆಗೆ ಸ್ಪೈವೇರ್ ಬಳಕೆ ತಪ್ಪಲ್ಲ ಎಂದಿರುವ ಸುಪ್ರೀಂ ಕೋರ್ಟ್, ಆದರೆ, ಅದನ್ನು ನೀವು ಯಾರ ವಿರುದ್ಧ ಬಳಸುತ್ತೀರಿ ಎಂಬುದೇ ಮುಖ್ಯವಾದ ಪ್ರಶ್ನೆ. ದೇಶದ ಭದ್ರತೆ ಮತ್ತು ಏಕತೆಗೆ ಧಕ್ಕೆ ತರುವ ವಿಚಾರಗಳನ್ನು ಬಹಿರಂಗ ಮಾಡಬಾರದು. ಆ ವಿಚಾರಗಳಲ್ಲಿ ರಾಜಿ ಸಾಧ್ಯವಿಲ್ಲ ಎಂದು ಹೇಳಿದೆ. ಕೇಂದ್ರ ಸರಕಾರ ಸ್ಪೈವೇರ್ ಬಳಸುತ್ತಿರುವ ಪ್ರಶ್ನೆ ಎದುರಾಗಿದೆ. ಒಂದು ವೇಳೆ ಬಳಸುತ್ತಿದ್ದರೆ ಅದರ ನಿರಂತರ ಬಳಕೆ ತಡೆಯಲು ಯಾವುದೇ ಅವಕಾಶವಿಲ್ಲ ಎಂದು ಅರ್ಜಿದಾರರೊಬ್ಬರ ಪರ ವಾದ ಮಂಡಿಸಿದ ವಕೀಲ ದಿನೇಶ್ ದ್ವಿವೇದಿ ಸುಪ್ರೀಂಕೋರ್ಟ್‌ನಲ್ಲಿ ವಿಚಾರ ಮಂಡಿಸಿದರು. ಗೌಪ್ಯತೆಯ ಉಲ್ಲಂಘನೆ ಕುರಿತ ವೈಯಕ್ತಿಕ ಆತಂಕ ಎದುರಾಗಿದ್ದರೆ ಪರಿಹರಿಸಬಹುದು. ತಾಂತ್ರಿಕ ಸಮಿತಿ ವರದಿ ಬೀದಿಯಲ್ಲಿ ಚರ್ಚಿಸುವ ದಾಖಲೆ ಅಲ್ಲ ಎಂದ ನ್ಯಾ.ಸೂರ್ಯ ಕಾಂತ್ ಮತ್ತು ನ್ಯಾ.ಎನ್, ಕೋಟೀಶ್ವರ ಸಿಂಗ್ ಅವರ ಪೀಠ, ಜನರೂ ಸ್ವಲ್ಪ ಜವಾಬ್ದಾರಿಯಿಂದ ವರ್ತಿಸಬೇಕಿದೆ ಎಂದೂ ಹೇಳಿತು. ಭಯೋತ್ಪಾದಕರ ವಿರುದ್ಧ ಸ್ಪೈವೇರ್ ಬಳಸುವುದರಲ್ಲಿ ಯಾವುದೇ ತಪ್ಪಿಲ್ಲ ಮತ್ತು ಅವರು ಖಾಸಗಿತನದ ಹಕ್ಕು ಹೊಂದಿರುವುದಿಲ್ಲ ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಹೇಳಿದರು.

ಪಾಕ್ ರಕ್ಷಣಾ ಸಚಿವನ ಎಕ್ಸ್ ಖಾತೆ ನಿರ್ಬಂಧ

ದೆಹಲಿ: ಪಾಕಿಸ್ತಾನದ ರಕ್ಷಣಾ ಸಚಿವ ಖ್ವಾಜಾ ಆಸಿಫ್ 'ಎಕ್ಸ್' ಖಾತೆಯನ್ನು ಭಾರತದಲ್ಲಿ ತಕ್ಷಣ ದಿಂದಲೇ ಜಾರಿಗೆ ಬರುವಂತೆ ನಿರ್ಬಂಧಿಸಲಾಗಿದೆ. ಪಹಲ್ಗಾಮ್ ಉಗ್ರ ದಾಳಿ ಬಳಿಕ ಪಾಕ್ ರಕ್ಷಣಾ ಸಚಿವ ಖ್ವಾಜಾ ಆಸಿಫ್, ಉಗ್ರ ಸಂಘಟನೆಗಳಿಗೆ ಪಾಕ್ ಸರಕಾರದ ಬೆಂಬಲ ಮತ್ತು ಹಣಕಾಸು ನೆರವು ನೀಡುತ್ತಿರುವುದನ್ನು ಸಂದರ್ಶನವೊಂದರಲ್ಲಿ ಒಪ್ಪಿಕೊಂಡಿದ್ದರು.

ಭಾರತ ವಿರುದ್ಧ ಯುದ್ಧ ಸಲ್ಲ: ನವಾಜ್ ಸಲಹೆ



ಇಸ್ಲಾಮಾಬಾದ್: ಭಾರತದ ಜತೆ ಯುದ್ಧ ಮಾಡದೇ ಶಾಂತಿಯಿಂದ ಪರಿಸ್ಥಿತಿ ನಿಭಾಯಿಸುವ ಬಗ್ಗೆ ಗಮನಹರಿಸಿ, ಸ್ವಲ್ಪ ಶಾಂತವಾಗಿರಿ ಎಂದು ಪಾಕಿಸ್ತಾನ ಪ್ರಧಾನಿ ಶಹಬಾಜ್ ಷರೀಫ್‌ಗೆ, ಅವರ ಸೋದರ ಮಾಜಿ ಪ್ರಧಾನಿ ನವಾಜ್ ಷರೀಫ್ ಸಲಹೆ ನೀಡಿದ್ದಾರೆ. ಪಹಲ್ಗಾಮ್ ಹತ್ಯಾಕಾಂಡ ಬಗ್ಗೆ 130 ದೇಶಗಳು ಆಕ್ರೋಶ ವ್ಯಕ್ತಪಡಿಸಿವೆ. ಭಯೋತ್ಪಾದನೆ ವಿರುದ್ಧದ ಹೋರಾಟದಲ್ಲಿ ಭಾರತವನ್ನು ಬೆಂಬಲಿಸುವ ಬಗೆಗೂ ಮಾತನಾಡಿವೆ. ಪ್ರಧಾನಿ ನರೇಂದ್ರ ಮೋದಿ ಪ್ರತಿಕಾರದ ಮಾತನಾಡಿದ್ದಾರೆ. ಪಾಕಿಸ್ತಾನವೂ ಸೇನೆಯ ಸಿದ್ಧತೆಯಲ್ಲಿ ತೊಡಗಿದೆ. ಎಲ್ಒಸಿ ಬಳಿ ಸೈನಿಕರ ಜಮಾವಣೆ ನಡೆದಿದೆ. ಭಾರತ ಸಿಂಧೂ ನದಿ ನೀರು ಒಪ್ಪಂದ ಅಮಾನತುಗೊಳಿಸಿದ ನಂತರ ಇಸ್ಲಾಮಾಬಾದ್‌ನಲ್ಲಿ ನಡೆಸಿದ ರಾಷ್ಟ್ರೀಯ ಭದ್ರತಾ ಸಮಿತಿ ಸಭೆಯ ನಿರ್ಧಾರಗಳ ಬಗ್ಗೆ ಪ್ರಧಾನಿ ಶಹಬಾಜ್ ಷರೀಫ್, 3 ಬಾರಿ ಪಾಕಿಸ್ತಾನದ ಪ್ರಧಾನಿಯಾಗಿದ್ದ ಸೋದರ ನವಾಜ್ ಷರೀಫ್‌ಗೆ ಕರೆ ಮಾಡಿ ತಿಳಿಸಿದ್ದರು. ಅದಕ್ಕೆ ಪ್ರತಿಯಾಗಿ ನವಾಜ್ ಷರೀಫ್, ರಾಜತಾಂತ್ರಿಕ ವಿಧಾನಗಳನ್ನು ಅಳವಡಿಸಿಕೊಂಡು ಉದ್ವಿಗ್ನತೆ ತಗ್ಗಿಸುವಂತೆ ಸಲಹೆ ನೀಡಿದರು ಎಂದು ತಿಳಿದುಬಂದಿದೆ.

ಚೀನಾ ರೆಸ್ಟೋರೆಂಟ್ ಬೆಂಕಿ, 22 ಜನ ಸಾವು

ಬೀಜಿಂಗ್: ಚೀನಾದ ಲಿಯಾನಿಂಗ್ ಪ್ರಾಂತ್ಯದ ಸಿಯಾಯಾಂಗ್ ನಗರದಲ್ಲಿ ಮಂಗಳವಾರ ಬೆಂಕಿ ಅವಘಡದಲ್ಲಿ ಗ್ರಾಹಕರು ಸೇರಿದಂತೆ 22 ಜನರು ಸಾವಿಗೀಡಾದರು. ಮೂವರು ಗಾಯಗೊಂಡಿದ್ದಾರೆ.

{ನಿಶಿಕಾಂತ್ ದುಬೆ} ಬಿಜೆಪಿ ಸಂಸದ

ಪಾಕಿಸ್ತಾನದ 5 ಲಕ್ಷ ಯುವತಿಯರು ಭಾರತದ ಪುರುಷರನ್ನು ಮದುವೆಯಾಗಿದ್ದು, ಭಾರತದಲ್ಲಿ ನೆಲೆಸಿದ್ದಾರೆ. ಆದರೆ ಇವರು ಯಾರೂ ಭಾರತದ ಪೌರತ್ವವನ್ನೇ ಪಡೆದಿಲ್ಲ. ಇದು ಪಾಕಿಸ್ತಾನದ ಭಯೋತ್ಪಾದನೆಯ ಮತ್ತೊಂದು ಮುಖವಾಗಿದೆ. ದೇಶದ ಒಳಕ್ಕೇ ಬಂದು ಉಳಿದುಕೊಂಡಿರುವ ಶತ್ರು, ದೇಶದ ಈ ಪ್ರಜೆಗಳ ಜತೆ ಹೋರಾಡುವುದು ಹೇಗೆ?

ಉಗ್ರರ ಸ್ಲೀಪರ್ ಸೆಲ್ ಮತ್ತೆ ಚುರುಕು | ಜಮ್ಮು-ಕಾಶ್ಮೀರ ಮತ್ತಷ್ಟು ದಾಳಿ ಭೀತಿ | ಬೇರೆ ರಾಜ್ಯದವರೇ ಉಗ್ರರ ದಾಳಿ ಗುರಿ

ಕಾಶ್ಮೀರದ 48 ಪ್ರವಾಸಿ ತಾಣ ಬಂದ್

ಶ್ರೀನಗರ: ಅನಂತನಾಗ್ ಜಿಲ್ಲೆಯ ಪಹಲ್ಗಾಮ್ ಸಮೀಪದ ಬೈಸರನ್ ಹುಲ್ಲುಗಾವಲಿನಲ್ಲಿ 25 ಪ್ರವಾಸಿಗರು ಮತ್ತು ಒಬ್ಬ ಸ್ಥಳೀಯನ ಮೇಲೆ ಉಗ್ರರ ದಾಳಿ ನಡೆಸಿ ಬರ್ಬರವಾಗಿ ಹತ್ಯೆ ಮಾಡಿದ ಬಳಿಕ ಭಾರತೀಯ ಸೇನಾಪಡೆ ಜಮ್ಮು-ಕಾಶ್ಮೀರದ ವಿವಿಧೆಡೆ ಅಡಗಿರಬಹುದಾದ ಉಗ್ರರು ಮತ್ತು ಸಹಚರರಿಗಾಗಿ ತೀವ್ರ ಶೋಧ ನಡೆಸುತ್ತಿದೆ.

ಇದರ ಬೆನ್ನಲ್ಲೇ, ಜಮ್ಮು-ಕಾಶ್ಮೀರದಲ್ಲಿ ಈ ಮೊದಲಿದ್ದ ಉಗ್ರರ ಸ್ಲೀಪರ್ ಸೆಲ್‌ಗಳು ಮತ್ತೆ ಚುರುಕುಗೊಂಡು ಮತ್ತಷ್ಟು ಭಯೋತ್ಪಾದಕ ದಾಳಿ ನಡೆಸುವ ಸಾಧ್ಯತೆಗಳಿವೆ. ಅದಕ್ಕೆ ಸ್ಥಳೀಯ ನಿವಾಸಿಗಳೂ ಬೆಂಬಲವಾಗಿದ್ದಾರೆ ಎಂದು ಗುಪ್ತಚರ ದಳ ಎಚ್ಚರಿಕೆ ಸಂದೇಶ ನೀಡಿದೆ. ಪ್ರವಾಸಿ ತಾಣ ಬೈಸರನ್ ಹುಲ್ಲುಗಾವಲಿನಲ್ಲಿ ಪ್ರವಾಸಿಗರನ್ನೇ ಗುರಿಯಾಗಿಸಿ ದಾಳಿ ನಡೆಸಿದಂತೆಯೇ ಬೇರೆ ಪ್ರವಾಸಿ ತಾಣಗಳ ಮೇಲೂ ಭಯೋತ್ಪಾದಕ ದಾಳಿ ನಡೆಯುವ ಸಾಧ್ಯತೆ ಇದೆ ಎಂದು ಗುಪ್ತಚರ ದಳ ಸುಳಿವು ನೀಡಿದೆ. ಗುಪ್ತಚರ ದಳದ ಸೂಚನೆ ಮೇರೆಗೆ ಜಮ್ಮು-ಕಾಶ್ಮೀರದಲ್ಲಿನ 48 ಜನಪ್ರಿಯ ಪ್ರವಾಸಿ ತಾಣಗಳನ್ನು ಮುಂಜಾಗರೂಕತಾ ಕ್ರಮವಾಗಿ ತಕ್ಷಣದಿಂದಲೇ ಬಂದ್ ಮಾಡಿಸಲಾಗಿದೆ. ಭಯೋತ್ಪಾದಕರು ಮುಂಬರುವ ದಿನಗಳಲ್ಲಿ ಭದ್ರತಾ ಪಡೆ ಯೋಧರ ಮೇಲೆ ಮತ್ತು ಸ್ಥಳೀಯರಲ್ಲದ, ಬೇರೆ ರಾಜ್ಯದಿಂದ ಬಂದಿರುವವರ ಮೇಲೆ ದಾಳಿ ನಡೆಸಲು ಸಂಚು ರೂಪಿಸಿವೆ ಎಂದೂ ಗುಪ್ತಚರ ಮೂಲಗಳಿಂದ ತಿಳಿದುಬಂದಿದೆ. ಬೇರೆ ರಾಜ್ಯಗಳಿಂದ ವಲಸೆ ಬಂದಿರುವ ಕಾರ್ಮಿಕರು, ಅಧಿಕಾರಿಗಳು, ಕಾಶ್ಮೀರಿ ಪಂಡಿತ ಸಮುದಾಯದವರು, ಭದ್ರತಾ ಪಡೆಗಳ ಸಿಬ್ಬಂದಿ ಮೇಲೆ ದಾಳಿ ನಡೆಸಲು ಪಾಕಿಸ್ತಾನದ ಐಎಸ್‌ಐ ಸಂಚು ರೂಪಿಸಿರುವುದಾಗಿ ಗುಪ್ತಚರ ದಳ ಮುನ್ನೆಚ್ಚರಿಕೆ ನೀಡಿದೆ ಎಂದೂ ಹೇಳಲಾಗಿದೆ.

ಉಗ್ರ ಹಾಶಿಮ್ ಮೂಸಾ ಪಾಕ್ ವಿಶೇಷ ಪಡೆಯ ಮಾಜಿ ಸೈನಿಕ

ಶ್ರೀನಗರ: ಏ.22ರ ಪಹಲ್ಗಾಮ್ ಭಯೋತ್ಪಾದಕ ದಾಳಿಯಲ್ಲಿ ಭಾಗಿಯಾಗಿರುವ ಮೂವರು ಪಾಕಿಸ್ತಾನಿ ಭಯೋತ್ಪಾದಕರಲ್ಲಿ ಹಾಶಿಮ್ ಮೂಸಾ ಎಂಬಾತನೂ ಸೇರಿದ್ದಾನೆ. ಆತ ಬರೀ ಉಗ್ರನಲ್ಲ, ಪಾಕಿಸ್ತಾನ ಸೇನೆಯ ವಿಶೇಷ ಕಾರ್ಯಾಚರಣೆ ಪಡೆಗಳ ಮಾಜಿ ಕಮಾಂಡರ್ ಎಂಬುದು ನಂಬಲರ್ಹ ಮೂಲಗಳಿಂದ ತಿಳಿದುಬಂದಿದೆ.

ಪಹಲ್ಗಾಮ್ ಭಯೋತ್ಪಾದಕ ದಾಳಿ ಬಳಿಕ ಎನ್‌ಐಎ ತನಿಖಾಧಿಕಾರಿಗಳು, ವಶಕ್ಕೆ ಪಡೆದಿರುವ 14 ಕಾಶ್ಮೀರಿ ಗ್ರೌಂಡ್ ವರ್ಕರ್‌ಗಳಲ್ಲಿ ಒಬ್ಬನು ಉಗ್ರ ಮೂಸಾ ಒಬ್ಬ ಪಾಕ್ ಸೇನೆಯ ಮಾಜಿ ಕಮಾಂಡರ್ ಎಂಬುದನ್ನು ಬಹಿರಂಗಪಡಿಸಿದ್ದಾನೆ. ಪಾಕಿಸ್ತಾನ ಸೇನೆಯು ಮೂಸಾನನ್ನು ಐಎಸ್‌ಐ ಪ್ರೇರೇಪಿತ ನಿಷೇಧಿತ ಭಯೋತ್ಪಾದಕ ಸಂಘಟನೆಗಳಿಗೆ ಅನುಕೂಲವಾಗಲಿ ಎಂದೇ ಕಳುಹಿಸಿಕೊಟ್ಟಿದೆ. ಹಾಗಾಗಿಯೇ ಆತ ಲಷ್ಕರ್-ಎ-ತಯ್ಯಬಾ ಸಂಘಟನೆಯ ಛಾಯಾ ವಿಭಾಗವಾದ 'ಟಿಆರ್‌ಎಫ್'ಗೆ ಸೇರಿಕೊಂಡ. ಆ ಗುಂಪಿನ ಕೆಲವು ಉಗ್ರರನ್ನು ಕರೆದುಕೊಂಡು 2023ರ ಸೆಪ್ಟೆಂಬರ್‌ನಲ್ಲಿ ಭಾರತಕ್ಕೆ ನುಸುಳಿ ಬಂದು ಜಮ್ಮು-ಕಾಶ್ಮೀರದಲ್ಲಿ ಭಯೋತ್ಪಾದಕ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದಾನೆ. ಅವನ ಕಾರ್ಯಾಚರಣೆಯ ಪ್ರದೇಶ ಮುಖ್ಯವಾಗಿ ಕಾಶ್ಮೀರದ ಬದ್ಗಾಮ್ ಜಿಲ್ಲೆಯಾಗಿದೆ. ಆತ ಶ್ರೀನಗರ ಬಳಿಯೂ ಇರುತ್ತಾನೆ ಎಂದು ಮೂಲಗಳಿಂದ ತಿಳಿದುಬಂದಿದೆ.

ನುರಿತ ಪ್ಯಾರಾ ಕಮಾಂಡೊ

ತರಬೇತಿ ಪಡೆದ ಪ್ಯಾರಾ ಕಮಾಂಡೊ ಮೂಸಾ, ಅಸಾಂಪ್ರದಾಯಿಕ ಯುದ್ಧ ಮತ್ತು ರಹಸ್ಯ ಕಾರ್ಯಾಚರಣೆಗಳಲ್ಲಿ ಪರಿಣತನಾಗಿದ್ದಾನೆ. ಹಾಗಾಗಿ ಕಾಶ್ಮೀರದಲ್ಲಿ ಉಗ್ರ ಕಾರ್ಯಾಚರಣೆಗಳನ್ನು ಹೆಚ್ಚಿಸಲು ಎಲ್‌ಇಟಿಗೆ ನೆರವಾಗಲು ನುರಿತ ಯೋಧ ಮೂಸಾನನ್ನು ಕಳುಹಿಸಿಕೊಡುವಂತೆ ಸಂಘಟನೆ ಮುಖ್ಯಸ್ಥರು ಕೇಳಿದ್ದರಿಂದಲೇ ಆತನನ್ನು ಉಗ್ರ ಸಂಘಟನೆಗೆ ಸೇರಿಸಿರಬಹುದು ಎಂದು ಹೇಳಲಾಗಿದೆ. 2024ರ ಅಕ್ಟೋಬರ್ ದಾಳಿಯಲ್ಲಿ ಬೇರೆ ರಾಜ್ಯದ 6 ಕಾರ್ಮಿಕರು, ಒಬ್ಬ ವೈದ್ಯ, ಇಬ್ಬರು ಭಾರತೀಯ ಸೇನಾ ಸಿಬ್ಬಂದಿ ಮತ್ತು ಇಬ್ಬರು ಸೇನಾ ಪೋರ್ಟರ್‌ಗಳ ಹತ್ಯೆಯಾಗಿತ್ತು. ಈ ದಾಳಿಗಳಲ್ಲಿ ಮೂಸಾ ಕೂಡ ಭಾಗಿಯಾಗಿದ್ದಾನೆ. ಕಾಶ್ಮೀರದಲ್ಲಿನ ಹಲವು ಉಗ್ರ ದಾಳಿಗಳಲ್ಲಿ ಪಾಕಿಸ್ತಾನ ಸೇನೆ ಮತ್ತು ಗುಪ್ತಚರ ಸಂಸ್ಥೆ ಐಎಸ್‌ಐನ ಪಾತ್ರ ಇರುವುದು ಮೂಸಾನ ಭಾಗವಹಿಸುವಿಕೆಯಿಂದ ದೃಢಪಟ್ಟಿದೆ ಎಂದು ಎನ್‌ಐಎ ಮೂಲಗಳು ತಿಳಿಸಿವೆ.

ಭಯೋತ್ಪಾದನೆ ಉತ್ತೇಜಕ ರಕ್ಕಸ ರಾಷ್ಟ್ರ ಪಾಕ್

ವಿಶ್ವಸಂಸ್ಥೆಯಲ್ಲಿ ಗುಡುಗಿದ ಭಾರತದ ಪ್ರತಿನಿಧಿ

ವಿಶ್ವಸಂಸ್ಥೆ: ಪಹಲ್ಗಾಮ್ ಉಗ್ರ ದಾಳಿ ಬಳಿಕ ವಿಶ್ವಸಂಸ್ಥೆಯ ಸಭೆಯಲ್ಲಿ ಪಾಕಿಸ್ತಾನದ ವಿರುದ್ಧ ಭಾರತ ಗುಡುಗಿದೆ. ಭಯೋತ್ಪಾದನೆ ಉತ್ತೇಜಕ ರಕ್ಕಸ ರಾಷ್ಟ್ರ ಪಾಕ್ ಎಂದು ಮುಖಕ್ಕೇ ಹೊಡೆದಂತೆ ಮಾತನಾಡಿದೆ.

ಭಯೋತ್ಪಾದನಾ ನಿಗ್ರಹ ಕಚೇರಿಯ 'ವಿಕ್ಟಿಮ್ಸ್ ಆಫ್ ಟೆರರಿಸಂ ಅಸೋಸಿಯೇಷನ್ ನೆಟ್‌ವರ್ಕ್' ಕಾರ್ಯಕ್ರಮದಲ್ಲಿ ಮಾತನಾಡಿದ ವಿಶ್ವಸಂಸ್ಥೆಯಲ್ಲಿನ ಭಾರತದ ಕಾಯಂ ಉಪ ಪ್ರತಿನಿಧಿ, ರಾಯಭಾರಿ ಯೋಜನಾ ಪಟೇಲ್, ಭಯೋತ್ಪಾದಕರಿಗೆ ತರಬೇತಿ ಹಾಗೂ ಹಣಕಾಸಿನ ನೆರವನ್ನು ಹಲವು ವರ್ಷಗಳಿಂದಲೂ ತಾನು ನೀಡುತ್ತಿರುವುದಾಗಿ ಪಾಕಿಸ್ತಾನದ ರಕ್ಷಣಾ ಸಚಿವರೇ ಸಂದರ್ಶನದಲ್ಲಿ ಒಪ್ಪಿಕೊಂಡಿದ್ದಾರೆ. ಕಡೆಗೂ ಪಾಕಿಸ್ತಾನದ ನಿಜ ಬಣ್ಣ ಬಯಲಾಗಿದೆ. ದುಷ್ಟ ರಾಷ್ಟ್ರ ಪಾಕ್ ಜಾಗತಿಕವಾಗಿ ಭಯೋತ್ಪಾದನೆ ಹರಡುತ್ತಿದೆ ಎಂದು ಹಲವು ದೇಶಗಳ ಪ್ರತಿನಿಧಿಗಳ ಎದುರೇ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಪಾಕ್ ರಕ್ಷಣಾ ಸಚಿವ ಖ್ವಾಜಾ ಆಸಿಫ್ ಪಾಕಿಸ್ತಾನದ ಭಯೋತ್ಪಾದನೆ ಉತ್ತೇಜನದ ಇತಿಹಾಸ ಕುರಿತು ಮಾತನಾಡಿ ತಪ್ಪೊಪ್ಪಿಕೊಂಡಿದ್ದಾರೆ. ಅದನ್ನು ಜಗತ್ತು ನೋಡಿದೆ. ಇನ್ನು ಮುಂದೆ ಕಣ್ಣು ಮುಚ್ಚಿ ಕೊಂಡು ಇರಲು ಸಾಧ್ಯವಿಲ್ಲ ಎಂದು ಯೋಜನಾ ಪಟೇಲ್ ಹೇಳಿದ್ದಾರೆ. ಪಹಲ್ಗಾಮ್ ದಾಳಿ ಸಂತ್ರಸ್ತ ಭಾರತಕ್ಕೆ ಎಲ್ಲಾ ದೇಶಗಳು ಬೆಂಬಲವಾಗಿ ನಿಂತಿದ್ದಕ್ಕೆ, ಜತೆಗಿರುವ ಅಭಯ ನೀಡಿದ್ದಕ್ಕೆ ಜಾಗತಿಕ ಸಮುದಾಯಕ್ಕೆ ಧನ್ಯವಾದ ಅರ್ಪಿಸುವೆ ಎಂದರು.

ಭಾರತದಲ್ಲಿ ಷರಿಯಾ ಕೋರ್ಟ್‌ಗಿಲ್ಲ ಜಾಗ

ದೆಹಲಿ: ಕಾಝಿ ನ್ಯಾಯಾಲಯ, ದಾರುಲ್ ಕಾಜಾ ಕಜಿಯತ್ ನ್ಯಾಯಾಲಯ, ಷರಿಯಾ ನ್ಯಾಯಾಲಯ ಮೊದಲಾದವು ಹೆಸರು ಯಾವುದೇ ಇರಲಿ ಅವುಗಳಿಗೆ ದೇಶದ ಕಾನೂನಿನಲ್ಲಿ ಮಾನ್ಯತೆ ಇಲ್ಲ ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಸ್ಪಷ್ಟವಾಗಿ ಹೇಳಿದೆ.

ಮುಸಲ್ಮಾನ ಮಹಿಳೆಯೊಬ್ಬರು ಪರಿತ್ಯಕ್ತ ಪತಿಯಿಂದ ಜೀವನಾಂಶ ಕೋರಿ 'ಕ್ರಿಮಿನಲ್ ಪ್ರೊಸಿಜರಲ್ ಕೋಡ್'(ಸಿಆರ್ ಪಿಸಿ-ಅಪರಾಧ ಪ್ರಕ್ರಿಯ ಸಂಹಿತೆ) ಸೆಕ್ಷನ್ 125ರಡಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್‌ನ ನ್ಯಾ. ಸುಧಾಂಶು ಧುಲಿಯಾ ಮತ್ತು ನ್ಯಾ.ಅಹ್ಸಾನುದ್ದೀನ್ ಅಮಾನುಲ್ಲಾ ಅವರ ದ್ವಿಸದಸ್ಯ ಪೀಠ ಷರಿಯ ಮೊದಲಾದ ನ್ಯಾಯಾಲಯಗಳಿಗೆ ದೇಶದಲ್ಲಿ ಅಸ್ತಿತ್ವ ಇಲ್ಲ ಎಂದು ಹೇಳಿದೆ.

2010ರಲ್ಲಿ ಝಾನ್ಸಿಯಲ್ಲಿನ ಕೌಟುಂಬಿಕ ವ್ಯಾಜ್ಯಗಳ ನ್ಯಾಯಾಲಯ ಇಸ್ಲಾಂ ಧರ್ಮ ಮತ್ತು ಷರಿಯಾ ನ್ಯಾಯಾಲಯದ ಕ್ರಮ ಆಧರಿಸಿ ಪರಿತ್ಯಕ್ತ ಪತ್ನಿಗೆ ಜೀವನಾಂಶ ಕೊಡಿಸಲು ನಿರಾಕರಿಸಿತ್ತು. ಅಲ್ಲದೇ, ಆಕೆಯ ಇಬ್ಬರು ಮಕ್ಕಳಿಗೆ ಮಾಸಿಕ ಕೇವಲ 2,500 ರು. ಜೀವನಾಂಶ ನೀಡುವಂತೆ ಪರಿತ್ಯಕ್ತ ಪತಿಗೆ ಆದೇಶಿಸಿತ್ತು. ಈ ತೀರ್ಪಿನ ವಿರುದ್ಧ ಸಲ್ಲಿಸಿದ್ದ ಪರಿಷ್ಕರಣಾ ಅರ್ಜಿಯನ್ನು ಅಲಹಾಬಾದ್ ಹೈಕೋರ್ಟ್ 2018ರಲ್ಲಿ ವಜಾಗೊಳಿಸಿತ್ತು. ಹೈಕೋರ್ಟ್ ಕ್ರಮ ಪ್ರಶ್ನಿಸಿ ಮುಸ್ಲಿಂ ಮಹಿಳೆ ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದರು.

ಆಫ್ಘನ್ ಒಣಹಣ್ಣು ಪೂರೈಕೆ ಸ್ಥಗಿತ

ಚಂಡೀಗಢ: ಜಮ್ಮು-ಕಾಶ್ಮೀರದ ಪಹಲ್ಗಾಮ್‌ನಲ್ಲಿ ಏ.22ರಂದು ನಡೆದ ಭಯೋತ್ಪಾದನಾ ದಾಳಿ ನಂತರ ಭಾರತ-ಪಾಕಿಸ್ತಾನ ನಡುವೆ ಉದ್ವಿಗ್ನತೆ ಹೆಚ್ಚಿದೆ. ಪರಿಣಾಮ ಭಾರತ ಸರಕಾರ ಪಾಕ್ ಜತೆಗಿನ ವ್ಯಾಪಾರ ಸಂಬಂಧ ಕಡಿತಗೊಳಿಸಿದೆ. ಅಲ್ಲದೇ, ಅಟ್ಟಾರಿ-ವಾಘಾ ಗಡಿಯನ್ನು ಮುಚ್ಚಿದೆ. ಇದರಿಂದ ಅಫ್ಘಾನಿಸ್ತಾನದಿಂದ ಭಾರತಕ್ಕೆ ಒಣ ಹಣ್ಣುಗಳ ಪೂರೈಕೆ ಸ್ಥಗಿತಗೊಳ್ಳುವಂತಾಗಿದೆ ಎಂದು ಒಣಹಣ್ಣುಗಳ ವ್ಯಾಪಾರಿಗಳ ಸಂಘದ ರಾಷ್ಟ್ರೀಯ ಅಧ್ಯಕ್ಷ ಅನಿಲ್ ಮೆಹ್ರಾ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ. ಭಾರತದ ಮಾರುಕಟ್ಟೆಗೆ ರಸ್ತೆ ಮಾರ್ಗವಾಗಿ ಒಣಹಣ್ಣುಗಳ ಅತ್ಯಧಿಕ ಪ್ರಮಾಣದಲ್ಲಿ ಪೂರೈಕೆ ಆಗುವುದೇ ಅಫ್ಘಾನಿಸ್ತಾನದಿಂದ. ಈಗ ವಾಘಾ ಗಡಿ ಬಂದ್ ಆಗಿರುವುದರಿಂದ ರಸ್ತೆ ಮಾರ್ಗದಲ್ಲಿ ಒಣಹಣ್ಣು ಸರಬರಾಜು ಸ್ಥಗಿತಗೊಂಡಿದೆ. ಅಫ್ಘಾನಿಸ್ತಾನದ ಕಂದ ಹಾರ್‌ನಿಂದ ಅಟ್ಟಾರಿ ಗಡಿ ಮೂಲಕ ಟ್ರಕ್‌ಗಳು ಬರಲಾಗುತ್ತಿಲ್ಲ. ಸದ್ಯ ವಾಘಾ ಗಡಿಯಾಚೆ ಪಾಕಿಸ್ತಾನ ಭಾಗದಲ್ಲಿ ಆಫ್ಘನ್‌ನಿಂದ ಒಣಹಣ್ಣು ಹೊತ್ತು ತಂದಿರುವ 50 ಟ್ರಕ್‌ಗಳು ನಿಂತಿವೆ ಎಂದಿದ್ದಾರೆ. ಪರಿಣಾಮ ಭಾರತದ ಮಾರುಕಟ್ಟೆಯಲ್ಲಿ 'ಡ್ರೈಫ್ರೂಟ್ಸ್' ಧಾರಣೆ ಶೇ.10ರಿಂದ 25ರಷ್ಟು ಹೆಚ್ಚುವ ಸಾಧ್ಯತೆಯಿದೆ. ಕೆಜಿಗೆ 750ರಿಂದ 775 ರು. ಬೆಲೆ ಇದ್ದ ಬಾದಾಮಿ ಈಗ 850 ರು.ನಂತೆ ಮಾರಾಟವಾಗುತ್ತಿದೆ. ಕೆಜಿಗೆ 1,800ರಿಂದ 2,000 ರು.ನಷ್ಟಿದ್ದ ಪಿಸ್ತಾ ಬೆಲೆ ಶೇ. 15ರಷ್ಟು ಹೆಚ್ಚಾಗಿದೆ.

ಆಫ್ಘನ್ ಮತ್ತು ಪಾಕಿಸ್ತಾನ ಹೊರತುಪಡಿಸಿದರೆ ಒಣಹಣ್ಣುಗಳು ಯುಎಇ, ಇರಾನ್ ಮತ್ತು ಇರಾಕ್, ಸೌದಿ ಅರೇಬಿಯಾದಿಂದ ಭಾರತದ ಮಾರುಕಟ್ಟೆಗೆ ಬರುತ್ತವೆ ಎಂದು ಇನ್ನೊಬ್ಬ ಆಮದುದಾರರು ಹೇಳಿದ್ದಾರೆ.

ಗುಜರಾತ್ ಪ್ರವಾಸಿಗನ ಜಿಪ್‌ಲೈನ್ ಸವಾರಿ ವಿಡಿಯೊದಲ್ಲಿ ಬಹಿರಂಗ
ಆಪರೇಟರ್ ಮುಝಾಮಿಲ್‌ನನ್ನು ವಶಕ್ಕೆ ಪಡೆದು ಎನ್‌ಐಎ ತನಿಖೆ

ಪಹಲ್ಗಾಮ್ ದಾಳಿಗೆ ಸ್ಥಳೀಯರ ನೆರವು ದೃಢ

ದೆಹಲಿ: ಪಹಲ್ಗಾಮ್ ಭಯೋತ್ಪಾದಕ ದಾಳಿಯಲ್ಲಿ ಸ್ಥಳೀಯ ಕಾಶ್ಮೀರಿಗರ ಕೈವಾಡವೂ ಇರುವುದು ಖಚಿತವಾಗಿದೆ. ಪ್ರವಾಸಿಗನೊಬ್ಬನ ಜಿಪ್‌ಲೈನ್ ಸವಾರಿ ವಿಡಿಯೊ ಇದನ್ನು ದೃಢಪಡಿಸಿದೆ.

ಗುಜರಾತ್ ಮೂಲದ ಪ್ರವಾಸಿಗ ರಿಷಿ ಭಟ್‌ರನ್ನು ಜಿಪ್‌ಲೈನ್ ಸವಾರಿಗೆ ಕಳುಹಿಸಿದ ಆಪರೇಟರ್ 'ಅಲ್ಲಾಹು ಅಕ್ಬರ್' ಎಂದು 3 ಬಾರಿ ಪಠಣ ಮಾಡಿದ್ದಾನೆ. ಅದೇ ಕ್ಷಣವೇ ಉಗ್ರರ ಗುಂಡಿನ ದಾಳಿ ಕೇಳಿಬಂದಿದೆ. ಜಿಪ್‌ಲೈನ್‌ನಲ್ಲಿ ಸಾಗಿದ್ದಾಗಲೇ ರಿಷಿ ಭಟ್, ವಿಡಿಯೊ ಮಾಡುತ್ತಾ ಸಾಗಿದ್ದು, ಉಗ್ರರ ದಾಳಿಯ ಕೆಲ ಕ್ಷಣಗಳೂ ದಾಖಲಾಗಿವೆ. ಜಿಪ್‌ಲೈನ್ ಸವಾರಿ ಇನ್ನೊಂದು ತುದಿಯನ್ನು ತಲುಪುತ್ತಲೇ ಬೆಲ್ಟ್ ಕಳಚಿ ಜಿಗಿದಿರುವ ರಿಷಿ ಭಟ್, ಅಲ್ಲೇ ಇದ್ದ ಪತ್ನಿ ಮಗನನ್ನು ಕರೆದುಕೊಂಡು ಓಡಿ ಸಮೀಪದಲ್ಲೇ ಇದ್ದ ಹಳ್ಳವೊಂದರಲ್ಲಿ ಅಡಗಿ ಜೀವ ಉಳಿಸಿಕೊಂಡಿದ್ದಾರೆ.

ಗುಂಡಿನ ದಾಳಿ ನಡೆದ 25 ನಿಮಿಷಗಳಲ್ಲಿ ಭಾರತೀಯ ಸೇನೆಯ ಯೋಧರು ಧಾವಿಸಿ ಬಂದು ಉಳಿದ ಪ್ರವಾಸಿಗರನ್ನು ರಕ್ಷಿಸಿದ್ದಾರೆ ಎಂದು ರಿಷಿ ಭಟ್ ಹೇಳಿದ್ದಾರೆ.

ಕಾಶ್ಮೀರಿ ಜಿಪ್ ಲೈನ್ ಆಪರೇಟರ್ ನಡವಳಿಕೆ ಬಗ್ಗೆ ಅನುಮಾನ ವ್ಯಕ್ತಪಡಿಸಿರುವ ರಿಷಿ ಭಟ್, ನನಗೂ ಮುನ್ನ 9 ಮಂದಿ ಜಿಪ್‌ಲೈನ್ ಸವಾರಿ ಮಾಡಿದ್ದರು. ಆಗ ಕಾಶ್ಮೀರ ಆಪರೇಟರ್ ಮಾತೇ ಆಡಿರಲಿಲ್ಲ. ನನ್ನನ್ನು ಜಿಪ್‌ಲೈನ್ ಸವಾರಿಗೆ ದೂಡುವಾಗ ಮಾತ್ರ ಕಾಶ್ಮೀರಿ ನಿರ್ವಾಹಕ 3 ಬಾರಿ ಅಲ್ಲಾಹು ಅಕ್ಬರ್ ಎಂದು ಕೂಗಿದ. ಮರುಕ್ಷಣವೇ ಉಗ್ರರ ಗುಂಡಿನ ದಾಳಿ ಶುರುವಾಯಿತು ಎಂದು ಹೇಳಿದ್ದಾರೆ.

ತಮ್ಮೆದುರು ಇದ್ದ ಕುಟುಂಬವೊಂದನ್ನು ಉಗ್ರರು 'ಧರ್ಮ ಯಾವುದು' ಎಂದು ಪ್ರಶ್ನಿಸಿ ಬಳಿಕ ಗುಂಡಿಕ್ಕಿದರು ಎಂದು ನನ್ನ ಪತ್ನಿ ಮತ್ತು ಮಗ ನಂತರ ನನಗೆ ತಿಳಿಸಿದರು ಎಂದು ರಿಷಿ ಭಟ್ ಹೇಳಿದ್ದಾರೆ.

ಆಪರೇಟರ್ ಮುಝಾಮಿಲ್ ಎನ್‌ಐಎ ವಶಕ್ಕೆ

ಈ ವಿಡಿಯೊ ವೈರಲ್ ಆಗಿ, ರಿಷಿ ಭಟ ಸಂದರ್ಶನವೂ ಮಾಧ್ಯಮಗಳಲ್ಲಿ ಪ್ರಕಟವಾದ ನಂತರ 'ಎನ್‌ಐಎ' ತನಿಖಾಧಿಕಾರಿಗಳು 'ಜಿಪ್‌ಲೈನ್ ಆಪರೇಟರ್' ಮುಝಾಮಿಲ್‌ನನ್ನು ವಶಕ್ಕೆ ಪಡೆದುಕೊಂಡು ವಿಚಾರಣೆಗೆ ಒಳಪಡಿಸಿದ್ದಾರೆ. ಸದ್ಯ ಮುಝಾಮಿಲ್ 'ಎನ್‌ಐಎ' ಅಧಿಕಾರಿಗಳ ವಶದಲ್ಲಿದ್ದು, ತನಿಖೆ ಮುಂದುವರಿದಿದೆ. ಮುಝಾಮಿಲ್ 3-4 ವರ್ಷಗಳಿಂದಲೂ ಬೈಸರನ್‌ನ ಜಿಪ್‌ಲೈನ್‌ನಲ್ಲಿ ಕೆಲಸ ಮಾಡುತ್ತಿದ್ದಾನೆ. ಅವನೇನೂ ತಪ್ಪು ಮಾಡಿಲ್ಲ. ಗುಂಡಿನ ಸದ್ದು ಕೇಳುತ್ತಲೇ ಭಯಪಟ್ಟು ನೇರ ಮನೆಗೆ ಓಡಿಬಂದಿದ್ದ. ಮರು ದಿನ ಪೊಲೀಸರು ಅವನ್ನು ಕರೆದು ಪ್ರಶ್ನೆ ಮಾಡಿದ್ದರು. ಈಗ ಪ್ರವಾಸಿಯ ವಿಡಿಯೊ ಬಹಿರಂಗಗೊಂಡ ಬಳಿಕ ಪೊಲೀಸರು ಮನೆಗೇ ಬಂದು ಮುಝಾಮಿಲ್‌ನನ್ನು ಕರೆದೊಯ್ದರು. ನಾನೂ ಠಾಣೆಗೆ ಹೋಗಿದ್ದೆ. ಭೇಟಿಗೆ ಅವಕಾಶ ನೀಡಲಿಲ್ಲ. 'ಎನ್‌ಐಎ' ಅಧಿಕಾರಿಗಳು ಮುಝಾಮಿಲ್ ವಿಚಾರಣೆ ನಡೆಸಿದ್ದಾರೆಂದು ತಿಳಿಯಿತು ಎಂದು ಸೋದರ ಮುಖ್ತಾರ್ ಸುದ್ದಿಸಂಸ್ಥೆಗೆ ವಿವರಿಸಿದ್ದಾನೆ.

ನೀಲಿ ಟೋಪಿದಾರಿ ಪ್ರವಾಸಿಗ ರಿಷಿ ಭಟ್, ಹಿಂದೆ ನಿಂತಿರುವಾತ ಮುಝಾಮಿಲ್.

ಶಸ್ತ್ರಾಸ್ತ್ರ ಪೂರೈಕೆ ನಿಲ್ಲಿಸಿದ ಟರ್ಕಿ: ಪಾಕ್‌ಗೆ ಆಘಾತ

ಇಸ್ಲಾಮಾಬಾದ್: ಯುದ್ಧದ ಹೊಸ್ತಿಲಲ್ಲಿ ಇರುವ ಪಾಕಿಸ್ತಾನಕ್ಕೆ ಯಾವುದೇ ಶಸ್ತ್ರಾಸ್ತ್ರಗಳನ್ನು ಸರಬರಾಜು ಮಾಡಿಲ್ಲ ಎಂದು ಟರ್ಕಿ ಸ್ಪಷ್ಟವಾಗಿ ಹೇಳಿದೆ. ಇದರಿಂದ ಪಾಕ್‌ಗೆ ಆಘಾತವಾಗಿದೆ. ಟರ್ಕಿಯಲ್ಲಿ ಭೂಕಂಪ ಸಂಭವಿಸಿದಾಗ ಭಾರತ ಎಲ್ಲರಿಗಿಂತ ಮೊದಲಿಗನಾಗಿ ನೆರವು ಒದಗಿಸಿತ್ತು. ಆದರೆ ಭಾರತದ ರಕ್ತ ಹರಿಸಲು ಮತ್ತೊಂದು ಮುಸ್ಲಿಂ ರಾಷ್ಟ್ರವಾದ ಟರ್ಕಿ, ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರಗಳನ್ನು ಕಳುಹಿಸಿದೆ ಎನ್ನುವ ವರದಿ ಹರಿದಾಡಿತ್ತು. ಆದರೆ ಟರ್ಕಿ ಆ ವರದಿಗಳನ್ನು ಮಂಗಳವಾರ ನಿರಾಕರಿಸಿದೆ.

ಶಸ್ತ್ರಾಸ್ತ್ರಗಳನ್ನು ಹೊತ್ತ ಟರ್ಕಿಶ್ ವಾಯುಪಡೆಯ ಸಿ-130 ಹರ್ಕ್ಯುಲಸ್ ಮಿಲಿಟರಿ ಸಾರಿಗೆ ವಿಮಾನ ಭಾನುವಾರ ಕರಾಚಿಗೆ ಬಂದಿಳಿದಿತ್ತು ಎನ್ನಲಾಗಿತ್ತು. ಆದರೆ ಟರ್ಕಿಯಿಂದ ಹೊರಟ ಸರಕು ವಿಮಾನ ಇಂಧನ ತುಂಬಲು ಪಾಕಿಸ್ತಾನದಲ್ಲಿ ಇಳಿದಿತ್ತು ಅಷ್ಟೇ, ಊಹಾಪೋಹಗಳಿಗೂ ಕಿವಿಗೊಡಬೇಡಿ ಎಂದು ಟರ್ಕಿ ಸರಕಾರ ಸ್ಪಷ್ಟಪಡಿಸಿದೆ.

ವಿಶೇಷ ಅಧಿವೇಶನಕ್ಕಾಗಿ ಖರ್ಗೆ, ರಾಹುಲ್ ಪತ್ರ

ದೆಹಲಿ: ಜಮ್ಮು-ಕಾಶ್ಮೀರದ ಪಹಲ್ಗಾಮ್‌ನಲ್ಲಿ ಪಾಕಿಸ್ತಾನ ಮೂಲದ ಉಗ್ರರು ಏ.22ರಂದು ನಡೆಸಿದ ಭಯೋತ್ಪಾದ ದಾಳಿಗೆ ಸಂಬಂಧಿಸಿ ಭಾರತ ಸಮರ್ಪಕ ಕೈಗೊಳ್ಳಬೇಕಿದೆ. ಈ ದಿಶೆಯಲ್ಲಿ ಒಗ್ಗಟ್ಟು ಪ್ರದರ್ಶಿಸಲು ಸಂಸತ್ತಿನ ಉಭಯ ಸದನಗಳ ವಿಶೇಷ ಅಧಿವೇಶನವನ್ನು ಕರೆಯಬೇಕಿದೆ ಎಂದು ಆಗ್ರಹಿಸಿ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆಯಲ್ಲಿನ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಕೇಂದ್ರ ಸರಕಾರಕ್ಕೆ ಮಂಗಳವಾರ ಪತ್ರ ಬರೆದು ಒತ್ತಾಯಿಸಿದ್ದಾರೆ. ಭಯೋತ್ಪಾದಕ ದಾಳಿ ಬಗ್ಗೆ ಸಾಮೂಹಿಕ ಪ್ರತಿಕ್ರಿಯೆ ಆಲಿಸಲು ಎರಡೂ ಸದನಗಳ ವಿಶೇಷ ಅಧಿವೇಶನ ಕರೆಯುವ ಅಗತ್ಯವಿದೆ. ಸಂಸತ್ತು ಭಯೋತ್ಪಾದನೆ ವಿರುದ್ಧ ಒಗ್ಗಟ್ಟಿನ ಹೋರಾಟ ನಡೆಸಲು, ಬೆದರಿಕೆಗಳನ್ನು ಎದುರಿಸಲು, ದೇಶದ ಬಗ್ಗೆ ದೃಢ ಸಂಕಲ್ಪ ಪ್ರದರ್ಶಿಸಲು ವಿಶೇಷ ಅಧಿವೇಶನ ನೆರವಾಗುತ್ತದೆ ಎಂದು ಖರ್ಗೆ ಬರೆದಿದ್ದಾರೆ. ಇದೇ ವಿಚಾರವಾಗಿ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಅವರೂ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿದ್ದಾರೆ. ಈ ಸಂದಿಗ್ಧ ಸಮಯದಲ್ಲಿ ಏಕತೆಯ ಪ್ರದರ್ಶನ ಬಹಳ ಮುಖ್ಯ. ಹಾಗಾಗಿ ಆದಷ್ಟು ಬೇಗ ವಿಶೇಷ ಅಧಿವೇಶನ ಕರೆಯುವಂತೆ ಮನವಿ ಮಾಡಿದ್ದಾರೆ.

ಭಾರತದಲ್ಲಿ 55 ಸಾವಿರ ಪಾಕ್ ಪ್ರಜೆ!

ದೆಹಲಿ: ಭಾರತದಲ್ಲಿನ್ನೂ 55 ಸಾವಿರಕ್ಕೂ ಅಧಿಕ ಪಾಕ್ ಪ್ರಜೆಗಳು ನೆಲೆಸಿದ್ದಾರೆ ಎಂದು ಕೆಲವು ಅಂಕಿ ಅಂಶಗಳಿಂದ ತಿಳಿದುಬಂದಿದೆ.

ಈ 55,000 ಪಾಕ್ ಪ್ರಜೆಗಳು ದೀರ್ಘಾವಧಿ ವೀಸಾ ಹೊಂದಿದವರಾಗಿದ್ದಾರೆ. ಇವರಲ್ಲಿ 54 ಸಾವಿರ ಮಂದಿ ರಾಜಸ್ಥಾನ ರಾಜ್ಯವೊಂದರಲ್ಲೇ ನೆಲೆ ಕಂಡುಕೊಂಡಿದ್ದಾರೆ. ಈಗಾಗಲೇ ಅಲ್ಪಾವಧಿ ವೀಸಾ ಹೊಂದಿದ್ದವರನ್ನು ರಾಜ್ಯ ಸರಕಾರಗಳು ಹೊರಹಾಕಿವೆ. ಆದರೂ ದೇಶದಲ್ಲಿನ್ನೂ 55,000 ಪಾಕ್ ಪ್ರಜೆಗಳಿದ್ದಾರೆ ಎಂಬ ಅಂಕಿ ಅಂಶವೇ ಆಘಾತಕಾರಿಯಾಗಿದೆ.

ಪ್ರಧಾನಿ ನರೇಂದ್ರ ಮೋದಿ ಗಾಯಬ್ ಕಾಂಗ್ರೆಸ್ ಪೋಸ್ಟ್-ಪಾಕ್ ಖುಷ್

ದೆಹಲಿ: ಪಹಲ್ಗಾಮ್ ದಾಳಿ ನಡೆದಿರುವ ಸಂದರ್ಭ ಪ್ರಧಾನಿ ನರೇಂದ್ರ ಮೋದಿ, 'ಜವಾಬ್ದಾರಿ' ನಿರ್ವಹಿಸುವುದಕ್ಕೆ ಬದಲಾಗಿ 'ಗಾಯಬ್'(ಮಾಯ) ಆಗಿದ್ದಾರೆ ಎಂದು ಚಿತ್ರ ಸಮೇತ ವ್ಯಂಗ್ಯವಾಡಿರುವ ಕಾಂಗ್ರೆಸ್ ಪಕ್ಷ ವಿವಾದಾತ್ಮಕ 'ಎಕ್ಸ್' ಸಂದೇಶ ಹಂಚಿಕೊಂಡಿದೆ.

ಬಂದಗಲಾ ಕುರ್ತಾ, ಪೈಜಾಮಾ, ಕಪ್ಪು ಶೂ ಮಾತ್ರ ಕಾಣುವ, ವ್ಯಕ್ತಿ ಕಾಣದಂತಿರುವ ಚಿತ್ರವನ್ನು 'ಗಾಯಬ್' ಶೀರ್ಷಿಕೆಯೊಂದಿಗೆ ಕಾಂಗ್ರೆಸ್ ಹಂಚಿಕೊಂಡಿದೆ. ಈ ಚಿತ್ರದ ಶೈಲಿ ಪ್ರಧಾನಿ ಮೋದಿ ಅವರನ್ನು ಹೋಲುವಂತಿದೆ. ಕಾಂಗ್ರೆಸ್‌ನ ಈ ಪೋಸ್ಟ್ ಕಂಡು ಪಾಕಿಸ್ತಾನ ಬಹಳ ಖುಷಿಪಟ್ಟು ಪ್ರತಿಕ್ರಿಯಿಸಿದೆ. ಪಾಕ್‌ನ ಮಾಜಿ ಸಚಿವ ಫವಾದ್ ಹುಸೇನ್, 'ಕತ್ತೆಯ ತಲೆಯಿಂದ ಕೊಂಬುಗಳು ಕಾಣೆಯಾಗಿವೆ ಎಂಬುದನ್ನು ಕೇಳಿದ್ದೆ. ಆದರೆ ಇಲ್ಲಿ ಪ್ರಧಾನಿ ಮೋದಿಯೇ ಕಾಣೆಯಾಗಿದ್ದಾರೆ' ಎಂದು ಪ್ರತಿಕ್ರಿಯಿಸಿದ್ದಾರೆ. ಅಲ್ಲದೆ, 'ನಾಟಿ ಕಾಂಗ್ರೆಸ್' ಎಂದು ಹ್ಯಾಷ್‌ಟ್ಯಾಗ್ ಲಗತ್ತಿಸಿದ್ದಾರೆ. ಕಾಂಗ್ರೆಸ್‌ನ ಈ ಅಣಕ ಬಿಜೆಪಿ ಮತ್ತು ದೇಶದ ಜನರು ಸಿಟ್ಟಿಗೇಳುವಂತೆ ಮಾಡಿದೆ.

ಕಾಂಗ್ರೆಸ್ ಪೋಸ್ಟ್‌ಗೆ ಪ್ರತಿಯಾಗಿ ಬಿಜೆಪಿ ಕೂಡಾ ಛೀಮಾರಿ ಹಾಕುವ ಪೋಸ್ಟ್ ಮಾಡಿದೆ. ಸಿದ್ದರಾಮಯ್ಯ ಸೇರಿದಂತೆ ಕಾಂಗ್ರೆಸ್‌ನ ಕೆಲ ನಾಯಕರ ಫೋಟೊಗಳನ್ನು ಸೇರಿಸಿ, 'ಕಾಂಗ್ರೆಸ್ ಕೇ ಹಾತ್, ಪಾಕಿಸ್ತಾನ್ ಕೆ ಸಾಥ್'(ಕಾಂಗ್ರೆಸ್ ಕೈ ಪಾಕ್ ಜತೆ) ಎಂದು ಬರೆದು ಪೋಸ್ಟ್ ಮಾಡಿದೆ. ಕಾಂಗ್ರೆಸ್, ಪಾಕಿಸ್ತಾನದಂತೆ ಮಾತನಾಡುತ್ತಿದೆ. ಅದರ ನಾಯಕರ ಸಂಸ್ಕೃತಿ ಮತ್ತು ಪದ್ಧತಿ ಇಸ್ಲಾಮಾಬಾದ್‌ನವರಂತೆ ಇವೆ ಎಂದು ಬಿಜೆಪಿ ಐಟಿ ಸೆಲ್ ಮುಖ್ಯಸ್ಥ ಅಮಿತ್ ಮಾಳವೀಯ 'ಎಕ್ಸ್' ಸಂದೇಶದಲ್ಲಿ ಕುಟುಕಿದ್ದಾರೆ.

ಕಾಂಗ್ರೆಸ್ ನಾಯಕರು ಪಾಕಿಗಳ ಸ್ಲೀಪರ್ ಸೆಲ್‌ಗಳಂತೆ ವರ್ತಿಸುತ್ತಾ ಬೇಜವಾಬ್ದಾರಿಯ, ಖಂಡನೀಯ ಹೇಳಿಕೆಗಳನ್ನು ನೀಡುತ್ತಿದ್ದಾರೆ. 26 ಮಂದಿಯ ಸಾವಿನಲ್ಲೂ ಘನತೆ ಕಳೆದುಕೊಂಡಿದ್ದಾರೆ. ಕಾಂಗ್ರೆಸ್ ನಾಯಕರು ಉಷ್ಟ್ರಪಕ್ಷಿಯಂತೆ ತಮ್ಮ ತಲೆಯನ್ನು ಮರಳಿನಲ್ಲಿ ಹೂತುಕೊಂಡಿದ್ದಾರೆ ಎಂದು ಅಮಿತ್ ಟೀಕಿಸಿದ್ದಾರೆ.



ಕೆನಡಾ ಚುನಾವಣೆ ಗೆದ್ದ ಪ್ರಧಾನಿ ಮಾರ್ಕ್ ಕಾರ್ನಿ



ಟೊರಾಂಟೊ: ಕೆನಡಾ ದೇಶದ ಸಂಸತ್‌ಗೆ ನಡೆದ ಸಾರ್ವತ್ರಿಕ ಚುನಾವಣೆಯ ಫಲಿತಾಂಶ ಮಂಗಳವಾರ ಬೆಳಗ್ಗೆ ವೇಳೆಗೆ ಪೂರ್ಣ ಪ್ರಮಾಣದಲ್ಲಿ ಹೊರ ಬಿದ್ದಿದ್ದು, ಹಾಲಿ ಪ್ರಧಾನಿ ಮಾರ್ಕ್ ಕಾರ್ನಿ ಅವರ ನೇತೃತ್ವದ ಲಿಬರಲ್ ಪಕ್ಷ ಭರ್ಜರಿ ಗೆಲುವು ಸಾಧಿಸಿದೆ. ಪಿಯರೆ ಪೊಯ್ಲಿವ್ರೆ ನೇತೃತ್ವದ ಕನ್ಸರ್ವೇಟಿವ್ ಪಕ್ಷ ಸೋಲನುಭವಿಸಿದೆ.

ಮತ್ತೊಂದು ಅವಧಿಗೂ ಲಿಬರಲ್ ಪಕ್ಷದ ಆಡಳಿತವೇ ನಡೆಯಲಿದ್ದು, ಪ್ರಧಾನಿ ಹುದ್ದೆಯಲ್ಲಿ 60 ವರ್ಷದ ಹಿರಿಯ ಮಾರ್ಕ್ ಕಾರ್ನಿ ಮುಂದುವರಿಯಲಿದ್ದಾರೆ. ಮಾರ್ಕ್ ಕಾರ್ನಿ ಚುನಾವಣೆ ಸಂದರ್ಭದಲ್ಲೇ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಸುಂಕ ಸಮರಕ್ಕೆ ತಿರುಗೇಟು ನೀಡುವುದಾಗಿ ಹೇಳಿದ್ದರು. ಇದೀಗ ಅವರ ಗೆಲುವು ಅಮೆರಿಕ ಮತ್ತು ಕೆನಡಾ ನಡುವಿನ ಸಂಘರ್ಷ ಮತ್ತು ಪೈಪೋಟಿಯನ್ನು ಮತ್ತಷ್ಟು ಹೆಚ್ಚಿಸುವ ಸಾಧ್ಯತೆಯಿದೆ.

ಈ ಬಾರಿಯ ಚುನಾವಣೆಯಲ್ಲಿ ಖಲಿಸ್ತಾನ್ ಪರ ಹೋರಾಟಗಾರ ಜಗಮೀತ್ ಸಿಂಗ್ ಅವರ ಎನ್‌ಡಿಪಿ ಪಕ್ಷ ಸೋಲು ಅನುಭವಿಸಿದೆ. ಕಳೆದ ಚುನಾವಣೆಯಲ್ಲಿ 25 ಸ್ಥಾನಗಳಲ್ಲಿ ಗೆದ್ದಿದ್ದ ಎನ್‌ಡಿಪಿ, ಈ ಬಾರಿ ಏಕ ಅಂಕಿ ಸ್ಥಾನಗಳಿಗೇ ತೃಪ್ತಿಪಡಬೇಕಾಗಿ ಬಂದಿದೆ.

ಪ್ರಧಾನಿ ಅಭಿನಂದನೆ

ಸಂಸತ್ ಚುನಾವಣೆಯಲ್ಲಿ ಐತಿಹಾಸಿಕ ಗೆಲುವು ಸಾಧಿಸಿದ ಕೆನಡಾ ಪ್ರಧಾನಿ ಮಾರ್ಕ್ ಕಾರ್ನಿ ಅವರನ್ನು ಭಾರತದ ಪ್ರಧಾನಿ ನರೇಂದ್ರ ಮೋದಿ ಅಭಿನಂದಿಸಿದ್ದಾರೆ. ಒಟ್ಟಾವಾದ ವ್ಯಾಪಾರ ವೈವಿಧ್ಯೀಕರಣ ಯೋಜನೆಗಳನ್ನು ವೈವಿಧ್ಯಗೊಳಿಸುವ ತನ್ನ ಆಕಾಂಕ್ಷೆಗಳಲ್ಲಿ ಭಾರತ ಪ್ರಮುಖ ಪಾತ್ರ ವಹಿಸುತ್ತದೆ ಎಂದು ಚುನಾವಣೆ ಸಂದರ್ಭ ಹೇಳಿದ್ದ ಮಾರ್ಕ್ ಕಾರ್ನಿ, ಈ ಚುನಾವಣೆಯಲ್ಲಿ ಗೆದ್ದರೆ ಭಾರತದೊಂದಿಗೆ ಸಂಬಂಧಗಳನ್ನು ಗಟ್ಟಿಗೊಳಿಸುವುದಾಗಿ ಘೋಷಿಸಿದ್ದರು. ಖಲಿಸ್ತಾನಿ ಪರವಾಗಿದ್ದ ಹಿಂದಿನ ಪ್ರಧಾನಿ ಜಸ್ಟಿನ್ ಟ್ರುಡೊ ಅವಧಿಯಲ್ಲಿ ಭಾರತ-ಕೆನಡಾ ಸಂಬಂಧ ಪೂರ್ಣ ಹದಗೆಟ್ಟಿತ್ತು.

ಭಾರತವೇ ನನ್ನ ಮನೆ, ಪಾಕಿಸ್ತಾನಕ್ಕೆ ಹೋಗಲ್ಲ

ಲಖನೌ: ದೇಶ ತೊರೆಯಲು ಕೇಂದ್ರ ಸರಕಾರ ನೀಡಿದ್ದ ಗಡುವು ಮುಗಿದಿದ್ದರೂ ದೇಶದ ವಿವಿಧೆಡೆ ಸಾವಿರಾರು ಸಂಖ್ಯೆಯ ಪಾಕಿಸ್ತಾನಿ ಪ್ರಜೆಗಳು ಉಳಿದಿರುವುದು, ಪಾಕಿಸ್ತಾನಕ್ಕೆ ತೆರಳಲು ನಿರಾಕರಿಸುತ್ತಿರುವುದು ವರದಿಯಾಗಿದೆ. ಉತ್ತರ ಪ್ರದೇಶದ ಸರಕಾರ ಪಾಕ್ ಪ್ರಜೆಗಳನ್ನು ಹುಡುಕಿ ಗಡೀಪಾರು ಮಾಡಲು ಮುಂದಾಗಿರುವಾಗ, ಇಸ್ಲಾಮಾಬಾದ್ ಮೂಲದ, ಅಲ್ಪಾವಧಿ ವೀಸಾ ಹೊಂದಿರುವ ಮರಿಯಮ್, ನನ್ನ ಪತಿ ಭಾರತೀಯ. ನಾನು ಭಾರತದ ಸೊಸೆ. ಈಗ ಇದು ನನ್ನ ದೇಶ. ನನಗೆ ಇಲ್ಲಿಯೇ ಇರಲು ಇಷ್ಟ. ಪಾಕ್‌ಗೆ ಮರಳಲು ಇಷ್ಟವಿಲ್ಲ. ದಯಮಾಡಿ ಅವಕಾಶ ಮಾಡಿಕೊಡಿ ಎಂದು ಕೇಂದ್ರ ಸರಕಾರಕ್ಕೆ ಮಂಗಳವಾರ ಪತ್ರ ಬರೆದು ಮನವಿ ಮಾಡಿದ್ದಾರೆ.

ಮರಿಯಮ್ 3 ವರ್ಷಗಳ ಹಿಂದೆ ಬುಲಂದಶಹರ್ ಜಿಲ್ಲೆಯ ಖುರ್ಜಾ ನಿವಾಸಿ ಅಮೀರ್ ಎಂಬಾತನನ್ನು ವಿವಾಹವಾಗಿದ್ದು, ಎರಡು ತಿಂಗಳ ಹಿಂದೆ ಅಲ್ಪಾವಧಿ ವೀಸಾ ಪಡೆದು ಖುರ್ಜಾದಲ್ಲಿ ನೆಲೆಸಿದ್ದಾರೆ. ಈಗ ದೀರ್ಘಾವಧಿ ವೀಸಾಗೆ ಅರ್ಜಿ ಸಲ್ಲಿಸಿದ್ದಾರೆ.

ಮರಿಯಮ್ ಅರ್ಜಿ ಸಲ್ಲಿಸಿದ್ದಾರೆ. ಉನ್ನತ ಅಧಿಕಾರಿಗಳ ನಿರ್ದೇಶನದಂತೆ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಪೊಲೀಸ್ ವರಿಷ್ಠಾಧಿಕಾರಿ ತೇಜ್ವೀರ್ ಸಿಂಗ್ ಹೇಳಿದ್ದಾರೆ.

ಇತ್ತ ರಾಜಸ್ತಾನದಲ್ಲಿಯೂ ಅಂತಹುದೇ ಮತ್ತೊಂದು ಕಥೆ. ಅಮ್ಮ ಭಾರತೀಯಳು, ತಂದೆ ಪಾಕಿಸ್ತಾನಿ ಆಗಿರುವುದರಿಂದ ದಂಪತಿಯ ಮಗುವೂ ಪಾಕಿಸ್ತಾನ ಪ್ರಜೆ. ಹಾಗಾಗಿ ತಾಯಿ-ಮಗು ಬೇರ್ಪಡಬೇಕಾದ ಸಂದರ್ಭ ಎದುರಾಗಿದೆ. ಮಧ್ಯಪ್ರದೇಶದಲ್ಲಿಯೂ ಇಂತಹುದೇ (ತಂದೆಯರು ಪಾಕಿಸ್ತಾನಿ-ತಾಯಿ ಭಾರತದವರು) 9 ಮಕ್ಕಳ ಪ್ರಕರಣಗಳು ವರದಿಯಾಗಿವೆ.

ಇರಾನ್ ಸ್ಫೋಟ: 70 ಸಾವು



ಮಸ್ಕತ್: ಇರಾನ್‌ನ ಬಂದರು ನಗರವಾದ ಬಂದರ್ ಅಬ್ಬಾಸ್‌ನಲ್ಲಿನ ಶಾಹಿದ್ ರಜಯೀ ಬಂದರಿನಲ್ಲಿ ಶನಿವಾರ ಸಂಭವಿಸಿದ ಭಾರೀ ಸ್ಫೋಟ, ತರುವಾಯ ಬೆಂಕಿ ಅವಘಡದಲ್ಲಿ ಮೃತರಾದವರ ಸಂಖ್ಯೆ ಮಂಗಳವಾರದ ವೇಳೆಗೆ 70ಕ್ಕೆ ಮುಟ್ಟಿದೆ. 1000ಕ್ಕೂ ಅಧಿಕ ಮಂದಿ ಗಾಯಗೊಂಡಿದ್ದು, ವಿವಿಧ ಆಸ್ಪತ್ರೆಗಳಲ್ಲಿ ದಾಖಲಿಸಲಾಗಿದೆ. ಕೆಲವರ ಸ್ಥಿತಿ ಗಂಭೀರವಾಗಿದ್ದು, ಸಾವಿನ ಸಂಖ್ಯೆ ಇನ್ನೂ ಹೆಚ್ಚುವ ಸಾಧ್ಯತೆ ಇದೆ ಎನ್ನಲಾಗಿದೆ.

ಚೀನಾದಿಂದ ಹಡಗಿನಲ್ಲಿ ಬಂದಿದ್ದ ಇಂಧನ ದ್ರವ್ಯಗಳಿದ್ದ ಕಂಟೇನರ್‌ಗಳಲ್ಲಿಯೇ ಶನಿವಾರ ರಾತ್ರಿ ಭಾರೀ ಪ್ರಮಾಣದ ಸ್ಫೋಟವಾಗಿದೆ. ಪರಿಣಾಮ, ತೈಲೋತ್ಪನ್ನಗಳ ಸಂಗ್ರಹಾಗಾರಗಳು ಹೊತ್ತಿ ಉರಿಯಲಾರಂಭಿಸಿವೆ. ಬೃಹತ್ ಪ್ರಮಾಣದಲ್ಲಿದದ ಬೆಂಕಿಯನ್ನು ಸೋಮವಾರ ಪೂರ್ಣ ನಂದಿಸಲಾಗಿದೆ. ಬೆಂಕಿ ನಂದಿಸಲು ಹೆಲಿಕಾಪ್ಟರ್ ಫೈರ್‌ಫೈಟರ್‌ಗಳ ನೆರವನ್ನೂ ಪಡೆಯಲಾಗಿದೆ. ಚೀನಾದಿಂದ ಹಡಗಿನಲ್ಲಿ ಮಾರ್ಚ್ ತಿಂಗಳಲ್ಲಿ ರವಾನೆಯಾಗಿ ಇರಾನ್ ಬಂದರು ತಲುಪಿದ್ದ ಇಂಧನ ದ್ರವ್ಯಗಳ ಕಂಟೇನರ್‌ಗಳನ್ನು ಇರಾನ್ ಬಂದರಿನಲ್ಲಿ ಸಮರ್ಪಕವಾಗಿ ನಿರ್ವಹಣೆ ಮಾಡದೇ ಇದ್ದುದರಿಂದಲೇ ಸ್ಫೋಟವಾಗಿದೆ ಎಂದು ಹೇಳಲಾಗಿದೆ.

ಸಮಾಚಾರ ಸಣ್ಣದಲ್ಲ

ಹೊರನಾಡು ದೇಗುಲ ವರ್ಧಂತ್ಯುತ್ಸವ ಇಂದು

ಚಿಕ್ಕಮಗಳೂರು: ಅನ್ನಪೂರ್ಣೇಶ್ವರಿ ದೇವಸ್ಥಾನದ ಶ್ರೀ ವರ್ಧಂತ್ಯುತ್ಸವ ಕಾರ್ಯಕ್ರಮ ಬುಧವಾರ ಸಂಜೆ 7 ಗಂಟೆಗೆ ಶ್ರೀ ಕ್ಷೇತ್ರ ಹೊರನಾಡಿನ ಲಲಿತ ಕಲಾ ಮಂಟಪದಲ್ಲಿ ನಡೆಯಲಿದೆ. ಕಾರ್ಯಕ್ರಮದಲ್ಲಿ ಮಹಾಗಣಪತಿ ಹೋಮ, ಚಂಡಿಕಾ ಹೋಮ, ಲಲಿತಾ ಹೋಮ, ಲಕ್ಷ್ಮೀನಾರಾಯಣ ಹೃದಯ ಹೋಮ, ರಾಮತಾರಕ ಹೋಮ, ಅನ್ನಪೂರ್ಣ ಮೂಲ ಮಂತ್ರ ಹೋಮ, ಬಾಲಪತ್ರಿಪುರ ಸುಂದರಿ ಹೋಮ, ಗಾಯತ್ರಿ ಹೋಮ, ನವಗ್ರಹ ಹೋಮ, ರುದ್ರ ಹೋಮ, ವೇದ ಪಾರಾಯಣ ಹೋಮ ಸೇರಿದಂತೆ ವಿದುಷಿ ಅರ್ಪಿತಾ ಹೆಗಡೆ ಅವರಿಂದ ಭರತನಾಟ್ಯ ಪ್ರದರ್ಶನ ನಡೆಯಲಿದೆ. ಕಾರ್ಯಕ್ರಮದಲ್ಲಿ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಪ್ರಕಟಣೆಯಲ್ಲಿ ತಿಳಿಸಿದೆ.

ಕನ್ನಡ ವಿರೋಧಿ ನೌಕರರ ವಿರುದ್ಧ ಕ್ರಮ ಸ್ವಾಗತರ್ಹ

ಬೆಂಗಳೂರು: ಶೈಕ್ಷಣಿಕ ಕಾರ್ಯಕ್ರಮ ಆಹ್ವಾನ ಪತ್ರಿಕೆಯಲ್ಲಿ ಕನ್ನಡ ಕಡೆಗಣಿಸಿ ಆಂಗ್ಲ ಭಾಷೆಗೆ ಒತ್ತು ನೀಡಿದ, ಬೈಲಹೊಂಗಲ ಸರಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲರ ವಿರುದ್ಧ ಕಾಲೇಜು ಶಿಕ್ಷಣ ಇಲಾಖೆ ತೆಗೆದುಕೊಂಡಿರುವ ಶಿಸ್ತು ಕ್ರಮ ಸ್ವಾಗತಾರ್ಹ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಪುರುಷೋತ್ತಮ ಬಿಳಿಮಲೆ ತಿಳಿಸಿದ್ದಾರೆ. ಈ ಕುರಿತ ಪ್ರಕಟಣೆಯಲ್ಲಿ ಅವರು, ಕಾಲೇಜಿನ ಶೈಕ್ಷಣಿಕ ಕಾರ್ಯಕ್ರಮ ಆಹ್ವಾನ ಪತ್ರಿಕೆ ಕೇವಲ ಆಂಗ್ಲ ಭಾಷೆಯಲ್ಲಿರುವ ಕುರಿತಂತೆ ಕಾಲೇಜಿನ ಪ್ರಾಂಶುಪಾಲ ಬಿ.ಕೆ.ಮಡವಾಳ ಅವರನ್ನು ಪ್ರಾಧಿಕಾರ ಪ್ರಶ್ನಿಸಿದ ಸಂದರ್ಭದಲ್ಲಿ, ಇನ್ನೊಮ್ಮೆ ಕನ್ನಡದಲ್ಲಿಯೂ ಹೊರಡಿಸುತ್ತೇವೆ ಎನ್ನುವ ಹಾರಿಕೆ ಉತ್ತರ ನೀಡಿದ್ದರು. ಈ ವಿಷಯವನ್ನು ಕಾಲೇಜು ಶಿಕ್ಷಣ ಇಲಾಖೆ ಆಯುಕ್ತರ ಗಮನಕ್ಕೆ ತಂದು ಅವರ ವಿರುದ್ಧ ಕಠಿಣ ಕ್ರಮ ಕೈಗೊಂಡು ಈ ಬಗ್ಗೆ ಪ್ರಾಧಿಕಾರಕ್ಕೆ ಒಂದು ವಾರದೊಳಗಾಗಿ ತಿಳಿಸುವಂತೆ ಆಗ್ರಹಿಸಲಾಗಿತ್ತು.

ಎಸ್‌ಪಿ ಮೇಲೆ ಕೈ ಎತ್ತಿದ ಸಿಎಂ – ಸುದ್ದಿ
(ಜನಾಕ್ರೋಶ ಯಾತ್ರೆಯ ಸಮಾರಂಭ)



ಗುಂಡಿನ ದಾಳಿ ಬಳಿಕ ಇದೀಗ ಸೈಬರ್ ಆಕ್ರಮಣ

ದೆಹಲಿ: ಕಾಶ್ಮೀರದ ಪಹಲ್ಗಾಮ್‌ನಲ್ಲಿ ದಾಳಿ ನಡೆಸಿ 26 ಉಗ್ರರನ್ನು ಹತ್ಯೆ ಮಾಡುವ ಮೂಲಕ ಕಣಿವೆ ರಾಜ್ಯ ಜಮ್ಮು ಮತ್ತು ಕಾಶ್ಮೀರದಲ್ಲಿ ಶಾಂತಿ ಕದಡಿದ ಪಾಕಿಸ್ತಾನಿ ಮೂಲದ ಉಗ್ರರಿಗೆ ಭಾರತ ದಿಟ್ಟ ಉತ್ತರ ನೀಡಿದೆ. ಸಿಂಧೂ ನದಿ ನೀರು ಒಪ್ಪಂದ ರದ್ದು, ತಾತ್ಕಾಲಿಕ ವೀಸಾ ಅಮಾನತು ಸೇರಿದಂತೆ ಹಲವು ಕ್ರಮಗಳನ್ನು ಕೈಗೊಂಡಿದೆ. ಇಷ್ಟಾದರೂ ಬುದ್ಧಿ ಕಲಿಯದ ಪಾಕಿಸ್ತಾನ ಇದೀಗ ಸೈಬರ್ ದಾಳಿಗೆ ಮುಂದಾಗಿದೆ. ಆರ್ಮಿ ಪಬ್ಲಿಕ್ ಸ್ಕೂಲ್ ಸೇರಿದಂತೆ ಹಲವು ಭಾರತೀಯ ವೆಬ್‌ಸೈಟ್‌ಗಳನ್ನು ಪಾಕಿಸ್ತಾನದ ಹ್ಯಾಕರ್‌ಗಳು ಹ್ಯಾಕ್ ಮಾಡಿದ್ದಾರೆ.

ಶ್ರೀನಗರದ ಆರ್ಮಿ ಪಬ್ಲಿಕ್ ಸ್ಕೂಲ್, ಉತ್ತರಾಖಂಡದ ರಾಣಿಖೇತ್‌ನ ಎಪಿಎಸ್, ಆರ್ಮಿ ವೆಲ್‌ಫೇರ್ ಹೌಸಿಂಗ್ ಆರ್ಗೈನೇಷನ್ ಡಾಟಾಬೇಸ್ ಮತ್ತು ಇಂಡಿಯನ್ ಏರ್ ಫೋರ್ಸ್ ಪ್ಲೇಸ್‌ಮೆಂಟ್ ಆರ್ಗೈನೇಷನ್ ವೆಬ್‌ಸೈಟ್ ಅನ್ನು ಹ್ಯಾಕ್ ಮಾಡಲಾಗಿದೆ. ಐಒಕೆ ಹ್ಯಾಕರ್ (IOK Hacker) ಹೆಸರಿನ ಹ್ಯಾಕರ್‌ಗಳು ಈ ವೆಬ್‌ಸೈಟ್ ಮೇಲೆ ದಾಳಿ ನಡೆಸಿವೆ.

ಶ್ರೀನಗರದ ಎಪಿಎಸ್ ವೆಬ್‌ಸೈಟ್ ಅನ್ನು ನಿಷ್ಕ್ರಿಯಗೊಳಿಸುವ ಉದ್ದೇಶದೊಂದಿಗೆ ಆರಂಭವಾದ ಈ ದಾಳಿ ಸೇವೆಗಳಿಗೆ ಅಡ್ಡಿಪಡಿಸುವ ಮತ್ತು ವೈಯಕ್ತಿಕ ಮಾಹಿತಿಗೂ ಕನ್ನ ಹಾಕಲು ಮುಂದಾಗಿತ್ತು ಎಂದು ಮೂಲಗಳು ತಿಳಿಸಿವೆ.

ಹ್ಯಾಕ್ ಆದ ರಾಣಿಖೇತ್ ಎಪಿಎಸ್ ವೆಬ್‌ಸೈಟ್ ಪೇಜ್‌ನ ಮಧ್ಯದಲ್ಲಿ ಪಾಕ್ ಧ್ವಜ ಕಾಣಿಸಿಕೊಂಡಿದ್ದು, ಸೈಟ್ ಹ್ಯಾಕ್ ಆಗಿದೆ ಎನ್ನುವ ಸಂದೇಶ ಮೂಡಿದೆ. ಜತೆಗೆ ಕಾಶ್ಮೀರದ ಕುರಿತಾಗಿ ಪ್ರಚೋದನಕಾರಿ ಹೇಳಿಕೆಯನ್ನೂ ಇದು ಒಳಗೊಂಡಿದೆ. ಪೇಜ್‌ನ ಕೊನೆಯಲ್ಲಿ ಮಾಸ್ಕ್ ಧರಿಸಿದ ವ್ಯಕ್ತಿಯೊಬ್ಬ ಬೊಟ್ಟು ಮಾಡಿ ತೋರಿಸುವ ಚಿತ್ರವಿದೆ. ಅದರ ಕೆಳಗೆ ಹ್ಯಾಕ್ಡ್ ಬೈ ಐಒಕೆ ಹ್ಯಾಕರ್ಸ್ ಎಂದು ಬರೆಯಲಾಗಿದೆ.

'ಇಂಡಿಯನ್ ಆರ್ಮಿ ಹೌಸಿಂಗ್ ಸೊಸೈಟಿಯ ಸಂಪೂರ್ಣ ಮಾಹಿತಿ ಸೋರಿಕೆಯಾಗಿದೆ. ನಿಮ್ಮ ಮನೆ ವಿಳಾಸ ಇದೀಗ ನಮ್ಮ ಬಳಿ ಇದೆ' ಎನ್ನುವ ಸಂದೇಶದೊಂದಿಗೆ ಪಾಕ್ ಧ್ವಜ, ಮಾಸ್ಕ್ ಧರಿಸಿದ ಹ್ಯಾಕರ್ಸ್‌ನ ಚಿತ್ರ ಕಾಣಿಸಿಕೊಂಡಿದೆ.

ಭಾರತದ ಸೈಬರ್ ಭದ್ರತಾ ಸಂಸ್ಥೆಗಳು ಪಾಕಿಸ್ತಾನದ ಈ ಪ್ರಯತ್ನವನ್ನು ಶೀಘ್ರದಲ್ಲೇ ಪತ್ತೆ ಹಚ್ಚಿ ಸಮಸ್ಯೆ ನಿವಾರಿಸಿವೆ. ಸೈಬರ್ ದಾಳಿಗೆ ಒಳಗಾದ ಎಲ್ಲ ವೆಬ್ ಸೈಟ್‌ಗಳನ್ನು ಪ್ರತ್ಯೇಕಿಸಲಾಗಿದ್ದು, ಮರು ಸ್ಥಾಪಿಸಲಾಗಿದೆ ಎಂದು ಮೂಲಗಳು ತಿಳಿಸಿವೆ. 'ಭಾರತೀಯ ಸೇನೆ ತನ್ನ ಸೈಬರ್ ಭದ್ರತೆಯನ್ನು ಬಲಪಡಿಸಲು ಮುಂದಾಗಿದೆ. ಆ ಮೂಲಕ ಮಾಹಿತಿಯನ್ನು ಸಂರಕ್ಷಿಸುತ್ತಿದೆ. ವೈಯಕ್ತಿಕ ಮಾಹಿತಿ ಸೋರಿಕೆಯಾಗದಂತೆ ನೋಡಿಕೊಳ್ಳುತ್ತಿದೆ' ಎಂದು ಅಧಿಕಾರಿಯೊಬ್ಬರು ವಿವರಿಸಿದ್ದಾರೆ.

ಕಳೆದ ವಾರ ಟೀಮ್ ಇನ್‌ಸ್ಯಾನ್ ಪಿಕೆ (Team Insane PK) ಹೆಸರಿನ ಪಾಕಿಸ್ತಾನ ಮೂಲದ ಹ್ಯಾಕರ್ಸ್ ಗುಂಪೊಂದು ಆರ್ಮಿ ವೆಲ್‌ಫೇರ್ ಎಜುಕೇಷನ್ ಸೊಸೈಟಿ ನಡೆಸುವ ಆರ್ಮಿ ಕಾಲೇಜ್ ಆಫ್ ನರ್ಸಿಂಗ್‌ನ ವೆಬ್‌ಸೈಟ್ ಅನ್ನು ಹ್ಯಾಕ್ ಮಾಡಿತ್ತು. ಪ್ರಚೋದನಕಾರಿ ಸಂದೇಶವನ್ನೂ ಇದು ಹಂಚಿಕೊಂಡಿತ್ತು. ಜತೆಗೆ ರಾಜಸ್ಥಾನದ ಸರ್ಕಾರಿ ಮೂಲದ ವೆಬ್‌ಸೈಟ್ ಅನ್ನೂ ಪಾಕಿಸ್ತಾನ ಹ್ಯಾಕ್ ಮಾಡಿತ್ತು.

ಸ್ವಿಸ್ ಮೂಲದ ಮೇಲ್ ನಿರ್ಬಂಧಕ್ಕೆ ಹೈಕೋರ್ಟ್ ಆದೇಶ

ಬೆಂಗಳೂರು: ಭಾರತದಲ್ಲಿ ಸ್ವಿಟ್ಜರ್ಲೆಂಡ್ ಮೂಲದ ಪ್ರೋಟಾನ್ ಮೇಲ್ ಕಾರ್ಯಾಚರಣೆಯನ್ನು ನಿರ್ಬಂಧಿಸಲು ಕ್ರಮ ಕೈಗೊಳ್ಳುವಂತೆ ರಾಜ್ಯ ಹೈಕೋರ್ಟ್ ಮಂಗಳವಾರ ಕೇಂದ್ರಕ್ಕೆ ಸೂಚಿಸಿದೆ. ಈ ಸಂಬಂಧ ಎಂ.ಮೋಸರ್ ಡಿಸೈನ್ ಅಸೋಸಿಯೇಟ್ಸ್ ಆಫ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ನೇತೃತ್ವದ ಪೀಠ ಈ ಆದೇಶ ನೀಡಿದೆ.

ಪ್ರೋಟಾನ್ ಮೇಲ್ ಬಳಸುವ ತನ್ನ ಉದ್ಯೋಗಿಗಳು ಮತ್ತು ಗ್ರಾಹಕರಿಗೆ ಅಶ್ಲೀಲ ಇಮೇಲ್ ಸಂದೇಶಗಳನ್ನು ಕಳುಹಿಸಿದ ನಂತರ ಕಂಪನಿ ಹೈಕೋರ್ಟ್ ಮೆಟ್ಟಿಲೇರಿತ್ತು. ಅರ್ಜಿದಾರರು ಪ್ರೋಟಾನ್ ಮೇಲ್‌ನ ಮುಂದುವರಿದ ಕಾರ್ಯಾಚರಣೆಯ ಬಗ್ಗೆ ಕಳವಳ ವ್ಯಕ್ತಪಡಿಸಿದರು. ದೇಶದಲ್ಲಿ ಅದನ್ನು ನಿರ್ಬಂಧಿಸಲು ನ್ಯಾಯಾಲಯದ ಮುಂದೆ ಮನವಿ ಮಾಡಿದರು.

ಆಕ್ಷೇಪಾರ್ಹ ಮೇಲ್‌ಗಳನ್ನು ಕಳುಹಿಸುವವರ ಬಗ್ಗೆ ಪೊಲೀಸ್ ಇಲಾಖೆಗೆ ವಿವರಗಳನ್ನು ನೀಡಲು ಪ್ರೋಟಾನ್ ಮೇಲ್ ನಿರಾಕರಿಸುತ್ತಿದೆ. ಈ ಹಿನ್ನೆಲೆಯಲ್ಲಿ ಪೊಲೀಸ್ ತನಿಖೆಯಲ್ಲೂ ಪ್ರಗತಿ ಆಗಿಲ್ಲ ಎಂದು ವಕೀಲರು ನ್ಯಾಯಾಲಯಕ್ಕೆ ಸಲ್ಲಿಸಿದರು. ಪ್ರೋಟಾನ್ ಮೇಲ್ ತನ್ನ ಸರ್ವರ್‌ಗಳನ್ನು ಭಾರತದಿಂದ ತೆಗೆದುಹಾಕಿದ್ದು, ಇತ್ತೀಚಿನ ಪ್ರೋಟಾನ್ ಮೇಲ್ ಖಾತೆಗಳಿಂದ ಶಾಲೆಗಳಿಗೆ ಬಾಂಬ್ ಬೆದರಿಕೆಗಳನ್ನು ಕಳುಹಿಸಲಾಗಿದೆ. ಇದು ರಾಷ್ಟ್ರದ ಭದ್ರತೆಗೆ ಬೆದರಿಕೆ ಎಂದು ವಕೀಲರು ಒತ್ತಿ ಹೇಳಿದರು.

ಭಾರತೀಯ ಏಜೆನ್ಸಿಗಳ ಮೇಲ್ವಿಚಾರಣೆಯಿಂದ ತಪ್ಪಿಸಿಕೊಳ್ಳುವುದು ಹೇಗೆ ಎಂಬುದರ ಕುರಿತು ಪ್ರೋಟಾನ್ ಮೇಲ್ ಬಳಕೆದಾರರಿಗೆ ಸೂಚನೆಗಳನ್ನು ನೀಡುತ್ತದೆ. ಪ್ರೋಟಾನ್ ಇಮೇಲ್ ಐಡಿಯನ್ನು ರಚಿಸಲು ಕೇವಲ 30 ಸೆಕೆಂಡುಗಳನ್ನು ತೆಗೆದುಕೊಳ್ಳುತ್ತದೆ. ಯಾವುದೇ ರೀತಿಯ ಪರಿಶೀಲನೆಗಳಿಲ್ಲದೆ ಇದನ್ನು ಮಾಡಲಾಗುತ್ತದೆ ಎಂದು ವಕೀಲರು ನ್ಯಾಯಪೀಠದ ಮುಂದೆ ಹೇಳಿದರು. ಮಾಹಿತಿ ತಂತ್ರಜ್ಞಾನ ಕಾಯ್ದೆಯ ಸೆಕ್ಷನ್ 69ಅ ಅಡಿಯಲ್ಲಿ ಪ್ರೋಟಾನ್ ಮೇಲ್ ಅನ್ನು ನಿರ್ಬಂಧಿಸಲು ಕ್ರಮ ಕೈಗೊಳ್ಳುವಂತೆ ಕೇಂದ್ರ ಸರ್ಕಾರದ ಏಜೆನ್ಸಿಗಳಿಗೆ ನ್ಯಾಯಾಲಯ ನಿರ್ದೇಶನ ನೀಡಿದೆ.

ಬೆಂಗಳೂರು ಮೂಲದ ಸೈಬರ್ ಭದ್ರತಾ ಸಂಸ್ಥೆ ಕ್ಲೌಡ್ಸೆಕ್ ತನಿಖೆಯಲ್ಲಿ ಬಹಿರಂಗ

ಜಲಮಂಡಳಿ ಗ್ರಾಹಕರ ಮಾಹಿತಿ ಸೋರಿಕೆ

ಬೆಂಗಳೂರು: ಬೆಂಗಳೂರು ಜಲಮಂಡಳಿಗೆ ನೀರಿನ ಸಂಪರ್ಕಕ್ಕಾಗಿ ಅರ್ಜಿ ಸಲ್ಲಿಸಿರುವ ಗ್ರಾಹಕರ ಮಾಹಿತಿಗಳು ಸೋರಿಕೆಯಾಗಿರುವ ಮಾಹಿತಿಯು ಬೆಳಕಿಗೆ ಬಂದಿದೆ.

ಸುಮಾರು 2.90ಲಕ್ಷಕ್ಕೂ ಅಧಿಕ ಗ್ರಾಹಕರ ಪ್ಯಾನ್ ಕಾರ್ಡ್, ಆಧಾರ್ ಸಂಖ್ಯೆ, ಪಾವತಿ ಡೇಟಾ, ಮೊಬೈಲ್ ಸಂಖ್ಯೆ ಸೇರಿದಂತೆ ಬಹುತೇಕ ಮಾಹಿತಿಗಳು ಸೋರಿಕೆಯಾಗಿದ್ದು, ಇ –ದಾಖಲೆಗಳನ್ನು 500 ಡಾಲರ್‌ಗಳಿಗೆ ಮಾರಾಟಕ್ಕೆ ಇಡಲಾಗಿತ್ತು ಎಂದು ವರದಿಯಾಗಿದೆ.

ಬೆಂಗಳೂರು ಮೂಲದ ಸೈಬರ್ ಭದ್ರತಾ ಸಂಸ್ಥೆಯಾದ ಕ್ಲೌಡ್ಸೆಕ್ ನಡೆಸಿದ ತನಿಖೆಯಲ್ಲಿ ಈ ವಿಚಾರ ಬೆಳಕಿಗೆ ಬಂದಿದ್ದು, ಡಾರ್ಕ್ ವೆಬ್‌ನ್ನು ಆಗಾಗ ಮೇಲ್ವಿಚಾರಣೆ ಮಾಡುತ್ತಿರುತ್ತದೆ. ಈ ತಂಡವು ತಮಗೆ ಸಿಕ್ಕಿರುವ ಮಾಹಿತಿಯನ್ನು ಜಲಮಂಡಳಿ ಅಧ್ಯಕ್ಷರು ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿಶೇಷ ಕರ್ತವ್ಯಾಧಿಕಾರಿಗೆ ಮಾಹಿತಿ ನೀಡಿದೆ. ಏ.10ರಂದು ಕ್ಲೌಡ್ಸೆಕ್ ಜಲಮಂಡಳಿಯ ಡೇಟಾಬೇಸ್‌ಗೆ ನೇರ ಪ್ರವೇಶ ಇರುವುದನ್ನು ಹಾಗೂ ಬ್ರೀಚ್ ಫೋರಮ್‌ನಲ್ಲಿ ಮಾರಾಟ ಮಾಡುತ್ತಿರುವುದನ್ನು ಪತ್ತೆ ಹಚ್ಚಿದ್ದು, ಜಲಮಂಡಳಿ ಡೇಟಾಬೇಸ್‌ಗೆ ಪ್ರವೇಶಿಸಲು 500 ಡಾಲರ್ ಪಾವತಿಸಬೇಕು ಎಂದು ಮೊತ್ತ ಕೂಡ ನಿಗದಿಪಡಿಸಲಾಗಿತ್ತು ಎಂಬುದು ಇದೀಗ ಬಯಲಾಗಿದೆ.

> ಈ ವಿಚಾರ ಸಂಬಂಧ ಕ್ರಮ ಕೈಗೊಳ್ಳಲಾಗುವುದು. ನಾವು ಸೈಬರ್ ಕ್ರೈಂ ಪೊಲೀಸರಲ್ಲಿ ಪ್ರಕರಣ ದಾಖಲಿಸುತ್ತೇವೆ. ಒಂದು ವೇಳೆ ನಿಜವಾಗಿಯೂ ಉಲ್ಲಂಘನೆಯಾಗಿದ್ದರೆ, ನಾವು ಅದರ ಮೂಲವನ್ನು ಪತ್ತೆ ಹಚ್ಚುತ್ತೇವೆ. ಭವಿಷ್ಯದಲ್ಲಿ ಈ ರೀತಿ ಮತ್ತೆ ನಡೆಯದಂತೆ, ಇದಕ್ಕೆ ಪರಿಹಾರ ಕಂಡುಹಿಡಿಯಲು ನಮ್ಮ ತಾಂತ್ರಿಕ ತಂಡದ ಮೂಲಕ ಡೇಟಾವನ್ನು ರಕ್ಷಿಸಲು ಪ್ರಯತ್ನಿಸುತ್ತೇವೆ.
>
> **-ರಾಮ್ ಪ್ರಸಾತ್ ಮನೋಹರ್,** ಜಲಮಂಡಳಿ ಅಧ್ಯಕ್ಷ

ಡೇಟಾಬೇಸ್‌ನಲ್ಲಿ 2,91,212 ಬಳಕೆದಾರರ ದಾಖಲೆಗಳಿದ್ದು, ಈ ಡೇಟಾ ಬಳಕೆದಾರರ ಪಾಸ್‌ವರ್ಡ್‌ಗಳನ್ನು ಹೊಂದಿಲ್ಲ. ಪೋಸ್ಟ್ ಮಾದರಿಯಲ್ಲಿ ಡೇಟಾದ ಕೆಲವು ಸಾಲುಗಳನ್ನು ಒಳಗೊಂಡಿತ್ತು. ಡೇಟಾ ಡಂಪ್ ಹೊರತುಪಡಿಸಿ, ನೇರ ರೂಟ್ ಪ್ರವೇಶವು ಖರೀದಿದಾರರಿಗೆ ಜಲಮಂಡಳಿಯ ನಿರ್ಣಾಯಕ ಕಾರ್ಯಾಚರಣೆಯ ಡೇಟಾವನ್ನು ತಿದ್ದಲು ಅಥವಾ ಅಳಿಸಲು ಅನುವು ಮಾಡಿಕೊಡುತ್ತದೆ ಎಂದು ಪತ್ತೆ ಹಚ್ಚಿದೆ.

ಸೈಬರ್ ವಂಚಕರು ಸಾರ್ವಜನಿಕವಾಗಿ ಪ್ರವೇಶಿಸ ಬಹುದಾದ ಫೈಲ್‌ನಲ್ಲಿ ಡೇಟಾಬೇಸ್ ಬಳಸಿಕೊಳ್ಳುವ ಮೂಲಕ 2,90,000ಕ್ಕೂ ಹೆಚ್ಚು ಬಳಕೆದಾರರ ದಾಖಲೆಗಳನ್ನು ಒಳಗೊಂಡಿರುವ ಜಲಮಂಡಳಿ ಡೇಟಾಬೇಸ್‌ಗೆ ಅನಧಿಕೃತ ಪ್ರವೇಶ ಪಡೆದಿದ್ದಾನೆ ಎಂದು ಕಂಡುಹಿಡಿದಿದೆ.

ಆದರೆ ಜಲಮಂಡಳಿಯು ಎಲ್ಲ ಡೇಟಾ ಸುರಕ್ಷಿತವಾಗಿದೆ, ಅಗತ್ಯವಿರುವ ಭದ್ರತಾ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಎಂದು ಜಲಮಂಡಳಿಯ ಅಧಿಕಾರಿಗಳು ಹೇಳಿದ್ದಾರೆ. ಸಂಪೂರ್ಣ ಬಿಲ್ಲಿಂಗ್ ಡೇಟಾವನ್ನು ರಾಜ್ಯ ಸರಕಾರ ನಿರ್ವಹಿಸುವ ರಾಜ್ಯ ಡೇಟಾ ಕೇಂದ್ರದಲ್ಲಿ ಸಂಗ್ರಹಿಸಲಾಗಿದೆ. ಇದನ್ನು ದಿನದ 24 ಗಂಟೆಯೂ ಮೇಲ್ವಿಚಾರಣೆ ನಡೆಸಲು ಹೆಚ್ಚಿನ ಭದ್ರತಾ ವ್ಯವಸ್ಥೆ ಇದೆ. ಬಿಲ್ಲಿಂಗ್ ಡೇಟಾದ ಉಲ್ಲಂಘನೆಯು ಅಸಾಧ್ಯ ಎಂದು ಹೇಳಿದೆ.

ರಾಜ್ಯ ನಾಯಕರಿಗೆ ದೆಹಲಿ ನಾಯಕರಿಂದ ಸ್ಪಷ್ಟ ಸೂಚನೆ

ಉಗ್ರರ ವಿಷಯದಲ್ಲಿ ಬಹಿರಂಗ ಹೇಳಿಕೆ ಬೇಡ

ಬೆಂಗಳೂರು: ಪಹಲ್ಗಾಮ್ ಉಗ್ರರ ದಾಳಿ ವಿಷಯದಲ್ಲಿ ರಾಜ್ಯ ಕಾಂಗ್ರೆಸ್ ನಾಯಕರು ದಿನಕ್ಕೊಂದು ಹೇಳಿಕೆಯ ಮೂಲಕ 'ವಿವಾದ' ಮೈಮೇಲೆ ಎಳೆದುಕೊಳ್ಳುತ್ತಿರುವ ಬೆನ್ನಲ್ಲೇ, ಉಗ್ರರ ದಾಳಿಯ ವಿಷಯದಲ್ಲಿ ಯಾರೂ ಬಹಿರಂಗ ಹೇಳಿಕೆ ನೀಡಬೇಡಿ ಎನ್ನುವ ಸೂಚನೆಯನ್ನು ಹೈಕಮಾಂಡ್ ನೀಡಿದೆ.

ಕೇಂದ್ರ ಸರಕಾರ ಅಥವಾ ಬಿಜೆಪಿಯನ್ನು ವಿರೋಧಿಸುವ ಭರದಲ್ಲಿ ದೇಶದ ಭದ್ರತೆಯನ್ನು ಹಾಗೂ ಭದ್ರತಾ ಸಿಬ್ಬಂದಿಯನ್ನು ಅವಮಾನಿ ಸುವ ರೀತಿಯಲ್ಲಿ ಮಾತನಾಡುತ್ತಿರುವುದು ಪಕ್ಷದ ವರ್ಚಸ್ಸಿಗೆ ಧಕ್ಕೆಯಾಗುತ್ತಿರು ವುದರಿಂದ, ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ರಾಜ್ಯ ನಾಯಕರಿಗೆ ಪಹ ಲ್ಗಾಮ್ ವಿಷಯ ಮಾತನಾಡುವ ಮೊದಲು ಎಚ್ಚರವಹಿಸಿ. ಅನವಶ್ಯಕವಾಗಿ ಮಾತನಾಡಿ ವಿವಾದ ಸೃಷ್ಟಿಸಬೇಡಿ. ಈ ವಿಷಯದಲ್ಲಿ ಕೇಂದ್ರದ ನಡೆಯನ್ನು ವಿರೋಧಿಸಿದಷ್ಟೂ, ಪಕ್ಷಕ್ಕೆ ಡ್ಯಾಮೇಜ್ ಆಗಲಿದೆ. ಆದ್ದರಿಂದ ಈ ವಿಷಯದಲ್ಲಿ ಅನಿವಾರ್ಯವಲ್ಲದ ಹೊರತು ಪ್ರತಿಕ್ರಿಯಿಸಲು ಹೋಗಬೇಡಿ ಎಂದು ಸೂಚನೆ ನೀಡಿದ್ದಾರೆ ಎಂದು ತಿಳಿದುಬಂದಿದೆ.

ಈ ನಡುವೆ 'ಧರ್ಮದ ಆಧಾರದಲ್ಲಿ ದಾಳಿ' ಯಾಗಿಲ್ಲ ಎನ್ನುವ ಅಬಕಾರಿ ಸಚಿವ ಆರ್. ಬಿ. ತಿಮ್ಮಾಪುರ ಹೇಳಿಕೆಗೆ ಪ್ರತಿಪಕ್ಷ ಬಿಜೆಪಿ ಹಾಗೂ ಸಾರ್ವಜನಿಕರರು ತೀವ್ರವಾಗಿ ಖಂಡಿಸಿ ದ್ದಾರೆ. ಕೇವಲ ಪ್ರತಿಪಕ್ಷವಷ್ಟೇ ಅಲ್ಲದೇ ಕಾಂಗ್ರೆಸ್ ನಾಯಕರು ಸಚಿವರ ಹೇಳಿಕೆಗೆ ವಿರೋಧಿಸಿದ್ದು, ಈ ರೀತಿಯ ಹೇಳಿಕೆಗಳನ್ನು ನೀಡುವ ಮೂಲಕ ಏನು ಸಾಧಿಸಲು ಹೊರಟಿ ದ್ದೀರಾ ಎನ್ನುವ ಆಕ್ಷೇಪವ್ಯಕ್ತಪಡಿಸಿದ್ದಾರೆ.

ಉಲ್ಟಾ ಹೊಡೆದ ತಿಮ್ಮಾಪುರ: ತಮ್ಮ ಹೇಳಿಕೆ ವಿವಾದವಾಗುತ್ತಿದ್ದಂತೆ ಎಚ್ಚೆತ್ತ ತಿಮ್ಮಾಪುರ ಅವರು, ತಮ್ಮ ಹೇಳಿಕೆಯನ್ನು ತಿರುಚಲಾಗಿದೆ ಎಂದು ಸಮರ್ಥಿಸಿಕೊಳ್ಳಲಾಗುತ್ತಿದೆ. ಉಗ್ರರು ಧರ್ಮ ಕೇಳಿ ಗುಂಡು ಹೊಡೆದಿಲ್ಲ ಎಂದು ನಾನು ಹೇಳಿಲ್ಲ, ನನ್ನ ಹೇಳಿಕೆಯನ್ನು ಉದ್ದೇಶಪೂರ್ವಕವಾಗಿ ತಿರುಚಿ ತಪ್ಪಾಗಿ ಅರ್ಥೈಸಲಾಗಿದೆ ಎಂದು ಉಲ್ಟಾ ಹೊಡೆದಿದ್ದಾರೆ. ನಾನು ನೀಡಿದ ಹೇಳಿಕೆಯಲ್ಲಿ ಖಡಾಖಂಡಿತವಾಗಿ ಧರ್ಮ ಕೇಳಿ ಹೊಡೆದಿಲ್ಲ ಎಂದು ನಾನು ಹೇಳಿರಲಿಲ್ಲ ಎಂದರು. ಚಾನೆಲ್‌ಗಳಲ್ಲಿ ಧರ್ಮ ಕೇಳಿ ಹೊಡೆದಿದ್ದಾರೆ ಎಂದು ಬಂದಿರಲಿಲ್ಲ. ಅದಕ್ಕಷ್ಟೆ ನಾನು ಅನುಮಾನ ವ್ಯಕ್ತಪಡಿಸಿದೆ. ನನ್ನ ಹೇಳಿಕೆಯನ್ನು ಮುಂದಿಟ್ಟುಕೊಂಡು ಭಯೋತ್ಪಾದನೆಗೆ ಬೆಂಬಲ ನೀಡಲಾಗುತ್ತಿದೆ ಎಂಬರ್ಥದಲ್ಲಿ ಬಿಂಬಿಸಲಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಭಯೋತ್ಪಾದನೆಯನ್ನು ನಾನು ಬಲವಾಗಿ ಖಂಡಿಸುತ್ತೇನೆ. ಪಹಲ್ಗಾಮ್‌ನಲ್ಲಿ ಸ್ಥಳೀಯರು ಪ್ರವಾಸಿಗರಿಗೆ ರಕ್ಷಣೆ ನೀಡಿದ್ದಾರೆ. ಭದ್ರತಾ ವೈಫಲ್ಯ ಸ್ಪಷ್ಟವಾಗಿ ಕಂಡುಬರುತ್ತಿದೆ. ಉಳಿದಂತೆ ಪಕ್ಷ, ಪಂಗಡ ಬಿಟ್ಟು ಇಂತಹ ಪರಿಸ್ಥಿತಿಯಲ್ಲಿ ಒಟ್ಟಾಗಿ ನಿಲ್ಲಬೇಕೇ ಹೊರತು ಸಣ್ಣಪುಟ್ಟ ವಿಚಾರಗಳನ್ನು ಮುಂದಿಟ್ಟುಕೊಂಡು ಚರ್ಚೆ ಮಾಡುವುದು ಒಳ್ಳೆಯದಲ್ಲ ಎಂದರು.

> **ಉಗ್ರರ ದಾಳಿಗೆ ಸಂಬಂಧಿಸಿದ ಹೇಳಿಕೆಗೆ ಸಂಬಂಧಿಸಿದಂತೆ ಹೈಕಮಾಂಡ್ ಎಚ್ಚರಿಕೆ ನೀಡಿರುವ ವಿಚಾರ ಗೊತ್ತಿಲ್ಲ. ಇದು ದೇಶದ ಭದ್ರತೆ ವಿಚಾರ. ಪಕ್ಷಾತೀತವಾಗಿ ಈ ಘಟನೆಯನ್ನು ನೋಡಬೇಕು. ಪಹಲ್ಗಾಮ್ ಘಟನೆಯ ಬಗ್ಗೆ ಹೆಚ್ಚು ವ್ಯಾಖ್ಯಾನ ಮಾಡುವುದು ಸರಿಯಲ್ಲ. ನಾನೊಂದು ಹೇಳುವುದು, ಇನ್ನೊಬ್ಬರೊಂದು ಹೇಳುವುದು ಬಾಯಿಗೆ ಬಂದಂತೆ ಹೇಳುತ್ತ ಹೋದರೆ ಮಹತ್ವ ಹೋಗುತ್ತದೆ. ನಾವು ಯಾರು ಕೂಡ ಹೆಚ್ಚು ಪ್ರತಿಕ್ರಿಯೆ ಮಾಡುವುದು ಸೂಕ್ತವಲ್ಲ.**
>
> **-ಡಾ.ಜಿ. ಪರಮೇಶ್ವರ,** ಗೃಹ ಸಚಿವ

ರಾಜವರ್ಧನ್ ಜತೆಯಾದ ಚಂದ್ರಚೂಡ್

ಚಂದನವನದಲ್ಲಿ ಬಿಚ್ಚುಗತ್ತಿ ಹಿಡಿದು ಅಬ್ಬರಿಸಿದ ರಾಜವರ್ಧನ್, ಹಿರಣ್ಯನಾಗಿಯೂ ಗಮನಸೆಳೆದರು. ಈಗ ಅದೇ ರಾಜವರ್ಧನ್ ಮತ್ತೊಂದು ಹೊಸ ಚಿತ್ರದಲ್ಲಿ ನಟಿಸಲು ಸಿದ್ಧವಾಗಿದ್ದಾರೆ. ಒಂದಷ್ಟು ಏಳು ಬೀಳುಗಳನ್ನು ಕಂಡ ರಾಜವರ್ಧನ್ ಈಗ ಮತ್ತೆ ಗೆಲುವಿನ ಲಯಕ್ಕೆ ಮರಳಲು ಸಿದ್ಧವಾಗಿದ್ದಾರೆ. ಹಾಗಾಗಿ ಈ ಬಾರಿಯೂ ಆ್ಯಕ್ಷನ್‌ನಲ್ಲಿ ಮಿಂಚಲು ರಾಜವರ್ಧನ್ ರೆಡಿಯಾಗಿದ್ದಾರೆ. ಹೌದು, ಚಕ್ರವರ್ತಿ ಚಂದ್ರಚೂಡ್ ನಿರ್ದೇಶನದಲ್ಲಿ ಸೆಟ್ಟೇರಲಿರುವ ಔಟ್ ಅಂಡ್ ಔಟ್ ಆ್ಯಕ್ಷನ್ ಚಿತ್ರದಲ್ಲಿ ವರ್ಧನ್ ನಾಯಕನಾಗಿ ಅಭಿನಯಿಸಲಿದ್ದಾರೆ. ಮಾಸ್ ಎಂಟರ್‌ಟೇನ್ ಮೆಂಟ್ ಸ್ಟೋರಿಯ ಈ ಚಿತ್ರದಲ್ಲಿ ನಮ್ಮ ಮಣ್ಣಿನ ಸೊಗಡಿನ ಕಥೆಯೂ ಬೆರೆತಿದ್ದು ರಾಜವರ್ಧನ್ ವಿಭಿನ್ನ ಗೆಟಪ್‌ನಲ್ಲಿ ಕಂಗೊಳಿಸಲಿದ್ದಾರೆ. ಈಗಾಗಲೇ ಚಿತ್ರ ಪ್ರೀಪ್ರೊಡಕ್ಷನ್ ಕೆಲಸಗಳು ಭರದಿಂದ ಸಾಗಿದ್ದು, ಇನ್ನೇನು ಚಿತ್ರೀಕರಣವೂ ಆರಂಭವಾಗಲಿದೆ. ಹೈ ಬಜೆಟ್‌ನಲ್ಲಿ ನಿರ್ಮಾಣವಾಗುತ್ತಿರುವ ಚಿತ್ರ ಇದಾಗಿದ್ದು, ಪ್ಯಾನ್ ಇಂಡಿಯಾ ಸಿನಿಮಾವಾಗಿ ಮೂಡಿಬರಲಿದೆ. ಚಿತ್ರದಲ್ಲಿ ದೊಡ್ಡ ತಾರಾಬಳಗವೇ ಇರಲಿದ್ದು, ಮೇ ತಿಂಗಳಲ್ಲಿ ಸಿನಿಮಾತಂಡ ಶೂಟಿಂಗ್‌ಗೆ ಹೊರಡಲಿದೆ. ವಿದೇಶದಲ್ಲಿಯೂ ಚಿತ್ರೀಕರಣ ನಡೆಸುವ ಪ್ಲಾನ್ ಚಿತ್ರತಂಡಕ್ಕಿದೆ.

ಸಿಹಿ ಸುದ್ದಿ ನೀಡಿದ ಶಾರುಕ್

ಬಾಲಿವುಡ್ ಕಿಂಗ್ ಖಾನ್ ಶಾರುಖ್ ಖಾನ್ ಪಠಾಣ್ ಹಾಗೂ ಜವಾನ್ ಸಿನಿಮಾದ ಬಳಿಕ ಯಾವ ಸಿನಿಮಾದಲ್ಲಿಯೂ ಕಾಣಿಸಿಕೊಂಡಿರಲಿಲ್ಲ. ಹಾಗಾಗಿ ಶಾರುಖ್ ಖಾನ್ ಫ್ಯಾನ್ಸ್ ಬೇಸರಗೊಂಡಿದ್ದರು. ಹೀಗಿರುವಾಗಲೇ ಶಾರುಖ್ ಸಿಹಿ ಸುದ್ದಿ ನೀಡಿದ್ದಾರೆ. ಶಾರುಕ್ ಹೊಸ ಸಿನಿಮಾ ಘೋಷಿಸಿದ್ದು, ನಟಿಸಲು ಭರ್ಜರಿ ತಯಾರಿ ನಡೆಸಿದ್ದಾರೆ. ಕಿಂಗ್ ಶೀರ್ಷಿಕೆಯಲ್ಲಿ ಸಿನಿಮಾ ಮೂಡಿಬರುತ್ತಿದ್ದು, ಕಿಂಗ್ ಖಾನ್ ಭರ್ಜರಿ ಆ್ಯಕ್ಷನ್ ನಲ್ಲಿ ಮಿಂಚಲಿದ್ದಾರೆ. ವಿಶೇಷ ಎಂದರೆ ಈ ಚಿತ್ರದಲ್ಲಿ ದೀಪಿಕಾ ಪಡುಕೋಣೆ ನಾಯಕಿಯಾಗಿ ಕಾಣಿಸಿಕೊಳ್ಳಲಿದ್ದಾರೆ. ಹಾಗಾಗಿ ಈ ಸಿನಿಮಾದ ಬಗ್ಗೆ ಭರ್ಜರಿ ನಿರೀಕ್ಷೆಯೂ ಇದೆ. ಈ ಹಿಂದೆ ಶಾರುಖ್ ಹಾಗೂ ದೀಪಿಕಾ ಓಂ ಶಾಂತಿ ಓಂ, ಚೆನ್ನೈ ಎಕ್ಸ್‌ಪ್ರೆಸ್ ಸೇರಿದಂತೆ ಹಲವು ಸೂಪರ್ ಹಿಟ್ ಸಿನಿಮಾಗಳಲ್ಲಿ ನಟಿಸಿದ್ದಾರೆ. ಈಗ ಮತ್ತೆ ಶಾರುಖ್ ಜತೆಯಾಗಿ ನಟಿಸುತ್ತಿರುವುದು ಸಹಜವಾಗಿಯೇ ನಿರೀಕ್ಷೆ ಮೂಡಿಸಿದೆ.

ವಿಟಾಕೀಸ್

ಹಿಟ್ 3ನಲ್ಲಿ ನಾನಿ-ಶ್ರೀನಿಧಿ

ಶೈಲೇಶ್ ಕೋಲನು ನಿರ್ದೇಶನದ ಆಕ್ಷನ್ ಥ್ರಿಲ್ಲರ್ ಹಿಟ್–3 ಭರ್ಜರಿ ಕುತೂಹಲ ಮೂಡಿಸಿದೆ. ನಾನಿ ಹಾಗೂ ಶ್ರೀನಿಧಿ ಶೆಟ್ಟಿ ಚಿತ್ರದಲ್ಲಿ ಒಟ್ಟಿಗೆ ಅಭಿನಯಿಸಿರುವುದು ಚಿತ್ರದ ಬಗ್ಗೆ ಕುತೂಹಲ ಮೂಡಲು ಪ್ರಮುಖ ಕಾರಣವಾಗಿದೆ. ಚಿತ್ರ ಅದ್ಭುತವಾಗಿ ಮೂಡಿಬಂದಿದೆ. ನಾನು ವಿಭಿನ್ನ ಪಾತ್ರಗಳನ್ನೇ ಹೆಚ್ಚಾಗಿ ಆಯ್ದುಕೊಂಡಿ ದ್ದೇನೆ. ಯಾವುದೇ ಜಾನರ್‌ಗೆ ಸ್ಟಿಕ್ ಆಗುವುದಿಲ್ಲ. ಹೊಸದನ್ನು ಕಲಿಯಲು ಪ್ರಯತ್ನ ಮಾಡುತ್ತೇನೆ ಎಂದು ನಾನು ತಿಳಿಸಿದರು.

ಹಲವು ವರ್ಷಗಳ ಬಳಿಕ ನನ್ನ ಮೂವೀ ಸ್ವಲ್ಪ ಸಮಯ ಆದ ಬಳಿಕ ಬರುತ್ತಿದೆ. ಮೂರೂವರೆ ವರ್ಷದ ಬಳಿಕ ನನ್ನನ್ನು ನಾನು ತೆರೆಯ ಮೇಲೆ ನೋಡಿಕೊಳ್ಳುತ್ತಿದ್ದೇನೆ. ಹಾಗಾಗಿ ನಾನು ಕೂಡ ಸಿನಿಮಾ ನೋಡಲು ಕಾತರಾಗಿದ್ದೇನೆ. ನಾನಿ ಜತೆಗೆ ನಟಿಸಿರುವುದು ಖುಷಿ ಕೊಟ್ಟಿದೆ ಎಂದು ಶ್ರೀನಿಧಿ ಶೆಟ್ಟಿ ಸಂತಸದಿಂದ ನುಡಿದರು.

ಹಿಟ್ ಸರಣಿ ಸಿನಿಮಾಗಳನ್ನು ಶೈಲೇಶ್ ಕೋಲನು ನಿರ್ದೇಶನ ಮಾಡಿದ್ದು ಭರ್ಜರಿ ಯಶಸ್ಸು ಕಂಡಿದ್ದಾರೆ. ಈ ಭಾಗದಲ್ಲಿ ನಾನಿ ಐಪಿಎಸ್ ಅರ್ಜುನ್ ಸರ್ಕಾರ್ ಆಗಿ ಅಬ್ಬರಿಸಿದ್ದಾರೆ. ಮೃದುಲಾ ಪಾತ್ರದಲ್ಲಿ ಕೆಜಿಎಫ್ ಬೆಡಗಿ ಶ್ರೀನಿಧಿ ಶೆಟ್ಟಿ ನಟಿಸಿದ್ದಾರೆ. ಶಾಂತಿ ತಿಪಿರ್ನೇನಿ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ. ಮಿಕ್ಕಿ.ಜೆ. ಮೇಯರ್ ಸಂಗೀತ ನಿರ್ದೇಶನ, ಸಾನು ಜಾನ್ ವರ್ಗೀಸ್ ಛಾಯಾಗ್ರಹಣ ಹಾಗೂ ಕಾರ್ತಿಕ್ ಶ್ರೀನಿವಾಸ್ ಸಂಕಲನ ಈ ಚಿತ್ರಕ್ಕಿದೆ.

ಮುಂದಿನ ವರ್ಷಕ್ಕೆ ನೀಲ್ ತಾರಕ್ ಚಿತ್ರ

ಪ್ರಶಾಂತ್ ನೀಲ್ ಹಾಗೂ ಜೂ.ಎನ್‌ಟಿಆರ್ ಕಾಂಬಿನೇಷನ್‌ನಲ್ಲಿ ಹೈವೋಲ್ಟೇಜ್ ಸಿನಿಮಾ ಮೂಡಿಬರುತ್ತಿದೆ. ಚಿತ್ರಕ್ಕಾಗಿ ಹೈದರಾಬಾದ್‌ನಲ್ಲಿ ಅದ್ದೂರಿ ಸೆಟ್ ನಿರ್ಮಿಸಲಾಗಿದ್ದು ಭರದಿಂದ ಚಿತ್ರೀಕರಣ ನಡೆಸಲಾಗುತ್ತಿದೆ. ಈಗ ಈ ಚಿತ್ರದ ಬಿಡುಗಡೆಯ ದಿನಾಂಕ ಘೋಷಣೆಯಾಗಿದೆ. ಮುಂದಿನ ವರ್ಷದ ಜೂನ್ 25ರಂದು ಸಿನಿಮಾ ಅದ್ದೂರಿಯಾಗಿ ತೆರೆಗೆ ಬರಲಿದೆ. ಈ ಹಿಂದೆ ಜನವರಿ 14ರ ಸಂಕ್ರಾಂತಿ ಸಂಭ್ರಮದಂದು ಚಿತ್ರವನ್ನು ತೆರೆಗೆ ತರಲು ನಿರ್ಧರಿಸಲಾಗಿತ್ತು. ಆದರೆ ಅದೇ ದಿನ ದಳಪತಿ ವಿಜಯ್ ಅಭಿನಯದ ಚಿತ್ರವೂ ತೆರೆಗೆ ಬರುತ್ತಿರುವುದುರಿಂದ ಬಾಕ್ಸ್ ಆಫೀಸ್ ಕ್ಲಾಶ್ ತಪ್ಪಿಸಲು ಚಿತ್ರದ ಬಿಡುಗಡೆಯ ದಿನಾಂಕವನ್ನು ಮುಂದೂಡಲಾಗಿದೆ.

ಪ್ರಶಾಂತ್ ನೀಲ್, ಸಲಾರ್ 2 ಅಥವಾ ಕೆಜಿಎಫ್ 3 ಇವುಗಳಲ್ಲಿ ಯಾವ ಚಿತ್ರವನ್ನು ನಿರ್ದೇಶಿಸಲಿದ್ದಾರೆ ಎಂಬ ಕುತೂಹಲವಿತ್ತು. ಮೊದಲು ಸಲಾರ್ 2 ಸಿನಿಮಾ ಕೈಗೆತ್ತಿಕೊಳ್ಳಬಹುದು ಎನ್ನಲಾಗುತ್ತಿತ್ತು. ಆದರೆ ಸಲಾರ್‌ಗೂ ಮೊದಲೇ ಜೂ.ಎನ್‌ಟಿಆರ್ ಚಿತ್ರವನ್ನು ನಿರ್ದೇಶಿಸುತ್ತಿದ್ದಾರೆ. ಈಗಾಗಲೇ ಮೊದಲ ಹಂತದ ಚಿತ್ರೀಕರಣವೂ ಮುಕ್ತಾಯವಾಗಿದೆ. ಎರಡನೇ ಹಂತದ ಚಿತ್ರೀಕರಣ ಆರಂಭವಾಗಿದೆ. ತಾರಕ್ ಕೂಡ ಚಿತ್ರತಂಡ ಸೇರಿದ್ದಾರೆ. ಸದ್ಯ ಈ ಚಿತ್ರಕ್ಕೆ ನೀಲ್ ಎನ್‌ಟಿಆರ್ ಎಂಬ ಟೈಟಲ್ ಇಡಲಾಗಿದೆ. ಇದು ಪೊಲಿಟಿಕ್ ಆ್ಯಕ್ಷನ್ ಥ್ರಿಲ್ಲರ್ ಸಿನಿಮಾವಾಗಿದ್ದು ತಾರಕ್ ಅದ್ದೂರಿಯಾಗಿ ಮಿಂಚಲಿದ್ದಾರೆ.

ಚಂದನವನಕ್ಕೆ ಯಶ್ ತಾಯಿ ಪುಷ್ಪಾ

ರಾಕಿಂಗ್ ಸ್ಟಾರ್ ಯಶ್ ಪ್ಯಾನ್ ಇಂಡಿಯಾ ಸ್ಟಾರ್ ಆಗಿ ಹೊರ ಹೊಮ್ಮಿದ್ದಾರೆ. ಕೆಜಿಎಫ್ ಚಿತ್ರದ ಮೂಲಕ ಜನಪ್ರಿಯತೆ ಪಡೆದ ಯಶ್ ಈಗ ಬಾಲಿವುಡ್ ಅಂಗಳಕ್ಕೂ ಎಂಟ್ರಿಕೊಟ್ಟಿದ್ದಾರೆ. ಬಾಲಿವುಡ್‌ನಲ್ಲಿ ಮೂಡಿಬರುತ್ತಿರುವ ರಾಮಾಯಾಣ ಚಿತ್ರದಲ್ಲಿ ಯಶ್ ರಾವಣನಾಗಿ ಅಬ್ಬರಿಸುತ್ತಿದ್ದಾರೆ. ಟಾಕ್ಸಿಕ್ ಚಿತ್ರದಲ್ಲಿಯೂ ನಟಿಸುತ್ತಿರುವ ಯಶ್ ಚಿತ್ರ ನಿರ್ಮಾಣಕ್ಕೂ ಕೈಜೋಡಿಸಿದ್ದಾರೆ. ಆ ಮೂಲಕ ನಿರ್ಮಾಪಕರಾಗಿಯೂ ಗುರುತಿಸಿಕೊಳ್ಳುತ್ತಿದ್ದಾರೆ. ಈ ನಡುವೆಯೇ ಯಶ್ ತಾಯಿ ಪುಷ್ಪಾ ಅವರೂ ಕೂಡ ನಿರ್ಮಾಪಕಿಯಾಗಿ ಚಂದನವನಕ್ಕೆ ಎಂಟ್ರಿಕೊಡುತ್ತಿದ್ದಾರೆ. ಪಿಎ ಪ್ರೊಡಕ್ಷನ್ಸ್‌ನಲ್ಲಿ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡುತ್ತಿದ್ದಾರೆ. ಪಿಎ ಪ್ರೊಡಕ್ಷನ್ಸ್‌ನಲ್ಲಿ ಮೂಡಿಬರುತ್ತಿರುವ ಚೊಚ್ಚಲ ಚಿತ್ರದಲ್ಲಿ ಪೃಥ್ವಿ ಅಂಬರ್ ನಾಯಕನಾಗಿ ನಟಿಸುತ್ತಿದ್ದಾರೆ. ಉಳಿದಂತೆ ದೊಡ್ಡ ತಾರಾಬಳಗವೇ ಚಿತ್ರದಲ್ಲಿದೆ.





ಈ ಹಿಂದೆ ನಾನು ಮತ್ತು ಗುಂಡ ಚಿತ್ರ ತೆರೆಗೆ ಬಂದು ಭರ್ಜರಿ ಯಶಸ್ಸು ಕಂಡಿತ್ತು. ಈಗ ನಾನು ಮತ್ತು ಗುಂಡ 2 ತೆರೆಗೆ ಬರಲು ಸಿದ್ಧವಾಗಿದೆ. ನಾನು ಮತ್ತು ಗುಂಡ ಚಿತ್ರವನ್ನು ನಿರ್ಮಾಣ ಮಾಡಿದ್ದ ರಘು ಹಾಸನ್ ಈ ಚಿತ್ರವನ್ನು ನಿರ್ಮಿಸುವ ಜತೆಗೆ ನಿರ್ಮಾಣ ಮಾಡಿದ್ದಾರೆ. ಈ ಚಿತ್ರದ ಟೈಟಲ್ ಸಾಂಗ್ ರಿಲೀಸ್ ಆಗಿದೆ. ನಾನು ಮತ್ತು ಗುಂಡ.. ಹಾಡು ಕೇಳಲು ಮಧುರವಾಗಿದೆ. ರಘು ಹಾಸನ್ ಸಾಹಿತ್ಯ ರಚಿಸಿರುವ ಈ ಹಾಡಿಗೆ ಅಮೋಘವರ್ಷ ದೇಶಪಾಂಡೆ ಸಾಹಿತ್ಯ ರಚಿಸಿದ್ದಾರೆ. ಆರ್.ಪಿ.ಪಟ್ನಾಯಕ್ ಸಂಗೀತ ಸಂಯೋಜಿಸಿದ್ದಾರೆ. ಗುಂಡ ಮತ್ತು ಯುವನ್ ಸಾಯಿ ಹಾಡಿನಲ್ಲಿ ಕಾಣಿಸಿಕೊಂಡಿದ್ದಾರೆ. ಗುಂಡನ ತುಂಟಾಟ ನೋಡಿ ಮಕ್ಕಳು ನಲಿಯುವ ಸುಂದರ ಕ್ಷಣಗಳು ಈ ಹಾಡಿನಲ್ಲಿ ಬೆರೆತಿವೆ. ಮಲೆನಾಡಿನ ಸುಂದರ ತಾಣದಲ್ಲಿ ಹಾಡಿನ ಚಿತ್ರೀಕರಣ ನಡೆಸಲಾಗಿದೆ. ರಾಕೇಶ್ ಅಡಿಗ ನಾಯಕನಾಗಿ ಕಾಣಿಸಿಕೊಂಡಿದ್ದು, ರಚನಾ ಇಂದರ್ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ.

ಹಾಡಿನಲ್ಲಿ ಮನಗೆದ್ದ ಗುಂಡ

ಅನುಭವ ಮಂಟಪದ ಅನುಭಾವಿಯ ನೆನೆಯೋಣ ಬನ್ನಿ

ಜ್ಞಾನಿ ಜಗಜ್ಯೋತಿ ಬಸವೇಶ್ವರು

ಜನಮೇಜಯ ಉಮರ್ಜಿ

ವೈಶಾಖ ಮಾಸ, ಶುಕ್ಲ ಪಕ್ಷದ ಅಕ್ಷಯ ತೃತೀಯಾ ಅಥವಾ ಅಕ್ಷ ತದಿಗೆಯಂದು ಜಗಜ್ಯೋತಿ ಬಸವೇಶ್ವರರ ಜನ್ಮದಿನ. ಅಕ್ಷಯ ಎಂದರೆ 'ಕ್ಷೀಣಿಸದ' ಅಥವಾ 'ಎಂದಿಗೂ ನಾಶವಾಗದ' ಎಂದರ್ಥ. ಇದು ಧಾರ್ಮಿಕವಾಗಿಯೂ ಐತಿಹಾಸಿಕವಾಗಿಯೂ ಪುಣ್ಯ ದಿನ, ಪಾಂಡವರು ವನವಾಸದಲ್ಲಿದ್ದಾಗ, ದ್ರೌಪದಿಗೆ ದೇವತೆಗಳು ಅಕ್ಷಯಪಾತ್ರೆ ನೀಡಿದ ದಿನ. ಇದು ಅಕ್ಷಯವಾಗುವ ದಿನ. ಜಾತಿಯ ಸಂಕೋಲೆಯಲ್ಲಿ ಹಿಂದೂ ಸಮಾಜ ಶಿಥಿಲವಾಗುತ್ತಿದ್ದ ಸಂದರ್ಭದಲ್ಲಿ ಭಕ್ತಿ ಪರಂಪರೆಯನ್ನು ಅಕ್ಷಯವಾಗಿಸಿ, ಹಿಂದೂ ಧರ್ಮವನ್ನು ಆ ಕಾಲದ ತುರ್ತಿಗೆ ಸುಧಾರಿಸಿ ಉಳಿಸಿ ಅಕ್ಷಯ ಮಾಡಿದ ಕೀರ್ತಿ ಬಸವೇಶ್ವರರದು.

ಅದೊಂದು ಕಾಲವಿತ್ತು. ಹಿಂದೂ ಸಮಾಜದಲ್ಲಿ ಮೊದಲು ಎಲ್ಲರಿಗೂ ಮುಕ್ತವಾಗಿದ್ದ ದೇವಾಲಯಗಳು, ಜಾತಿ/ಹುಟ್ಟಿನ ಕಾರಣದಿಂದಾಗಿ ಹಲವರಿಗೆ ಬಾಗಿಲು ಮುಚ್ಚಿದ್ದವು. ಶುದ್ಧಜ್ಞಾನದ ಕೊರತೆಯಿಂದಾಗಿ ಜನರು ಮಾಟ-ಮಂತ್ರದಂಥ ವಾಮ ಮಾರ್ಗ ಹಿಡಿದಿದ್ದರು. ಸ್ವಯಂಸುಧಾರಣೆಗೆ ಸದಾ ತೆರೆದುಕೊಂಡೇ ಇರುವ ಹಿಂದೂ ಧರ್ಮವು ಇದನ್ನು ಎದುರಿಸಲು ಹೊರಟಿದ್ದು ಭಕ್ತಿ ಆಂದೋಲನದ ಮೂಲಕ. ಅಲ್ಲಿಯವರೆಗೂ ಜ್ಞಾನಮಾರ್ಗ, ಕರ್ಮ ಮಾರ್ಗಗಳ ಮೂಲಕವಷ್ಟೇ ಮೋಕ್ಷವೆಂದು ಭಾವಿಸಲಾಗಿತ್ತು. ಭಕ್ತಿಮಾರ್ಗ ಮುನ್ನೆಲೆಗೆ ಬಂದದ್ದೇ ಇಂಥ ವಿಪ್ಲವದ ಸಂದರ್ಭದಲ್ಲಿ. ಬಸವೇಶ್ವರರು ಇದೇ ಸಮಯದಲ್ಲಿ ಜನಿಸಿದರು.

ಅಗ್ರಹಾರವಾಗಿದ್ದ ಕೂಡಲಸಂಗಮದಲ್ಲಿ 12 ವರ್ಷಗಳ ಕಾಲ ಶೈವತತ್ವಜ್ಞಾನವನ್ನು ಅಧ್ಯಯನ ಮಾಡಿದ ಬಸವಣ್ಣನವರು ನಂತರ ಕಳಚೂರಿ ರಾಜ ಬಿಜ್ಜಳನ ಆಸ್ಥಾನದಲ್ಲಿ ಕರಣಿಕರಾಗಿ ಕಾರ್ಯನಿರ್ವಹಿಸತೊಡಗಿದರು. ಸೋದರಮಾವನ ಮರಣಾನಂತರ ಬಿಜ್ಜಳನ ಮಹಾಮಂತ್ರಿಯಾಗಿ ನಿಯುಕ್ತಿಗೊಂಡ ಬಸವಣ್ಣನವರು ತಾವು ನೇತೃತ್ವ ವಹಿಸಿದ ಭಕ್ತಿ ಚಳವಳಿಯಲ್ಲಿ, 'ಯಾವ ಕಾಯಕವೂ ಮೇಲಲ್ಲ ಅಥವಾ ಕೀಳಲ್ಲ; ಆಧ್ಯಾತ್ಮಿಕ ಸಾಧನೆಗೆ ಎಲ್ಲರಿಗೂ ಅವಕಾಶ ಇರಬೇಕು' ಎಂಬ ಆಶಯದೊಂದಿಗೆ ಕಾಯಕದ ಘನತೆಯನ್ನು ಎತ್ತಿಹಿಡಿದರು. ಈ ಚಳವಳಿಯು ಜನಪ್ರಿಯವಾಗಿ ಎಲ್ಲೆಡೆ ಹಬ್ಬಿತು. ದೇವಾಲಯಕ್ಕೆ ಸೀಮಿತವಾಗಿದ್ದ ಪೂಜೆ-ಆಚರಣೆಗಳ ಬದಲಿಗೆ ಭಕ್ತಿಯ ಆರಾಧನೆಯನ್ನು ಪ್ರತಿಪಾದಿಸಿದ ಬಸವಣ್ಣನವರು ವೈಯಕ್ತಿಕ ಮತ್ತು ನೇರ ಶಿವಾರಾಧನೆಯ ಪದ್ಧತಿಯನ್ನು ಪ್ರಚುರಪಡಿಸಿದರು. ವೈಯಕ್ತಿಕವಾಗಿ ಧರಿಸಿರುವ ಇಷ್ಟಲಿಂಗದಂಥ ಸಂಕೇತಗಳ ಪೂಜೆಗೆ ಒತ್ತುನೀಡಿದರು. ಈ ವಿಧಾನವು ಲಿಂಗ/ಜಾತಿ ಭೇದವಿಲ್ಲದೆ ಎಲ್ಲರಲ್ಲಿಯೂ ಶಿವನ ಸಾನಿಧ್ಯವನ್ನು ತುಂಬಿತು.

ಬಸವಣ್ಣನವರ ವಚನಗಳಲ್ಲಿ 'ಸ್ಥಾವರ' (ಸ್ಥಿರವಾಗಿ ನಿಂತಿರುವ) ಮತ್ತು 'ಜಂಗಮ' (ಚಲಿಸುತ್ತಿರುವ) ಎಂಬ 2 ಪರಿಕಲ್ಪನೆಗಳ ನಡುವಿನ ವಿಶ್ಲೇಷಣೆಗಳನ್ನು ಕಾಣಬಹುದಾಗಿದೆ. ದೇವಾಲಯಗಳು ಮತ್ತು ಪ್ರಾಚೀನ ಸಾಹಿತ್ಯ 'ಸ್ಥಾವರ'ವನ್ನೂ, ಕಾಯಕ ಮತ್ತು ದಾಸೋಹಗಳು 'ಜಂಗಮ'ವನ್ನೂ ಪ್ರತಿನಿಧಿಸುತ್ತವೆ. ದೇಹವನ್ನು ದೇವಾಲಯವನ್ನಾಗಿಸಿ, ಆತ್ಮನನ್ನು ದೇವನಾಗಿ ಪರಿಗಣಿಸುವುದರ ಸುತ್ತ ಸುತ್ತುವ ಬಸವಣ್ಣನವರ ವಿಚಾರಧಾರೆಯು, ದೇಗುಲವನ್ನು ಕಟ್ಟುವುದರ ಬದಲು ದೇಹವನ್ನೇ ದೇಗುಲವಾಗಿಸುವ ಗುರಿಯನ್ನು ನೀಡುತ್ತದೆ ಹಾಗೂ ಗುರು (ಶಿಕ್ಷಕ), ಲಿಂಗ (ಶಿವನ ಕುರುಹು), ಜಂಗಮ (ನಿರಂತರವಾಗಿ ಚಲಿಸುವಿಕೆ ಮತ್ತು ಕಲಿಯುವಿಕೆ) ಎಂಬ ತ್ರೈತತ್ವಗಳನ್ನು ಒಳಗೊಂಡಿದೆ. ಎಲ್ಲರಿಗೂ ಸುಲಭವಾಗುವಂತೆ 'ಓಂ ನಮಃ ಶಿವಾಯ' ಮಂತ್ರವನ್ನು ಹೆಚ್ಚೆಚ್ಚು ಪ್ರಚುರಪಡಿಸಿದ ಬಸವಣ್ಣನವರು ಜ್ಞಾನಮಾರ್ಗಕ್ಕೆ ಬದಲಾಗಿ ಭಕ್ತಿ ಮತ್ತು ಕಾಯಕ ಮಾರ್ಗಕ್ಕೆ ಪ್ರಾಶಸ್ತ್ಯ ನೀಡಿದರು, ಶಿವಭಕ್ತಿ ಸಂಪ್ರದಾಯವನ್ನು ಪುನರುಜ್ಜೀವನಗೊಳಿಸಿ ಶಕ್ತಿ ತುಂಬಿದರು, ತಮ್ಮ ತತ್ವದ ಅಡಿ ಬಂದವರಿಗೆ 'ಶರಣರು' ಎಂದು ಕರೆದರು, ಶಿವಭಕ್ತರೆಲ್ಲರೂ ಸಮಾನರು ಎಂದು ಪ್ರತಿಪಾದಿಸಿ 'ವಿಶ್ವಭ್ರಾತೃತ್ವ'ವನ್ನು ಸಾರಿದರು. ಕಾಯಕವೆಂದರೂ ದೇವರಪೂಜೆಯೇ, ಅದರಿಂದಲೇ ಕೈಲಾಸ ಎಂಬ ಆಶಯಕ್ಕೆ ಒತ್ತುನೀಡಲು 'ಕಾಯಕವೇ ಕೈಲಾಸ' ಎಂದರು. ಸುಲಿದ ಬಾಳೆಹಣ್ಣಿನಂತೆ ತತ್ವಜ್ಞಾನವನ್ನು ಜನಸಾಮಾನ್ಯರವರೆಗೂ ತಲುಪಿಸಿ, 'ವ್ಯಕ್ತಿಯೊಬ್ಬನ ಸ್ವಂತ ಅನುಭವವೇ ಅವನ ಗುರು; ತನ್ನನ್ನು ತಾನು ಅರಿತೊಡೆ ಸಾಕ್ಷಾತ್ಕಾರ' ಎಂದು ಪ್ರತಿಪಾದಿಸಿದರು. ಹೀಗೆ, ತಮ್ಮ ಬದುಕು- ಬೋಧನೆಗಳಿಂದ ಸಮಾಜವನ್ನು ಸುಧಾರಿಸಿ ಹಿಂದೂ ಧರ್ಮವನ್ನು ಗಟ್ಟಿಗೊಳಿಸಿದ ಬಸವಣ್ಣನವರು ಪೀಳಿಗೆಯಿಂದ ಪೀಳಿಗೆಗೆ ಪ್ರಾಜ್ಞರ ಮನೆಗೆದ್ದರು, ಶ್ರೀಸಾಮಾನ್ಯರ ಹೃದಯದಲ್ಲಿ ಸ್ಥಿರವಾಗಿ ನಿಂತರು. ಜಗವನ್ನೆಲ್ಲಾ ಬೆಳಗುವ 'ಜಗಜ್ಯೋತಿ ಬಸವೇಶ್ವರ' ಎನಿಸಿಕೊಂಡರು.

(ಲೇಖಕರು ಚಿಂತಕರು)

★★★

ವಚನಗಳಲ್ಲಿ ವಿಶ್ವಮಾನವ

ಎಚ್.ಮಲ್ಲಿಕಾರ್ಜುನ

ತಮ್ಮ ವಚನಗಳ ಮೂಲಕ ಸಾಮಾಜಿಕ ಜಾಗೃತಿಯನ್ನು ಉಂಟುಮಾಡಿದ ಬಸವಣ್ಣನವರು ಅಸ್ಪೃಶ್ಯತೆ ನಿವಾರಣೆ, ಸ್ತ್ರೀ ಸಮಾನತೆ, ಅಹಿಂಸೆ, ಸ್ವಾತಂತ್ರ್ಯ, ಶಾಂತಿ ಮುಂತಾದ ಮೌಲ್ಯ/ತತ್ವಗಳನ್ನು ಜಾರಿಗೆ ತರಲು ಯತ್ನಿಸಿದ್ದಾರೆ.

ಹುಟ್ಟಿನಿಂದ ಯಾರೂ ಮೇಲಲ್ಲ ಕೀಳಲ್ಲ ಎಂದು ಸಾರಿದ ಬಸವಣ್ಣನವರು, ಜನ್ಮತಃ ಬ್ರಾಹ್ಮಣರಾಗಿ ಸಂಸ್ಕಾರದಿಂದ ಶರಣರಾದ ಮಧುವರಸರ ಮಗಳನ್ನು, ಹುಟ್ಟಿನಿಂದ ಸಮಗಾರರಾಗಿ ಸಂಸ್ಕಾರದಿಂದ ಶರಣರಾದ ಹರಳಯ್ಯನ ಮಗನಿಗೆ ಕೊಟ್ಟು ಅಂತರ್ಜಾತಿ ವಿವಾಹ ಮಾಡಲು ಪ್ರೇರೇಪಿಸಿದರು. ತನ್ಮೂಲಕ ಸಮಾಜದಲ್ಲಿನ ಜಾತೀಯತೆಯನ್ನು ಹೋಗಲಾಡಿಸಲು ಯತ್ನಿಸಿದರು. ಪುರುಷನಂತೆ ಮಹಿಳೆಗೂ ವಿದ್ಯಾಭ್ಯಾಸದ ಮತ್ತು ತನ್ನ ಜೀವನವನ್ನು ರೂಪಿಸಿಕೊಳ್ಳುವ ಹಕ್ಕಿದೆ ಎನ್ನುವ ಮೂಲಕ ಸಮಾನತೆಯ ಪ್ರತಿಪಾದಕರಾದರು. ವಿವಿಧ ಕಾಯಕಗಳ ಶೂದ್ರರಿಗೆ, ಮಹಿಳೆಯರಿಗೆ ಮೊದಲ ಬಾರಿಗೆ ಶಿಕ್ಷಣ ಕೊಡಿಸುವ ವ್ಯವಸ್ಥೆ ಮಾಡಿದರು.

ಬಸವಣ್ಣನವರು 'ಅನುಭವ ಮಂಟಪ'ದ ಮೂಲಕ ವಿಶ್ವದ ಪ್ರಥಮ ಸಂಸತ್ತನ್ನು ಸ್ಥಾಪಿಸಿ ಪ್ರಜಾಪ್ರಭುತ್ವದ ಪರಿಕಲ್ಪನೆಯನ್ನುನೀಡಿದರು. ವಿವಿಧ ಕಾಯಕ ಮೂಲಗಳಿಂದ ಬಂದಂಥ ಶರಣರು, ವರ್ಣ-ವರ್ಗ-ಲಿಂಗಭೇದವಿಲ್ಲದೆ ಮುಕ್ತಚರ್ಚೆಯನ್ನು ನಡೆಸಲು ಈ ಅನುಭವ ಮಂಟಪವು ವೇದಿಕೆಯಾಗಿತ್ತು.

ಪಂಚಾಂಗ, ಜಾತಕಗಳ ಹೆಸರಿನಲ್ಲಿ ಜನರನ್ನು ಬೆದರಿಸಿ ಸುಲಿಯುವ ಪ್ರವೃತ್ತಿಯನ್ನು ಹಾಗೂ ಅರ್ಥಹೀನ ನಂಬಿಕೆಗಳನ್ನು ಖಂಡಿಸುತ್ತಿದ್ದ ಬಸವಣ್ಣನವರು, ಕಲ್ಲಿನ ನಾಗರಕ್ಕೆ ಹಾಲೆರೆಯುವ, ಲಿಂಗದ ಮುಂದೆ ನೈವೇದ್ಯವಿಡುವ, ಆಡಂಬರದ ದೇಗುಲಗಳನ್ನು ನಿರ್ಮಿಸುವ ಪರಿಪಾಠಗಳಿಗೆ ಹೊರತಾದ ಭಕ್ತಿಮಾರ್ಗವನ್ನು ಪ್ರಚುರಪಡಿಸಿದರು. ದುಡಿಯುವ ವರ್ಗಕ್ಕೆ ಘನತೆ ತಂದುಕೊಟ್ಟ ಬಸವಣ್ಣನವರು ಲಿಂಗ ತಾರತಮ್ಯವನ್ನು ಹೋಗಲಾಡಿಸಿ ಸಮಾನತೆಯನ್ನು ತಂದುಕೊಟ್ಟ ಸಮತಾವಾದಿ, ಸಮಾಜವಾದಿ, ವಿಚಾರವಂತರು ಎನ್ನಲಡ್ಡಿಯಿಲ್ಲ. 'ದಯವೇ ಧರ್ಮದ ಮೂಲ ವಯ್ಯಾ', 'ಅರಿತರೆ ಶರಣ, ಮರೆತಡೆ ಮಾನವ' ಎನ್ನುವ ಸಂದೇಶಗಳನ್ನು ಸಾರುವ ಮೂಲಕ ಮಾನವ ತಾವಾದಕ್ಕೆ ಮಾದರಿಯಾಗಿರುವ ಬಸವಣ್ಣ, ಮೇಲು- ಕೀಳು ಎಂಬ ಭೇದವನ್ನು ತೊಡೆದುಹಾಕಲು ಶ್ರಮಿಸಿದ ಮಹಾಪುರುಷ. ಅವರ ತತ್ವ-ಆದರ್ಶಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು, ಅಂತರಂಗ ಶುದ್ಧಿ ಮತ್ತು ಬಹಿರಂಗ ಶುದ್ಧಿಯನ್ನು ಸಾಧಿಸಿದರೆ ಅದು ನಾವು ಅವರಿಗೆ ಹಾಗೂ ಅವರ ಚಿಂತನೆಗಳಿಗೆ ಸಲ್ಲಿಸುವ ಗೌರವವಾಗುತ್ತದೆ.

(ಲೇಖಕರು ಕನ್ನಡ ಉಪನ್ಯಾಸಕರು)

★★★

ಸಮಷ್ಟಿ ಭಾವದ ಬಸವ ಬೆಳಗು

ರವಿ ರಾ. ಕಂಗಳ

ಭಕ್ತಿಮಾರ್ಗದ ಮೂಲಕ ಶರಣ ಪರಂಪರೆಗೆ ಕಾಯಕಲ್ಪ ನೀಡಿ ಸಮಾಜದ ಪರಿವರ್ತನೆಗೆ ಶ್ರಮಿಸಿದ ಬಸವಣ್ಣನವರು ಕ್ರಿ.ಶ.1140ರಲ್ಲಿ ಈಗಿನ ವಿಜಯಪುರ ಜಿಲ್ಲೆಯ ಬಸವನ ಬಾಗೇವಾಡಿ ತಾಲೂಕಿನ ಇಂಗಳೇಶ್ವರ ಗ್ರಾಮದಲ್ಲಿ ಜನಿಸಿದರು. ತಂದೆ ಮಾದರಸ, ತಾಯಿ ಮಾದಲಾಂಬಿಕೆ. ಬ್ರಾಹ್ಮಣ ಸಂಪ್ರದಾಯದಂತೆ ಅವರ 8ನೇ ವಯಸ್ಸಿನಲ್ಲಿ ಉಪನಯನದ ನಿಮಿತ್ತ ಜನಿವಾರ ಹಾಕಲು ಬಂದಾಗ, ತಮಗಿಂತ ಹಿರಿಯಳಾದ ಅಕ್ಕ ನಾಗಮ್ಮನಿಗೆ ಮೊದಲು ಹಾಕುವಂತೆ ಬಸವಣ್ಣ ಕೇಳುತ್ತಾರೆ. 'ಇದು ಪುರುಷರಷ್ಟೇ ಧರಿಸುವಂಥದ್ದು, ಅಕ್ಕನಿಗೆ ಹಾಕಲು ಬರುವುದಿಲ್ಲ' ಎಂದು ದೊಡ್ಡವರು ಉತ್ತರಿಸಿದಾಗ ಈ ಅಸಮಾನತೆಯನ್ನು ವಿರೋಧಿಸಿ ಬಸವಣ್ಣನವರು ಮನೆಯನ್ನು ತೊರೆದು ಕೂಡಲಸಂಗಮಕ್ಕೆ ತೆರಳುತ್ತಾರೆ.

ಬಸವಣ್ಣನವರ ವಚನ ಸಾಹಿತ್ಯವು ಅಕ್ಷರಶಃ ಜ್ಞಾನ ನಿಧಿಯೇ. ಸಮಾಜದಲ್ಲಿನ ಮೌಢ್ಯಗಳನ್ನು ಮೆಟ್ಟಿ ನಿಂತು, ಎಲ್ಲರ ಹೃದಯಗಳಲ್ಲಿ ವೈಚಾರಿಕ ದೃಷ್ಟಿಯನ್ನು ಬಿಂಬಿಸಿ, ಇಡೀ ಜಗತ್ತಿಗೆ ಬೇಕಾದ ಮಾನವ ಕಲ್ಯಾಣದ ಮೌಲ್ಯಗಳನ್ನು ಅವರು ತಮ್ಮ ವಚನಗಳಲ್ಲಿ ಪ್ರಚುರ ಪಡಿಸಿದ್ದಾರೆ. ಬಸವಣ್ಣನವರ ವಚನಗಳೆಂದರೆ ಬರೀ 'ಬಾಯಿಮಾತು'ಗಳಾಗದೆ, 'ಕೊಟ್ಟಮಾತು'ಗಳಾಗಿ ದ್ದವು. ನಡೆ-ನುಡಿಗಳನ್ನು ಒಂದಾಗಿಸಿ ಕೊಟ್ಟ ಮಾತಿ ನಂತೆ ನಡೆಯುವ ಸಂಸ್ಕಾರವನ್ನು ಜೀವನದಲ್ಲಿ ಅಳವಡಿಸಿಕೊಂಡವರಾಗಿದ್ದರು ಬಸವಣ್ಣ. 'ನುಡಿದರೆ ಮುತ್ತಿನ ಹಾರದಂತಿರಬೇಕು..' ಎಂಬ ವಚನದಲ್ಲಿ, ''ನಾವಾಡಿದ ಮಾತುಗಳು, ನಡೆಯುವ ಮಾರ್ಗಕ್ಕೆ ತಾಳೆಯಾಗಬೇಕು. ನಡೆ-ನುಡಿಗಳು ಒಂದಾದ ಬಳಿಕ ಮನಸುಗಳ ಬೆಸುಗೆಯಾಗಬೇಕು. ನಮ್ಮ ನುಡಿಯು ಸತ್ಯಶುದ್ಧವಾಗಿರಬೇಕು, ಪಾರದರ್ಶಕವಾಗಿರಬೇಕು, ಪ್ರಕಾಶಮಾನವಾಗಿರಬೇಕು, ಮನವನ್ನು ಮುಟ್ಟುವಂತಿ ರಬೇಕು. ನಡೆ-ನುಡಿಯ ಸಮನ್ವಯವನ್ನು ಕಂಡು ಆತ್ಮದೊಳಗಿನ ಲಿಂಗವು ಅಹುದಹುದೆಂದು ಮೆಚ್ಚಿ ಕೊಳ್ಳುವಂತಿರಬೇಕು. ನುಡಿದು ಅದರಂತೆ ನಡೆಯದಿದ್ದರೆ ಶಿವನು ಒಲಿಯಲಾರ'' ಎಂದು ಹೇಳುತ್ತಾ ನುಡಿ ಮತ್ತು ನಡೆಯ ಮಹತ್ವವನ್ನು ಸಾರಿದ್ದಾರೆ ಬಸವಣ್ಣನವರು.

ಬಸವಣ್ಣನವರು ಒಬ್ಬ ಅರ್ಥಶಾಸ್ತ್ರಜ್ಞರಾಗಿ ಸಮಾಜದ ಸರ್ವಾಂಗೀಣ ಪ್ರಗತಿ ಮತ್ತು ವಿಕಾಸಕ್ಕೆ ಶ್ರಮ ಸಂಸ್ಕೃತಿಯ ಅಡಿಪಾಯ ಹಾಕಿ, ಕಾಯಕ ತತ್ವವನ್ನು ಇಡೀ ವಿಶ್ವಕ್ಕೆ ಸಾರಿದರು. ಪ್ರತಿಯೊಬ್ಬರೂ ಕಾಯಕದಿಂದಲೇ ಜೀವನವನ್ನು ಸಾಗಿಸಬೇಕು. ಇನ್ನಾರದ್ದೋ ದುಡಿಮೆಯ ಬೆವರಿನಲಿ, ಕಣ್ಣೀರಿನಲಿ ಬೆಂದ ಅನ್ನವನ್ನು ಉಣ್ಣದಿರೆಂದು ಕರೆ ನೀಡಿ, ಗೆದ್ದಲಿರುವೆಗಳು ಮಾಡಿದ ಹುತ್ತದಲ್ಲಿ ಹಾವು ವಾಸ ಮಾಡಿದಂತೆ, ದುಡಿಯುವವರು ಬೇರೆ, ಅದರ ಫಲವನ್ನು ಉಣ್ಣುವವರು ಬೇರೆ ಆಗಬಾರದೆಂದು ಸೂಚ್ಯವಾಗಿ ತಿಳಿಸುತ್ತ ಪ್ರತಿಯೊಬ್ಬರೂ ಕಾಯಕ ನಿಷ್ಠರಾಗಬೇಕೆಂದು ತಿಳಿಸಿ ತಾವೂ ಅದರಂತೆ ಪಾಲಿಸಿದವರು ಬಸವಣ್ಣನವರು. 'ಗುರುಲಿಂಗ ಜಂಗಮವಾದರೂ ಕಾಯಕದಿಂದಲೇ ಮುಕ್ತಿ' ಎಂದು ಪ್ರತಿಪಾದಿಸುವ ಮೂಲಕ ವಿನೂತನವಾದ ಕಾಯಕ ಸಿದ್ಧಾಂತಕ್ಕೆ ಹೊಸ ವ್ಯಾಖ್ಯಾನ ಬರೆದರು. ಕರ್ಮ ಸಿದ್ಧಾಂತವನ್ನು ಕಾಯಕ ಸಿದ್ಧಾಂತವನ್ನಾಗಿ ಪರಿವರ್ತಿಸಿದ ದಾರ್ಶನಿಕರು ಬಸವಾದಿ ಶರಣರು. 'ಕಾಯಕವೇ ಕೈಲಾಸ' ಎಂಬುದು ಅವರು ಜಗತ್ತಿಗೆ ನೀಡಿದ ಅಮೂಲ್ಯ ಸಂದೇಶವಾಗಿದೆ.

ಇಂದು ಬಸವ ಜಯಂತಿ

''ಭಕ್ತಿ ಸುಭಾಷೆಯ ನುಡಿಯ ನುಡಿವೆ, ನುಡಿದಂತೆ ನಡೆವೆ, ನಡೆಯೊಳಗೆ ನುಡಿಯ ಪೂರೈಸುವೆ, ಮೇಲೆ ತೂಗುವ ತ್ರಾಸು ಕಟ್ಟಳೆ ನಿಮ್ಮ ಕೈಯಲ್ಲಿ ಒಂದು ಜವೆ ಕೊರತೆಯಾದಡೆ, ಎನ್ನನದ್ದಿ ನೀನೆದ್ದು ಹೋಗು ಕೂಡಲಸಂಗಮ ದೇವ'' ಎಂದು ಹೇಳುವ ಮೂಲಕ ನ್ಯಾಯದೇವತೆಯ ಸ್ಥಾನದಲ್ಲಿ ನಿಂತಿರುವ ಭಗವಂತನ ಕೈಯಲ್ಲಿನ ತಕ್ಕಡಿಯ ಒಂದು ಪರಡಿಯಲ್ಲಿ ನನ್ನ ಕೊಟ್ಟ ಮಾತುಗಳನ್ನು ಹಾಕು, ಇನ್ನೊಂದು ಪರಡಿ ಯಲ್ಲಿ ನನ್ನ ನಡೆಯನ್ನು ಹಾಕು. ನುಡಿದಂತೆ ನಡೆಯು ವಲ್ಲಿ ಒಂದು ಕೂದಲೆಳೆಯಷ್ಟು ಅಂತರ ಕಂಡರೂ ನನ್ನನ್ನು ನರಕಕ್ಕೆ ಕಳಿಸಿ ನೀನೆದ್ದು ಹೋಗು ಎಂದು ಸವಾಲು ಹಾಕುವ ಮಾತುಗಳು ನಮ್ಮ ನಡೆ ನುಡಿಗಳು ಹೇಗಿರಬೇಕೆಂಬುದನ್ನು ಎಚ್ಚರಿಸುತ್ತವೆ. ಇಂದಿನ ಕಾಲದ ಜನರ ನಡೆ ಮತ್ತು ನುಡಿಗಳಲ್ಲಿ ಅಗಾಧ ವ್ಯತ್ಯಾಸ ಇರುವುದನ್ನು ಕಾಣುತ್ತೇವೆ. ಅದು ''ಹೇಳು ವುದು ಶಾಸ್ತ್ರ, ತಿನ್ನುವುದು ಬದನೆಕಾಯಿ'' ಎಂಬಂತಾ ಗಿದೆ. ''ನಡೆಯಿಲ್ಲದ ನುಡಿ, ಅರಿವಿಂಗೆ ಹಾನಿ'' ಎಂದು ಆಯ್ದಕ್ಕಿ ಲಕ್ಕಮ್ಮ ಹೇಳಿದ ಮಾತನ್ನು ನೆನಪಿಸಿ ಕೊಂಡು ನುಡಿದಂತೆ ನಡೆಯುವ ಪ್ರವೃತ್ತಿ ಯನ್ನು ಎಲ್ಲರೂ ರೂಢಿಸಿಕೊಳ್ಳುವ ಔಚಿತ್ಯವನ್ನು ಅವರ ವಚನದ ಮೂಲಕ ಅರ್ಥ ಮಾಡಿಕೊಳ್ಳಬೇಕಾಗಿದೆ.

''ಅರಿದೊಡೆ ಶರಣ, ಮರೆದೊಡೆ ಮಾನವ'' ಎಂಬ ಮಾತಿನಂತೆ ನರಮಾನವನು ಮಹಾಮಾನವನಾಗಲು ಬೇಕಾದ ಶಕ್ತಿ ಸಾಮರ್ಥ್ಯವನ್ನು ಭಕ್ತಿಪಥದ ಮೂಲಕ ಸಕಲ ಜೀವರಾಶಿಗಳಲ್ಲಿ ದಯೆಯನ್ನು ತೋರಿ ದಯವೇ ಧರ್ಮದ ಮೂಲವಯ್ಯ ಎಂಬುದನ್ನು ಅರಿತುಕೊಳ್ಳಬೇಕು. ಜೀವನದಲ್ಲಿ ಎಲ್ಲವನ್ನೂ ಪಡೆದುಕೊಂಡ ಮಾನವ ಅಹಂಭಾವದಿಂದ ಮೆರೆಯುತ್ತಿರುವುದು ದುರಂತವಾಗಿದೆ. ನಾನು, ನಾನು ಎಂಬ ಅಹಂಭಾವ ತುಂಬಿ ನಾಲಗೆಯೆಲ್ಲ ಹೊಲಸಾಗಿ ನಾಡಿಗೆ ಕೆಡುಕುಂಟು ಮಾಡುತ್ತಿದೆ. ನಾನೆಂದು ಮೆರೆದವರ ಬದುಕಿನ ದುರಂತಗಳನ್ನು ಮೆಲುಕು ಹಾಕಿದಾಗ, ಜಗತ್ತನ್ನೇ ಗೆದ್ದ ಅಲೆಕ್ಸಾಂಡರ್ ಜೀವನ ಯಾತ್ರೆಯ ಕೊನೆಯಲ್ಲಿ ಶವಪೆಟ್ಟಿಗೆಯಿಂದ ತನ್ನ ಎರಡು ಕೈಗಳನ್ನು ಹೊರಹಾಕಲು ತಿಳಿಸುತ್ತ, ಜಗತ್ತಿಗೆ ತಾನು ಗಳಿಸಿದ ಅಷ್ಟೈಶ್ವರ್ಯಗಳನ್ನು ಇಲ್ಲಿಯೇ ಬಿಟ್ಟು ಬರಿಗೈಯಲ್ಲಿ ಹೋಗುತ್ತಿದ್ದೇನೆ ಎಂಬ ಸಂದೇಶವನ್ನು ಸಾರುತ್ತಾನೆ. ಎದೆಯುಬ್ಬಿಸಿ ನಡೆದವರ ಬದುಕು ಬಹು ಬೇಗನೆ ಎದೆಬಿದ್ದು ಹೋಗುತ್ತದೆ. ಆಗಸದೆತ್ತರ ಬೆಳೆದ ಬಾಗದ ಮರವು, ತನ್ನ ಬುಡದಲ್ಲಿ ಬೆಳೆದ ಬಾಗುವ ಹುಲ್ಲುಕಡ್ಡಿಯನ್ನು ಹಂಗಿಸಿ ಮೆರೆಯುವಾಗ ಜೋರಾದ ಗಾಳಿಗೆ ಬಾಗದ ಮರವು ಬಿದ್ದು ಹೋಗುತ್ತದೆ, ಬಾಗುವ ಹುಲ್ಲುಕಡ್ಡಿಯು ಬದುಕುಳಿಯುತ್ತದೆ. ಅಂತೆಯೇ ಬಸವಣ್ಣವರ ಸೊಗಸಾದ ಮಾತು ನಮ್ಮಲ್ಲಿನ ಮೆರೆಯುವ ಭಾವ ಕಳೆದು ಬಾಗುವ ಭಾವವನ್ನು ಮೂಡಿಸುತ್ತದೆ.

ಇನ್ನು, 'ಬಿದಿರಲಂದಣವಕ್ಕು, ಬಿದಿರೆ ಸತ್ತಿಗೆಯಕ್ಕು' ಎಂದು ಶುರುವಾಗುವ ವಚನದಲ್ಲಿ ಬಸವಣ್ಣನವರು, ''ಆಕಾಶದೆತ್ತರಕ್ಕೆ ಬೆಳೆಯುವ ಹುಲ್ಲುಜಾತಿಯ ಬಿದಿರು ಅನೇಕ ವಿಧಗಳಲ್ಲಿ ಉಪಯುಕ್ತವಾಗಿದ್ದರೂ 'ನಾನು' ಎಂಬ ಅಹಂಭಾವವಿರದೆ ಬಾಗುವ ಗುಣವನ್ನು ಹೊಂದಿದೆ. ಅದರಂತೆ ನಾವು ಕೂಡ ನಮ್ಮಲ್ಲಿನ ಅಹಂಕಾರವನ್ನು ತೊಡೆದು, ಬಾಗುವ ವಿನಯವಂತಿಕೆ ಯನ್ನು ರೂಢಿಸಿಕೊಳ್ಳಬೇಕು'' ಎಂದು ಸಾರಿದ್ದಾರೆ.

ನಮ್ಮ ಮನೆ ಮತ್ತು ಶಾಲೆಗಳಲ್ಲಿ ವಚನಗಳ ಪಠಣವು ನಿತ್ಯದ ಅಭ್ಯಾಸವಾಗಬೇಕು. ಹಿಂದಿನ ಸಂಸ್ಕೃತಿಯ ಲೇಪನವು ಮಾಸುವ ಮುನ್ನ, ವಚನ ಸಾಹಿತ್ಯವು ನೀಡಿದ ತಿರುಳನ್ನು ನಮ್ಮ ಬದುಕಿನಲ್ಲಿ ಸಮನ್ವಯ ಗೊಳಿಸಿ ಮುಂದಿನ ಪೀಳಿಗೆಗೆ ವರ್ಗಾಯಿಸುವುದು ಈ ಕ್ಷಣದ ಅನಿವಾರ್ಯತೆ ಯಾಗಿದೆ. ಸಮಾಜವು ಸರಿಯಾದ ಹಾದಿಯಲ್ಲಿ ಸಾಗುವಂತಾಗುವಲ್ಲಿ ಇದು ಮಹತ್ವದ ಪಾತ್ರವನ್ನು ವಹಿಸಬಲ್ಲದು.

ಪ್ರತಿಯೊಬ್ಬರೂ ಸಾಮಾಜಿಕ ವ್ಯವಸ್ಥೆಗೆ ಅನುಗುಣವಾಗಿ ತಮ್ಮ ಪಾಲಿನ ಕರ್ತವ್ಯಗಳನ್ನು ಸಮರ್ಪಕವಾಗಿ ನಿರ್ವಹಿಸಬೇಕಾಗುತ್ತದೆ. 'ಲೋಕದ ಡೊಂಕ ನೀವೇಕೆ ತಿದ್ದುವಿರಿ? ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ, ನಿಮ್ಮ ಮನವ ಸಂತೈಸಿಕೊಳ್ಳಿ' ಎಂದು ಹೇಳುವ ಮೂಲಕ ಬಸವಣ್ಣನವರು ಜನರನ್ನು ಸ್ವಯಂ ಅವಲೋಕನಕ್ಕೆ ಹಚ್ಚುತ್ತಾರೆ ಮತ್ತು ಸ್ವಾನುಭವದ ಸ್ವಯಂಜಾಗೃತಿಯ ಮಹತ್ವವನ್ನು ಸಾರುತ್ತಾರೆ. ಇಲ್ಲಿಯವರೆಗಿನ ಅಚಾತುರ್ಯಗಳಿಗೆ ವಿದಾಯ ಹೇಳಿ ಹೊಸಬಾಳನ್ನು ಕಟ್ಟಿಕೊಂಡು ಅನುದಿನವೂ ಸಂತೋಷ-ಸಮಾಧಾನದ ಬದುಕನ್ನು ನಮ್ಮದಾಗಿಸಿಕೊಳ್ಳಲು ನಮ್ಮ ನಡೆ-ನುಡಿ-ನೋಟಗಳಲ್ಲಿ ವಚನಗಳ ಸಾರವನ್ನು ಅಳವಡಿಸಿಕೊಳ್ಳಬೇಕು. ವಚನಗಳನ್ನು ನಮ್ಮ ಸಂಸ್ಕೃತಿಯ ರಾಯಭಾರಿಗಳನ್ನಾಗಿ ಮಾಡಿಕೊಂಡು ಅನುಸರಿಸಿದಲ್ಲಿ, 'ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು' ಎಂಬ ಮಾತಿನಂತೆ ಬಸವಣ್ಣನವರ ಸಮಷ್ಟಿ ಭಾವದ ಬೆಳಕು ಎಲ್ಲೆಡೆ ಪಸರಿಸಲು ಸಾಧ್ಯವಾಗುತ್ತದೆ.

(ಲೇಖಕರು ಸಾಹಿತಿ)

ಬೀಳುತ್ತಿಲ್ಲ ಬಾಲ್ಯವಿವಾಹಕ್ಕೆ ಬ್ರೇಕ್ ! ಬಿಗಿಯಾಗಲಿ ಕಾನೂನು ಕಟ್ಟಳೆ ಭಯ

ಜಿಲ್ಲಾ ನೋಟ

ಶರಣಬಸವ ಹುಲಿಹೈದರ, ಕೊಪ್ಪಳ

ಬಾಲ್ಯವಿವಾಹ ಕಾನೂನಿನ ಬಗ್ಗೆ ಪಾಲಕರಲ್ಲಿನ ಉದಾಸೀನದಿಂದ ಜಿಲ್ಲೆಯಲ್ಲಿ ಬಾಲ್ಯವಿವಾಹ ಪ್ರಕರಣ ಹೆಚ್ಚುತ್ತಿವೆ. ಕಳೆದ ಕೇವಲ 27 ದಿನಗಳಲ್ಲಿ ಕೊಪ್ಪಳ ಜಿಲ್ಲೆ ಒಂದರಲ್ಲಿ 22 ಬಾಲ್ಯವಿವಾಹ ಪ್ರಕರಣ ಪತ್ತೆ ಆಗಿವೆ. ಈ ಪೈಕಿ ನಾಲ್ಕು ಪ್ರಕರಣಕ್ಕೆ ಅಧಿಕಾರಿಗಳು ಪೊಲೀಸ್ ಠಾಣೆಯಲ್ಲಿ ಕೇಸು ದಾಖಲಿಸಿದ್ದಾರೆ.

ಕಾನೂನಿನ ಭಯ ಇಲ್ಲ

ಬಾಲ್ಯ ವಿವಾಹಕ್ಕೆ ಒಳಗಾದ ಬಾಲಕಿ ಮತ್ತು ಮದುವೆಯಾದ ಯುವಕನ ತಂದೆ - ತಾಯಿ ವಿರುದ್ಧ ಕಾಯ್ದೆ ಅನುಷ್ಠಾನ ಅಧಿಕಾರಿಗಳು ಪ್ರಕರಣ ದಾಖಲಿಸಿದ್ದಾರೆ. ಆದರೆ ಇಂಥ ಪ್ರಕರಣ ದಲ್ಲಿ ಶಿಕ್ಷೆ ಆಗಿರುವ ಪ್ರಮಾಣ ತೀರಾ ಕಡಿಮೆ. ಪೊಲೀಸರಿಗೆ ಕೇಸ್ ಮಾಡುವಾಗ ಇರುವ ಆಸಕ್ತಿ, ಆರೋಪಪಟ್ಟಿ ಸಲ್ಲಿಸುವಾಗ ಇರುವುದಿಲ್ಲ. ಇನ್ನೂ ಕೋರ್ಟ್‌ನಲ್ಲಿ ವಿಚಾರಣೆ ನಡೆಯುವ ವೇಳೆಗೆ ರಾಜಕೀಯ ಒತ್ತಡಕ್ಕೆ ಒಳಗಾಗುತ್ತಾರೆ. ಇದರಿಂದ ಶಿಕ್ಷೆ ಆಗುತ್ತಿಲ್ಲ. ಹೀಗಾಗಿ ಕಾನೂನಿನ ಬಗ್ಗೆ ಭಯ ಇಲ್ಲದಂತಾಗಿದೆ.

» ಬಡತನ, ಅನಕ್ಷರತೆಯೂ ಕಾರಣ

» ಕೊಪ್ಪಳ ಜಿಲ್ಲೆಯಲ್ಲಿ 22 ಪ್ರಕರಣ

ಬಡತನ, ಅನಕ್ಷರತೆ

ಕೊಪ್ಪಳ ಜಿಲ್ಲೆಯಲ್ಲಿ ಬಾಲ್ಯವಿವಾಹ ನಡೆಯಲು ಇಲ್ಲಿನ ಬಡತನ, ಅನಕ್ಷರತೆ ಪ್ರಧಾನ ಕಾರಣ. ಜತೆಗೆ ಮೊಬೈಲ್ ಹಾವಳಿಯಿಂದ ಮಕ್ಕಳು ದಾರಿ ತಪ್ಪುತ್ತಾರೆ ಎಂಬ ಪಾಲಕರಲ್ಲಿನ ಆತಂಕವೂ ಬಾಲ್ಯ ವಿವಾಹ ಹೆಚ್ಚಳಕ್ಕೆ ಕಾರಣ. ಇದನ್ನು ಅಧಿಕಾರಿಗಳು ಪತ್ತೆ ಮಾಡಿದ್ದಾರೆ. ಇನ್ನು ಮದುವೆ ಮಾಡಿದರೆ ನಮ್ಮ ಜವಾಬ್ದಾರಿ ಕಳೆಯುತ್ತದೆ ಎಂಬ ಬಡ ಪಾಲಕರ ಆಲೋಚನೆ ಕೂಡ ಕಾರಣ. ಕೆಲವು ಪ್ರಕರಣದಲ್ಲಿ ಮನೆಯಲ್ಲಿ ಸುಶಿಕ್ಷಿತರು, ಜನಪ್ರತಿ ನಿಧಿಗಳು, ಅಧಿಕಾರಿಗಳು ಇದ್ದರೂ ಬಾಲ್ಯವಿವಾಹ ನಡೆದ ನಿದರ್ಶನಗಳಿವೆ.

ಮೌಢ್ಯ-ಸಂಪ್ರದಾಯ

ಜಿಲ್ಲೆಯಲ್ಲಿ ಬಾಲ್ಯವಿವಾಹ ನಡೆಯಲು ಖರ್ಚಿನ ನೆಪ ಮತ್ತು ಮೂಢನಂಬಿಕೆಗಳೂ ಇವೆ. ಅಣ್ಣನ ಜೊತೆಗೆ ತಮ್ಮನ ಮದುವೆಯೂ ಮಾಡಿದರೆ ಒಂದೇ ಖರ್ಚಿನಲ್ಲಿ ಮದುವೆ ಆಗುತ್ತವೆ ಎಂಬ ಆರ್ಥಿಕ ಲೆಕ್ಕದ ದೃಷ್ಟಿಯೂ ಕಾರಣ. ಇನ್ನು ಕೊನೆಯ ಮಗನನ್ನು ಬಿಟ್ಟು ಮದುವೆ ಮಾಡ ಬಾರದು ಎಂಬ ಸಂಪ್ರದಾಯವೂ ಇದೆ. ಇಂಥ ಕಾರಣಗಳ ಜೊತೆಗೆ ಪ್ರೌಢಾವಸ್ಥೆಗೆ ಬಂದ ಹೆಣ್ಣು ಮಕ್ಕಳು ಪ್ರೀತಿ-ಪ್ರೇಮದ ಜಾಲದಲ್ಲಿ ಬಿದ್ದ ವಿಚಾರ ಗೊತ್ತಾಗಿಯೂ ಪಾಲಕರು ಮದುವೆ ಮಾಡಲು ಮುಂದಾಗುತ್ತಿದ್ದಾರೆ.

> ಮಕ್ಕಳ ಸಹಾಯವಾಣಿ -1098 ಮತ್ತು ಇಆರ್ ಎಸ್‌ಎಸ್ 112 ರ ಬಗ್ಗೆ ಕೊಪ್ಪಳ ಜಿಲ್ಲೆಯಲ್ಲಿ ವ್ಯಾಪಕ ಪ್ರಚಾರ ಆಗಿದೆ. ಇದರಿಂದ ಮಕ್ಕಳ ಸಹಾಯವಾಣಿಗೆ ಹೆಚ್ಚು ಕರೆ ಬರುತ್ತಿವೆ. ವಿಶೇಷವಾಗಿ ಕೊಪ್ಪಳ ಜಿಲ್ಲೆಯಲ್ಲಿ ಬಾಲ್ಯ ವಿವಾಹ ತಡೆಯಲು ಜಿಲ್ಲಾಧಿಕಾರಿಗಳು ಮುತು ವರ್ಜಿ ವಹಿಸಿ ಸುತ್ತೋಲೆ ಹೊರಡಿಸಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಹೆಚ್ಚು ಪ್ರಕರಣ ಪತ್ತೆ ಆಗುತ್ತಿವೆಯೆಂದರೆ ನಮ್ಮ ಕೆಲಸವೇ ಸಾಕ್ಷಿ.
> -**ಮಹಾಂತಸ್ವಾಮಿ ಪೂಜಾರ,** ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ, ಕೊಪ್ಪಳ

> ಬಾಲ್ಯ ವಿವಾಹ ನಿಷೇಧ ಕಾಯಿದೆ ಪ್ರಕರಣದಲ್ಲಿ ಅಧಿಕಾರಿಗಳು ವಿಳಂಬ ಮಾಡದೇ ಕೂಡಲೇ ತಪ್ಪಿತಸ್ಥರ ವಿರುದ್ಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖ ಲಿಸಬೇಕು. ತಡ ಮಾಡಿದರೆ ಅಧಿಕಾರಿಗಳ ವಿರುದ್ಧ ರಾಜ್ಯ ಮಕ್ಕಳ ರಕ್ಷಣಾ ಆಯೋಗ ಕ್ರಮಕ್ಕೆ ಮುಂದಾಗಲಿದೆ.
> -**ಶೇಖರಗೌಡ ರಾಮತ್ನಾಳ,** ಸದಸ್ಯ, ರಾಜ್ಯ ಮಕ್ಕಳ ರಕ್ಷಣಾ ಆಯೋಗ



ಬಿಗಿ ಕಾನೂನು ಬೇಕು

ಬಾಲ್ಯವಿವಾಹ ನಿಷೇಧ ಕಾಯ್ದೆಯ ತಿದ್ದುಪಡಿಯಡಿ ಬಾಲ್ಯವಿವಾಹದ ಲಗ್ನ ಪತ್ರಿಕೆ ಪ್ರಿಂಟ್ ಮಾಡುವವರು, ಶಾಮೀಯಾನ ಹಾಕುವವರು, ಪುರೋಹಿತರು ಅಷ್ಟೇ ಅಲ್ಲದೇ ಮದುವೆಯಲ್ಲಿ ಭಾಗಿ ಆಗುವವರ ವಿರುದ್ಧವೂ ಎಫ್‌ಐಆರ್ ದಾಖಲು ಮಾಡಿ, ಶಿಕ್ಷೆಗೆ ಗುರಿ ಮಾಡುವ ಅವಕಾಶವಿದೆ. ಆದರೆ, ಈವರೆಗೆ ಅಧಿಕಾರಿಗಳು ಕೇವಲ ಬಾಲಕಿ ಮತ್ತು ವರನ ತಂದೆ-ತಾಯಿ ಮೇಲೆ ಮಾತ್ರ ಪ್ರಕರಣ ದಾಖಲು ಮಾಡುತ್ತಿದ್ದಾರೆ. ಹೀಗಾಗಿ ಕಾನೂನು ಕೂಡ ಸಮರ್ಪಕ ಜಾರಿ ಆಗಬೇಕಿದೆ.

ಶಾಸಕರೇ ಭಾಗಿ

ಕೊಪ್ಪಳ ಜಿಲ್ಲೆಯಲ್ಲಿ ಕಳೆದ 27 ದಿನದಲ್ಲಿ ಬಾಲ್ಯ ವಿವಾಹ ನಿಷೇಧ ಕಾಯ್ದೆಯಡಿ 4 ಪ್ರಕರಣ ದಾಖಲಾಗಿವೆ. ಈ ಪೈಕಿ ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ತಂಗಡಗಿ ಸ್ವಕ್ಷೇತ್ರ ಕನಕಗಿರಿ ತಾಲೂಕಿನಲ್ಲೇ 2 ನಡೆದಿವೆ. ತಾಲೂಕಿನ ಸಿರಿವಾರದ ಬಾಲ್ಯವಿವಾಹ ಪ್ರಕರಣದಲ್ಲಿ ಕಂಪ್ಲಿ ಶಾಸಕ ಜೆ.ಎನ್.ಗಣೇಶ ಭಾಗಿಯಾಗಿದ್ದಾರೆ. ಜೊತೆಗೆ ಬಾಲಕಿ ತಾಯಿಯೇ ಗ್ರಾಪಂ ಸದಸ್ಯೆ. ಇನ್ನು ಹುಲಿಹೈದರ ಗ್ರಾಮದ ಪ್ರಕರಣದಲ್ಲಿ ಕುಟುಂಬದ ಬಹುತೇಕರು ಸುಶಿಕ್ಷಿತರೇ ಇದ್ದರೂ ಬಾಲ್ಯವಿವಾಹ ನಡೆದಿದ್ದು ಸೋಜಿಗ ಎನ್ನಿಸಿದೆ.

ಹೆಚ್ಚಿದ ಕರೆಗಳ ಸಂಖ್ಯೆ

ಕೊಪ್ಪಳ ಜಿಲ್ಲಾ ಮಕ್ಕಳ ರಕ್ಷಣಾ ಘಟಕದಡಿ ಕಳೆದ ಸೆಪ್ಟೆಂಬರ್ 2023ರಿಂದ ಕೊಪ್ಪಳ ಜಿಲ್ಲೆಯಲ್ಲಿ ಸಹಾಯವಾಣಿ ಆರಂಭವಾಗಿದೆ. ನಂತರ ಮಾರ್ಚ್ 2024ರ ವರೆಗೆ ಬಾಲ್ಯ ವಿವಾಹಕ್ಕೆ ಸಂಬಂಧಿಸಿದಂತೆ 97 ಕರೆ ಸ್ವೀಕೃತ ಆಗಿವೆ. ಇದರಲ್ಲಿ 77 ಪ್ರಕರಣಕ್ಕೆ ಮಕ್ಕಳ ಸಹಾಯ ವಾಣಿ ಸಿಬ್ಬಂದಿ ಅಟೆಂಡ್ ಮಾಡಿದ್ದಾರೆ. ಈ ಪೈಕಿ 2 ಪ್ರಕರಣದಲ್ಲಿ ಎಫ್ ಐಆರ್ ಮಾಡಿ, 75 ಪ್ರಕರಣ ದಲ್ಲಿ ಬಾಲ್ಯವಿವಾಹ ತಡೆದಿದ್ದಾರೆ. ಬಾಕಿ ಎಲ್ಲ ತಪ್ಪು ಮಾಹಿತಿ ಆಗಿವೆ.

ವರ್ಷಕ್ಕೆ 223 ಕರೆಗಳು

ಇನ್ನು ಏಪ್ರಿಲ್ 2024 ರಿಂದ ಮಾರ್ಚ್ 2025ರ ವರೆಗೆ ಒಟ್ಟು 223 ಕರೆ ಸ್ವೀಕೃತ ಆಗಿವೆ. ಈ ಪೈಕಿ 8 ಪ್ರಕರಣ ಬೇರೆ ಜಿಲ್ಲೆಗೆ ವರ್ಗಾವಣೆ ಮಾಡಲಾ ಗಿದೆ. ಎರಡು ಪ್ರಕರಣಕ್ಕೆ ಕೋರ್ಟ್ ಮೂಲಕ ತಡೆ ಯಾಜ್ಞೆ ತಂದು, ಪಾಲಕರಿಗೆ ನೀಡಲಾಗಿದೆ. ಇನ್ನು 163 ಬಾಲ್ಯ ವಿವಾಹ ತಡೆಯಲಾಗಿದ್ದು, ಒಟ್ಟು 7 ಪ್ರಕರಣದಲ್ಲಿ ಎಫ್ ಐಆರ್ ಮಾಡಲಾಗಿದೆ. ಉಳಿದ ಎಲ್ಲವೂ ತಪ್ಪಾದ ಮಾಹಿತಿ ಆಗಿವೆ. ಇನ್ನು 2025ರ ಏ. 27 ರ ವರೆಗೆ ಕೇವಲ 27 ದಿನದಲ್ಲಿ 22 ಕರೆ ಸ್ವೀಕೃತಿಗೊಂಡಿವೆ. ಈ ಪೈಕಿ 18 ಪ್ರಕರಣದಲ್ಲಿ ಮಕ್ಕಳ ರಕ್ಷಣಾ ಘಟಕದ ಸಿಬ್ಬಂದಿ ಪಾಲಕರಿಗೆ ತಿಳಿವಳಿಕೆ ಹೇಳಿದ್ದಾರೆ. ಜೊತೆಗೆ 4 ಪ್ರಕರಣದಲ್ಲಿ ಎಫ್ ಐಆರ್ ಮಾಡಲಾಗಿದೆ.

ಯೂಟ್ಯೂಬ್‌ಗೆ ಎರಡು ದಶಕಗಳ ಸಂಭ್ರಮ

ಜಗತ್ತಿನ ಅತ್ಯಂತ ಬೃಹತ್ ಸಾಮಾಜಿಕ ಜಾಲತಾಣದಲ್ಲಿ ಒಂದಾದ ಯೂಟ್ಯೂಬ್ ಆರಂಭವಾಗಿ 20 ವರ್ಷಗಳು ಕಳೆದಿವೆ. ಜಗತ್ತಿನಲ್ಲಿ ಅಂತರ್ಜಾಲ ಬಳಸುವ 500 ಕೋಟಿ ಜನರಲ್ಲಿ 210 ಕೋಟಿ ಜನರು ಯೂಟ್ಯೂಬ್ ಬಳಸುತ್ತಾರೆ. ಹೆಚ್ಚಿನವರಿಗೆ ಅದೊಂದು ಮನರಂಜನೆಯ ತಾಣವಾದರೆ, ಜ್ಞಾನಾರ್ಜನೆಗಾಗಿ ಇನ್ನೂ ಕೆಲವರು ಬಳಸುತ್ತಾರೆ. ಅದೆಷ್ಟೋ ವಿದ್ಯಾರ್ಥಿಗಳು ಯೂಟ್ಯೂಬ್ ಮೂಲಕವೇ ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿ ಮಾಡಿ ಗುರಿ ಸಾಧಿಸಿದ ಉದಾಹರಣೆಗಳಿವೆ. ಅಷ್ಟೇ ಏಕೆ ಲಾಕ್ ಡೌನ್‌ನಂತಹ ಪರಿಸ್ಥಿತಿಯಲ್ಲಿ ಯೂಟ್ಯೂಬ್ ನೋಡಿ ಅಡುಗೆ ಕಲಿತವರಿದ್ದಾರೆ, ಯೂಟ್ಯೂಬ್‌ನಿಂದ ಜೀವನ ಕಟ್ಟಿಕೊಂಡವರಿ ದ್ದಾರೆ. ಯೂಟ್ಯೂಬ್‌ನಿಂದ ಯಾವ ದೇಶ ಅತೀ ಹೆಚ್ಚು ಹಣಗಳಿಸುತ್ತದೆ? ಯಾವ ದೇಶದ ಜನರು ಅತೀ ಹೆಚ್ಚು ಯೂಟ್ಯೂಬ್ ಚಾನೆಲ್ ಹೊಂದಿದ್ದಾರೆ ಎಂಬ ಸ್ವಾರಸ್ಯಕರ ಸಂಗತಿ ಇಲ್ಲಿವೆ.

ಯೂಟ್ಯೂಬ್ ವೀಡಿಯೊಗಳನ್ನು ಅಪ್‌ಲೋಡ್ ಮಾಡುವಲ್ಲಿ ಅತ್ಯಂತ ಜನಪ್ರಿಯ ಜಾಲತಾಣವಾಗಿ ಮತ್ತು ಗೂಗಲ್ ನಂತರ ಎರಡನೇ ಅತಿ ಹೆಚ್ಚು ವೀಕ್ಷಿಸಲ್ಪಡುವ ಜಾಲತಾಣ ವೇದಿಕಯಾಗಿ ಮಾರ್ಪಟ್ಟಿದೆ. 2005, ಏ. 23ರಂದು ಯೂಟ್ಯೂಬ್ ಪ್ರಾರಂಭವಾಯಿತು. ಅದಾದ ಒಂದೇ ವರ್ಷಕ್ಕೆ ಅಂದರೆ 2006, ಅಕ್ಟೋಬರ್ 9ರಂದು ಗೂಗಲ್ ಸಂಸ್ಥೆಯು ಯೂಟ್ಯೂಬ್ ಅನ್ನು 12 ಸಾವಿರ ಕೋಟಿ ರು. ಕೊಟ್ಟು ಖರೀದಿಸಿತು. ಪ್ರಾರಂಭವಾದ ಮೊದಲ ದಿನವೇ ಇದರಲ್ಲಿ ಜಾವೇದ್ ಕರೀಮ್ ಅವರೊಂದಿಗೆ ಮಿ ಅಟ್ ದಿ ಝೂ ಎಂಬ ಮೊದಲ ವಿಡಿಯೊವನ್ನು ಯೂಟ್ಯೂಬ್‌ನಲ್ಲಿ ಹಾಕಲಾಯಿತು. ಆ ವಿಡಿಯೊ ಭಾರೀ ವೀಕ್ಷಣೆಗಳನ್ನು ಪಡೆದುಕೊಂಡಿತು ಪ್ರಾರಂಭಿಕ ದಿನಗಳಲ್ಲಿ ಯೂ ಟ್ಯೂಬ್ ಜನಪ್ರಿಯತೆ ಅಷ್ಟೇನೂ ಇರಲಿಲ್ಲ. ಆದರೆ ಸಸತ ಪರಿಶ್ರಮ ಹಾಗೂ ನಿರಂತರ ವಿಶ್ವಾಸಾರ್ಹತೆಯಿಂದ 20 ವರ್ಷಗಳ ಅವಧಿಯಲ್ಲಿ ಇಂದು ಅದು ಈ ಮಟ್ಟಿಗಿನ ಜನಪ್ರಿಯತೆಯನ್ನು ಹೊಂದಿದೆ.

ಯೂಟ್ಯೂಬ್ ಹುಟ್ಟಿಕೊಳ್ಳಲು ಮೂಲ ಕಾರಣವನ್ನು ಹುಡುಕಿದರೆ ಆಶ್ಚರ್ಯವಾಗುತ್ತದೆ. 2004ರಲ್ಲಿ ಭಾರತ ಸೇರಿದಂತೆ ಪ್ರಪಂಚದ ಹಲವು ಕಡೆ ಸುನಾಮಿ ಅಪ್ಪಳಿ ಸಿತ್ತು. ಹಲವು ರಾಷ್ಟ್ರಗಳಿಗೆ ಅಪ್ಪಳಿಸಿದ ಸುನಾಮಿಯ ವಿಡಿಯೊಗಳನ್ನು ಹುಡುಕಲು ಕರೀಮ್ ಯತ್ನಿಸಿದಾಗ ಅವು ಅಂತರ್ಜಾಲದಲ್ಲಿ ಸಿಗಲಿಲ್ಲ. ಆಗ ಅವರಿಗೆ ಅನಿಸಿದ್ದು, ವಿಡಿಯೊಗಳನ್ನು ಹಂಚಿಕೊಳ್ಳಲು, ಮತ್ತೊಬ್ಬರು ಅವನ್ನು ನೋಡುವಂತಾಗಲು ವೇದಿಕೆ ಯೊಂದು ಬೇಕು ಎಂದು ಪ್ರಯತ್ನಿಸಿದಾಗಲೇ ಯೂಟ್ಯೂಬ್‌ನ ಐಡಿಯಾ ಹುಟ್ಟಿದ್ದು ಎನ್ನು ತ್ತಾರೆ ಸಂಸ್ಥಾಪಕರು.

ದಿನದಿಂದ ದಿನಕ್ಕೆ ಯೂಟ್ಯೂಬ್‌ನ ಬಳಕೆದಾರರು ಹೆಚ್ಚುತ್ತಲೇ ಇದ್ದಾರೆ. ಡಿಸೆಂಬರ್ 2024 ರ ಹೊತ್ತಿಗೆ, ಪಾಶ್ಚಿಮಾತ್ಯ ದೇಶಗಳಲ್ಲಿ ಒಂದೇಯೇ ಬಳಕೆದಾರರ ಸಂಖ್ಯೆ ಶೇ 40ರಷ್ಟು ಹೆಚ್ಚಿದೆ. ಈಜಿಪ್ಟ್‌ನಲ್ಲಿ 7 ಅಂಕಿಯ ಆದಾಯವನ್ನು ಪಡೆಯುವ ಯೂಟ್ಯೂಬ್ ಚಾನೆಲ್‌ಗಳು ಶೇ 60ಕ್ಕೆ ಏರಿಕೆಯಾಗಿದೆ ಎಂಬುದು ಇತ್ತೀಚಿನ ದತ್ತಾಂಶಗಳಿಂದ ತಿಳಿದು ಬಂದಿದೆ. ಆಶ್ಚರ್ಯಕರ ಸಂಗತಿ ಏನೆಂದರೆ ಯೂಟ್ಯೂಬ್ ಇದುವರೆಗೆ ತನ್ನ ಬಳಕೆದಾರರ ನೈಜಸಂಖ್ಯೆಯನ್ನು ಎಂದಿಗೂ ಬಹಿರಂಗ ಪಡಿಸಿಲ್ಲ. ಯೂಟ್ಯೂಬ್ ಪ್ರಾರಂಭವಾಗಿ ಕೆಲ ವರ್ಷಗಳು ಕೆಲ ಭಾಷೆಗಳಿಗೆ ಮಾತ್ರ ಇದು ಸೀಮಿತವಾಗಿತ್ತು, ಆದರೆ ಇದೀಗ ಜಗತ್ತಿನ ಅರ್ಧಕ್ಕಿಂತಲೂ ಅಧಿಕ ಭಾಷೆಗಳಲ್ಲಿ ಯೂಟ್ಯೂಬ್ ಕಾರ್ಯ ನಿರ್ವಹಿಸುತ್ತಿದೆ. ವಿಶ್ವದಾದ್ಯಂತ 130 ಕೋಟಿಗೂ ಹೆಚ್ಚು ಮಂದಿ ಯೂಟ್ಯೂಬ್ ಅನ್ನು ಬಳಸುತ್ತಾರೆ. ಪ್ರತಿ ದಿನ 500 ಕೋಟಿ ಯೂಟ್ಯೂಬ್ ವಿಡಿಯೋ ಗಳನ್ನು ಜನರು ವೀಕ್ಷಿಸುತ್ತಾರೆ, ಅಂದರೆ ತಿಂಗಳಿಗೆ ಸರಾಸರಿ 3250 ಕೋಟಿ ಗಂಟೆಗಳ ಕಾಲದ ಯೂಟ್ಯೂಬ್ ವಿಡಿಯೋಗಳನ್ನು ನೋಡಲಾಗುತ್ತದೆ.

ನಿರ್ವಹಣೆ ಖರ್ಚೆಷ್ಟು?

ಯೂಟ್ಯೂಬ್ ಕೇವಲ ದುಡ್ಡನ್ನು ನೀಡುವುದು ಮಾತ್ರವಲ್ಲ, ತಾನೂ ಸಾಕಷ್ಟು ಹಣವನ್ನು ಗಳಿಸುತ್ತದೆ. ಯೂಟ್ಯೂಬ್ ನ ಒಂದು ವರ್ಷದ ನಿರ್ವಹಣೆ ಖರ್ಚು ಸರಿಸುಮಾರು 46 ಸಾವಿರ ಕೋಟಿ ರು. ಗೂ ಹೆಚ್ಚು. ನಿರ್ವಹಣೆ, ಖರ್ಚು ಎಲ್ಲ ಕಳೆದು ಗೂಗಲ್ ಪ್ರತಿ ವರ್ಷ ಯೂಟ್ಯೂಬ್ ಒಂದರಿಂದಲೇ 29 ಸಾವಿರ ಕೋಟಿಗೂ ಹೆಚ್ಚು ಹಣ ಗಳಿಸುತ್ತದೆ. ಗೂಗಲ್‌ನ ಒಟ್ಟು ಜಾಹೀರಾತು ಲಾಭದ ಶೇ 6ರಷ್ಟು ಯೂಟ್ಯೂಬ್ ಒಂದರಿಂದಲೇ ಬರುತ್ತದೆ.

ಸೋನಿ ಇಂಡಿಯಾ ಮುಖ್ಯಸ್ಥೆ

ಯೂಟ್ಯೂಬ್‌ನ ಭಾರತದ ಮುಖ್ಯಸ್ಥರಾಗಿ ಗುಂಜನ್ ಸೋನಿ ನೇಮಕಗೊಂಡಿದ್ದಾರೆ. ಈ ಹಿಂದೆ ಝಲೋರಾ ಗ್ರೂಪ್‌ನ ಸಿಇಒ ಆಗಿದ್ದ ಸೋನಿ, ಭಾರತದಲ್ಲಿ ಯೂಟ್ಯೂಬ್‌ನ ಕಾರ್ಯಾಚರಣೆಗಳನ್ನು ಮುನ್ನಡೆಸಲಿದ್ದಾರೆ. ಭಾರತವು ಯೂಟ್ಯೂಬ್‌ನ ಅತಿದೊಡ್ಡ ಮಾರುಕಟ್ಟೆಯಾಗಿರುವುದರಿಂದ, ಅವರ ನೇಮಕವು ಮಹತ್ವ ಪಡೆದುಕೊಂಡಿದೆ. ಹಾಟ್‌ಸ್ಟಾರ್ ಪ್ರಾರಂಭಿಸುವಲ್ಲಿಯೂ ಸೋನಿಯವರು ಪ್ರಮುಖ ಪಾತ್ರ ವಹಿಸಿದ್ದರು.

ಭಾರತವು ಯೂಟ್ಯೂಬ್ ಪಾಲಿಗೆ ಅತಿದೊಡ್ಡ ಮಾರುಕಟ್ಟೆಯಾಗಿದ್ದು, ಭಾರತದಲ್ಲಿ ಸುಮಾರು 50 ಕೋಟಿ ಯೂಟ್ಯೂಬ್ ಬಳಕೆದಾರರಿದ್ದಾರೆ. ಎಐ ತಂತ್ರಜ್ಞಾನದ ದೃಷ್ಟಿಯಿಂದ ಗೂಗಲ್ ಇದರ ಬಗ್ಗೆ ಹೆಚ್ಚಿನ ಆಸ್ಥೆ ಹೊಂದಿದೆ. ಇದರ ನಡುವೆಯೇ ಗುಂಜನ್ ಸೋನಿ ಅವರ ನೇಮಕವಾಗಿದೆ. ಇಶಾನ್ ಚಟರ್ಜಿ ಕಳೆದ ವರ್ಷ ಯೂಟ್ಯೂಬ್ ತೊರೆದು ಜಿಯೋಸ್ಟಾರ್ ಸೇರಿದ್ದರು. ಇವರಿಂದ ಖಾಲಿಯಾದ ಜಾಗಕ್ಕೆ ಇದೀಗ ಟೆಕ್ ದೈತ್ಯ ಗೂಗಲ್ ಗುಂಜನ್ ಸೋನಿ ಅವರನ್ನು ಕರೆ ತಂದಿದೆ.

ಟೆಕ್ ಕಂಪನಿಗಳಲ್ಲಿ ಮಹಿಳೆಯ ದರ್ಬಾರ್: ಈ ಹಿಂದೆ 2024ರ ಡಿಸೆಂಬರ್‌ನಲ್ಲಿ ಗೂಗಲ್ ಇಂಡಿಯಾದ ಮುಖ್ಯಸ್ಥರಾಗಿ ಪ್ರೀತಿ ಲೋಬಾನಾ ನೇಮಕಗೊಂಡಿದ್ದರು. ಸಂಧ್ಯಾ ದೇವನಾಥನ್ ಅವರು ಮೆಟಾ ಸಂಸ್ಥೆಯ ಭಾರತದ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇದರ ನಡುವೆಯೇ ಇದೀಗ ಗುಂಜನ್ ಸೋನಿ ನೇಮಕವಾಗಿದ್ದು, ಬೃಹತ್ ಟೆಕ್ ಕಂಪನಿಗಳನ್ನು ಮುನ್ನಡೆಸುತ್ತಿರುವ ಮಹಿಳೆಯರ ಸಾಲಿಗೆ ಹೊಸದಾಗಿ ಸೇರ್ಪಡೆಯಾಗಿದ್ದಾರೆ. ಹಾಟ್‌ಸ್ಟಾರ್ ರೂವಾರಿ ಸೋನಿ ಗುಂಜನ್ ಸೋನಿ ಅವರು ಈ ಹಿಂದೆ ಸಿಂಗಾಪುರದಲ್ಲಿ ಝಲೋರಾ ಸಂಸ್ಥೆಯ ಸಿಇಒ ಆಗಿ ಆರು ವರ್ಷ ಕೆಲಸ ಮಾಡಿದ್ದರು. ಇಲ್ಲಿ ಅವರು ಹೊಸ ಬಗೆಯ ವ್ಯಾಪಾರ ತಂತ್ರಗಳನ್ನು ಪರಿಚಯಿಸಿದ್ದರು. ಗ್ರಾಹಕರಿಗೆ ಉತ್ತಮ ಅನುಭವ ನೀಡಲು ಹಲವು ಕಾರ್ಯಕ್ರಮಗಳನ್ನು ಕೂಡ ರೂಪಿಸಿದ್ದರು. ವ್ಯಾಪಾರ, ತಂತ್ರಜ್ಞಾನ, ಮಾರ್ಕೆಟಿಂಗ್ ಮತ್ತು ಇ-ಕಾಮರ್ಸ್ ಕ್ಷೇತ್ರಗಳಲ್ಲಿ 20 ವರ್ಷಗಳ ಅಗಾಧ ಅನುಭವವನ್ನು ಸೋನಿ ಹೊಂದಿದ್ದಾರೆ.

ವಿಶ್ವವಾಣಿ ಬೆಂಗಳೂರು, 30-04-2025, ಬುಧವಾರ

ಆರಾಮ

ಅನುದಿನವೂ ವಿರಾಮಕ್ಕೆ ಒಂದು ನೆಪ

ಬಂಡೆಗಳ ನಡುವೆ ಸುಂದರ ಜಲಪಾತ

ನಮ್ಮ ರಾಜ್ಯದ ಸಹ್ಯಾದ್ರಿ ಪರ್ವತಗಳ ಅಂಚಿನಿಂದ ಹಲವು ಜಲಪಾತಗಳು ಕೆಳಗಿನ ಕರಾವಳಿ ಜಿಲ್ಲೆಗಳಿಗೆ ನೆಗೆದು, ಸುಂದರ ದೃಶ್ಯವನ್ನು ಸೃಷ್ಟಿಸುತ್ತವೆ; ಅಂತಹ ಒಂದು ಜಲಪಾತಕ್ಕೆ ನಡೆಸಿದ ಚಾರಣದ ಅನುಭವ ಇಲ್ಲಿದೆ.

• ಸೌಮ್ಯ ಕಾರ್ಕಳ

ಮುಂಜಾನೆ ಬೇಗ ಎದ್ದು ಚಾರಣಕ್ಕೆ ಬೇಕಾಗುವ ಸಾಮಾಗ್ರಿಗಳನ್ನು ಬ್ಯಾಗ್ನಲ್ಲಿ ತುಂಬಿಸಿ, 5 ಗಂಟೆಗೆ ಸರಿ ಸುಮಾರಾಗಿ, ಮನೆ ಬಿಟ್ಟು ಬೆಳುವಾಯಿ ಜಂಕ್ಷನ್ ಎಂಬ ಜಾಗಕ್ಕೆ ಬಂದು ಇಳಿದೆವು. ನಾವು ಯಾರ ಜೊತೆ ಈ ಬಾರಿ ಚಾರಣ ಮಾಡುತ್ತ ಇದ್ದೀವಿ ಎಂದು ಅಕ್ಕನ ಜೊತೆ ಕೇಳಿದಾಗ, ಯೂತ್ ಹಾಸ್ಟೆಲ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ಎಂಬ ಸಂಸ್ಥೆಯ ಹೆಸರು ಕೇಳಿಸಿತು. ಆ ಸಂಸ್ಥೆಯ ಬೆಳುವಾಯಿ ಘಟಕ ಈಗ ಪ್ರಾರಂಭವಾಗಿದೆ; ಸುತ್ತಮುತ್ತಲಿನ ಚಾರಣ ಪ್ರಿಯರಿಗೆ ಇದು ಉಪಯೋಗವಾಗಲಿ ಎಂಬ ಉದ್ದೇಶ ಇವರದ್ದು. ಬೆಳುವಾಯಿಂದ ಬಸ್ ಮೂಲಕ ಹೊರಟೆವು. ಆಸುಪಾಸು ಊರುಗಳಲ್ಲಿ ಹೊಸ ಮುಖಗಳು ಪರಿಚಯವಾಗತೊಡಗಿತ್ತು. ಒಂದು ಕಡೆ ಬಸ್ ನಿಲ್ಲಿಸಿ, ಚಾ, ತಿಂಡಿ ತಿಂದೆವು; ಬಂಡಾಜೆ ಫಾಲ್ಸ್ ಕಡೆ ಪ್ರಯಾಣ ಮುಂದುವರೆಯಿತು.

ಬೆಳ್ತಂಗಡಿ ವನ್ಯಜೀವಿ ವಲಯಯದ ನಡುವೆ ಬರುವ ಬಂಡಾಜೆ ಜಲಪಾತ ತಲುಪಲು ಸುಮಾರು 8+8=16 ಕಿ.ಮೀ ರಷ್ಟು ಚಾರಣವಿರುತ್ತದೆ. ಬಸ್ ಇಳಿದು, ಅದೇ ಊರಿನ ಶಂಕರಣ್ಣ ಎಂಬ ಗೈಡ್‌ಜತೆ ನಮ್ಮ ಚಾರಣ ಆರಂಭವಾಯಿತು. ಮೊದಲಿಗೆ ಕಚ್ಚಾ ರಸ್ತೆ, ನಂತರ ಕಡಿದಾದ ಏರುದಾರಿ; ಕಾಲ್ದಾರಿಯು ಕೆಲವು ಕಡೆ ತೀರಾ ಮಸುಕಾಗಿತ್ತು; ಸುತ್ತಲೂ ಕಾಡು. ದಟ್ಟ ಮರಗಳ ನಡುವೆ ಕಾಲ್ದಾರಿ ಸಾಗುವಾಗ, ಹಸಿರಿನ ಸುರಂಗದ ನಡುವೆ ಚಾರಣ ಮಾಡುತ್ತಿದ್ದೇವೋ ಎನ್ನುವ ಅನುಮಾನ; ಆದರೆ ಅದೊಂದು ಅಪರೂಪದ ಅನುಭವ. ನಮ್ಮ ಗುರಿಯು ಜಲಪಾತವನ್ನು ನೋಡುವುದಾದರೂ, ದಾರಿಯಲ್ಲಿ ಸಿಗುವ ಇಂತಹ ಕಾಡಿನ ಅನುಭವವೂ ಅನನ್ಯ, ವಿಶೇಷ. ಅಲ್ಲಲ್ಲಿ ಹಕ್ಕಿಗಳ ಕೂಗು ಕೇಳಿಸುತ್ತಿತ್ತು, ಆದರೆ ಮುಗಿಲೆತ್ತರದ ಮರಗಳ ನಡುವೆ ಕುಳಿತ ಅವುಗಳನ್ನು ಕಾಣುವುದು ಕಷ್ಟಸಾಧ್ಯ.

ಕಡಿದಾದ ದಾರಿ

ಚಿಕ್ಕಮಗಳೂರು ಜಿಲ್ಲೆಯ ಸಹ್ಯಾದ್ರಿಯ ತುದಿಯಾದ ಬಲ್ಲಾಳರಾಯನ ದುರ್ಗದಿಂದಾಚೆಯ ಒಂದು ಪರ್ವತ ಕಮರಿಯಲ್ಲಿ ಬಂಡಾಜೆ ಹಳ್ಳ ಜನಿಸುತ್ತದೆ; ಕಡಿದಾದ ಪ್ರಪಾತದಲ್ಲಿ ನೆಗೆದು ಬಂಡಾಜೆ ಜಲಪಾತ ಅಥವಾ ಬಂಡಾಜೆ ಅರ್ಬಿಯನ್ನು ಸೃಷ್ಟಿಸುತ್ತದೆ. ಇದೊಂದು ಸುಂದರ ತಾಣ; ಇಲ್ಲಿಗೆ ಬರಲು ಎರಡು ದಾರಿಗಳಿವೆ. ಬಲ್ಲಾಳರಾಯನ ದುರ್ಗದ ದಿಕ್ಕಿನಿಂದ, ಪರ್ವತ ಶಿಖರಗಳ ತುದಿಯಲ್ಲೇ ನಡೆದು ಈ ಜಲಪಾತದ ತುದಿಗೆ ಬರಬಹುದು. ಇತ್ತ, ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿಯ ಬೆಟ್ಟ ಗುಡ್ಡಗಳ ಸೆರಗಿನಲ್ಲಿ ನುಸುಳಿ ಮೇಲೇರುವ ಕಾಲ್ದಾರಿಯಿಂದಲೂ ಚಾರಣ ಮಾಡಿ ಬರಬಹುದು. ಇದು ಪಾಚಿಕಟ್ಟಿದ ಬಂಡೆ, ಕಡಿದಾದ ಬಂಡೆಗಳ ತಾಣವಾಗಿರುವುದರಿಂದ, ಬಹು ಎಚ್ಚರಿಕೆಯಿಂದ ಇಲ್ಲಿ ಚಾರಣ ಮಾಡುವುದು ಅತಿ ಅಗತ್ಯ.

'ಶಂಕರಣ್ಣ ಇನ್ನು ಎಷ್ಟು ದೂರ ಇದೆ, ನಮಗೆ ನಡೆಯಲು ಆಗುತ್ತ ಇಲ್ಲ' ಎಂದು ಚಾರಣಿಗರ ಕೂಗು! 'ಇಲ್ಲೇ ಹತ್ತಿರದಲ್ಲೇ ಬಂತು!' ಎಂದು ಯಾಮಾರಿಸಿ ಕರೆದುಕೊಂಡು ಹೋಗೋ ಶಂಕರಣ್ಣ. ನಡೆಯಲಿಕ್ಕೇ ಆಗುವುದಿಲ್ಲ ಎಂದು ಕುಳಿತಾಗ, 'ಅಲ್ನೋಡಿ ಜಲಪಾತದ ಸದ್ದು ಕೇಳಿಸ್ತಾ ಉಂಟು, ಇನ್ನು ಅರ್ಧ ಕಿ.ಮೀ. ಸಹ ಇಲ್ಲ' ಎಂದು ಹುರಿದುಂಬಿಸಿ, ನಮ್ಮೆಲ್ಲರನ್ನು ನಡೆಸಿ ಸಾಗಿಸುವ ಶಂಕರಣ್ಣ, ಅದೊಂದು ಕಲೆಯಲ್ಲಿ ಪರಿಣಿತ! ಆದರೆ, ಆ ಕಲೆಯು, ಪ್ರಕೃತಿ ಪ್ರೀತಿಯ ಸೆಲೆ ಉಳ್ಳದ್ದು ಎಂದು ತಿಳಿಯುವುದೇ ಸಂತಸ. ಶಂಕರಣ್ಣನವರ ರೀತಿಯ ನಿಸ್ವಾರ್ಥ ಗೈಡ್‌ನಿಂದಾಗಿ, ನಮ್ಮಂತಹ ಸಾಮಾನ್ಯರು ಆ ಕಷ್ಟದ ದಾರಿಯನ್ನು ನಡೆಯುತ್ತಿದ್ದೆವು ಎಂದರೆ ಅತಿಶಯೋಕ್ತಿಯಲ್ಲ!

ಆ ಕಾಡಿನ ನಡುವೆ ನಡುವೆ ಸಾಗುವ ಕಷ್ಟಕರವಾದ ದಾರಿಯನ್ನು ಅನುಸರಿಸಿ, ಒಟ್ಟು 16 ಕಿ.ಮೀ ಕಾಲ್ನಡಿಗೆ ಮೂಲಕ, ಎದೆ ಉಸಿರು ಬಿಡುತ್ತ ಸಾಗಿದೆವು; ಸ್ವಲ್ಪ ಹೊತ್ತು ವಿಶ್ರಾಂತಿ ಪಡೆದು, ಯಾರು ನಮಗಾಗಿ ಕಾಯುವರು ಇಲ್ಲ, ಬೇರೆಯವರು ಹಿಡಿದ ದಾರಿಯೊಂದಿಗೆ ಸಾಗಲೇಬೇಕು ಎಂದು ಅರಿತು, ನಡೆದೆವು. ಬಂಡಾಜೆ ಜಲಪಾತದ ಬಳಿ ತಲುಪುವಾಗ 2 ಗಂಟೆ ಸಮಯ. ಇಷ್ಟು ದೂರ ಕಷ್ಟಪಟ್ಟು ನಡೆದದ್ದಕ್ಕೂ, ಅಲ್ಲಿ ಕಂಡ ಜಲಪಾತದ ನೋಟದ ಸೌಂದರ್ಯ ಮನತಣಿಸಿದ್ದಕ್ಕೂ ಸಾರ್ಥಕ ಎನಿಸಿತು; ಕೊನೆಗೂ ಮನೋಹರವಾದ ಫಾಲ್ಸ್ ಕಂಡು ಮೈ ಮನ ಬೆರಗಾಗಿತ್ತು.

ಜನಪದ ಕಥೆ

ಬಂಡಾಜೆ ಜಲಪಾತದ ಕುರಿತು ಒಂದು ಜನಪದ ಕಥೆಯಿದೆ; ಇದನ್ನು ಶಂಕರಣ್ಣ ಹೇಳಿದರು. ಬಲ್ಲಾಳರಾಯನ ದುರ್ಗದ ತುದಿಯಲ್ಲಿ ಜನಿಸುವ ಪುಟ್ಟ ನದಿಯೊಂದು ಚಿಕ್ಕಮಗಳೂರು ಜಿಲ್ಲೆಯತ್ತ ಹರಿದು ಸಾಗುತ್ತಿತ್ತಂತೆ; ನಮ್ಮ ಊರಿನ ಕಡೆ, ಅಂದರೆ ತುಳುನಾಡ ಕಡೆ ನೀರಿನ ಕೊರತೆ ಕಂಡು, ಅದನ್ನು ತುಳುನಾಡಿನ ಕಡೆ ಹರಿಯುವಂತೆ ಮಾಡಿ ಸಾರ್ಥಕತೆ ಮೆರೆದ ತುಳುನಾಡಿನ ದೈವ ಕಲ್ಕುಡ ಮಹಿಮೆಯನ್ನು ಸ್ಥಳೀಯರಾದ ಶಂಕರಣ್ಣ ವಿವರಿಸಿದರು. ಬಂಡಾಜ ಜಲಪಾತದಂತಹ ಸುಂದರ ಫಾಲ್ಸ್‌ನ್ನು ನೋಡುವುದರ ಜತೆ, ಇಂತಹ ಜನಪದ ಕಥೆಗಳನ್ನು ಅಲ್ಲೇ ನಿಂತು ಕೇಳಿದಾಗ, ಆ ನಮ್ಮ ಚಾರಣಕ್ಕೆ ಹಲವು ಆಯಾಮಗಳು ದೊರಕುತ್ತವೆ, ನಮ್ಮ ಅನುಭವ ಶ್ರೀಮಂತವಾಗುತ್ತದೆ.

ಜಲಪಾತದಿಂದ ಹರಿದು ಬರುವಂತಹ ನೀರನ್ನು ಇದೇ ಊರಿನ ಸಮೀಪ ಇರುವ ದೈವ ದೇವರ ಗುಡಿಗೆ ಪ್ರತಿ ವರ್ಷ ಜಾತ್ರೆ ಸಂದರ್ಭದಲ್ಲಿ 16 ಕಿ.ಮೀ. ಕಾಲ್ನಡಿಗೆ ಮೂಲಕ ನಡೆದು ನೀರನ್ನು ತಂದು ದೈವಕ್ಕೆ ಅರ್ಪಿಸಿ, ಒಂದು ವರ್ಷ ತನಕ ಆ ನೀರನ್ನು ಚೆಲ್ಲದೆ, ಗುಡಿಯಲ್ಲಿ ಇಡುತ್ತಾರೆ ಎಂದು ಶಂಕರಣ್ಣ ವಿವರಿಸಿದರು. ನಾವು ಜಲಪಾತ ನೋಡೋಕೆ ಮಾತ್ರ ಹೋಗುತ್ತಿದ್ದೇವೆ ಎಂದು ಹೊರಟವರು, ಆ ಸ್ಥಳದ ಜನಪದ ಕಥೆಗಳನ್ನೂ ಕೇಳಿದಾಗ ಮನಸ್ಸು ಮುದಗೊಂಡಿತು. ತೀವ್ರವಾದ ಒಂದು ಪ್ರಪಾತಕ್ಕೆ ಜಲಪಾತ ನೆಗೆಯುತ್ತದೆ; ಅಲ್ಲಿನ ಬಂಡೆಗಳ ವಿನ್ಯಾಸ ನಿಜಕ್ಕೂ ವಿಚಿತ್ರ, ಸುಂದರ. ಜಲಪಾತದ ಬಳಿ ಕುಳಿತು, ತಂದಿದ್ದ ತಿಂಡಿಯನ್ನು ತಿಂದು, ಫೋಟೋ ತೆಗೆಸಿಕೊಂಡು, ಅಲ್ಲಿಂದ ವಾಪಸ್ ಇಳಿದು ಬರುವ ಸರಿ ಸುಮಾರು 5 ಗಂಟೆ ದಾಟಿತ್ತು. ಚಾರಣದಲ್ಲಿ ಪರಿಚಯವಾಗಿದ್ದ ಹೊಸ ಸ್ನೇಹಿತರೊಂದಿಗೆ ಮಾತನಾಡುತ್ತಾ, ಪ್ರಕೃತಿಯ ಅನುಭವವನ್ನು ಹಂಚಿಕೊಳ್ಳುತ್ತಾ ಮನೆ ಸೇರಿದಾಗ, ಸೂರ್ಯ ಮುಳುಗಿದ್ದ.

ಚಿತ್ತವಿಹಾರ

ಬೇಡ ಆತುರದ ನಿರ್ಧಾರ

ಬಹುತೇಕ ಸಂಕಟಗಳಿಗೆ, ನೋವುಗಳಿಗೆ ನಮ್ಮ ಸಮಸ್ಯೆಗಳನ್ನು ಸರಿಯಾಗಿ ಅರ್ಥೈಯಿಸಿಕೊಳ್ಳದೇ ಮುಖ್ಯ ಕಾರಣ. ಕಂಡದ್ದು ಕಂಡ ಹಾಗೆ ಗ್ರಹಿಸುವುದು, ಹೇಳುವುದು ಎಲ್ಲ ಸಂದರ್ಭಗಳಲ್ಲಿ ಜಾಣತನದ ನಡೆಯಾಗಲಾರದು. ಸಮಸ್ಯೆಗಳನ್ನು ಆತುರಾತರವಾಗಿ ಗ್ರಹಿಸಿ ಪರಿಹಾರಕ್ಕಾಗಿ ಪರಿತಪಿಸುವುದು ನಮ್ಮ ಸಮಸ್ಯೆಗಳನ್ನು ಇನ್ನಷ್ಟು ಜಟಿಲಗೊಳಿಸುತ್ತವೆ. ಸಾಧ್ಯವಾದಷ್ಟು ಸನ್ನಿವೇಶಗಳನ್ನು ಸಮಸ್ಯೆಗಳನ್ನು ಒಂದಷ್ಟು ತಾಳ್ಮೆಯಿಂದ ಗ್ರಹಿಸುವ, ಜಾಣ್ಮೆಯಿಂದ ಅರ್ಥೈಯಿಸಿಕೊಳ್ಳುವುದರಿಂದ ಅರ್ಧದಷ್ಟು ಪರಿಹಾರವನ್ನು ಕಂಡುಕೊಂಡಂತೆ. ಕಲಾ ಪ್ರದರ್ಶನವೊಂದನ್ನು ಏರ್ಪಡಿಸಲಾಗಿತ್ತು. ಶ್ರೇಷ್ಠ ಕಲಾವಿದರೆಲ್ಲ ಅದರಲ್ಲಿ ಭಾಗವಹಿಸಿ, ತಮ್ಮ ಅಪರೂಪದ ಕಲಾಕೃತಿಗಳನ್ನು ಪ್ರದರ್ಶಕ್ಕೆ ಇಟ್ಟಿದ್ದರು. ಕಲಾವಿದರು, ವಿದ್ವಾಂಸರು ಅವು ಗಳನ್ನು ನೋಡಿ ಅರ್ಥೈಯಿಸಿಕೊಳ್ಳುತ್ತ, ವ್ಯಾಖ್ಯಾನಿಸುತ್ತ, ಚರ್ಚಿಸುತ್ತ ಸಂತೋಷಪಡುತ್ತಿದ್ದರು. ಅಲ್ಲಿಗೆ ಸಾಮಾನ್ಯ ವ್ಯಕ್ತಿಯೊಬ್ಬ ಕೂಡ ಆಗಮಿಸಿದ್ದ. ಅಲ್ಲಿನ ವಿದ್ವಾಂಸರೆಲ್ಲ ಅಲ್ಲಿರುವ ಒಂದು ಕಲಾಕೃತಿಯನ್ನು ಬಹುವಾಗಿ ಮೆಚ್ಚಿಕೊಂಡು ಪ್ರಶಂಸೆ ವ್ಯಕ್ತಪಡಿಸುತ್ತಿದ್ದರು. ಅವನು ಆ ಕಲಾಕೃತಿ ಹತ್ತಿರಕ್ಕೆ ಹೋಗಿ ಅದನ್ನು ಗಮನವಿಟ್ಟು ನೋಡಿದ.

ಅವನಿಗೆ ಕೆಲವು ಬಣ್ಣದ ಗೆರೆಗಳು ಮಾತ್ರವೇ ಕಂಡವು. ಅದರಲ್ಲಿ ಯಾವುದೇ ವಿಶೇಷತೆ ಇದೆ ಎಂದು ಅನಿಸಲಿಲ್ಲ, ಆದರೆ ಅಲ್ಲಿದ್ದ ಎಲ್ಲರೂ ಬಹುವಾಗಿ ಆ ಕಲಾಕೃತಿಯ ಕುರಿತು ಮೆಚ್ಚುಗೆ ವ್ಯಕ್ತಪಡಿಸುತ್ತಿರುವುದನ್ನು ಕಂಡು ಅವನಿಗೆ ಆಶ್ಚರ್ಯವಾಯಿತು. ಅದನ್ನು ಬಿಡಿಸಿದ ಕಲಾವಿದನಿಗೆ ತನ್ನ ಸಮಸ್ಯೆಯನ್ನು ಕುರಿತು ಹೇಳಿದ. ಆಗ ಅವನು ಅದನ್ನು ಸಮೀಪದಿಂದ ನೋಡಿದರೆ ನಿನಗೆ ಯಾವುದೇ ವಿಶೇಷತೆ ಕಾಣದು, ಅದನ್ನು ಸ್ವಲ್ಪ ದೂರದಿಂದ ನೋಡಬೇಕು ಎಂದು ಅವನನ್ನು ಕೈ ಹಿಡಿದು ಕರೆದುಕೊಂಡು ಬಂದು ನಿರ್ದಿಷ್ಟ ಸ್ಥಳದಲ್ಲಿ ನಿಲ್ಲಿಸಿ ತೋರಿಸಿದ. ಆಗ ಅವನಿಗೆ ಚಿತ್ರದ ಸೌಂದರ್ಯ ಗೋಚರಿಸಿತ್ತು.

ನಮ್ಮ ಬದುಕಿನಲ್ಲಿಯೂ ಕೂಡ ಇಂಥದೊಂದು ಸತ್ಯವನ್ನು ನಾವು ಅರಿತು ಮುನ್ನಡೆದರೆ, ಸಮಸ್ಯೆಗಳಿಗೆ ಸುಲಭ ಪರಿಹಾರ ಕಾಣಬಹುದಾಗಿದೆ. ಯಾರೋ ಕಿವಿ ಚುಚ್ಚಿದ ಮಾತುಗಳಿಂದ ಪ್ರಭಾವಿತರಾಗದೇ, ಪೂರ್ವಗ್ರಹಗಳಿಗೆ ಒಳಗಾಗದೇ ವಸ್ತುನಿಷ್ಠವಾಗಿ ವಸ್ತು ವಿಷಯಗಳನ್ನು ಅರ್ಥೈಯಿಸಿಕೊಳ್ಳಬೇಕು. ಎಲ್ಲದರಲ್ಲೂ ಮೂಗು ತೂರಿಸುವುದನ್ನು ಬಿಟ್ಟು ಕೆಲವು ಬಾರಿ ನಿರ್ದಿಷ್ಟ ಅಂತವರವನ್ನು ಕಾಪಾಡಿಕೊಳ್ಳಬೇಕು. ಬೇರೆ ಬೇರೆ ದೃಷ್ಟಿಕೋನಗಳಿಂದ ಸಂಗತಿಗಳನ್ನು ಅವಲೋಕಿಸಬೇಕು. ಪ್ರತ್ಯಕ್ಷ ಕಂಡರೂ ಪ್ರಮಾಣಿಸಿ ನೋಡಬೇಕು ಎನ್ನುವ ಗಾದೆಯಂತೆ ಯಾವುದೇ ಕಾರಣಕ್ಕೂ ದುಡುಕಿನ ಸ್ವಭಾವ ತೋರದೇ ನಿಧಾನವಾಗಿ ಪರಿಹಾರಗಳನ್ನು ಹುಡುಕಬೇಕು. ಇಂತಹ ನಮ್ಮ ನಡೆಗಳು ಹೊಸ ಸಾಧ್ಯತೆಗಳನ್ನು ಪರಿಚಯಿಸಿ ಇನ್ನೊಂದು ಬದಿಯನ್ನು ಹೊಳೆಯಿಸುತ್ತವೆ. ಅಲ್ಪತೃಪ್ತಿಗೆಡೆಗೊಡದೆ ಹಿರಿದಾದುದನ್ನು ಸಾಧಿಸುವತ್ತ ನಮ್ಮ ಮನಸ್ಸು ತುಡಿಯುವಂತಾದರೆ ಬದುಕು ಹಸನಾಗುತ್ತದೆ.

• ಮಹಾದೇವ ಬಸರಕೋಡ

ಹನಿ ಮಳೆ

ಇವರ ತಪ್ಪೇನು?

ದೂರದ ಕಾಶ್ಮೀರದಲಿ ಗುಂಡಿನ ಸದ್ದು
ಪ್ರವಾಸಿರ ಮೇಲೆ ಬಂದೂಕಿನ ಗುದ್ದು
ಅಮಾಯಕ ಆತ್ಮ ಅಂತರ್ಧಾನವಾಗಿ
ಮಿಡಿದಿದೆ ಕಣ್ಣೀರು ಮನ ಮರುಗಿ

• ಕಿರಣ್ ಕೊರ್ಕ್ಕಣೆ

ಹದಿನೆಂಟರ ವಿಶೇಷ!

18

• ಕೆ.ಶ್ರೀನಿವಾಸರಾವ್ ಹರಪನಹಳ್ಳಿ

ಪುರಾಣ ಕಾಲದಿಂದಲೂ 18 ಸಂಖ್ಯೆ ವಿಶೇಷ ಎನಿಸಿದೆ. ಪುರಾಣಗಳು 18, ಉಪ ಪುರಾಣಗಳು 18, ಧರ್ಮ ಶಾಸ್ತ್ರಗಳು 18, ವೇದಗಳಲ್ಲಿ ಅಧ್ಯಾಯಗಳು 18. ಮೊದಲನೆಯ ಇಷಾ ಉಪನಿಷತ್ತಿನಲ್ಲಿ 18 ಶ್ಲೋಕಗಳಿವೆ. ರಾಮನನ್ನು ಆರಾಧಿಸುವ ಆದಿತ್ಯ ಹೃದಯ ಶ್ಲೋಕಗಳ ಸಂಖ್ಯೆ 18. ಯಾಗಾದಿಗಳನ್ನು ನಡೆಸಲು 18 ಯತಿಗಳು ಅವಶ್ಯ. ಚಿದಾನಂದ ಅವಧೂತರ ದೇವಿ ಮಹಾತ್ಮೆ 18 ಶ್ಲೋಕಗಳನ್ನು ಹೊಂದಿದೆ. ಮಹಾಭಾರತದ ಕಾವ್ಯದ ಪರ್ವಗಳು 18. ಕುರುಕ್ಷೇತ್ರ ಯುದ್ಧ 18 ದಿನ ನಡೆಯಿತು. ಸೈನ್ಯವನ್ನು 18 ವಿಭಾಗ ಮಾಡಿ 11 ಕೌರವರು ಹಾಗೂ 7 ಪಾಂಡವರು ಒಟ್ಟು 18 ಜನರನ್ನು ಸೇನಾನಿ ಯಾಗಿ ಮಾಡಲಾಯಿತು. ಒಟ್ಟು ಸೈನ್ಯದ ಸಂಖ್ಯೆ 18 ಅಕ್ಷೋ ಹಿಣಿ. ಯುದ್ಧದಲ್ಲಿ ಉಪಯೋಗಿಸಿದ ರಣತಂತ್ರಗಳು 18. ಭಗವದ್ಗೀತೆಯಲ್ಲಿನ ಅಧ್ಯಾಯಗಳು 18. ಎರಡನೇ ಅಧ್ಯಾಯ ದಲ್ಲಿ 18 ಶ್ಲೋಕಗಳಿವೆ. ಪಾಂಡವರು (5), ಉಪ ಪಾಂಡವರು (6), ಮಕ್ಕಳು (7) ಸೇರಿ ಒಟ್ಟು ಸಂಖ್ಯೆ 18. ಯುದಿಷ್ಠಿರ ಹಸ್ತಿನಾ ಪುರಿಯನ್ನು ಆಳಿದ್ದು 18 ವರ್ಷ. ಶಬರಿಮಲೆ ದೇವಳದ ಸುತ್ತಲೂ 18 ದಟ್ಟ ಪರ್ವತಗಳಿದ್ದು, ಗರ್ಭಗುಡಿ ಏರಲು 18 ಪವಿತ್ರ ಮೆಟ್ಟಿಲು ಇವೆ. ಯಹೂದಿಗಳಿಗೆ 18 ಶುಭಕರ. ಚೀನಿಯರು ಒಳ್ಳೆಯ ಕಾರ್ಯಕ್ಕೆ 18 ರ ದಿನಾಂಕವನ್ನು ಆರಿಸುತ್ತಾರೆ. ನಮ್ಮ ಸರಕಾರ ಹೆಣ್ಣುಮಕ್ಕಳಿಗೆ ಮತದಾನದ ಹಕ್ಕು ದೊರೆಯಲು ಮತ್ತು ನ್ಯಾಯಾಲಯವು ಹೆಣ್ಣು ಪ್ರಾಪ್ತಳೆಂದು ಒಪ್ಪಲು 18 ವರ್ಷಗಳು ಆಗಿರಲೇಬೇಕೆಂದಿವೆ. ಮತ್ತೊಂದು ವೈಚಿತ್ರ್ಯವೆಂದರೆ ಮಟ್ಕಾ ಆಡುವವರಿಗೆ 18 ಗೆಲುವಿನ ಪವಿತ್ರ ನಂಬರ್!

ಬದುಕಿನ ತಳಹದಿಯನ್ನು ಕಾಪಾಡಬೇಕು

ಒಡೆಯದಿರು ತಳಹದಿಯ ಸರಿವಡಿಪೆನದನೆಂದು
ಸಡಲಿಸುವ ನೀಂ ಮರಳಿ ಕಟ್ಟಲರಿತವನೇಂ
ಗಿಡವ ಸರಿ ಬೆಳೆಯಿಸಲು ಬುಡವ ಕೀಳ್ವುದು ಸರಿಯೆ
ದುಡುಕದಿರು ತಿದ್ದಿಕೆಗೆ - ಮಂಕುತಿಮ್ಮ॥

ಮನುಷ್ಯನ ಜೀವನವೇ ಸುಖಲೋಭಕ್ಕಾಗಿ, ಐಚ್ಛಿಕ ವಾಂಛೆಗಳ ಸಫಲತೆಗಾಗಿ ಹೊಸ ಹೊಸ ಅವಿಷ್ಕಾರ ಮಾಡುವುದು, ಇರುವುದನ್ನೇ ಸುಧಾರಿಸುವಂತಹ ಮನಸ್ಥಿತಿ ನಿರಂತರವಾಗಿ ಇದ್ದೇ ಇರುತ್ತದೆ. ಇರುವುದನ್ನೇ ಹೊಸದಾಗಿ ಹೊಂದಿಸಿಕೊಂಡು ಮತ್ತೆ ಅದಕ್ಕೆ ಹೊಸ ಹೊಸ ಆಯಾಮ ನೀಡುತ್ತಾ, ಹೊಸದಾಗಿ ಮತ್ತಷ್ಟನ್ನು ಜೋಡಿಸುತ್ತಾ ಇರುವುದಕ್ಕೆ ಹೊಸ ರೂಪ ಕೊಡುವುದು ಸರ್ವೇ ಸಾಮಾನ್ಯದ ವಿಷಯವೂ ಹೌದು. ಆದರೆ ಬದಲಾವಣೆಯ ನೆಪದಲ್ಲಿ, ಹೊಸ ಅವಿಷ್ಕಾರದ ತಂತ್ರದಲ್ಲಿ ತಲ್ಲೀನನಾಗಿ ಮೂಲ ವಸ್ತುವನ್ನೇ ನಾಶ ಮಾಡಿದಲ್ಲಿ ಹೊಸತನ್ನು ನೀನು ಹೇಗಾದರೂ ಕಂಡುಕೊಳ್ಳುವೆ? ಮೂಲವನ್ನು ನಾಶಮಾಡಿ ಹೊಸದನ್ನು ಅರಸುವುದು ಎಂದಿಗೂ ಸಾಧ್ಯವಾಗದಿರುವ ಮಾತು.

ಶುಭೋದಯಕ್ಕೊಂದು ಕಗ್ಗ



ರವೀ ಚಿಕ್ಕನಾಯಕನಹಳ್ಳಿ

ನಮ್ಮ ಪುರಾತನರು ಹಾಕಿಕೊಟ್ಟಿರುವಂತಹ ಮನುಷ್ಯನ ತನ್ನ ಮೂಲ ಅಸ್ಮಿತೆಯಂತಿರುವ ಮನುಷ್ಯತ್ವ, ಜೀವನ ಶೈಲಿ, ಜೀವನ ಮೌಲ್ಯಗಳು, ಸಂಸ್ಕೃತಿ, ಸಂಸ್ಕಾರಗಳು, ಜ್ಞಾನದ ಪ್ರಕಾರಗಳು, ಕಾರುಣ್ಯತೆ ಹೀಗೆ ಹಲವು ವಿಚಾರಗಳು ನಮ್ಮ ಬದುಕಿಗೆ ಅಡಿಪಾಯವಾಗಿದ್ದು, ಹಳೆಯದನ್ನು ಸರಿಪಡಿಸುವ ಯತ್ನದಲ್ಲಿ ಆ ಪರಂಪರೆಗೆ ಧಕ್ಕೆ ತರಬಾರದು. ಏಕೆಂದರೆ ಅವುಗಳೇ ನಮ್ಮ ಬದುಕಿನ ಮೂಲ ಧಾತುಗಳು ಹಾಗೂ ಸತ್ಯಗಳು. ಅವುಗಳನ್ನು ಅಲುಗಾಡಿಸಿದರೆ ನಮ್ಮ ಇಡೀ ಅಸ್ತಿತ್ವವೇ ಅಲುಗಾಡಿ, ನಾವು ಖಂಡಿತ ನಾಶವಾಗುತ್ತೇವೆ. ನಮ್ಮ ಬದುಕಿನ ಹೊರ ರೂಪ ಬದಲಾಗುತ್ತಿದ್ದರೂ ಆ ಬದುಕಿಗ ಆಧಾರ ಸ್ತಂಭವಾದ ನಮ್ಮ ಮೂಲ ಸಂಸ್ಕೃತಿ, ಸಂಸ್ಕಾರ, ಪರಂಪರೆಗಳು ನಮ್ಮ ಬದುಕಿನ ಬೆನ್ನೆಲುಬಿನಂತೆ ನಿಂತಿರು ತ್ತವೆ. ಇವುಗಳು ನಮ್ಮ ಬದುಕಿಗೆ ಭದ್ರ ಅಡಿಪಾಯವೂ ಆಗಿರು ತ್ತದೆ. ಹೊಸ ಹೊಸತನದ ಅವಿಷ್ಕಾರದಲ್ಲಿ ಮಾನವನ ಮೂಲ ಧಾತುವಾದ ಸಂಸ್ಕೃತಿ, ಪರಂಪರೆ, ಸಂಸ್ಕಾರಗಳೆಂಬ ಅಡಿಪಾಯವನ್ನೇ ಕಿತ್ತೊಗೆದರೆ ಇಲ್ಲಿ ಬದುಕಲಾದರೂ ಸಾಧ್ಯವೇ ? ಎಂದಿಗೂ ಸಾಧ್ಯವೂ ಇಲ್ಲ. ಬೇರೂರಿದ ಗಿಡದ ಕೊಂಬೆ-ರೆಂಬೆಗಳನ್ನು ಕತ್ತರಿಸಿದಾಗ, ಹೊಸ ಚಿಗುರು ಮೂಡುತ್ತದೆ, ಮತ್ತೆ ಆ ಮರ ಹೂ ಹಣ್ಣುಗಳಿಂದ ನಳನಳಿಸುತ್ತದೆ. ಅದನ್ನು ಬಿಟ್ಟು ಆ ಗಿಡವನ್ನು ಸರಿಮಾಡುತ್ತೇನೆ ಎಂದು ಅದರ ಬೇರನ್ನೇ ಕತ್ತರಿಸಿದರೆ ಆ ಮರ ಸಾಯುತ್ತದೆ ಮತ್ತು ಮತ್ತೆಂದಿಗೂ ಅದು ಚಿಗುರುವುದೇ ಇಲ್ಲ. ಮತ್ತೆ ಒಡೆದ ತಳಹದಿಯನ್ನಾಗಲಿ, ತಳ ಇಲ್ಲದೆ ಮನೆಯನ್ನು ಕಟ್ಟುವುದಾಗಲಿ, ಬೇರಿರದ ಗಿಡವನ್ನು ಮತ್ತೆ ಬೆಳೆಸುವ ಕಲೆ ನಿನ್ನಲ್ಲಿ ಇಲ್ಲವೇ ಇಲ್ಲ. ಆದುದರಿಂದ ಬದುಕಿನಾಧಾರವಾದ ತಳಹದಿಯನ್ನಾಗಲಿ, ಜೀವನವೆಂಬ ಸಿರಿಸೋಗದ ಗಿಡದ ಬೇರನ್ನಾಗಲಿ ಕತ್ತರಿಸದೆ ಅವುಗಳ ಆಧಾರದ ಮೇಲೆ ನಿನ್ನ ಅವಿಷ್ಕಾರ, ಬದಲಾವಣೆ, ಮಾರ್ಪಾಡು, ವಿಜ್ಞಾನಗಳನ್ನು ಕಟ್ಟಿಕೊಳ್ಳುವುದು ಸೂಕ್ತ.

ಮಾರ ಮಿಂದನು

''ಬದುಕನ್ನು ಕುರಿತು ಯಾವುದೇ ಸರಳ ಸಾಮಾನ್ಯೀಕೃತ ಬೀಸು ಹೇಳಿಕೆಗಳನ್ನು ಮಾಡದೆ, ವ್ಯಕ್ತಿ ವಿಶಿಷ್ಟ ಚಹರೆಗಳನ್ನುಳ್ಳ ತುಂಬು ಪಾತ್ರಗಳ ಮೂಲಕವೇ ಮನುಷ್ಯಲೋಕದ ಸಂಕೀರ್ಣತೆಗಳನ್ನು ಶೋಧಿಸುವುದು ಶ್ರೀಧರ ಬಳಗಾರ ಅವರ ಕತೆಗಳ ಹೆಚ್ಚಳವಾಗಿದೆ. 'ಮಾರ ಮಿಂದನು' ಸಂಕಲನದಲ್ಲಿ ಬಳಗಾರರ ಪರಿಣತಿ ಪ್ರಬುದ್ಧತೆಗಳು ಹೊಸ ಎತ್ತರಗಳನ್ನು ಮುಟ್ಟಿವೆ. ಮನುಷ್ಯ ಸ್ವಭಾವ ಮತ್ತು ಸಂಬಂಧಗಳಲ್ಲಿನ ನಿಗೂಢತೆಗಳನ್ನು ಅನಾವರಣ ಗೊಳಿಸುವ ಪ್ರಕ್ರಿಯೆಯಲ್ಲಿಯೇ, ಆಯಾ ಪಾತ್ರಗಳು ಜೀವಿಸುವ ಸಾಮಾಜಿಕ, ರಾಜಕೀಯ, ಆರ್ಥಿಕ ಸಂದರ್ಭಗಳಲ್ಲಿರುವ ಕಗ್ಗಂಟು ಗಳನ್ನು ಕಾಣಿಸುವ ಮಹತ್ವಾಕಾಂಕ್ಷೆ ಈ ಕಥೆಗಳಲ್ಲಿ ಎದ್ದು ಕಾಣುವಂತಿದೆ. ಈ ಕತೆಗಳು ಓದುಗರ ಮನಸ್ಸನ್ನು ಹಲವು ಬಗೆ ಗಳಲ್ಲಿ ತಟ್ಟುವಂತಿವೆ.'' (ಬೆನ್ನುಡಿಯಲ್ಲಿ ಟಿ.ಪಿ.ಅಶೋಕ). ಶ್ರೀಧರ ಬಳಗಾರ ಅವರ ಹೊಸ ಕಥಾಸಂಕಲನ 'ಮಾರ ಮಿಂದನು' ಈಗ ಹೊರಬಂದಿದ್ದು, ಇದನ್ನು ಬೆಂಗಳೂರಿನ ಅಮೂಲ್ಯ ಪುಸ್ತಕ ಪ್ರಕಟಿಸಿದೆ.

ಪದಬಂಧ

• ಸಿ.ರವಿಶಂಕರ ಶಾಸ್ತ್ರಿ, ದಂಬೆ

1	■	2		3	■	4		5
6			■	7			■	
	■	8	9		■		■	
10	11	■		■	12	■	13	
■	14			■	15			■
16		■		■		■	17	18
	■	19	■	20		21	■	
	■	22			■	23		
24			■	25			■	

ಎಡದಿಂದ ಬಲಕ್ಕೆ

2. ಪಿತ್ರಾರ್ಜಿತ ಆಸ್ತಿಯ ಪಾಲುದಾರ (3)
4. ದೀಪ ಹಚ್ಚಿಡುವ ಚಿಕ್ಕ ಬಟ್ಟಲು (3)
6. ಜಳಕಕ್ಕೆ ಮತ್ತೊಂದು ಹೆಸರು (3)
7. ಅರ್ಥವಿಲ್ಲದ ಮಾತಿಗೆ ಹೀಗೆನ್ನಬಹುದು (3)
8. ನೀರಿನಲ್ಲಿ ಹುಟ್ಟಿದುದು (3)
10. ಎರಡಕ್ಷರದ ಹೂವು (2)
13. ಕಡಿವಾಣಕ್ಕೆ ಮತ್ತೊಂದು ಹೆಸರು (2)
14. ಕೆಂಬಣ್ಣದ ರಕ್ತ (3)
15. ಮತ್ತೊಂದು ತಾವರೆ (3)
16. ಮತ್ತೊಬ್ಬರ ಋಣ (2)
17. ಬರಹದ ಚಿನ್ಹೆ (2)
20. ರಾಕ್ಷಸನಲ್ಲೇ ದೇವತೆಯಿದ್ದಾನೆ! (3)
22. ಒಂದು ಬಗೆಯ ಸುವಾಸನೆಯುಕ್ತ ಬೇರು (3)
23. ಅಸ್ತವ್ಯಸ್ತವಾಗಿ ಬಂದಿದೆ ಒಂದು ಪರ್ವತ (3)
24. ಮುಲಾಮು ಅಲ್ಲ, ಕಡಿವಾಣ (3)
25. ರಾಮನೊಂದಿಗೆ ಕಾಡಿಗೆ ಹೋದ ಸಹೋದರ (3)

ಮೇಲಿಂದ ಕೆಳಕ್ಕೆ

1. ಲಕ್ಷ್ಯಕೊಡು ಎನ್ನುವುದು (4)
2. ಮಾನವನಲ್ಲ, ರಾಕ್ಷಸ (3)
3. ದೇವತೆಗೆ ಹೀಗೊಂದು ಹೆಸರು (3)
4. ಸಮುದ್ರಯಾನ ಮಾಡುವ ದೊಡ್ಡದಾದ ನಾವೆ (3)
5. ನಿಂದಿಸುವಿಕೆ ಹೀಗೆ ಬಂದಿದೆ (4)
9. ನರಸಿಂಹನ ಮತ್ತೊಂದು ಹೆಸರು ಅಸ್ತವ್ಯಸ್ತವಾಗಿ ಬಂದಿದೆ (4)
11. ಕನಿಕರಪಡು ಎಂದರ್ಥ (3)
12. ಒಂದೆಡೆಯಿಂದ ಮತ್ತೊಂಡೆಗೆ ಸಾಗಿಸು (4)
13. ಬೊಗಸೆಗೆ ಮತ್ತೊಂದು ಹೆಸರು (3)
16. ಹಂಸ ಪಕ್ಷಿಯ ತುಪ್ಪಳ (4)
18. ಇರುವೆಗೆ ಚಂದದ ಹೆಸರು (4)
19. ಗಾಯಕ್ಕೆ ಹಚ್ಚಿಕೊಳ್ಳುವ ಲೇಪ (3)
20. ಒಂದೆಡೆ ನಿಂತಿರುವ, ಪರ್ವತ (3)
21. ಮಣ ಭಾರದ ಗಂಡ (3)

ಸರಿಯುತ್ತರಗಳು

ಎಡದಿಂದ ಬಲಕ್ಕೆ: 2. ದಾಯಾದಿ 4. ಹಣತೆ [illegible]

ಮೇಲಿಂದ ಕೆಳಕ್ಕೆ: [illegible]

ಒಳ್ಳೆತನ ಅತಿಯಾದರೆ ನಮ್ಮ ಪ್ರಾಣಕ್ಕೇ ಕಂಟಕ

ಒಂದು ಚೇಳು ಪ್ರವಾಹದಿಂದ ಹರಿಯುತ್ತಿದ್ದ ನದಿಯ ದಡದಲ್ಲಿ ಕುಳಿತು ದಡದಾಚೆ ಹೋಗಲು ಕಾಯುತ್ತಿತ್ತು . ನದಿಯ ದಂಡೆಯ ಮೇಲೆ ಕುಳಿತ ಆಮೆಯನ್ನು ನಾನು ಆಚೆ ದಡಕ್ಕೆ ಹೋಗಬೇಕಾಗಿದೆ, ನಿನ್ನ ಬೆನ್ನ ಮೇಲೆ ಕುಳಿತುಕೊಳ್ಳುತ್ತೇನೆ ನನ್ನನ್ನು ಸ್ವಲ್ಪ ಆಚೆಯ ದಡಕ್ಕೆ ತಲುಪಿಸುವೆಯಾ? ಎಂದು ಅಂಗಲಾಚಿತು.

ದಡವನ್ನೇನೊ ತಲುಪಿಸ ಬಹುದು, ಆದರೆ ನನ್ನನ್ನು ನಾನು ಹೇಗೆ ನಂಬಲಿ? ನೀನು ನನ್ನ ಬೆನ್ನ ಮೇಲೆ ಕುಳಿತು ನಾನು ನದಿ ಮಧ್ಯಕ್ಕೆ ಬಂದಾಗ ನೀನು ನನ್ನನ್ನು ಕುಟುಕಿ ಬಿಟ್ಟರೆ? ನಾನಲ್ಲೇ ಸಾಯಬೇಕಾಗಬಹುದು. ನಿನ್ನನ್ನು ನಂಬುವುದು ಕಷ್ಟ. ಕುಟುಕುವುದೇ ನಿನ್ನ ಮೂಲ ಗುಣವಲ್ಲವೇ? ಎಂದು ಆಮೆ ಹೇಳಿತು.

ಆಗ ಚೇಳು, ಅಲ್ಲಪ್ಪಾ! ನದಿಯ ಮಧ್ಯದಲ್ಲಿದ್ದಾಗ, ನಾನು ನಿನ್ನನ್ನು ಕುಟುಕಿದರೆ ನಿನ್ನ ಜೊತೆಗೆ ಈಜು ಬಾರದ ನಾನು ಕೂಡ ನದಿಯಲ್ಲಿ ಬಿದ್ದು ಸಾಯುತ್ತೇನೆಲ್ಲವೇ, ನಾನೇಕೆ ಹಾಗೆ ಮಾಡಲಿ? ದಯಮಾಡಿ ನನ್ನನ್ನು ನಿನ್ನೊಂದಿಗೆ ಕರೆದುಕೊಂಡು ಹೋಗು ಎಂದಿತು.

ಆಗ ಈ ಆಮೆಯ ಜೊತೆಗಾರರು ಚೇಳಿನ ಮಾತನ್ನು ಕೇಳಿಸಿಕೊಂಡು ಇದರ ಸಹವಾಸ ಬಹಳ ಕಷ್ಟ. ಇದರ ಮಾತು ನಂಬಿಕೊಂಡು ಈ ಕೆಲಸಕ್ಕೆ ಮಾತ್ರ ಕೈ ಹಾಕಬೇಡ, ಕುಟುಕುವುದು ಅದರ ಹುಟ್ಟುಗುಣ ಎಂದು ಬುದ್ಧಿ ಹೇಳಿದವು.

ಅವುಗಳು ಎಷ್ಟೇ ಬುದ್ಧಿ ಹೇಳಿದರೂ ಈ ಆಮೆ ಅವುಗಳ ಮಾತನ್ನು ಕೇಳದೇ ಚೇಳಿನ ಮಾತನ್ನು ನಂಬಿತು. ನನ್ನನ್ನು ಅದು ಹೇಗೆ ಕುಟುಕೀತು? ನಾನು ಅದಕ್ಕೆ ಸಹಾಯ ಮಾಡುತ್ತಿಲ್ಲವೇ, ಎಂದು ಮರು ಪ್ರಶ್ನೆ ಹಾಕಿತು. ನಾವೆಲ್ಲಾ ಹೇಳುವಷ್ಟು ಹೇಳಿದ್ದೇವೆ, ಇಷ್ಟರ ಮೇಲೆ ನಿನ್ನಿಷ್ಟ, ಎಂದು ಅವು ಬೇಸರಗೊಂಡು ಸುಮ್ಮನಾಗಿ ಅಲ್ಲಿಂದ ಹೊರಟು ಹೋದವು.

ಆಗ ಈ ಆಮೆ, ನಾನಿಲ್ಲೇ ಅದನ್ನು ಬಿಟ್ಟು ಹೋದರೆ, ಪಾಪ ಅದು ಈ ಪ್ರವಾಹದಲ್ಲಿ ಬಿದ್ದು ಸತ್ತೇ ಹೋಗುತ್ತದೆ ಎಂದುಕೊಂಡು, ನ್ನ ಸ್ನೇಹಿತರು ಬೇಡವೆಂದರೂ ಕೂಡ ಕೇಳದೆ ಆಚೆ ದಡಕ್ಕೆ ಅದನ್ನು ದಾಟಿಸಲು ನಿರ್ಧರಿಸಿತು.

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಆಮೆಯ ಬೆನ್ನೇರಿ ಕುಳಿತ ಚೇಳು ನೀರಿನ ಪ್ರವಾಹ ನೋಡಿ ಬಹಳವಾಗಿ ಹೆದರಿಕೊಂಡಿತು. ಸ್ವಲ್ಪ ದೂರ ಹೋಗುವಾಗಲೇ ಭಯದಿಂದ ಆಮೆಯನ್ನು ಕುಟುಕಿ ಬಿಟ್ಟಿತು. ವಿಷವೇರಿ ಆಮೆ, ನದಿಯಲ್ಲಿ ಸಾವು ಬದುಕಿನ ಕ್ಷಣಗಳನ್ನು ಎಣಿಸುತ್ತಾ ಕೇಳಿತು ಈ ಮೊದಲು ನೀನು ನನ್ನನ್ನು ಕುಟುಕುವುದಿಲ್ಲ ಎಂದು ಹೇಳಿದ್ದೆ ತಾನೆ? ನಿನ್ನ ಮಾತನ್ನು ನಂಬಿ ನನ್ನ ಗೆಳೆಯರ ವಿರೋಧ ಕಟ್ಟಿಕೊಂಡು ನಿನಗೆ ಸಹಾಯ ಮಾಡಲು ಬಂದೆ. ಆದರೆ ನೀನು ಮಾಡಿದ್ದೇನು? ನಿನ್ನ ಬುದ್ಧಿಯನ್ನು ನೀನು ತೋರಿಸಿಯೇ ಬಿಟ್ಟೆಯಲ್ಲ. ನಿನ್ನ ಮಾತನ್ನು ನಂಬಿದ್ದಕ್ಕೆ ಈಗ ನನಗೆ ತಕ್ಕ ಶಾಸ್ತಿಯಾಯಿತು. ಈಗ ನಾನೂ ಸಾಯುತ್ತಿರುವೆ ನೀನು ಹೀಗೆ ಮಾಡಿದ್ದು, ನಿನಗೆ ನ್ಯಾಯ ಎನಿಸುತ್ತಿದೆಯೇ? ಎಂದಿತು.

ಆಗ ಚೇಳು ಹೌದು ನಾನು ನಿನಗೆ ಮಾತು ಕೊಟ್ಟಿದ್ದೆ, ಯಾವುದೇ ಕಾರಣಕ್ಕೂ ಕುಟುಕಬಾರದು ಎಂದು ಮನಸ್ಸಿನಲ್ಲಿ ಅಂದುಕೊಂಡಿದ್ದೆ, ಆದರೆ ಏನು ಮಾಡಲಿ? ಕೆಲವು ಸಂದರ್ಭದಲ್ಲಿ ನನ್ನ ಸ್ವಭಾವವೇ ಹಾಗೆ ಬದಲಾಗಿ ಬಿಡುತ್ತದೆ. ಏನು ಮಾಡಲಿ ಗೆಳೆಯ ಅದು ನನ್ನ ದೌರ್ಬಲ್ಯ. ಹುಟ್ಟುಗುಣ ಸುಟ್ಟರೂ ಹೋಗುವುದಿಲ್ಲ. ನನ್ನನ್ನು ಕ್ಷಮಿಸಿ ಬಿಡು ಎಂದಿತು.

ನಿನ್ನ ಬದಲಾಗದ ಸ್ವಭಾವದಿಂದ ಈಗ ನಾವಿಬ್ಬರೂ ಸಾಯುತ್ತಿದ್ದೇವೆ. ಕೊನೆಗೂ ನನ್ನ ಜೊತೆಗಾರರು ಹೇಳಿದ ಮಾತು ಸತ್ಯವಾಯಿತು ಎಂದು ಆಮೆ ಅಸುನೀಗಿತು.

ನಮ್ಮ ಸ್ನೇಹ ವಲಯದಲ್ಲಿ ಇರುವ ಕೆಲವರು ಮತ್ತೆ ಮತ್ತೆ ನಮಗೆ ನೋವುಂಟು ಮಾಡಿ ಕ್ಷಮೆ ಕೇಳಿದಾಗ ನಾವು ಕೂಡ ಜಾಗೃತರಾಗಬೇಕು. ಒಂದು ಬಾರಿ ತಪ್ಪಿಗೆ ಕ್ಷಮೆ ಇದೆ ಮತ್ತೆ ಮತ್ತೆ ತಿಳಿದು ತಿಳಿದು ಮಾಡಿದ ತಪ್ಪಿಗೆ ಕ್ಷಮೆ ಇಲ್ಲ. ಅತಿಯಾಗಿ ಕ್ಷಮಿಸಿದರೆ ನಮ್ಮ ಬದುಕನ್ನೇ ಹಾಳು ಮಾಡಿ ಕೊಳ್ಳುತ್ತೇವೆ.

ಯೋಗಿಯ ಶ್ರೇಷ್ಠತೆ

ಕೃಷ್ಣ ಹೇಳುತ್ತಾನೆ: ಯೋಗಿಯು ತಪಸ್ವಿ ಹಾಗೂ ಶಾಸ್ತ್ರಜ್ಞಾನಿಗಿಂತಲೂ ಶ್ರೇಷ್ಠನಾಗಿದ್ದಾನೆ. ಕರ್ಮಿಗಿಂತಲೂ (ಧಾರ್ಮಿಕ ವಿಧಿ ವಿಧಾನ ನೆರವೇರಿಸುವವ) ಶ್ರೇಷ್ಠನಾಗಿದ್ದಾನೆ. ಆದ್ದರಿಂದ ಅರ್ಜುನ ಯೋಗಿ ಯಾಗಲು ಪ್ರಯತ್ನಿಸು. (6.46) ಎಲ್ಲ ಯೋಗಿಗಳಲ್ಲಿ ನನ್ನಲ್ಲೇ ಯಾರು ಮಗ್ನರಾಗಿರುತ್ತಾರೋ ಹಾಗೂ ನನ್ನ ಭಕ್ತಿ ಯಲ್ಲೇ ಆಳ ಶ್ರದ್ಧೆಯಿಂದ ಯಾರು ತೊಡಗಿ ಕೊಂಡಿರುತ್ತಾರೋ ಅವರನ್ನು ಅತ್ಯಂತ ಹೆಚ್ಚು ಸಮಚಿತ್ತರೆಂದು ನಾನು ಪರಿಗಣಿಸುತ್ತೇನೆ. (6.47)

ಯೋಗವೆಂದರೆ ಸಂಯೋಜನೆ ಮತ್ತು ಯಾರು ಆತ್ಮದೊಂದಿಗೆ ಒಂದಾಗಿರುತ್ತಾರೋ ಅವರೇ ಯೋಗಿ. ಬೇರೆ ಬೇರೆ ಸಂದರ್ಭಗಳಲ್ಲಿ ಕೃಷ್ಣನು ಯೋಗಿಯ ಬೇರೆ ಬೇರೆ ಮುಖಗಳ ಬಗ್ಗೆ ಹೇಳಿದ್ದಾನೆ. ಅವುಗಳಲ್ಲಿ ಇವು ಮುಖ್ಯವಾದವು - ದ್ವಂದ್ವಾತೀತ, ಗುಣಾತೀತ, ಗುಣಗಳೇ ನಿಜವಾದ ಕರ್ತೃ, ಕೇವಲ ಸಾಕ್ಷಿ, ಮಿತ್ರ, ಶತ್ರು, ಹೊಗಳಿಕೆ ತೆಗಳಿಕೆಗಳನ್ನು ಸಮಾನವಾಗಿ ಸ್ವೀಕರಿಸುವುದು, ನಿಷ್ಕಾಮ ಕರ್ಮ, (ಯಜ್ಞದ ಹಾಗೆ) ಕರ್ಮಫಲದ ಬಗ್ಗೆ ನಿರೀಕ್ಷೆ ಇಲ್ಲದಿರುವುದು, ಇವೆಲ್ಲಕ್ಕಿಂತ ಹೆಚ್ಚಾಗಿ ಯೋಗಿ ಆತ್ಮತೃಪ್ತಿ ಹೊಂದಿರುತ್ತಾನೆ.

ತಪಸ್ವಿಯು ಕಟ್ಟುನಿಟ್ಟಾದ ಶಿಸ್ತನ್ನು, ತ್ಯಾಗವನ್ನು ಪಡೆದಿರುತ್ತಾನೆ ಮತ್ತು ಉದಾತ್ತವಾದದ್ದನ್ನು ಪಡೆಯುವ ಪ್ರತಿಜ್ಞೆ ಮಾಡಿರುತ್ತಾನೆ. ಅಂಥವರನ್ನು ಹೊಗಳಲಾಗುತ್ತದೆ. ಯಾಕೆಂದರೆ ಸಾಮಾನ್ಯ ಸಂದರ್ಭಗಳಲ್ಲಿ ಸಾಮಾನ್ಯರು ಮಾಡದಿರುವುದನ್ನು ಅವರು ಮಾಡುತ್ತಾರೆ. ಆದರೆ ಏನನ್ನಾದರೂ ಪಡೆಯಬೇಕೆಂಬ ಆಸೆ ಇರುತ್ತದೆ. ಪರಮಾತ್ಮನನ್ನೂ ನೋಡುವ ಆಸೆ ಸಹಿತ ಎಲ್ಲಾ ಆಸೆಗಳನ್ನು ಯೋಗಿಯು ತ್ಯಜಿಸಿ ರುವುದರಿಂದ ತಪಸ್ವಿಯೋಗಿಗಿಂತ ಕೆಳಮಟ್ಟದವ ನಾಗಿದ್ದಾನೆ. ಒಮ್ಮೆ ನದಿಗಳು ಮಹಾಸಾಗರ ಸೇರಿದಾಗ ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳು ವಂತೆ ಯೋಗಿಯ ಆಸೆಗಳೆಲ್ಲವೂ ಕಳೆದು ಹೋಗುತ್ತವೆ.(2.70) ಜ್ಞಾನವನ್ನು ಪಡೆ ಯಲು ಆಸಕ್ತನಾಗಿರುವವನನ್ನು ಶಾಸ್ತ್ರಜ್ಞಾನಿ ಎಂದು ಹೇಳುತ್ತಾರೆ. ಈ ಗುಣವನ್ನು ಹೊಗಳ ಲಾಗುತ್ತದೆ ಯಾಕೆಂದರೆ ಅವನು ಸಾಮಾನ್ಯ ಜನರಿಗಿಂತ ಹೆಚ್ಚು ತಿಳಿದಿರುತ್ತಾನೆ. ಆದರೆ ಯೋಗಿಯು ಆತ್ಮದಲ್ಲಿ ಎಲ್ಲರನ್ನೂ ಎಲ್ಲರಲ್ಲಿ ಆತ್ಮವನ್ನೂ ಕಾಣುತ್ತಾನೆ. (6.29) ಮತ್ತು ಇದನ್ನು ತಿಳಿದ ಯಾರೂ ಭ್ರಮೆಗೆ ಒಳಗಾಗು ವುದಿಲ್ಲ. (4.35) ಇದಕ್ಕಿಂತ ಹೆಚ್ಚಿಗೆ ತಿಳಿಯು ವುದು ಏನೂ ಇರುವುದಿಲ್ಲ.

ಕರ್ಮಿಯು ಧಾರ್ಮಿಕ ವಿಧಾನಗಳನ್ನು ಮಾಡಲು ಬದ್ಧನಾಗಿರು ತ್ತಾನೆ. ಆದರೆ ಯೋಗಿಯು ಯಜ್ಞದ ಹಾಗೆ ಅಪ್ರೇರೇಪಿತ ಕರ್ಮಗಳನ್ನು ಮಾಡುತ್ತಾನೆ. ಅವನಿಗೆ ಕರ್ಮಬಂಧ ಇರುವುದಿಲ್ಲ. ಹಾಗಾಗಿ ಯೋಗಿಯು ಕರ್ಮಿಗಿಂತ ಹೆಚ್ಚಿನವನಾಗಿರುತ್ತಾನೆ.

ನಿತ್ಯಜೀವನದಲ್ಲಿ ಭಗವದ್ಗೀತೆ



ಕೆ.ಶಿವಪ್ರಸಾದ್
ಹಿರಿಯ ಐಎಎಸ್ ಅಧಿಕಾರಿ

ನೀವೂ ಬರೆಯಬಹುದು
ನಮ್ಮ ವಿಳಾಸ
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
e-mail: vishwavanimagazine@gmail.com

ಅಂಕ ಪಟ್ಟಿ

	ಪಂದ್ಯ	ಗೆಲುವು	ಸೋಲು	ಅಂಕ
ಬೆಂಗಳೂರು	10	07	03	14
ಮುಂಬೈ	10	06	04	12
ಗುಜರಾತ್	09	06	03	12
ಡೆಲ್ಲಿ	10	06	04	12
ಪಂಜಾಬ್	09	05	03	11
ಲಖನೌ	10	05	05	10
ಕೋಲ್ಕತ್ತಾ	10	04	05	09
ರಾಜಸ್ಥಾನ್	10	03	07	06
ಹೈದರಾಬಾದ್	09	03	06	06
ಚೆನ್ನೈ	09	02	07	04

ಇಂದಿನ ಪಂದ್ಯ

7.30 PM

ಚೆನ್ನೈ ಸೂಪರ್ ಕಿಂಗ್ಸ್ VS ಪಂಜಾಬ್ ಕಿಂಗ್ಸ್

ಚಿದಂಬರಂ ಸ್ಟೇಡಿಯಂ, ಚೆನ್ನೈ

IPL 2025

ವೈಭವ್ ತನ್ನ ಕನಸನ್ನು ಈಡೇರಿಸಿಕೊಳ್ಳುತ್ತಿದ್ದಾನೆ

'ನಾವೆಲ್ಲರೂ ಚಿಕ್ಕಂದಿನಿಂದಲೇ ಕ್ರಿಕೆಟ್ ಆಡಿದವರು, ಅದರೊಂದಿಗೇ ಬೆಳೆದವರು. ನಮ್ಮ ಸ್ನೇಹಿತರೊಂದಿಗೆ ಆಡುವಾಗಲೂ ಪ್ರತಿ ಸಲವೂ ಒಂದು ಕನಸು ಕಂಡಿದ್ದೇವೆ. ಎಲ್ಲಾ ಕ್ರಿಕೆಟಿಗರಿಗೂ ತಮ್ಮದೇ ಆದ ಕನಸುಗಳು ಇರುತ್ತದೆ. 14 ಮತ್ತು 15ನೇ ವಯಸ್ಸು ಜೀವನದ ಬಗ್ಗೆ ಆಶಯ ಮತ್ತು ವಿಭಿನ್ನ ವಿಷಯಗಳನ್ನು ಯೋಚಿಸುವ ಘಟ್ಟವಾಗಿದೆ. ಆದರೆ ವೈಭವ್ ಸೂರ್ಯವಂಶಿ ಈಗಾಗಲೇ ಕ್ರಿಕೆಟ್‌ನ ತನ್ನ ಕನಸನ್ನು, ಆಶಯಗಳನ್ನು ಈಡೇರಿಸಿಕೊಳ್ಳುತ್ತಿದ್ದಾನೆ, ಅದರಲ್ಲಿ ಜೀವಿಸುತ್ತಿದ್ದಾನೆ'

ಅಜೇಯ್ ಜಡೇಜಾ ಮಾಜಿ ಕ್ರಿಕೆಟಿಗ

ಡುಪ್ಲೆಸಿಸ್, ಅಕ್ಷರ್ ಪಟೇಲ್ ಆಟ ವ್ಯರ್ಥ | ಕೆಕೆಆರ್ ಪ್ಲೇ ಆಫ್ ಆಸೆ ಜೀವಂತ

ಡೆಲ್ಲಿ ಮೇಲೆ ಕೋಲ್ಕತ್ತಾ ರೈಡ್

ದೆಹಲಿ: ಪ್ಲೇ ಆಫ್ ಪ್ರವೇಶಿಸಲು ಗೆಲ್ಲಲೇಬೇಕಾದ ಪಂದ್ಯದಲ್ಲಿ ಕೋಲ್ಕತ್ತಾ ನೈಟ್ ರೈಡರ್ಸ್ ತಂಡವು 14 ರನ್‌ಗಳ ರೋಚಕ ಜಯ ಸಾಧಿಸುವ ಮೂಲಕ ಅದ್ಭುತವಾಗಿ ಕಮ್‌ಬ್ಯಾಕ್ ಮಾಡಿದೆ. 206 ರನ್‌ಗಳ ಗುರಿ ಬೆನ್ನಟ್ಟಿದ ಅತಿಥೇಯ ಡೆಲ್ಲಿ ಕ್ಯಾಪಿಟಲ್ಸ್ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 190ರನ್ ಗಳಿಸಲಷ್ಟೇ ಶಕ್ತವಾಗಿ ಸೋಲೊಪ್ಪಿಕೊಂಡಿತು.

ಫಾಫ್ ಡುಪ್ಲೆಸಿಸ್ (62), ನಾಯಕ ಅಕ್ಷರ್ ಪಟೇಲ್ (43) ಹಾಗೂ ವಿಪ್ರಜ್ ನಿಗಮ್ (38) ಡೆಲ್ಲಿ ತಂಡದ ಗೆಲುವಿಗಾಗಿ ನಡೆಸಿದ ಹೋರಾಟ ವ್ಯರ್ಥವಾಯಿತು.

ಗುರಿಯನ್ನು ಬೆಂಬತ್ತಿ ಕ್ರೀಸ್‌ಗೆ ಇಳಿದ ಡೆಲ್ಲಿಯ ಆರಂಭಿಕ ಬ್ಯಾಟ್ಸ್‌ಮ್ಯಾನ್ ಅಭಿಷೇಕ್ ಪೊರೆಲ್ 2 ಬಾಲ್‌ಗಳನ್ನು ಎದುರಿಸಿ 4 ರನ್ ಗಳಿಸಿ ಆರಂಭದ ಓವರ್‌ನಲ್ಲೇ ತಮ್ಮ ವಿಕೆಟ್ ಒಪ್ಪಿಸಿದರು. ಆ ಬಳಿಕ ಬಂದ ಕರುಣ್ ನಾಯರ್ ಕೂಡಾ ದೆಹಲಿ ತಂಡದ ಪರವಾಗಿ ಕ್ರೀಸ್‌ನಲ್ಲಿ ಹೆಚ್ಚು ಹೊತ್ತು ನಿಲ್ಲಲಿಲ್ಲ. 13 ಬಾಲ್‌ಗಳನ್ನು ಎದುರಿಸಿ 15 ರನ್ ಗಳಿಸಿ, ವೈಭವ್ ಆರೋರ ಬೌಲಿಂಗ್‌ನಲ್ಲಿ ಎಲ್‌ಬಿ ಡಬ್ಲ್ಯೂ ಆಗಿ ಪೆವಿಲಿಯನ್‌ಗೆ ತೆರಳಿದರು. ದೆಹಲಿ ತಂಡದ ಸ್ಟಾರ್ ಬ್ಯಾಟ್ಸ್‌ಮ್ಯಾನ್ ಕೆಎಲ್ ರಾಹುಲ್ ಕೂಡಾ ವೈಫಲ್ಯ ಅನುಭವಿಸಿದರು. ಕೇವಲ 5 ಬಾಲ್ ಎದುರಿಸಿ 7 ರನ್ ಗಳಿಸಿ ರನೌಟ್ ಆದರು. ಆದರೆ ಹರ್ಷಲ್ ಪಟೇಲ್ ಮಾತ್ರ ಕ್ರೀಸ್‌ಗೆ ಬಂದು ಬಹಳ ಹೊತ್ತು ನೆಲೆ ನಿಂತರು. 23 ಬಾಲ್‌ಗಳನ್ನು ಎದುರಿಸಿದ ಅವರು 43 ರನ್‌ಗಳನ್ನು ಗಳಿಸಿ ನರೇನ್ ಬೌಲಿಂಗ್‌ನಲ್ಲಿ ಹರ್ಷಿತ್ ರಾಣಾಗೆ ಕ್ಯಾಚ್ ನೀಡಿ ಪೆವಿಲಿಯನ್‌ಗೆ ತೆರಳಿದರು. ಆ ಬಳಿಕ ವಿಪ್ರಜ್ ನಿಗಮ್ 19 ಬಾಲ್‌ಗಳನ್ನು ಎದುರಿಸಿ 38 ರನ್ ಗಳಿಸಿದರೂ ದೆಹಲಿಯ ಸೋಲನ್ನು ತಪ್ಪಿಸಲು ಸಾಧ್ಯವಾಗಲಿಲ್ಲ. ಆಶುತೋಷ್ ಶರ್ಮಾ ಕೇವಲ 7 ರನ್, ಸ್ಟಾರ್ಕ್ 1 ರನ್ ಗಳಿಸಿದರು. ಚಮೀರ 2 ರನ್ ಹಾಗೂ ಕುಲದೀಪ್ ಯಾದವ್ 1 ರನ್ ಗಳಿಸಿ ಅಜೇಯರಾಗುಳಿದರು.

ಟಾಸ್ ಸೋತು ಬ್ಯಾಟಿಂಗ್ ಇಳಿದ ಕೋಲ್ಕತ್ತಾ ತಂಡವು ಉತ್ತಮ ಆರಂಭವನ್ನು ಪಡೆದುಕೊಂಡಿತು. ಆರಂಭಿಕರಾದ ರೆಹ್ಮಾನುಲ್ಲಾ ಗುರ್ಬಜ್ ಹಾಗೂ ನರೈನ್ ಮೊದಲ ವಿಕೆಟ್ ಜೊತೆಯಾಟದಲ್ಲಿ 3 ಓವರ್‌ಗಳಲ್ಲೇ 48 ರನ್ ಸೇರಿಸಿದರು. ಗುರ್ಬಜ್ 12 ಎಸೆತಗಳಲ್ಲಿ 5 ಬೌಂಡರಿ, 1 ಸಿಕ್ಸರ್ ಸಹಿತ 26 ರನ್ ಗಳಿಸಿದರೆ, ನರೈನ್ 16 ಎಸೆತಗಳಲ್ಲಿ ತಲಾ 2 ಬೌಂಡರಿ, 2 ಸಿಕ್ಸರ್ ಸಹಿತ 27 ರನ್ ಗಳಿಸಿದರು. ನಾಯಕ ಅಜಿಂಕ್ಯಾ ರಹಾನೆ 14 ಎಸೆತಗಳಲ್ಲಿ 4 ಬೌಂಡರಿ, 1 ಸಿಕ್ಸರ್ ಸಹಿತ 26 ರನ್ ಗಳಿಸಿದರು.

ಉತ್ತಮ ಆರಂಭ ಪಡೆದಿದ್ದ ಕೋಲ್ಕತ್ತಾ ತಂಡವು ಕೆಲವೇ ಕೆಲವು ರನ್‌ಗಳ ಅಂತರದಲ್ಲಿ ವಿಕೆಟ್‌ಗಳನ್ನು ಕಳೆದುಕೊಂಡಿತು. ವೆಂಕಟೇಶ್ ಅಯ್ಯರ್ 5 ಎಸೆತಗಳಲ್ಲಿ ಕೇವಲ 7 ರನ್ ಗಳಿಸಿ ಔಟ್ ಆದರು. ಆದರೆ ಯುವ ಆಟಗಾರ ಅಂಗ್‌ಕ್ರಿಸ್ ರಘುವಂಶಿ 32 ಎಸೆತಗಳಲ್ಲಿ 3 ಬೌಂಡರಿ, 2 ಸಿಕ್ಸರ್ ಸಹಿತ 44 ರನ್ ಗಳಿಸಿದರು. ರಿಂಕು ಸಿಂಗ್ 25 ಎಸೆತಗಳಲ್ಲಿ 3 ಬೌಂಡರಿ, 1 ಸಿಕ್ಸರ್ ಸಹಿತ 36 ರನ್ ಗಳಿಸಿದರು. ಕೊನೆಯಲ್ಲಿ ಅಬ್ಬರಿಸಿದ ಆ್ಯಂಡ್ರೆ ರಸೆಲ್ 9 ಎಸೆತಗಳಲ್ಲಿ 2 ಬೌಂಡರಿ, 1 ಸಿಕ್ಸರ್ ಸಹಿತ 17 ರನ್ ಗಳಿಸಿದರೆ, ಪೊವೆಲ್ 5 ರನ್ ಗಳಿಸಿದರು.

ಸ್ಕೋರ್ ಬೋರ್ಡ್

204/9 (20 ಓವರ್)

ಕೋಲ್ಕತ್ತಾ ನೈಟ್ ರೈಡರ್ಸ್		ರನ್	ಎಸೆತ
ಗುರ್ಬಾಜ್	ಕಾಟ್ ▸▸ ಪೊರೆಲ್, ಬೌಲ್ಡ್ ▸▸ ಸ್ಟಾರ್ಕ್	26	12
ನರೇನ್	ಎಲ್‌ಬಿಡಬ್ಲ್ಯೂ ▸▸ ವಿಪ್ರಜ್	27	16
ರಹಾನೆ	ಎಲ್‌ಬಿಡಬ್ಲ್ಯೂ ▸▸ ಅಕ್ಷರ್	26	14
ರಘುವಂಶಿ	ಕಾಟ್ ▸▸ ಕರುಣ್, ಬೌಲ್ಡ್ ▸▸ ಚಮೀರ	44	32
ವೆಂಕಟೇಶ್	ಕಾಟ್ ▸▸ ವಿಪ್ರಜ್, ಬೌಲ್ಡ್ ▸▸ ಅಕ್ಷರ್	7	5
ರಿಂಕುಸಿಂಗ್	ಕಾಟ್ ▸▸ ಸ್ಟಾರ್ಕ್, ಬೌಲ್ಡ್ ▸▸ ವಿಪ್ರಜ್	36	25
ರಸೆಲ್	ರನೌಟ್ ▸▸ ಪೊರೆಲ್	17	9
ಪೊವೆಲ್	ಎಲ್‌ಬಿಡಬ್ಲ್ಯೂ ▸▸ ಸ್ಟಾರ್ಕ್	5	5
ಅನುಕುಲ್	ಕಾಟ್ ▸▸ ದುಷ್ಮಂತ, ಬೌಲ್ಡ್ ▸▸ ಸ್ಟಾರ್ಕ್	0	1
ರಾಣಾ	ನಾಟೌಟ್	0	1
ಚಕ್ರವರ್ತಿ	ನಾಟೌಟ್	1	1

ದೆಹಲಿ ಕ್ಯಾಪಿಟಲ್ಸ್	ಓವರ್	ರನ್	ವಿಕೆಟ್
ಸ್ಟಾರ್ಕ್	4	43	3
ಚಮೀರ	3	46	1
ಮುಖೇಶ್	2	17	0
ವಿಪ್ರಜ್	4	41	2
ಅಕ್ಷರ್	4	27	2
ಕುಲದೀಪ್	3	27	0

ಕೋಲ್ಕತ್ತಾ ನೈಟ್ ರೈಡರ್ಸ್	ಓವರ್	ರನ್	ವಿಕೆಟ್
ಅನುಕೂಲ್	4	27	1
ಅರೋರಾ	2	19	1
ರಾಣಾ	4	49	0
ಚಕ್ರವರ್ತಿ	4	39	2
ನರೇನ್	4	29	3
ರಸೆಲ್	2	22	1

190/9 (20 ಓವರ್)

ಡೆಲ್ಲಿ ಕ್ಯಾಪಿಟಲ್ಸ್		ರನ್	ಎಸೆತ
ಪೊರೆಲ್	ಕಾಟ್ ▸▸ ರಸೆಲ್, ಬೌಲ್ಡ್ ▸▸ ಅನುಕೂಲ್	4	2
ಡು ಪ್ಲೆಸಿಸ್	ಕಾಟ್ ▸▸ ರಿಂಕು, ಬೌಲ್ಡ್ ▸▸ ನರೇನ್	62	45
ಕರುಣ್	ಎಲ್‌ಬಿಡಬ್ಲ್ಯೂ ▸▸ ಅರೋರಾ	15	13
ರಾಹುಲ್	ರನೌಟ್ ▸▸ ನರೇನ್	7	5
ಅಕ್ಷರ್	ಕಾಟ್ ▸▸ ರಾಣಾ, ಬೌಲ್ಡ್ ▸▸ ನರೇನ್	43	23
ಸ್ಟಬ್ಸ್	ಬೌಲ್ಡ್ ▸▸ ನರೇನ್	1	3
ವಿಪ್ರಜ್	ಬೌಲ್ಡ್ ▸▸ ರಸೆಲ್	38	19
ಅಶುತೋಷ್	ಕಾಟ್ ▸▸ ನರೇನ್, ಬೌಲ್ಡ್ ▸▸ ಚಕ್ರವರ್ತಿ	7	6
ಸ್ಟಾರ್ಕ್	ಕಾಟ್ ▸▸ ಗುರ್ಬಾಜ್, ಬೌಲ್ಡ್ ▸▸ ಚಕ್ರವರ್ತಿ	0	1
ಚಮೀರ	ನಾಟೌಟ್	2	3
ಕುಲದೀಪ್	ನಾಟೌಟ್	1	1

ಧೋನಿ ಬಳಗಕ್ಕೆ ಔಪಚಾರಿಕ ಪಂದ್ಯ | ಅಯ್ಯರ್ ಪಡೆಗೆ ಪ್ಲೇ ಆಫ್ ತಲುಪುವ ತವಕ

ಚೆನ್ನೈಗೆ ತವರಲ್ಲಿಂದು ಪಂಜಾಬ್ ಸವಾಲು

ಚೆನ್ನೈ ತಂಡ

ಎಂ ಎಸ್ ಧೋನಿ (ನಾಯಕ)
ಮಥೀಶ ಪತಿರಾನ
ಶಿವಂ ದುಬೆ
ರವೀಂದ್ರ ಜಡೇಜಾ
ಡೆವೊನ್ ಕಾನ್ವೆ
ರಾಹುಲ್ ತ್ರಿಪಾಠಿ
ರಚಿನ್ ರವೀಂದ್ರ
ರವಿಚಂದ್ರನ್ ಅಶ್ವಿನ್
ನೂರ್ ಅಹ್ಮದ್
ಶೇಕ್ ರಶೀದ್
ನಾಥನ್ ಎಲ್ಲಿಸ್
ಕಮಲೇಶ್ ನಾಗರಕೋಟಿ
ಶ್ರೇಯಸ್ ಗೋಪಾಲ್
ವಿಜಯ್ ಶಂಕರ್

ಪಂಜಾಬ್ ತಂಡ

ಶ್ರೇಯಸ್ ಅಯ್ಯರ್ (ನಾಯಕ)
ಪ್ರಭ್‌ಸಿಮ್ರಾನ್ ಸಿಂಗ್
ಪ್ರಿಯಾಂಶ್ ಆರ್ಯ
ಶಶಾಂಕ್ ಸಿಂಗ್
ಮಾರ್ಕಸ್ ಸ್ಟೊಯಿನಿಸ್
ಸೂರ್ಯಾಂಶ್ ಶೆಡ್ಜ್
ಗ್ಲೆನ್ ಮ್ಯಾಕ್ಸ್‌ವೆಲ್
ಮಾರ್ಕೊ ಜಾನ್ಸೆನ್
ಯುಜುವೇಂದ್ರ ಚಹಾಲ್
ಲಾಕಿ ಫರ್ಗುಸನ್
ಅರ್ಷದೀಪ್ ಸಿಂಗ್
ನೇಹಲ್ ವದೇರಾ
ಮುಶೀರ್ ಖಾನ್
ಕುಲ್‌ದೀಪ್ ಸೇನ್

ಚೆನ್ನೈ: ಐಪಿಎಲ್ ಟೂರ್ನಿಯ ಬುಧವಾರದ ಪಂದ್ಯದಲ್ಲಿ ಇಲ್ಲಿನ ಚಿದಂಬರಂ ಸ್ಟೇಡಿಯಂನಲ್ಲಿ ಧೋನಿ ನಾಯಕತ್ವದ ಅತಿಥೇಯ ಚೆನ್ನೈ ತಂಡವು ಶ್ರೇಯಸ್ ಅಯ್ಯರ್ ಬಳಗದ ಪಂಜಾಬ್ ಕಿಂಗ್ಸ್ ತಂಡವನ್ನು ಎದುರಿಸಲಿದೆ. ಚೆನ್ನೈ ತಂಡವು ಈ ಬಾರಿಯ ಐಪಿಎಲ್‌ನ ಪ್ಲೇ ಆಫ್ ಅರ್ಹತೆ ಪಡೆಯಲು ವಿಫಲವಾಗಿದ್ದು, ತನ್ನ ಅರ್ಹತೆ ಖಾತರಿಪಡಿಸಲು ಪಂಜಾಬ್ ತಂಡವು ಪಂದ್ಯದ ಗೆಲುವಿಗಾಗಿ ತವಕಿಸುತ್ತಿದೆ.

ಮಾರ್ಚ್-23ರಂದು ಮುಂಬೈ ವಿರುದ್ಧದ ಪಂದ್ಯವನ್ನು ಮೂಲಕ ಚೆನ್ನೈ ತಂಡ ಗೆದ್ದರೂ, ಆ ಬಳಿಕ ಸಿಎಸ್‌ಕೆಯನ್ನು ಸೋಲಿನ ಸರಪಳಿ ಬಲವಾಗಿ ಸುತ್ತಿಕೊಂಡಿತ್ತು. ಮಾರ್ಚ್-28 ರಂದು ತನ್ನ ತವರು ನೆಲದಲ್ಲಿ ಬೆಂಗಳೂರು ತಂಡದ ವಿರುದ್ಧ, ಮಾರ್ಚ್ 30ರಂದು ರಾಜಸ್ಥಾನ್ ವಿರುದ್ಧವೂ ಈ ಆವೃತ್ತಿಯಲ್ಲಿ ಚೆನ್ನೈ ತಂಡವು ಸೋತಿತ್ತು. ಏಪ್ರಿಲ್-5ರಂದು ಆಯೋಜಿಸಲಾಗಿದ್ದ ಪಂದ್ಯದಲ್ಲಿ ಡೆಲ್ಲಿ ವಿರುದ್ಧ, ಏಪ್ರಿಲ್-8ರಂದು ಪಂಜಾಬ್ ವಿರುದ್ಧ ಮತ್ತು ಏಪ್ರಿಲ್-11ರಂದು ಕೋಲ್ಕತ್ತಾ ವಿರುದ್ಧವೂ ಚೆನ್ನೈ ತಂಡ ಪರಾಭವಗೊಂಡಿತ್ತು. ಆದರೆ ಏಪ್ರಿಲ್-14ರಂದು ನಡೆದ ಪಂದ್ಯದಲ್ಲಿ 166 ರನ್‌ಗಳಿಗೆ ಲಖನೌ ತಂಡವನ್ನು ಕಟ್ಟಿ ಹಾಕಿದ್ದ ಧೋನಿ ಪಡೆ, 5 ವಿಕೆಟ್ ಅಂತರದಲ್ಲಿ ಗೆದ್ದು ಟೂರ್ನಿಯಲ್ಲಿ ತನ್ನ ಎರಡನೇ ಗೆಲುವನ್ನು ದಾಖಲಿಸಿತು. ಆದರೆ ಏಪ್ರಿಲ್-25ರಂದು ನಡೆದ ಪಂದ್ಯದಲ್ಲಿ ಹೈದರಾಬಾದ್ ವಿರುದ್ಧ ಚೆನ್ನೈ ಮುಗ್ಗರಿಸಿತ್ತು.

ಈಗಾಗಲೇ ಪ್ಲೇ ಆಫ್‌ನತ್ತ ದೃಷ್ಟಿ ನೆಟ್ಟಿರುವ ಪಂಜಾಬ್‌ಗೆ ಬುಧವಾರದ ಪಂದ್ಯ ಮಹತ್ವವೆನಿಸಲಿದೆ. ಒಟ್ಟು 11 ಅಂಕ ಗಳಿಸಿರುವ ಪಂಜಾಬ್ ಈ ಸಲ ತನ್ನ ಮೊದಲ ಪಂದ್ಯದಲ್ಲಿ ಗುಜರಾತ್ ಟೈಟನ್ಸ್ ತಂಡವನ್ನು ಮಾರ್ಚ್-25ರಂದು ಮಣಿಸಿ ಶುಭಾರಂಭ ಮಾಡಿತ್ತು. ಆ ಬಳಿಕ ಏಪ್ರಿಲ್-1ರಂದು ಲಖನೌ ವಿರುದ್ಧವೂ ಜಯ ದಾಖಲಿಸಿತ್ತು.

ಏಪ್ರಿಲ್-5ರಂದು ನಡೆದ ಪಂದ್ಯದಲ್ಲಿ ರಾಜಸ್ಥಾನ ವಿರುದ್ಧ ಸೋತರೂ ಕೂಡಾ, ಪಂಜಾಬ್ ತಂಡವು ಏಪ್ರಿಲ್-8ರಂದು ಆಯೋಜಿಸಲಾಗಿದ್ದ ಪಂದ್ಯದಲ್ಲಿ ಚೆನ್ನೈ ವಿರುದ್ಧ ಗೆದ್ದು ಬೀಗಿತ್ತು. ಏಪ್ರಿಲ್-12ರಂದು ಹೈದರಾಬಾದ್ ವಿರುದ್ಧ ಸೋಲುಂಡಿದ್ದ ಪಂಜಾಬ್, ಏಪ್ರಿಲ್-15ರಂದು ಕೋಲ್ಕತ್ತಾ ತಂಡದ ವಿರುದ್ಧ ಜಯ ಗಳಿಸಿತ್ತು. ಏಪ್ರಿಲ್-18ರಂದು ನಡೆದಿದ್ದ ಪಂದ್ಯದಲ್ಲಿ ಆರ್‌ಸಿಬಿಯನ್ನು ಸೋಲಿಸಿದರೂ, ಏಪ್ರಿಲ್-20ರಂದು ಬೆಂಗಳೂರಿನಲ್ಲಿ ಆಯೋಜಿಸಲಾಗಿದ್ದ ಪಂದ್ಯದಲ್ಲಿ ಆರ್‌ಸಿಬಿಗೆ ಪಂಜಾಬ್ ಶರಣಾಗಿತ್ತು. ಏಪ್ರಿಲ್-26ರಂದು ಪಂಜಾಬ್-ಕೋಲ್ಕತ್ತಾ ತಂಡಗಳ ನಡುವಿನ ಪಂದ್ಯವು ಮಳೆಯಿಂದಾಗಿ ರದ್ದಾಗಿತ್ತು.

ಇದೀಗ ಆಡಿರುವ ಒಟ್ಟು 9 ಪಂದ್ಯಗಳಲ್ಲಿ 5 ಪಂದ್ಯಗಳನ್ನು ಗೆದ್ದಿರುವ ಪಂಜಾಬ್ ಒಟ್ಟು 11 ಅಂಕಗಳನ್ನು ಕಲೆ ಹಾಕಿದೆ. ಕೇವಲ 4 ಅಂಕ ಕಲೆ ಹಾಕಿರುವ ಚೆನ್ನೈ ತಂಡಕ್ಕೆ ಬುಧವಾರ ನಡೆಯಲಿರುವ ಪಂದ್ಯ ಬರೀ ಕಾಟಾಚಾರಕ್ಕೆ ಇದ್ದಂತಿದ್ದು, ತನ್ನ ತವರಿನ ಪ್ರೇಕ್ಷಕರ ಎದುರಾದರೂ ಉತ್ತಮ ಪ್ರದರ್ಶನ ನೀಡಬೇಕಿರುವ ಸಂದಿಗ್ಧತೆಯಲ್ಲಿದೆ.

200ಕ್ಕೂ ಹೆಚ್ಚಿನ ಗುರಿ: ಗೆದ್ದ ಟಾಪ್ 5 ತಂಡಗಳು

ಜೈಪುರ: ರಾಜಸ್ಥಾನ್ ರಾಯಲ್ಸ್ ತಂಡವು ಸೋಮವಾರ ಐಪಿಎಲ್‌ನಲ್ಲಿ 14 ವರ್ಷದ ಬಾಲಕ ವೈಭವ್ ಸೂರ್ಯವಂಶಿ 35 ಎಸೆತಗಳಲ್ಲಿ ಸಿಡಿಸಿದ ಶತಕದ ನೆರವಿನಿಂದ ಗುಜರಾತ್ ಟೈಟಾನ್ಸ್ ವಿರುದ್ಧ ಜೈಪುರದಲ್ಲಿ 210 ರನ್‌ಗಳ ಗುರಿಯನ್ನು ಕೇವಲ 15.5 ಓವರ್‌ಗಳಲ್ಲಿ ಬೆಂಬತ್ತಿ ಗೆದ್ದು ಇತಿಹಾಸ ಸೃಷ್ಟಿಸಿತು. ಇದು ಐಪಿಎಲ್‌ನಲ್ಲಿ ಇದುವರೆಗಿನ ಅತಿ ವೇಗದ 200ಕ್ಕೂ ಹೆಚ್ಚು ರನ್‌ಗಳ ಚೇಸ್ ಆಗಿದೆ.

ರಾಜಸ್ಥಾನ್ 210 ರನ್‌ಗಳ ಗುರಿಯನ್ನ ಕೇವಲ 15.5 ಓವರ್‌ಗಳಲ್ಲಿ ತಲುಪುವ ಮೂಲಕ ಐಪಿಎಲ್ ?ನಲ್ಲಿ ವೇಗವಾಗಿ 200ಕ್ಕೂ ಹೆಚ್ಚು ಮೊತ್ತವನ್ನ ಚೇಸ್ ಮಾಡಿ ಗೆದ್ದ ತಂಡ ಎನಿಸಿಕೊಂಡಿತು.

ವೇಗವಾಗಿ 200ಕ್ಕೂ ಹೆಚ್ಚು ಮೊತ್ತದ ಗುರಿ ಬೆಂಬತ್ತಿ ಗೆದ್ದಿದ್ದ ದಾಖಲೆ ಈ ಮೊದಲು ಆರ್‌ಸಿಬಿ ಹೆಸರಿನಲ್ಲಿತ್ತು. ಕಳೆದ ವಷ ಗುಜರಾತ್ ಟೈಟನ್ಸ್ ವಿರುದ್ಧವೇ ಅಹಮದಾಬಾದ್‌ನಲ್ಲಿ 201 ರನ್‌ಗಳ ಗುರಿಯನ್ನು ಆರ್‌ಸಿಬಿ 16 ಓವರ್‌ಗಳಲ್ಲಿ ಬೆಂಬತ್ತಿ ಗೆದ್ದಿತ್ತು. ವಿರಾಟ್ ಕೊಹ್ಲಿ 44 ಎಸೆತಗಳಲ್ಲಿ ಅಜೇಯ 70, ಮತ್ತು ವಿಲ್ ಜಾಕ್ಸ್ 41 ಎಸೆತಗಳಲ್ಲಿ ಅಜೇಯ 100 ರನ್ ಗಳಿಸಿ ತಂಡದ ತಂಡದ ಯಶಸ್ಸಿಗೆ ಕಾರಣರಾಗಿದ್ದರು, ಇಬ್ಬರು 166 ರನ್‌ಗಳ ಜತೆಯಾಟದಲ್ಲಿ ಆರ್‌ಸಿಬಿಗೆ 9 ವಿಕೆಟ್ ಜಯ ತಂದುಕೊಟ್ಟಿದ್ದರು.

ಮೂರನೇ ಸ್ಥಾನದಲ್ಲಿ ಮುಂಬೈ ಇಂಡಿಯನ್ಸ್ ಇದ್ದು, 2023ರಲ್ಲಿ ವಾಂಖೆಡೆ ಸ್ಟೇಡಿಯಂನಲ್ಲಿ ಆರ್‌ಸಿಬಿ ವಿರುದ್ಧ 200 ರನ್‌ಗಳ ಗುರಿಯನ್ನು ಮುಂಬೈ ಕೇವಲ 16.3 ಓವರ್‌ಗಳಲ್ಲಿ ತಲುಪಿ ಪಂದ್ಯ ಗೆದ್ದಿತ್ತು. ಸೂರ್ಯಕುಮಾರ್ ಯಾದವ್ 35 ಎಸೆತಗಳಲ್ಲಿ 83 ರನ್‌ಗಳ ಭರ್ಜರಿ ಇನಿಂಗ್ಸ್ ಆಡಿದರೆ, ನೇಹಲ್ ವಾಧೇರಾ 34 ಎಸೆತಗಳಲ್ಲಿ ಅಜೇಯ 52 ರನ್ ಗಳಿಸಿದರು, ಇಬ್ಬರು ಮೂರನೇ ವಿಕೆಟ್‌ಗೆ 140 ರನ್‌ಗಳ ಜೊತೆಯಾಟವನ್ನು ನೀಡಿ ಆರು ವಿಕೆಟ್‌ಗಳ ಗೆಲುವು ತಂದುಕೊಟ್ಟಿದ್ದರು.

ನಾಲ್ಕನೇ ಸ್ಥಾನದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ಇದ್ದು, 2017ರಲ್ಲಿ ಗುಜರಾತ್ ಲಯನ್ಸ್ ವಿರುದ್ಧ ದೆಹಲಿಯಲ್ಲಿ 209 ರನ್‌ಗಳ ಗುರಿಯನ್ನು ಡೆಲ್ಲಿ ಕೇವಲ 17.3 ಓವರ್‌ಗಳಲ್ಲಿ ಚೇಸ್ ಮಾಡಿತು. ರಿಷಭ್ ಪಂತ್ 43 ಎಸೆತಗಳಲ್ಲಿ 97 ರನ್‌ಗಳ ಭರ್ಜರಿ ಇನಿಂಗ್ಸ್ ಆಡಿದ್ದರು. ಡೆಲ್ಲಿಯ ಗೆಲುವಿನಲ್ಲಿ ಆರಂಭಿಕ ಆಟಗಾರ ಸಂಜು ಸ್ಯಾಮ್ಸನ್ 31 ಎಸೆತಗಳಲ್ಲಿ 61 ರನ್ ಗಳಿಸಿದರು. ರಿಷಭ್ ಪಂತ್ ಜೊತೆಗೆ ಎರಡನೇ ವಿಕೆಟ್‌ಗೆ 143 ರನ್‌ಗಳ ಜೊತೆಯಾಟವನ್ನು ನೀಡಿದ ಸ್ಯಾಮ್ಸನ್, ತಂಡವನ್ನು ಏಳು ವಿಕೆಟ್‌ಗಳ ಗೆಲುವಿನತ್ತ ಕೊಂಡೊಯ್ದಿದ್ದರು.

5ನೇ ಸ್ಥಾನದಲ್ಲಿ ಮುಂಬೈ ಇಂಡಿಯನ್ಸ್ ಇದ್ದು, ಸನ್‌ರೈಸರ್ಸ್ ಹೈದರಾಬಾದ್ ನೀಡಿದ್ದ 201ರನ್ ಗುರಿಯನ್ನ ಕೇವಲ 18 ಓವರ್‌ಗಳಲ್ಲಿ ತಲುಪಿತ್ತು. ಕ್ಯಾಮರೂನ್ ಗ್ರೀನ್ 47 ಎಸೆತಗಳಲ್ಲಿ ಶತಕ ಸಿಡಿಸಿದರೆ, ರೋಹಿತ್ ಶರ್ಮಾ 37 ಎಸೆತಗಳಲ್ಲಿ 57 ರನ್ ?ಗಳಿಸಿದ್ದರು.

5ನೇ ಸ್ಥಾನದಲ್ಲಿ ಪಂಜಾಬ್ ಕಿಂಗ್ಸ್ ಇದ್ದು, 2014ರಲ್ಲಿ ಸನ್ ರೈಸರ್ಸ್ ಹೈದರಾಬಾದ್ ವಿರುದ್ಧ 206ರನ್‌ಗಳ ಗುರಿಯನ್ನು 18.4 ಓವರ್‌ಗಳಲ್ಲಿ ತಲುಪಿತ್ತು. ಮ್ಯಾಕ್ಸ್‌ವೆಲ್ 22 ಎಸೆತಗಳಲ್ಲಿ 43, ಜಾರ್ಜ್ ಬೈಲಿ19 ಎಸೆತಗಳಲ್ಲಿ 35, ಮನನ್ ವೊಹ್ರಾ 20 ಎಸೆತಗಳಲ್ಲಿ 47, ವೃದ್ಧಿಮಾನ್ ಸಹಾ 26 ಎಸೆತಗಳಲ್ಲಿ 54 ರನ್ ಗಳಿಸಿ ಅಂದು ಗೆಲುವಿನ ರೂವಾರಿಯಾಗಿದ್ದರು.

ಮೇ 26ರಿಂದ ಜೂನ್ 8ರ ವರೆಗೂ ಮುಂಬೈ ಲೀಗ್ ಎಂಟು ತಂಡಗಳು ಭಾಗವಹಿಸಲಿರುವ ಟಿ20 ಟೂರ್ನಿ

ಮುಂಬೈ ಲೀಗ್ ಕ್ರಿಕೆಟ್: ಐಕಾನ್ ಆಟಗಾರರ ಪಟ್ಟಿಯಲ್ಲಿ ಪೃಥ್ವಿ ಶಾ

ಮುಂಬೈ: 6 ವರ್ಷಗಳ ನಂತರ ನಡೆಯಲಿರುವ ಮೂರನೇ ಆವೃತ್ತಿಯ ಮುಂಬೈ ಟಿ20 ಲೀಗ್ ಮೇ 26ರಿಂದ ಜೂನ್ 8ರ ವರೆಗೆ ನಡೆಯಲಿಯಲಿದೆ. ಇದೀಗ ಎಂಟು ತಂಡಗಳ 8 ಐಕಾನ್ ಆಟಗಾರರಲ್ಲಿ ಸೂರ್ಯಕುಮಾರ್ ಯಾದವ್ ಮತ್ತು ಶ್ರೇಯಸ್ ಅಯ್ಯರ್ ಅವರೊಂದಿಗೆ ಪೃಥ್ವಿ ಶಾ ಹೆಸರನ್ನು ಹೆಸರಿಸಲಾಗಿದೆ. ಬ್ಯಾಟಿಂಗ್ ಫಾರ್ಮ್ ಕಳೆದುಕೊಂಡು ಐಪಿಎಲ್, ದೇಶಿಯ ಟೂರ್ನಿ ಮತ್ತು ಭಾರತ ತಂಡದಲ್ಲಿ ಸ್ಥಾನ ಕಳೆದುಕೊಂಡಿರುವ ಪೃಥ್ವಿ ಶಾಗೆ ಮತ್ತೆ ಕಮ್ ಬ್ಯಾಕ್ ಮಾಡಲು ಈ ಟೂರ್ನಿ ಉತ್ತಮ ಅವಕಾಶವಾಗಿದೆ. ಅಜಿಂಕ್ಯ ರಹಾನೆ, ಶಿವಂ ದುಬೆ, ತುಷಾರ್ ದೇಶಪಾಂಡೆ, ಶಾರ್ದೂಲ್ ಠಾಕೂರ್ ಮತ್ತು ಸರ್ಫರಾಜ್ ಖಾನ್ ಕೂಡ ಐಕಾನಿಕ್ ಆಟಗಾರರಾಗಿದ್ದಾರೆ.

ಒಟ್ಟು 8 ತಂಡಗಳ ಟೂರ್ನಿ ಇದಾಗಿದ್ದು, 20 ಪಂದ್ಯಗಳು ಇರಲಿವೆ. ಲೀಗ್ ಹಂತದಲ್ಲಿ ಪ್ರತಿ ತಂಡ ತಲಾ ಐದು ಪಂದ್ಯಗಳನ್ನು ಆಡಲಿದ್ದು, ಹರಾಜು ಪ್ರಕ್ರಿಯೆ ಶೀಘ್ರದಲ್ಲೇ ನಡೆಯಲಿದೆ ಎಂದು ಎಂಸಿಎ ಅಧ್ಯಕ್ಷ ಅಜಿಂಕ್ಯ ನಾಯಕ್ ಹೇಳಿದ್ದಾರೆ.

ಚೆನ್ನೈ ಸೂಪರ್ ಕಿಂಗ್ಸ್ ತಂಡದ ನಾಯಕ ಋತುರಾಜ್ ಗಾಯಕ್ವಾಡ್ ಗಾಯಗೊಂಡು ಐಪಿಎಲ್‌ನಿಂದ ಹೊರಬಿದ್ದಾಗ ಅವರ ಸ್ಥಾನಕ್ಕೆ ಪೃಥ್ವಿ ಶಾ ಆಯ್ಕೆಯಾಗುವ ಸಾಧ್ಯತೆ ಇದೆ ಎನ್ನಲಾಗಿತ್ತು, ಆದರೆ ಚೆನ್ನೈ ತಂಡ ಮುಂಬೈ ಮೂಲದ ಆಟಗಾರ ಆಯುಷ್ ಮ್ಹಾತ್ರೆಯನ್ನು ಆಯ್ಕೆ ಮಾಡಿಕೊಂಡಿತ್ತು. ಕಳೆದ ಋತುವಿನಲ್ಲಿ ಸೈಯದ್ ಮುಷ್ತಾಕ್ ಅಲಿ ಟ್ರೋಫಿ ಗೆದ್ದ ಮುಂಬೈ ತಂಡದ ಭಾಗವಾಗಿದ್ದ ಪೃಥ್ವಿ ಶಾ, 9 ಪಂದ್ಯಗಳಲ್ಲಿ 197 ರನ್ ಗಳಿಸಿದ್ದರು.

'ದೇಶೀಯ ಮತ್ತು ಅಂತಾರಾಷ್ಟ್ರೀಯ ವೇದಿಕೆಗಳಲ್ಲಿ ತಮ್ಮ ಪ್ರದರ್ಶನದ ಮೂಲಕ ಮುಂಬೈಗೆ ಅಪಾರ ಹೆಮ್ಮೆ ತಂದಿರುವ ಎಂಟು ಐಕಾನ್ ಆಟಗಾರರ ಹೆಸರು ಅನಾವರಣಗೊಳಿಸಲು ನಾವು ಸಂತೋಷಪಡುತ್ತೇವೆ. ಅವರು ಮುಂಬೈ ಕ್ರಿಕೆಟ್‌ನ ಪರಂಪರೆ ಮತ್ತು ಶ್ರೇಷ್ಠತೆಯನ್ನು ಪ್ರತಿನಿಧಿಸುತ್ತಾರೆ. ಅವರ ಉಪಸ್ಥಿತಿಯು ಉದಯೋನ್ಮುಖ ಪ್ರತಿಭೆಗಳಿಗೆ ಸ್ಫೂರ್ತಿ ಮತ್ತು ಮಾರ್ಗದರ್ಶನ ನೀಡುವುದಲ್ಲದೆ, ಭಾರತದ ಮುಂದಿನ ಪೀಳಿಗೆಯ ಕ್ರಿಕೆಟ್ ತಾರೆಗಳನ್ನು ಅನ್ವೇಷಿಸಲು ಮತ್ತು ಉತ್ತೇಜಿಸಲು ನಾವು ಬದ್ಧರಾಗಿ ಅಭಿಮಾನಿಗಳಿಗೆ ರೋಮಾಂಚಕ ಮತ್ತು ಸ್ಮರಣೀಯ ಅನುಭವವನ್ನು ನೀಡಲಿದೆ' ಎಂದು ಎಂಸಿಎ ಅಧ್ಯಕ್ಷ ಅಜಿಂಕ್ಯ ನಾಯಕ್ ಹೇಳಿದ್ದಾರೆ.

ಮಹಿಳಾ ತಂಡಕ್ಕೆ ಮತ್ತೊಂದು ಗೆಲುವು

ಕೊಲಂಬೋ: ಶ್ರೀಲಂಕಾದಲ್ಲಿ ನಡೆಯುತ್ತಿರುವ ಮಹಿಳೆಯರ ತ್ರಿಕೋನ ಏಕದಿನ ಸರಣಿ ಕ್ರಿಕೆಟ್‌ನಲ್ಲಿ ಭಾರತ ತಂಡವು ಮತ್ತೊಂದು ಗೆಲುವು ಸಾಧಿಸಿದ್ದು, ದಕ್ಷಿಣ ಆಫ್ರಿಕಾ ಮಹಿಳಾ ತಂಡದ ವಿರುದ್ಧ ಭರ್ಜರಿ ಗೆಲುವು ದಾಖಲಿಸಿದೆ.

ಇಲ್ಲಿನ ಪ್ರೇಮದಾಸ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ್ದ ಭಾರತ ವನಿತೆಯರ ತಂಡ ನಿಗಧಿತ 50 ಓವರ್‌ನಲ್ಲಿ 6 ವಿಕೆಟ್ ನಷ್ಟಕ್ಕೆ 276 ರನ್ ಪೇರಿಸಿತು. ಭಾರತದ ಪರ ಆರಂಭಿಕ ಆಟಗಾರ್ತಿ ಪ್ರತಿಕಾ ರಾವಲ್ 78 ರನ್ ಕಲೆ ಹಾಕಿದರೆ, ನಾಯಕಿ ಹರ್ಮನ್ ಪ್ರೀತ್ ಕೌರ್ ಮತ್ತು ಜೆಮಿಮಾ ರೋಡ್ರಿಗಸ್ ತಲಾ 41 ರನ್ ಕೊಡುಗೆ ನೀಡಿದರು.

ಸ್ಮೃತಿ ಮಂದನ 36 ರನ್ ಗಳಿಸಿದರೆ, ರಿಚಾ ಘೋಷ್ 24 ರನ್ ಗಳಿಸಿ ತಂಡದ ಮೊತ್ತ 250ರ ಗಡಿ ದಾಟುವಂತೆ ನೋಡಿಕೊಂಡರು. ಅಂತಿಮವಾಗಿ ಭಾರತ ತಂಡ ನಿಗಧಿತ 50 ಓವರ್‌ನಲ್ಲಿ 6 ವಿಕೆಟ್ ನಷ್ಟಕ್ಕೆ 276 ರನ್ ಕಲೆ ಹಾಕಿ, ದಕ್ಷಿಣ ಆಫ್ರಿಕಾಗೆ ಗೆಲ್ಲಲು 277ರನ್ ಗುರಿ ನೀಡಿತ್ತು ದಕ್ಷಿಣ ಆಫ್ರಿಕಾ ಪರ ನೊಕುಲುಲೆಕೊ ಮ್ಲಾಬಾ 2 ವಿಕೆಟ್ ಪಡೆದರೆ, ಅಯಾಬೊಂಗಾ ಖಾಕಾ, ಮಸಾಬಟಾ ಕ್ಲಾಸ್, ನಾಡಿನ್ ಡಿ ಕ್ಲರ್ಕ್ ಮತ್ತು ಅನ್ನೇರಿ ಡೆರ್ಕ್ಸೆನ್ ತಲಾ ಒಂದು ವಿಕೆಟ್ ಪಡೆದರು.

ಸೂಪರ್‌ಬೆಟ್ ಚೆಸ್ ಸ್ಪರ್ಧೆ: ಚಿದಂಬರಂಗೆ ಜಂಟಿ ಅಗ್ರಸ್ಥಾನ

ವಾರ್ಸಾ (ಪೋಲೆಂಡ್): ಒತ್ತಡದಲ್ಲೂ ಉತ್ತಮ ಪ್ರದರ್ಶನ ನೀಡಿದ ಭಾರತದ ಗ್ರ್ಯಾಂಡ್‌ಮಾಸ್ಟರ್ ಅರವಿಂದ್ ಚಿದಂಬರಂ ತಮ್ಮ ಅಂತಿಮ ಪಂದ್ಯದಲ್ಲಿ ಫ್ರಾನ್ಸ್‌ನ ಅಲಿರೇಝಾ ಫಿರೋಝ್ ಜಾ ಅವರನ್ನು ಸೋಲಿಸಿ, ಸೂಪರ್‌ಬೆಟ್ ಬ್ಯಾಪಿಡ್ ಮತ್ತು ಬ್ರಿಟ್ಸ್ ಟೂರ್ನಿಯ ರಾಪಿಡ್ ವಿಭಾಗದಲ್ಲಿ ಜಂಟಿ ಅಗ್ರಸ್ಥಾನ ಗಳಿಸಿದರು. ಅರವಿಂದ್ ಈ ಟೂರ್ನಿಗೆ ವೈಲ್ಡ್ ಕಾರ್ಡ್ ಪ್ರವೇಶ ಪಡೆದಿದ್ದರು. ಅಗ್ರಸ್ಥಾನಕ್ಕೆ ಬರಲು ಅರವಿಂದ್ ಅವರಿಗೆ ಗೆಲುವು ಅನಿವಾರ್ಯವಾಗಿದ್ದು, ಸೋಮವಾರ ಅದನ್ನು ಸಾಧಿಸಿದರು. ಇರಾನ್ ಸಂಜಾತ ಫ್ರಾನ್ಸ್‌ನ ಆಟಗಾರ ಸಮಯದ ಒತ್ತಡಕ್ಕೆ ಸಿಲುಕಿ ಸೋತರು. ಅರವಿಂದ್, ಸೊವೇನಿಯಾದ ಬ್ಲಾದಿಮಿರ್ ಫೆಡೊಸೀವ್ ಮತ್ತು ಅಲಿರೇಝಾ ತಲಾ 11 ಪಾಯಿಂಟ್ಸ್ ಗಳಿಸಿದರು. ಮೊದಲ ಎರಡು ದಿನ ಹಿನ್ನಡೆಯಲ್ಲಿದ್ದ ಭಾರತದ ಆರ್. ಪ್ರಜ್ಞಾನಂದ ಅವರೂ ಚೇತರಿಸಿಕೊಂಡು ಜಂಟಿ ನಾಲ್ಕನೇ ಸ್ಥಾನಕ್ಕೇರಿದರು. ಅವರು ಕೊನೆಯ ಎರಡು ಸುತ್ತುಗಳಲ್ಲಿ ಕ್ರಮವಾಗಿ ರುಮೇನಿಯಾದ ಡೇವಿಡ್ ಗಾಲೆಸ್ಕು (7) ಮತ್ತು ಪೋಲೆಂಡ್‌ನ ಯಾನ್ ಕ್ರಿಸ್ಟೋಫ್ ಡೂಡಾ (8) ಅವರನ್ನು ಸೋಲಿಸಿದರು. ಪ್ರಜ್ಞಾನಂದ ಅವರು ಅಮೆರಿಕದ ಲೆವೊನ್ ಅರೋನಿಯನ್ ಜೊತೆ ತಲಾ 10 ಪಾಯಿಂಟ್ಸ್ ಕಲೆಹಾಕಿದರು.

2026ರ ಏಷ್ಯನ್ ಗೇಮ್ಸ್: ಮಾರ್ಷಲ್ ಆರ್ಟ್ಸ್ ಸೇರ್ಪಡೆ



ಟೋಕಿಯೊ: ಜಪಾನ್ ದೇಶದ ಅತಿಥ್ಯದಲ್ಲಿ ಮುಂದಿನ ವರ್ಷದ ಸೆಪ್ಟೆಂಬರ್-ಅಕ್ಟೋಬರ್‌ನಲ್ಲಿ ನಡೆಯಲಿರುವ ಏಷ್ಯನ್ ಕ್ರೀಡೆಗಳಲ್ಲಿ ಮಿಶ್ರ ಮಾರ್ಷಲ್ ಆರ್ಟ್ಸ್ (ಎಂಎಂಎ) ಮೊದಲ ಬಾರಿಗೆ ಸೇರ್ಪಡೆಯಾಗಲಿದೆ ಎಂದು ಆಯೋಜಕರು ಮಂಗಳವಾರ ತಿಳಿಸಿದ್ದಾರೆ. ಮಿಶ್ರ ಮಾರ್ಷಲ್ ಆರ್ಟ್ಸ್‌ಗಳಲ್ಲಿ ಆರು ಸ್ಪರ್ಧೆಗಳಿರಲಿವೆ. ಸಮರ ಕ್ರೀಡೆಗಳ (ಕಾಂಬ್ಯಾಟ್ ಸ್ಪೋರ್ಟ್ಸ್) ವಿಭಾಗದಡಿ ಇದು ಬರಲಿದೆ ಎಂದು ಏಷ್ಯಾ ಒಲಿಂಪಿಕ್ ಕೌನ್ಸಿಲ್ ತಿಳಿಸಿದೆ. 2026, ಸೆಪ್ಟೆಂಬರ್ 19ರಿಂದ ಅಕ್ಟೋಬರ್ 4ರ ವರೆಗೆ ನಗೋಯಾ ಮತ್ತು ಐಚಿ ಮಹಾನಗರಗಳಲ್ಲಿ ನಿಗದಿ ಮಾಡಲಾಗಿರುವ 20ನೇ ಏಷ್ಯನ್ ಕ್ರೀಡೆಗಳಲ್ಲಿ 15,000 ಮಂದಿ ಕ್ರೀಡಾಪಟುಗಳು ಭಾಗವಹಿಸುವ ಸಾಧ್ಯತೆಯಿದೆ. ಇದು ಒಲಿಂಪಿಕ್ ಕ್ರೀಡೆಗಳಿಗೂ ಹೆಚ್ಚು. ಕೋವಿನಿಂದಾಗಿ ಒಂದು ವರ್ಷ ಮುಂದೂಡಿಕೆಯಾಗಿ 2023ರಲ್ಲಿ ಚೀನಾದಲ್ಲಿ ನಡೆದ ಏಷ್ಯನ್ ಕ್ರೀಡೆಗಳಲ್ಲಿ ಟಿ20 ಕ್ರಿಕೆಟ್ ಆಡಿಸಲಾಗಿತ್ತು, 2028ರ ಲಾಸ್ ಏಂಜಲೀಸ್ ಒಲಿಂಪಿಕ್ಸ್‌ನಲ್ಲೂ ಕ್ರಿಕೆಟ್ ಆಟ ಆಡಿಸಲು ತೀರ್ಮಾನಿಸಲಾಗಿದೆ.

ಕಷ್ಟದ ಪ್ರಯತ್ನಕ್ಕೆ ದೊರೆತ ಸೂರ್ಯವಂಶಿ ಯಶಸ್ಸು | ಸಚಿನ್, ಲಾರಾ ಸೇರಿದಂತೆ ಹಾಡಿ ಹೊಗಳಿದ ಕ್ರಿಕೆಟ್ ದಿಗ್ಗಜರು

ನನ್ನೆಲ್ಲಾ ಸಾಧನೆಗೆ ಹೆತ್ತವರೇ ಕಾರಣ: ವೈಭವ್ ಸೂರ್ಯವಂಶಿ

ಜೈಪುರ: ಚೊಚ್ಚಲ ಸೆಂಚುರಿಯೊಂದಿಗೆ ವಿಶ್ವ ದಾಖಲೆಯನ್ನು ತನ್ನದಾಗಿಸಿಕೊಂಡಿರುವ ಯುವ ದಾಂಡಿಗ ವೈಭವ್ ಸೂರ್ಯವಂಶಿ ಇಡೀ ವಿಶ್ವವೇ ತನ್ನತ್ತ ತಿರುಗಿ ನೋಡುವಂತೆ ಮಾಡಿದ್ದಾನೆ. ಈ ಸಾಧನೆಯ ಬೆನ್ನಲ್ಲೇ ಮಾತನಾಡಿದ ವೈಭವ್, ಇದಕ್ಕೆಲ್ಲಾ ತನ್ನ ಹೆತ್ತವರ ತ್ಯಾಗವೇ ಕಾರಣ ಎಂದಿದ್ದಾರೆ.

'ಇಂದು ನಾನು ಏನಾಗಿದ್ದೇನೋ, ಅದಕ್ಕೆ ನನ್ನ ಹೆತ್ತವರೇ ಕಾರಣ. ನನ್ನ ಅಭ್ಯಾಸಕ್ಕಾಗಿ ನನ್ನ ತಾಯಿ ರಾತ್ರಿ 11 ಗಂಟೆಗೆ ಮಲಗಿ, ಬೆಳಿಗ್ಗೆ 2 ಗಂಟೆಗೆ ಎದ್ದೇಳುತ್ತಿದ್ದರು, ಅಂದರೆ ನನಗಾಗಿ ಅವರು ಕೇವಲ ಮೂರು ಗಂಟೆಗಳ ಕಾಲ ಮಾತ್ರ ನಿದ್ರಿಸುತ್ತಿದ್ದರು. ಹಾಗೆಯೇ ತಂದೆ ನನ್ನ ಬೆಂಬಲಕ್ಕೆ ನಿಂತಿದ್ದರು. ಇದಕ್ಕಾಗಿ ಅವರು ತಮ್ಮ ಕೆಲಸವನ್ನೂ ಸಹ ತೊರೆದಿದ್ದರು. ನನ್ನ ಅಣ್ಣ ಕೆಲಸ ಮಾಡುತ್ತಾ ಮನೆಯ ಜವಾಬ್ದಾರಿ ವಹಿಸಿಕೊಂಡಿದ್ದರು, ಆರ್ಥಿಕ ಸಮಸ್ಯೆಯೊಂದಿಗೆ ಕುಟುಂಬ ನಿರ್ವಹಿಸಬೇಕಾದ ಪರಿಸ್ಥಿತಿ ಎದುರಾಗಿತ್ತು. ಕಷ್ಟಪಟ್ಟರೆ ದೇವರು ಎಂದಿಗೂ ಕೈ ಬಿಡಲ್ಲ, ಅದು ಸಾಬೀತಾಗಿದೆ. ನಾನು ಸಾಧಿಸುತ್ತಿರುವ ಯಶಸ್ಸು ನನ್ನ ಹೆತ್ತವರಿಂದಾಗಿದೆ, ಹೀಗಾಗಿ ಎಲ್ಲಾ ಶ್ರೇಯಸ್ಸು ನನ್ನ ಹೆತ್ತವರಿಗೆ ಸಲ್ಲಬೇಕು' ಎಂದು ವೈಭವ್ ಸೂರ್ಯವಂಶಿ ಹೇಳಿದ್ದಾರೆ.

ಪ್ರಶಂಸೆಯ ಮಹಾಪೂರ: ಸಿಡಿಲಬ್ಬರದ ಬ್ಯಾಟಿಂಗ್ ಮೂಲಕ ಸೋಮವಾರ ರಾತ್ರಿ ಸಂಚಲನ ಸೃಷ್ಟಿಸಿರುವ 14ರ ಪೋರ ವೈಭವ್ ಸೂರ್ಯವಂಶಿಯ ಆಟಕ್ಕೆ ಕ್ರಿಕೆಟ್ ದಿಗ್ಗಜರರಾದ ಸಚಿನ್, ಕ್ರಿಸ್ ಶ್ರೀಕಾಂತ್, ರೋಹಿತ್ ಸೇರಿದಂತೆ ಹಲವರು ಹುಬ್ಬೇರಿಸಿ ಬೆನ್ನು ತಟ್ಟಿದ್ದಾರೆ. ಅವರ ಬ್ಯಾಟ್‌ನಿಂದ ಸಿಡಿದ ಚೆಂಡುಗಳು ಬೌಂಡರಿ ಗೆರೆ ದಾಟುತ್ತಿದ್ದಂತೆ ಇಡೀ ಕ್ರೀಡಾಂಗಣ ಮಾತ್ರವಲ್ಲ, ಸಾಮಾಜಿಕ ಜಾಲತಾಣಗಳಲ್ಲೂ ಸಂಭ್ರಮ ಮನೆ ಮಾಡಿತು.



ಭಾರತದ ತಂಡಕ್ಕೆ ಭರವಸೆಯ ಬ್ಯಾಟರ್, ವಿಡಿಯೊ ಗೇಮ್ ಆಡುವ, ಐಸ್ ಕ್ರೀಂ ಕೇಳುವ ವಯಸ್ಸಿನಲ್ಲಿ ಅಂತಾರಾಷ್ಟ್ರೀಯ ಮಟ್ಟದ ಬೌಲರ್‌ಗಳನ್ನು ದಂಡಿಸಿದ ಬ್ಯಾಟಿಂಗ್ ಮೂಲಕ ದಂಡಿಸಿದ ರೀತಿ ಕ್ರಿಕೆಟ್ ದಿಗ್ಗಜರೇ ಬೆರಗಾಗುವಂತೆ ಮಾಡಿದ್ದಾರೆ. ವೈಭವ್ ಆಟವನ್ನು ಹೊಗಳಲು ಹಲವರು ಸಾಮಾಜಿಕ ಮಾಧ್ಯಮದ ಮೊರೆ ಹೋಗಿದ್ದಾರೆ.

'ಅಂಜಿಕೆ ಇಲ್ಲದ ಬ್ಯಾಟಿಂಗ್ ಶೈಲಿ, ಬ್ಯಾಟ್ ಬೀಸುವ ವೇಗ, ಸರಿಯಾದ ಲೆಂತ್‌ನ ಬಹುಬೇಗ ಆಯ್ಕೆ, ತಮ್ಮೆಲ್ಲಾ ಬಲವನ್ನು ಪ್ರಯೋಗಿಸಿ ಚೆಂಡನ್ನು ಬೌಂಡರಿ ಗೆರೆಯಾಚೆ ಅಟ್ಟುವ ಶಕ್ತಿ ಮತ್ತು ಇನ್ನಿಂಗ್ಸ್ ಕಟ್ಟುವ ಛಲ ನಿಜಕ್ಕೂ ಅದ್ಭುತ' ಎಂದು ಸಚಿನ್ ತೆಂಡೂಲ್ಕರ್ ವೈಭವ್ ಸೂರ್ಯವಂಶಿ ಬಗ್ಗೆ ಬಣ್ಣಿಸಿದ್ದಾರೆ.

ಇನ್‌ಸ್ಟಾಗ್ರಾಂನಲ್ಲಿ ರೋಹಿತ್ ಶರ್ಮಾ ಹೊಗಳಿಕೆಯ ಮಳೆ ಸುರಿಸಿದ್ದಾರೆ. 'ಸೂಪರ್‌ಸ್ಟಾರ್ ವೈಭವ್ ಸೂರ್ಯವಂಶಿಗೆ ಇನ್ನಷ್ಟು ಶಕ್ತಿ ದೊರೆಯಲಿ' ಎಂದು ಹಾರೈಸಿದ್ದಾರೆ.

'14ರ ಎಳವೆಯಲ್ಲಿ ಮಕ್ಕಳು ಐಸ್ ಕ್ರೀಂ ತಿನ್ನಬೇಕು ಎಂದು ಬಯಸುವುದು ಸಹಜ, ಆದರೆ ವೈಭವ್ ಸಾಧನೆ ಆತನ ವಯೋಮಾನವನ್ನೂ ಮೀರಿದ್ದಾಗಿದೆ. ಇಂತಹ ಒಬ್ಬ ಸ್ಟಾರ್‌ನ ಉದಯಕ್ಕೆ ನಾವೆಲ್ಲರೂ ಸಾಕ್ಷಿಯಾಗಿದ್ದೇವೆ. ಭಾರತೀಯ ಕ್ರಿಕೆಟ್‌ನ ಭವಿಷ್ಯದ ಸೂಪರ್‌ಸ್ಟಾರ್' ಎಂದು ಕೃಷ್ಣಮಾಚಾರಿ ಶ್ರೀಕಾಂತ್ ಹೇಳಿದ್ದಾರೆ.

'14ನೇ ವರ್ಷ ವಯಸ್ಸಿನ ಈ ಪೋರ ಕಣ್ಣನ್ನೂ ಮಿಟುಕಿಸದೇ ಅದ್ಭುತ ಬೌಲರ್‌ಗಳನ್ನೇ ಎದುರಿಸಿದ್ದಾನೆ. ವೈಭವ್ ಸೂರ್ಯವಂಶಿ ಎಂಬ ಹೆಸರನ್ನು ನೆನಪಿಟ್ಟುಕೊಳ್ಳಿ, ಭಯವಿಲ್ಲದ ಆಟದ ವೈಖರಿ ಈತನದ್ದಾಗಿದ್ದು , ಭವಿಷ್ಯ ಉಜ್ವಲವಾಗಿದೆ ಎಂಬುದನ್ನು ನೋಡಲು ಹೆಮ್ಮೆ ಎನಿಸುತ್ತಿದೆ' ಎಂದು ಯುವರಾಜ್ ಸಿಂಗ್ ಬಣ್ಣಿಸಿದ್ದಾರೆ.

ವೇಗಿ ಮೊಹಮ್ಮದ್ ಶಮಿ ಪ್ರತಿಕ್ರಿಯಿಸಿ, 'ಎಂಥ ಅದ್ಭುತ ಪ್ರತಿಭೆ ವೈಭವ್ ಸೂರ್ಯವಂಶಿಯದ್ದು, 14ರ ಎಳೆಯ ವಯಸ್ಸಿನಲ್ಲೇ ಶತಕ. ಮತ್ತಷ್ಟು ಬೆಳಗು ಸೋದರ' ಎಂದು ಹಾರೈಸಿದ್ದಾರೆ.

10 ಲಕ್ಷ ರು. ಬಹುಮಾನ ಘೋಷಣೆ

ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ವೈಭವ್ ಸೂರ್ಯವಂಶಿಗೆ 10 ಲಕ್ಷ ಬಹುಮಾನ ಘೋಷಿಸಿದ್ದಾರೆ. ಈ ಕುರಿತು ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಮಾಹಿತಿ ಹಂಚಿಕೊಂಡಿರುವ ಸಿಎಂ, 'ಬಿಹಾರದ ವೈಭವ್ ಸೂರ್ಯವಂಶಿಗೆ ಅಭಿನಂದನೆಗಳು ಮತ್ತು ಶುಭಹಾರೈಕೆಗಳು. ವೈಭವ್ ಅವರು ಭಾರತ ಕ್ರಿಕೆಟ್ ತಂಡಕ್ಕೆ ಭರವಸೆಯ ಆಟಗಾರನಾಗಿ ಹೊರಹೊಮ್ಮಿದ್ದಾರೆ. 2024ರಲ್ಲಿ ವೈಭವ್ ಮತ್ತು ಅವರ ತಂದೆಯನ್ನು ಭೇಟಿಯಾಗಿದ್ದೆ, ಭವಿಷ್ಯ ಉಜ್ವಲವಾಗಿರಲಿ ಎಂದು ಹಾರೈಸಿದ್ದೆ. ಐಪಿಎಲ್‌ನಲ್ಲಿ ಅವರ ಅದ್ಭುತ ಆಟ ನೋಡಿ ದೂರವಾಣಿ ಕರೆ ಮಾಡಿ ಅಭಿನಂದಿಸಿದೆ, ಜತೆಗೆ ರಾಜ್ಯ ಸರಕಾರದಿಂದ 10 ಲಕ್ಷ ರು. ಬಹುಮಾನವನ್ನೂ ನೀಡಲಾಗುವುದು' ಎಂದು ಬರೆದುಕೊಂಡಿದ್ದಾರೆ.

ರಾಜಸ್ಥಾನ ಕೋಚ್ ದ್ರಾವಿಡ್ ಸಂಭ್ರಮ

ಉದಯೋನ್ಮುಖ ಎಡಗೈ ಆರಂಭಿಕ ಬ್ಯಾಟರ್ ವೈಭವ್ ಸೂರ್ಯವಂಶಿ ಸೋಮವಾರ ರಾತ್ರಿ ಚೊಚ್ಚಲ ಶತಕ ಗಳಿಸಿದಾಗ ರಾಜಸ್ಥಾನ ರಾಯಲ್ಸ್ ತಂಡದ ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಸಂಭ್ರಮಕ್ಕೆ ಪಾರವೇ ಇರಲಿಲ್ಲ. ತಮ್ಮ ಗಾಯವನ್ನು ಲೆಕ್ಕಿಸದೇ ಗಾಲಿಕುರ್ಚಿಯಿಂದ ಎದ್ದು ನಿಂತು ಚಪ್ಪಾಳೆ ತಟ್ಟುತ್ತಾ ಅವರು ಸಂಭ್ರಮಾಚರಿಸಿದ್ದಾರೆ. ಆ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ವ್ಯಾಪಕವಾಗಿ ಹರಿದಾಡುತ್ತಿದೆ.